ಈ ಪ್ರಕಾರ ದಾವೇ ಮಾಡಿರುತ್ತಾನೆ. ಸದರಿ ದಾವೇದಲ್ಲಿ ಧಾರವಾಡದಲ್ಲಿರುವ ಫಕೀರ ಜನರ ಪೈಕಿ ಮುಖಂಡರು ಅಂದರೆ- (೧) ಕರೀಮಶ್ಯಾ ಗುರು ಉಸ್ಮಾನಶ್ಯಾ (೨) ಖಾದರಶ್ಯಾ ಗುರು ಶಹಾಮಹಮ್ಮದ (೩) ಗುಲಜಾರಶಾ (೪) ಇಶಾದ ಅಲ್ಲಿಶ್ಯಾ ಗುರು ಗುಲಾಬಶ್ಯಾ ಫಕೀರ ಇವರು ತಾರೀಖನೇ ಇಸ್ವಿ ದಿವಸ ಧಾರವಾಡ ಶಹರದಲ್ಲಿರುವ ಯಾವತ್ತು ಫಕೀರ ಜನರನ್ನು ಸಹ್ನಗಾರರನ್ನಾಗಿ ಮಾಡಬೇಕಂತಾ ಮತ್ತು ಸದ್ರಿಯವರ ತರ್ಫೆಯಿಂದ ಸದ್ರಿ ದಾವೇದ ಕೆಲಸ ನಡಿಸಲಿಕ್ಕೆ ಪರವಾನಿಗಿ ಕೊಡಬೇಕಂತಾ ಅರ್ಜೀ ಮಾಡಿದ್ದು ಸದರ ಅರ್ಜಿಯು ಮಂಜೂರ ಸಹಾ ಆಗಿರುತ್ತದೆ. ಕಾರಣ ಸಿವ್ಹಿಲ ಪ್ರೋಸೀಜರ ಕೋಡ ಆರ್ಡರ ೧ ರೂಲ್ಸ ೮ನೇ ಪ್ರಕಾರ ಸದ್ರಿ ದಾವೇದ ನೋಟೀಸು ಸದರ ಫಕೀರ ಜನರಿಗೆ ಜಾಹೀರ ನೋಟೀಸಿನಿಂದ ತಿಳಿಸುತ್ತಾರೆ. ಸದ್ರಿ ದಾವೇದ ಮುದ್ದತು ತಾರೀಖು ೨೧-೬-೨೭ನೇ ಇಸ್ವಿ ದಿವಸ ೧೧ ಗಂಟೆಗೆ ಕೋರ್ಟಿಗೆ ಹಾಜರಾಗಿ ವಿವಾದರು ತಕರಾರು ಇದ್ದರೆ ತೋರಿಸಬೇಕು. ತಾರೀಖು ೧೨-೪-೧೯೨೭ನೇ ಇಸ್ವಿ

R. UAINSUR.

ಜಾಯಿಂಟ ಸಬ್ಬ ಜಡ್ಜ, ಧಾರವಾಡ

ಮಾತಾಡುವ ಔಷಧವು.

ಅಜ್ಜೀ, ಏನಾಡುವದಿಲ್ಲೇ! ಹೀಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೇ? ಹಲ್ಲುತಲಿಬೇನೇ ಮೈಯಲ್ಲ ನೋಯುತ್ತದೆಯೋ? ಆಗಿರುವದಾದರೂ ಏನು!

ಅಜ್ಜಿ— ಕಂದಾ— ಹಾವು ಮೈಯ್ಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೋಮೆಂಟಿ ಕ್ಯೂಯರ ತಕ್ಕೊ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾಡುವದು ಮತ್ತು ಕೂಡ್ರುವಿ ತಿನ್ನುತ್ತ ತಿರ ತುರು. ಎರಡೇ ಆಣೆ.

ನನ್ನಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆನು.

ವಿಳಾಸ— ಕನಕಾಪಿತ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸರಿಗೆ ಕಿವಿಮಸ್ತ ಮುಕು ಪ್ರಗಿಸ್, ಸ್ಟೇಶನರೋಡ ಹುಬ್ಬಳ್ಳಿ

ಸರಕಾರದಿಂದ ಪೆಟೆಂಟ ದೊರೆತ



ಮಲ್ಲಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು ಕಪ್ಪಲಿಯು ನೀರನ್ನು ಮುಟ್ಟಿ ತಳಿ ಆದ ಕೂಡಲೆ ತಾನಾಗಿಯೇ ಬಾಗಿಲಿನಿಂದ ನೀರು ಒಳ ಸೇರುವದು. ಕಪ್ಪಲಿಯು ಆಗ ಭರ್ತಿಯಾದ ಕೂಡಲೆ ಬಾಗಿಲು ಮುಚ್ಚಿ ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ

ಎರಡು ಪ್ರಕಾರಗಳಲ್ಲಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೩೦ರೂ.
ನಂ ೨	೨೫ „	„ ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

—೦—

ಮಂಗಳವಾರ ಪೇಟೆ ಧಾರವಾಡ.

೧೯೧೮ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದ್ದು ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ವಸೂಲ ಬಂದ ಲಕ್ಷದ ಮೇಲಿಂಟು. ಚೆಕ್ ಕುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರದ ವ್ಯವಹಾರ ಮಾಡುವದು. ಕಾಯಮ ಮತ್ತು ಸೇವಿಂಗ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು ಶರ್ತಿಗಳನ್ನು ಆಗೆ ಸಹೀ ಮಾಡಿದವ ತಿಳಕೊಳ್ಳಬೇಕು.

ರಂಗರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಇಡಬೇಕು ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ಸಾವಿರಕ್ಕೆ ತಿಂಗಳ ತಿಪ್ಪರೆಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಚಂದಾ ಪತ್ರಗಳ ದರ

ತಿಂಗಳ	೧೨—೮—೦ ರೂ
„	೬—೪—೦ ರೂ
„	೪—೦—೦ ರೂ
ಪ್ರತಿ ೧ ವರ್ಷಕ್ಕೆ	೩—೧೨—೦ ರೂ

ವಿಜಯ ಪತ್ರ, ಧಾರವಾಡ

ನೋಟೀಸಿನ ದರಗಳು.

—೦—

ತಿಂಗಳ ಒಳಗಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದಾಣೆ ಮತ್ತು ಪ್ರತಿಯೊಂದು ಒಳಗೆ ಎರಡು ಆಣೆ ಇಂಗ್ಲಿಷದಿಂದ ಭಾಷಾಂತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆ ಆಣೆ ಹೆಚ್ಚಾಗುವದು. ಬಹಳ ದಿವಸ ಹಾಕುವ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

—೦—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮಿತ್ತ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯದ ಪ್ರೋತ್ಸಾಹಿಸಬೇಕೆಂದು ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ನೋಟೀಸು

—೦—

ಜಾತಿಕ ಶ್ರೀಮಂ ಶಿವಮೂರ್ತೆಪ್ಪಾ ಬಡಿಗೇರ ಸಾ|| ಮೊಟೇಬೆನ್ನೂರ ತಾಲ್ಲೂಕ ರಾಣೇಬೆನ್ನೂರ ಇ ಇವರಿಗೆ—

ಕೆಳಗೆ ಸಹಿ ಮಾಡಿದವನು ನೀನು ನನಗೆ ತಾ| ೧೦-೫-೧೯೨೬ ಇಸ್ವಿ ದಿನ್ನ ಕೊಟ್ಟ ನೋಟೀಸಿಗೆ ಉತ್ತರ ಕೊಡುವದೇನಂದರೆ- ನೀನು ನನ್ನ ಲಗ್ನದ ಹೆಂಡತಿ ಇದ್ದದ್ದು ಖರೆ. ಆದರೆ ನೀನು ನನ್ನ ಸಂಗಡಾ ೧, ೧|| ವರುಷ ಬಾಳ್ವೆ ಮಾಡಿ ಈಶ್ವರ ಎಂಬ ಹುಡುಗನನ್ನು ಹಡಿದು ನಂತರ ೮-೯ ತಿಂಗಳಲ್ಲಿ ನನ್ನ ಮನೆಯಿಂದ ಹುಡಗನನ್ನು ವ ದಾಗೀನೆಗಳನ್ನು ತೆಗೆದುಕೊಂಡು ಓಡಿ ಹೋದಿ. ನಂತ್ರ ಹುಡುಗನನ್ನು ದಾಗೀನೆಗಳನ್ನು ಸಹಾ ತೆಗೆದುಕೊಂಡು ಬರಬೇಕಂತಾ ನೋಟೀಸ ಕೊಟ್ಟರೂ ವ ಬುದ್ಧಿವಂತರ ಸಮಕ್ಷಮ ಕೇಳಿದರೂ ಸಹಾ ಆ ಪ್ರಕಾರ ಮಾಡದೆ ನಮ್ಮ ಮನಸ್ಸಿಗೆ ವಿರುದ್ಧವಾಗಿ ಸ್ವೇಚ್ಛಾಚಾರಿಯಾಗಿ ಅನ್ಯ ಜಾತಿಯವರ ಸಹವಾಸದಲ್ಲಿದ್ದುಕೊಂಡು ಬಾಳ್ವೆ ಮಾಡಹತ್ತಿದ್ದರಿಂದಾ ನಿನ್ನ ವ ನನ್ನ ಸಂಬಂಧವನ್ನು ಕಡಕೊಂಡು ಬಿಟ್ಟಿರುವೆವು ಅನಂತರ ನಾನು ಬೇರೆ ಲಗ್ನವನ್ನು ಮಾಡಿಕೊಂಡಿರುತ್ತೇನೆ ನೀನಾದರೂ ನಿಂನ ವೈವಸ್ಥೆಯನ್ನು ಬೇರೆ ಮಾಡಿಕೊಂಡಿರುವಿ ಮತ್ತು ತಿ ನೇದವರ ಸಹವಾಸದಿಂದ ಒಂದು ಹುಡಗಿಯನ್ನು ಸಹಾ ಹಡದಿರುವಿ ಆದರೆ ಸದರಿ ಈಶ್ವರನನ್ನು ಕಳಿಸಿಕೊಡಲಿಕ್ಕೂ ವ ದಾಗೀನೆಗಳನ್ನು ತಂದು ಕೊಡಲಿಕ್ಕೆ ನಾನು ನಿನಗೆ ಮರಾತ ಮಾಡಲಿಕ್ಕೆ ಹತ್ತಲು ಮತ್ತು ಆ ಬಗ್ಗೆ ನಾನು ಯೋಗ್ಯ ಕೋರ್ಟಿನಲ್ಲಿ ಕೆಲಸ ನಡಿಸುವವನು ಇದ್ದೇನೆಂದು ನೀನು ತಿಳಕೊಂಡು ಹಂಕಲದಿ ನೋಟೀಸ ಕೊಟ್ಟಿರುತ್ತೀದಿ ಈ ವಿಷಯದ ಬಗ್ಗೆ ಉಳಿದ ಮಜಕೂರ ಸಹಾ ಅಗದಿ ಸುಳ್ಳು ಇರುತದೆ ಅದ್ದರಿಂದಾ ನಿಂನ ಹೊಟ್ಟಿ ಖರ್ಚ ವಗೈರೆ ಕೊಡಲಿಕ್ಕೆ ನಾನು ಯಾವ ತರದಿಂದಲೂ ಬಾಧ್ಯಸ್ಥನಿರುವದಿಲ್ಲಾ ಆ ರೆ ನೋಟೀಸ ಈ ಮುಟ್ಟಿದ ೧೫ ದಿವಸಗಳಲ್ಲಿ ನಂನ ಮಗನಾದ ಈಶ್ವರನನ್ನು ನಂನ ಮನಿಗೆ ಕಳಿಸಿಕೊಡುವದಲ್ಲದೆ ನೀನು ತೆಗೆದುಕೊಂಡ ಹೋದ ದಾಗೀನೆಗಳನ್ನು ಸಹಾ ತಂದು ಕೊಟ್ಟು ನಂನ ಕಡಿಯಿಂದ ಪಾವತಿ ಪಡೆಯಬೇಕು. ಇಲ್ಲದಿದ್ದರೆ ಸದರಿಯವುಗಳ ಬಗ್ಗೆ ಯೋಗ್ಯ ಕೋರ್ಟಿನಲ್ಲಿ ಇಲಾಜ ಮಾಡಬೇಕಾಗುತ್ತದೆ ತಿಳಿಯುವದು.

ತಾರೀಖು ೫-೬ ೧೯೨೬ ಇಸ್ವಿ

ಶಿವಮೂರ್ತಿ ಬಸವಣ್ಣೆಪ್ಪಾ ಬಡಿಗೇರ ಸಾಕೀನ ತವರಮಳ್ಳಳ್ಳಿ

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ? ಗಲ್ಲಿಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಶೂಲಿಯೋ? ಮಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಪ್ಪನು— ಕಂದಾ— ಹೌದು ಮಯ್ಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯುಯರ ಟೇಬ್ಲೆಟ್ಸು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ತಿನ್ನುತ್ತು ... ಕುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕನಕಾದಿತ ಮೆಡಿಕಲ ಸ್ಟೋರ್ಸ, ಓಸ್ಪೆಟ್ಲಿಂಗ ಕೆಮಿಸ್ಟ ಮತು ಡ್ರಗಿಸ, ಸ್ಟೇಶನರೋಡ ಹುಬ್ಬಳ್ಳಿ

ಡಾಕ್ಟರ ಮುಲ್ಲಯ್ಯನವರಿಂದ ಪರೀಕ್ಷಿಸಲ್ಪಟ್ಟ
ಮೆಸರ್ಸ ಪಿ ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು— ಪಿನಸಿ, ಅಸಿಗಿ ನೆಗಡಿ, ತಲೆಯಲ್ಲಾಗುವ ಬೇರೆ ವಿಕಾರಗಳು, ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಿಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ತಿಶಿ ಉಚಿತವಾಗಿ ದೊರೆಯುವದು.

ಶೀಸೆ ಒಂದಕ್ಕೆ ನಾಲ್ಕಾಣೆ. ಡಜನಕ್ಕೆ ೨ ೮-೦ ವ್ಹಿ. ಪಿ. ಪೋಸ್ಟಚಾರ್ಜ ಬೇರೆ.
ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ಪಿ. ವ್ಹಿ. ರಾಜನ ಮತ್ತು ಕಂಪನಿ,
೪೪ ಗೋವಿಂದಪ್ಪನ ಬೀದಿ, ಜಾರ್ಜಟಾವುನ, ಮದ್ರಾಸ

ನೋಟೀಸಿನ ವರಗಣು.

ತಿಂಗಲ ಕಾಲಮಿನ ಕತ್ತು ವಳಗಳಿಗೆ ಒಂದು ಆದಾಯು ಮುಂದೆ ಪ್ರತಿಯೊಂದು ವಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ವಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಂದು ... ಇವ್ವು ಚಾರ್ಜ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯ ಪುಸ್ತಕಾಲಯ.

—೦—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫ "
ಲೋ. ಟಿಳಕರ ಚರಿತ್ರ	೪ "
ದೇಶಬಂಧು ದಾಸರ ಚರಿತ್ರ	೨ "
ದೇಶಭಕ್ತರ ಸಂದೇಶಗಳು	೧ "

ಈ ಪುಸ್ತಕಗಳನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚ ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಸೂಚರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭. ಧಾರವಾಡ ರವಿವಾರ ತಾರೀಖು ೧೩ನೇ ಜೂನ ೧೯೨೬ (ಸಂಚಿಕೆ ೧೩೪

ಸರಕಾರದಿಂದ ಪೆಟೆಂಟ ದೊರೆಕಿದ



ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಬುಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟು ತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗ ಲ್ಪಡುತ್ತಲೇ ಜಾಳಿಗೆಯು ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳವಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೬೦ರೂ.
ನಂ ೨	೨೫ ,,	,, ೫೫ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ಜಾಹೀರ ನೋಟೀಸು.

—೦—

ಕೆಳಗೆ ಸಹಿ ಮಾಡಿದವಳು ಈ ಜಾಹೀರ ನೋಟೀಸಿನಿಂದ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ-

ನನ್ನ ಮಗಳ ಮಗನಾದ ಅಬ್ದುಲಕರೀಮ ನ ... ಯಿಲ ಮೊಹಮದನ ಇವನಿಗೆ, ನಾನು ಹೆ ಣ್ಣು ಮಗಳು ಇದ್ದ ಮೂಲಕ, ನನ್ನ ಘರಾಣೇದ ಯಾವತ್ತು ಮುಕ್ತ್ಯಾರನಾಮೆ ಮತ್ತು ಕೋರ್ಟ ಕಚೇರಿ ಕೆಲಸ ನಡಿಸಲಿಕ್ಕೆ ಒಪ್ಪಿಸಿದ್ದೆ. ಈಗ ಆ ವನು ಹಾಗೆ ಮಾಡದವನೆ ಅಜಮಾಸ ಒಂದು ತಿಂ ಗಳ ಹಿಂದೆ ನನಗೆ ಹೇಳದಲೆ ಘರಾಣೇದ ಸಂಬಂ ಧಿ ಕೆಲವು ಕಾಗದಪತ್ರಗಳನ್ನು ತೆಗೆದುಕೊಂಡು ಫರಾರಿಯಾಗಿರುತ್ತಾನೆ. ಕಾರಣ ಯಾರೂ ಆ ಕಾಗದಪತ್ರಗಳ ಮೇಲಿಯಾಗಲಿ ಅಥವಾ ಏನಾದ ರೊಂದು ಸಬಬದಿಂದಾಗಲಿ ಸಾಲ ವಗೈರೆ ಕೇಳಲಿಕ್ಕೆ ಬಂದರೆ ಅಥವಾ ಬಾಕಿ ವಸೂಲಿ ಕೇ ಳಲಿಕ್ಕೆ ಬಂದರೆ ಕೊಡಬಾರದು ಯಾವದೇ ತರ ದ ವ್ಯವಹಾರ ಮಾಡಬಾರದು. ಈ ಪತ್ರಿನಿಂದ ಅವನ ಮುಕ್ತ್ಯಾರನಾಮಾ ರದ್ದ ಆಗಿದೆ. ಜರ ವ್ಯ ವಹಾರ ಮಾಡಿದಲ್ಲಿ ನಮ್ಮ ಮೇಲೆ ಅದರ ಬಾಬ ತ ಯಾವ ತರದ ಜವಾಬದಾರ ಇರುವದಿಲ್ಲ. ತಿಳಿ ಯುವದು ತಾರೀಖು ೧೨-೬-೧೯೨೬ ನೇ ಇಸ್ವಿ.

ಈ ಎತಸ್ನೆ ಹೆಬ್ಬೆಟ್ಟಿನ ಗುರ್ತ ನೂರಬಿ ಕೋಂ ... ಸಯ್ಯದಮಕ್ತುಮ ಖಾಜಿ ಸಾ. ಧಾರವಾಡ ಈಕಿದು ಅದೆ.

ವಿಜಯದ ವರ್ಗಣೀ ದರ

ನಿತ್ಯಪತ್ರಕ್ಕೆ		
೧೨ ತಿಂಗಳಿಗೆ		೧೩—೦—೦ ರೂ
೬ ,,		೭—೦—೦ ರೂ
೩ ,,		೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೪—೦—೦ ರೂ

ಹೆಚ್ಚಿನ ಮಾಹಿತಿ ಕೆಳಗಿನ ... ಮ್ಯಾನೇಜರ ... , ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೋಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡವಲು ಎರಡು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ವು ನಡೆಯಲ್ಪಡುವದು. ಠೇವು ಮತ್ತು ಬೇರೆ ತರದ ಠೇವಣಿಗಳಿಗೆ ಚೆನ್ನಾಗಿ ಬಡ್ಡಿ ದೊರೆಯುವದು.

ಹೆಚ್ಚಿನ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವ ರಿಂದ ತಿಳಕೊಳ್ಳಬೇಕು.

ಮಲ್ಹಾರರಾವ ಬಿ. ಜಹಾಗೀರದಾರ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—೦—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ವಿವರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನಗಳನ್ನು ಒತ್ತೀ ಇ ಟ್ಟುಕೊಳ್ಳುವ ಪದ್ಧತಿಯು ಆರು ತಿಂಗಳ ವರೆಗೆ ಚನ್ನಾಗಿ ನಡೆಯುತ್ತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೧೯-೬-೨೭ ನೇ ಇಸ್ವಿ

ವಾದ್ಯದ ದೆಸೆಯಿಂದ ಬಂಗಾಲ ಸರಕಾರದ ಠರಾವು.

ಬಂಗಾಲ ಸರಕಾರದವರು ಮಸೀದೆಗಳ ಮುಂದೆ ವಾದ್ಯ ಬಾರಿಸುವ ವಿಷಯವಾಗಿ ಪ್ರಸಿದ್ಧ ಮಾಡಿದ ಠರಾವು ಹಿಂದೂ ಮುಸಲಮಾನರಿಬ್ಬರನ್ನೂ ಅಸಮಾಧಾನ ಪಡಿಸಿದೆ. ಮುಸಲಮಾನರ ಪ್ರತಿಯೊಂದು ಮಸೀದೆಯ ಮುಂದೆ ವಾದ್ಯವನ್ನು ನಿಲ್ಲಿಸುತ್ತಾ ಹೋಗಬೇಕೆಂಬುದು ತೀರ ಅನ್ಯಾಯವು ಹಿಂದೂ ಜನರ ದೃಷ್ಟಿಯಿಂದ ಅಶುಭವು. ಮಂಗಳ ಕಾರ್ಯದಲ್ಲಿ ವಾದ್ಯ ನಿಲ್ಲಿಸುವದು ಅವಲಕ್ಷಣವಾಗುತ್ತದೆಂಬುದು ನೂರು ವರ್ಷಗಳಿಂದ ರಾಜ್ಯಭಾರ ಮಾಡುತ್ತಿದ್ದ ಇಂಗ್ಲಿಷ ಜನರಿಗೆ ಇಂದಿಗೂ ತಿಳಿಯದೆ ಇದ್ದದ್ದು ಆಶ್ಚರ್ಯವೇ ಸರಿ. ಮುಸಲಮಾನರು ಬರುವ ಮುಂಚೆಯಾಗಿ ಹಿಂದೂ ಜನರು ಈ ದೇಶದಲ್ಲಿ ವಾಸವಾಗುತ್ತಿದ್ದರು. ಅವರು ವಾದ್ಯ ಬಾರಿಸುತ್ತಲೇ ದೇವರ ಹಾಗು ಇತರ ಮಂಗಲಕರವಾದ ಮೆರವಣಿಗೆ ತೆಗೆಯುತ್ತಾ ಇದ್ದರು. ಈ ಪದ್ಧತಿಯು ನಿಜವಿರುತ್ತದೆಂಬುದು ಇಂದಿಗೂ ಪ್ರತ್ಯಕ್ಷವಾಗಿ ಹಳ್ಳಿಗಳಲ್ಲಿ ಕಂಡು ಬರುವದು. ಮುಸಲಮಾನರು ತಮ್ಮ ಮಸೀದೆಗಳಲ್ಲಿ ನಿಮಾಜ ಮಾಡುತ್ತಿರುವಾಗ ಹಿಂದೂ ಜನರ ಮೆರವಣಿಗೆಯು ಅವಿಚ್ಛಿನ್ನವಾಗಿ ಹೋಗುವದನ್ನು ಕಣ್ಣಾರೆ ಕಾಣಬಹುದು. ವಾದ್ಯದ ಗೊಂದಲವೆಲ್ಲ ಪಟ್ಟಣಗಳಲ್ಲುಂಟು. ಅದ್ಯ ಕಾಲದ ಇತ್ತಲೀಗಿನ ಜಗಳವು. ಪುರಾತನದಿಂದ ವಾದ್ಯ ನಿಲ್ಲಿಸುವ ಪದ್ಧತಿ ಇದ್ದರೆ- ಮುಸಲಮಾನರು ತಂಟೆತಂಟಾಗಿ ನಿಂತು, " ಮತ್ತ ಬಜಾವ್ " ಎಂದು ಕದನ ಹೂಡುತ್ತಿದ್ದಿಲ್ಲ. ಈ ಜಗಳವು ತೀರ ಇತ್ತಲಾಗಿನದೆಂದು ಸರಕಾರದ ದಫ್ತರದಲ್ಲಿಯೇ ಬೇಕಾದಷ್ಟು ದಾಖಲೆ ದೊರೆಯಬಹುದಾಗಿರುತ್ತದೆ. ಹಿಂದುಸ್ಥಾನ, ಹಿಂದೂ ಜನರು, ಪುರಾತನದ ಸಾಂಪ್ರದಾಯ ಇವಾವ ಸಂಗತಿಗಳನ್ನು ಲಾರ್ಡ ಲಿಟ್ಟನಸಾಹೇಬರು ಲಕ್ಷ್ಯಕ್ಕೆ ತರದೆ, ಮುಸಲಮಾನರಿಗೆ ಅನುಕೂಲವಾಗಿ, ಮುಸಲಮಾನರು ಹಿಂದೂ ಜನರಿಗಿಂತ ಮೊದಲು ಈ ದೇಶದಲ್ಲಿದ್ದವರೆನ್ನುವಂತೆ ಹುಕುಮು ಕಳಿಸಿದ್ದಾರೆ. ದಿನಾಲು ನಿಮಾಜದ ಐದು ವೇಳೆಗಳು. ಈ ಐದೂ ವೇಳೆಗಳಲ್ಲಿ ಹಿಂದೂ ಜನರು ಮಸೀದೆಗಳ ಮುಂದೆ ವಾದ್ಯ ಬಾರಿಸಬಾರದೆಂಬುದರ ಅರ್ಥವು- ಹಿಂದೂ ಜನರು ಆ ಹೊತ್ತುಗಳನ್ನು ಬಿಟ್ಟು ತಮ್ಮ ಕಾರ್ಯಗಳನ್ನು ಮಾಡಬೇಕೆಂದು ಹೇಳುವಂತಾಗುತ್ತದೆ. ಈ ಪ್ರಕಾರ ಹೇಳುವದು ಹಿಂದೂ ಜನರ ಧರ್ಮ ವಿಧಿಗಳಲ್ಲಿ ಕೈಹಾಕಿದಂತಾಗುತ್ತದೆ. ಈ ಪ್ರಕಾರ ಗವರ್ನರಸಾಹೇಬರು ಹಿಂದೂ ಜನರ ನಿಸರ್ಗಭೂತವಾದ ಹಕ್ಕು ಸ್ವಾತಂತ್ರ್ಯಗಳ ಮೇಲೆ ಗದಾ ಪ್ರಹಾರ ಮಾಡಿದರೂ, ಮುಸಲಮಾನರು ಆ ಸಂತುಷ್ಟರಾಗಿದ್ದಾರೆ. ನಮಾಜದ ಐದು ವೇಳೆಗಳೆಂದು ಕುರಾಣದಲ್ಲಿ ಹೇಳಿದ್ದರೂ, ಭಕ್ತರು ಸದಾ ಸರ್ವಕಾಲದಲ್ಲಿ ನಮಾಜ ಮಾಡುತ್ತಾರೆ. ಆದುದರಿಂದ ಹಿಂದೂ ಜನರು ಯಾವಾಗಲು ಮಸೀದೆಗಳ ಮುಂದೆ ವಾದ್ಯ ವೈಭವದಿಂದ ಬರಬಾರದು. ಇದರ ವಿರುದ್ಧ ಗವರ್ನರಸಾಹೇಬರು ಮಾಡಿದ ಹುಕುಮು ತಮಗೆ ಪ್ರತಿಕೂಲವಾಗಿರುತ್ತದೆ. ಆದುದರಿಂದ ಈ ಹುಕುಮವನ್ನು ರದ್ದುಪಡಿಸಿಕೊಳ್ಳಲಿಕ್ಕೇ ಬೇಕೆಂದು ಮುಸಲಮಾನರು ಚಳವಳಿ ನಡಿಸತಕ್ಕವರಿದ್ದಾರೆ. ಈ ತೆರವಾಗಿ ಗವರ್ನರಸಾಹೇಬರ ಹುಕುಮು ಎರಡೂ ಜನಾಂಗಗಳನ್ನು ಅಸಂತೋಷ-ಅಸಮಾಧಾನದಲ್ಲಿ ಹಾಕಿರುತ್ತದೆ.

ವನಪರ್ತಿ ಸಂಸ್ಥಾನದ ದೊರೆತನದ ಬಗ್ಗೆ ವ್ಯಾಜ್ಯ.

—o—

ನಿಜಾಮ ರಾಜ್ಯದಲ್ಲಿ ಗದ್ವಾಲಿಯ ಹತ್ತರ ವನಪರ್ತಿ ಎಂಬದೊಂದು ಸಂಸ್ಥಾನವುಂಟು. ಸಂಸ್ಥಾನವು ಚಿಕ್ಕದಾದರೂ, ಪುರಾತನವೂ, ಇತಿಹಾಸ ಪ್ರಸಿದ್ಧವಾದದ್ದೂ ಇರುತ್ತದೆ. ಇದರ ಒಡೆಯರಾದ ಮಹಾರಾಜಾ ರಾಮೇಶ್ವರರಾಯರು ೧೯೨೨ನೆಯ ಇಸವಿಯಲ್ಲಿ ಪರಲೋಕವಾಸಿಯಾದರು. ಇವರಿಗೆ ಇಬ್ಬರು ಗಂಡ ಮಕ್ಕಳು. ಹಿರಿಯ ಮಗನಾದ ಮಹಾರಾಜಾ ಕೃಷ್ಣದೇವರಾಯನಿಗೆ ಪಟ್ಟಗಟ್ಟಬೇಕೆಂದೂ, ಮದ್ರಾಸ ಇಲಾಖೆಯಲ್ಲಿರುವ ಬಹು ದೊಡ್ಡ ಸ್ಥಾವರ ಆಸ್ತಿಯನ್ನೂ ಬೇರೆ ಬೇರೆ ಬ್ಯಾಂಕುಗಳಲ್ಲಿದ್ದ ಹತ್ತು ಲಕ್ಷ ರೂಪಾಯಿಗಳನ್ನೂ ಕಿರಿಯ ಮಗನಾದ ರಾಜಾ ರಾಮದೇವರಾಯನಿಗೆ ಕೊಡಬೇಕೆಂದೂ ಮೃತ್ಯುಪತ್ರ ಮಾಡಿದ್ದರು. ನಿಜಾಮಸಾಹೇಬರು ಮೃತ್ಯುಪತ್ರವನ್ನು ಮಂಜೂರ ಮಾಡಿ, ಹಿರಿಯ ಮಗನಿಗೆ ಪಟ್ಟಗಟ್ಟಿದರು. ಈ ಸಂಗತಿಯು ಸಂಭವಿಸಿ, ೧೮ ತಿಂಗಳಾದ ಬಳಿಕ ಮಹಾರಾಜಾ ಕೃಷ್ಣದೇವರಾಯನು ಪರಲೋಕವನ್ನೈದಿದನು. ಈತನಿಗೆ ಒಬ್ಬ ಮಗನಿರುವನು. ಅಲ್ಪವಯಸ್ಕನು. ಅಲ್ಪವಯಸಿಗೆ ಪಟ್ಟವಾಗಬಾರದು; ನನ್ನ ತಂದೆಗೆ ಮೃತ್ಯುಪತ್ರ ಮಾಡಿದರೆ ಅಧಿಕಾರವಿದ್ದಿಲ್ಲ. ಸಂಸ್ಥಾನವು ತಮಗೇ ಆಗಬೇಕೆಂದು ರಾಜಾ ರಾಮದೇವರಾಯನು ನಿಜಾಮನ ದರಬಾರದಲ್ಲಿ ವ್ಯಾಜ್ಯ ಹೂಡಿದ್ದಾನೆ. ಅಲ್ಪವಯಿಗೇ ರಾಜ್ಯಾಧಿಕಾರ ದೊರೆಯಬೇಕೆಂದು ಹುಜೂರರ ಮನಸ್ಸಿನಲ್ಲಿರುತ್ತದೆಂದು ಪ್ರಸಿದ್ಧವಾಗಿದೆ. ಹಿಂದೂ ಧರ್ಮಶಾಸ್ತ್ರ ಪ್ರಕಾರ ಅಲ್ಪವಯಸ್ಕನು ಹಕ್ಕುದಾರದಾರನಾಗುತ್ತಾನೆಂಬದನ್ನು ಹೊಸದಾಗಿ ಹೇಳಬೇಕಾಗಿರುವದಿಲ್ಲ. ಮೊಗಲಾಯಿ ನ್ಯಾಯವು ಇಂದು ಅಂದರೆ ಹತ್ತು ವರ್ಷ ಮುಂದೆ ಹೇಳುವದು. ಹುಜೂರರು ಬೇಗನೆ ನಿರ್ಣಯ ಹೇಳಬೇಕೆಂದೇ ಸನ್ಯದಲ್ಲಿ ಸಂಸ್ಥಾನದ ಪ್ರಜರ ಕೋರಿಕೆಯುಂಟು.

ಜೇಲರನಿಗೇ ಜೇಲಿನ ಶಿಕ್ಷೆ.

—o—

ಮುಲ್ತಾನದಲ್ಲಿದ್ದ ಅಸಿಸ್ಟಂಟ ಜೇಲರನಾಗಿದ್ದ ಸುರಾಜುದ್ದೀನನೆಂಬವನು ಜೇಲಿನ ಹಣದ ದುರುಪಯೋಗ ಮಾಡಿ, ಸುಳ್ಳು ಪಾವತಿಗಳನ್ನು ಹುಟ್ಟಿಸಿದನು. ಈ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಈತನಿಗೆ ೧೮ ತಿಂಗಳ ಕಠಿಣ ಕೈದಿನ ಶಿಕ್ಷೆ ವಿಧಿಸಿದ್ದಾರೆ. ಜೇಲರರು ಕೈದಿಗಳನ್ನು ಪರಿ ಪರಿ ಹಿಂಸೆಯಿಂದ ನಡಿಸಿಕೊಳ್ಳುವರು. ಕೈದಿಗಳಾದ ವಾರ್ಡರರ ಕಯ್ಯಲ್ಲಿ ಈ ಜೇಲರರು ಸಿಕ್ಕು ಕೃತ ಕರ್ಮದ ದೊಡ್ಡ ಪಶ್ಚಾತ್ತಾಪವಾಗದಿರದು. ತಾನು ಸತ್ತ ಹೊರ್ತು ಸ್ವರ್ಗ- ನರಕ ಕಾಣಿಸುವದಿಲ್ಲ. ತಮಗೇ ಆಗುವ ಜೇಲಿನ ತಾಪವನ್ನು ಅನುಭವಿಸುವಾಗ ತಮ್ಮಿಂದ ಎಂಥ ಪಾಪವಾಗುತ್ತಿತ್ತೆಂದು ಇವರಿಗೆ ಪದೇ ಪದೇ ಸ್ಮರಣೆಗೆ ಬಂದರೆ- ಸಾಕು.

ಪಂಚರ ವಿದ್ಯಮಾನ ಪ್ರಾಥಮಿಕ ಶಿಕ್ಷಣ.

- o

ಮದ್ರಾಸ ಸರಕಾರದವರು ಐನೂರು ಜನಸಂಖ್ಯೆಯುಳ್ಳಂಥ ಪ್ರತಿಯೊಂದು ಗ್ರಾಮದಲ್ಲಿ ಪಂಚರ ವಿದ್ಯಮಾನ ಪ್ರಾಥಮಿಕ ಶಿಕ್ಷಣದ ಶಾಲೆಯನ್ನು ಹಾಕಿಸಬೇಕೆಂದೂ, ಶಾಲೆಗೆ ಗ್ರ್ಯಾಂಟು ಕೊಡಬೇಕೆಂದೂ ವಿಚಾರ ಮಾಡುತ್ತಿದ್ದಾರೆ. ಊರೂರಿಗೆ ಸ್ವತಂತ್ರ ಶಾಲೆ ಮಾಡಿದರೆ- ಮಾಸ್ತರರ ಮೇಲೆ ಗ್ರಾಮಸ್ಥರ ಪೂರ್ಣ ಅಧಿಕಾರವಾಗಿ, ವರ್ಗಾವರ್ಗಿಯ ತಾಪ ತಪ್ಪುವದು. ಮೊದಲಿನಂತೆ ಹಳ್ಳಿಯ ಅಯ್ಯನವರ ಶಾಲೆಯಂತಾಗುವದು. ಆದರೂ ಶಿಕ್ಷಣವು ವರ್ತಮಾನ ಸುಧಾರಣೆಯ ಪ್ರಕಾರ ನಡೆಯುವದು. ಈ ಪ್ರಕಾರ ಹಳ್ಳಿಯಲ್ಲಿ ಹಾಕುವ ಶಾಲೆಗೆ ಬೇಕಾಗುವ ಕಟ್ಟಡವನ್ನು ಪಂಚರೇ ಒದಗಿಸಿಕೊಡಬೇಕು. ಅದು ಸ್ವರ್ಥ ಪ್ರ

ವ್ಯಾಸಪೀಠಯವಾಗಿ, ಹೊರಗಿನ ಹ್ಯೂಲಿನದಾಗಿದಬಾರ ದಂಗೆಯ ವಿದ್ಯಾಖಾತೆಯ ಮಂತ್ರಿಯ ವಿಚಾರವಾಗಿರುತ್ತದೆ.

ಬೆಳಗಾವಿಯ ತುರಂಗದಲ್ಲಿ
ಸುರಂಗದ ಸಾಹಿತ್ಯಗಳು!!

—o—

ಬೆಳಗಾವಿಯ ಹತ್ತರಲಿರುವ ಹಿಂಡಲಗಿಯ ತುರಂಗದಲ್ಲಿ ವಾರ್ಡರರಾದ ಕಲ್ಲಪ್ಪಾ ಮತ್ತು ಬಲಭೀಮಪ್ಪಾ ಇವರ ಕೋಣೆಯಲ್ಲಿ ಚಾಪೆಖಾನಾದಿ ಪದಾರ್ಥಗಳು ಸಿಕ್ಕವು. ಈ ಅಪರಾಧದ ಪೂರ್ವ ವಿಚಾರಣೆಯಾಗಿ ಇವರು ಸೆಶನ ಕಮೀಟಿ ಮಾಡಲ್ಪಟ್ಟರು. ಇಂಥ ಅಪರಾಧಗಳ ವಿಚಾರಣೆಗೆ ಮೊದಲು ಸರಕಾರದ ಪರವಾನಿಗಿ ಬೇಕಾಗುತ್ತದೆ. ಪರವಾನಗಿ ಪಡೆಯದೆ ಕಮೀಟ ಮಾಡಿದ್ದನ್ನು ರದ್ದು ಮಾಡಬೇಕೆಂದು ಸರಕಾರೀ ವಕೀಲರೇ ಕೋರ್ಟಿಗೆ ತಿಳಿಸಿದರು. ಕಮೀಟಿಯ ಆರ್ಡರನ್ನು ರದ್ದುಮಾಡಬೇಕೆಂದು ಜಡ್ಜರು ಹಾಯಕೋರ್ಟಿಗೆ ಬರೆದಿರುತ್ತಾರೆ.

ಇಂಗ್ಲಂಡದ ಕೂಲಿಕಾರರ ಶೋಚನೀಯ
ಸ್ಥಿತಿಯು.

—o—

ಗಿರಣಿ ಕಾರಖಾನೆಗಳಿಗೆ ಒಂದೂಟ, ಒಂದುಪವಾಸ.

—o—

ಇಂಗ್ಲಂಡದಲ್ಲಿ ಕಲ್ಲಿದ್ದಲಿಯ ಕೂಲಿಕಾರರ ಸಂಪಿನ ನ್ಯಾಯವು ಇನ್ನೂ ತೀರಿಲ್ಲ. ಸಂಪುಗಾರರು ತಮ್ಮ ಹಟಬಿಟ್ಟಿಲ್ಲ. ಖಣಿಗಳ ಮಾಲೀಕರು ಸಿಂತ ಸ್ಥಳ ಬಿಟ್ಟು ಸರಿಯಲೊಲ್ಲರು. ಪ್ರತ್ಯಕ್ಷ ಮಂತ್ರಿಗಳು ಮಧ್ಯಸ್ಥಿಕೆ ವಹಿಸಿದ್ದಾರೆ. ಆದರೆ ಅವರ ಪ್ರಯತ್ನವೆಲ್ಲ ಕಸ್ತೆಯನ್ನು ತಗಿಗಿದಂತಾಗುತ್ತಿರುವದು. ಸರಕಾರದವರು ಯುದ್ಧ ಕಾಲದಂತೆ ಪ್ರತಿಯೊಂದು ಕುಟುಂಬಕ್ಕೂ ಕಾಯಿಸಿದ ಇದ್ದಲಿಯನ್ನು ತೂಗಿ ಕೊಡುತ್ತಿರುವದರಿಂದ, ಯಾರೊಬ್ಬರಿಗೂ ಹವಣಿಯಾಗಿರುತ್ತದೆ. ಈ ಮೂಲಕ ನಿರುದ್ಯೋಗಿಗಳ ಸಂಖ್ಯೆಯು ಹೆಚ್ಚಾಗಿದೆ. ವಾರವಾರಕ್ಕೂ ಎಷ್ಟು ಜನರಿಗೆ ಕೆಲಸವಿಲ್ಲೆಂಬದನ್ನು ಸರಕಾರದವರು ಪ್ರಸಿದ್ಧ ಮಾಡುವರು. ಅದು ಸರಾಸರಿ ೧೧ ಲಕ್ಷವಾಗುತ್ತಿತ್ತು. ಈಗ ಈ ಸಂಖ್ಯೆಯು [illegible] ಲಕ್ಷಕ್ಕೆ ಬಂದಿದೆ. ಇದ್ದಲಿಯ ಕೊರತೆಯೇ ಕಾರಣ- ಒಂದರಿಗೆ ಕೆಲ್ಲಿ ಪ್ರಾಂತಗಳ ದನ್ನೆಯಲ್ಲಿರುವ ಕಾರಖಾನೆಗಳು ಸ್ಥಿತಿ ಏನನ್ನಾ ಪಸ್ಥೆಗೆ ಬಂದು ಅವುಗಳ ಧುಂಗಾಬಂದಾಗುವ ಹೊತ್ತು ಒದಗಿದೆ ಉಕ್ಕು ಮತ್ತು ಕಬ್ಬಿಣದ ಪ್ರಚಂಡ ಕಾರಖಾನೆಗಳು ಬಾಗಿಲು ಹಾಕಿದ ಮೇಲಂದರೂ ಸಲ್ಲುವದು. ದೊಡ್ಡ ದೊಡ್ಡ ಗಿರಣಿಗಳು ಒಂದು ವಾರ ದುಡಿದು, ಒಂದು ವಾರ ಧುಂಗಾಬಂದು ಮಾಡುವ ನಿರ್ಣಯ ಮಾಡಿ, ಒಂದೂಟ ಒಂದುಪವಾಸ ಮಾಡಬೇಕೆಂದಿವೆ.

ಮಂತ್ರಿಯ ಕಪಾಳಕ್ಕೆ ಹೊಡತ

ಹಂಗೇರಿ ದೇಶದ ಮಂತ್ರಿಯು ಜನೆವ್ಹಾದ ಪರಿಷತ್ತಿನಲ್ಲಿ ಕುಳಿತಾಗ, ಒಬ್ಬ ತರುಣನು ಅವರ ಹತ್ತರ ಹೋಗಿ, "ಇದು ಹಂಗೇರಿ ರಾಜ್ಯದ ಪತಿಯಿಂದ ಉಡುಗರೆ" ಎಂದು ಬೀಸಿ ಕಪಾಳಕ್ಕೆ ಹೊಡೆದನು. ಇಟಲಿಯ ಮಂತ್ರಿಯು ಅಡ್ಡ ಬಂದು, ಹೆಚ್ಚಿನ ಹೊಡತ ತಪ್ಪಿಸಿದನು.

ವಿವಿಧ ವರ್ತಮಾನಗಳು

—o—

ಕೊಲ್ಹಾಪೂರದ ರಾಜಾರಾಮ ಕಾಲೇಜದಲ್ಲಿ ಬಿ. ಎ ಪರೀಕ್ಷೆಯಲ್ಲಿ ಕನ್ನಡವನ್ನು ಐಚ್ಛಿಕ ವಿಷಯ ತಕ್ಕೊಳ್ಳುವವರಿಗಾಗಿ ಕನ್ನಡ ಕಲಿಸುವ ವ್ಯವಸ್ಥೆ ಮಾಡಿದ್ದಾರೆ.

ಮುಂಬಯಿಯ ಅಕ್ಟಿಂಗ ಗವ್ಹರ್ನರರಾಗಿದ್ದ ಸರ ಲಾರೆನ್ಸಸಾಹೇಬರು ಜ್ಞಾನಪ್ರಕಾಶದ ರಿಲೀಫ ಫಂಡಿಗೆ ಮುನ್ನೂರು ರೂಪಾಯಿ ಕೊಟ್ಟಿದ್ದಾರೆ.

[illegible] ಪತಿಯಿಂದಾ [illegible] ಪಕ್ಷೀಯರು [illegible] ಉಮೇದವಾರರಾಗಿ ಗೊತ್ತು [illegible]

ಪುಣೆಯ ಮತ್ತೆ ಸೊಲ್ಲಾಪೂರದಲ್ಲಿಯೂ ದೆವ್ವಗಾಳಿ ಬೀಸಿ, ಪುಷ್ಕಳ ಕೇಡು ಆಗಿ, ಅನೇಕರು ಅಪಘಾತಕ್ಕೆ ಗುರಿಯಾಗಿದ್ದಾರೆ.

ಮಿ. ಮಿರಜಾ ಅಲ್ಲಿ ಖಾನರವರು ಮುಂಬಯಿ ಹಾಯಕೋರ್ಟಿನಲ್ಲಿ ಒಬ್ಬ ಅಕ್ಟಿಂಗ ಜಡ್ಜರಾಗಿ ನೇಮಿಸಲ್ಪಟ್ಟಿದ್ದಾರೆ.

ಬುಲಢಾಣಾ ಮತ್ತು ಅಕೋಲೆ ಜಿಲ್ಲೆಗಳಲ್ಲಿ ದನಗಳ ಮೇವು ಸಾಕಾಗಿ ತಕ್ಕೊಳ್ಳಬಾರದೆಂದು ನಾಗಪೂರ ಸರಕಾರದವರು ಠರಾವು ಮಾಡಿದ್ದಾರೆ.

ಪಾಠಶಾಲೆಯಲ್ಲಿ ಅಸ್ಪೃಶ್ಯರ ಪರಿಷತ್ತು ಕೂಡಿ, ಲೋಕಲ ಬೋರ್ಡುಗಳಲ್ಲಿ ತಮ್ಮ ಜಾತಿಯವರನ್ನು ಪ್ರತಿನಿಧಿಗಳನ್ನಾಗಿ ನೇಮಿಸಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವ ಠರಾವು ಪಾಸಾಗಿತ್ತು.

ಧಾರವಾಡದ ಪ್ರಸಿದ್ಧ ಗೃಹಸ್ಥರಾದ ಶ್ರೀ ದಾದಾಸಾಹೇಬ ಖಾಸ್ನೀಸರವರ ಪ್ರಕೃತಿಯು ಬಹಳ ಕೆಟ್ಟಿತ್ತು. ಈಗ ಗುಣವಾಗುತ್ತಲಿದೆ

ಬಿಹಾರ ಪ್ರಾಂತದಲ್ಲಿ ರಾಯಬಹಾದ್ದೂರ ಸಬಿಚಂದರು ಡಿಪ್ಯುಟಿ ಇನ್ಸಪೆಕ್ಟರ ಜನರಲ ಪೋಲೀಸರಾಗಿ ನೇಮಿಸಲ್ಪಟ್ಟಿದ್ದಾರೆ ಇವರು ಬಹಳ ದಯಾಳು ಗೃಹಸ್ಥರು. ಪ್ರಜರು ಇವರಿಗೆ ಬಿಹಾರ ಭೂಷಣ ಮತ್ತು ದಯಾನಿಧಿ ಎಂಬ ಪದವಿಗಳಿಂದ ಭೂಷಣಗೊಳಿಸಿದ್ದಾರೆ.

ದೇಶಬಂಧು ದಾಸರ ಪರ್ಸಾಬ್ದಿಯು ೧೬ ನೆಯ ತಾರೀಖಿನ ದಿವಸ ಆಗುವದು. ಅಂದು ಕಲಕತ್ತೆಯ ಮ್ಯುನಿಸಿಪಾಲಿಟಿಯ ಎಲ್ಲ ಕಚೇರಿಗಳು ಬಂದಿಡಲ್ಪಡುವವು.

ಅಖಿಲ ಭಾರತೀಯ ಬ್ರಾಹ್ಮಣೇತರ ಪರಿಷತ್ತು ೧೮ರನೆಯ ಜುಲೈದ ದಿವಸ ಪುಣೆಯಲ್ಲಿ ಕೂಡುವದು. ಬಾಸಗಲ್ಲಿನ ಅರಸರು ಅಧ್ಯಕ್ಷರಾಗುವರೆಂದು ಈ ಮೊದಲೇ ಬರೆದಿರುತ್ತೇವೆ.

ಗ್ವಾಲೇರ ಸಂಸ್ಥಾನದಲ್ಲಿ ಕೇಸರಿ, ಮರಾಠಾ ಮತ್ತು ಕ್ರಾನಿಕಲಕ್ಕೆ ಬಹಿಷ್ಕಾರವಿತ್ತು. ಈ ಪ್ರತಿಬಂಧವನ್ನು ತೆಗೆದು ಹಾಕಿದಂತೆ, ದರಬಾರದವರು ಈ ಪತ್ರಕಾರರಿಗೆ ತಿಳಿಸಿದ್ದಾರೆ.

ಸಾಂಗಲಿ ಮತ್ತು ಮಿರಜೆಯಲ್ಲಿ ಅದ್ಭುತವಾಗಿ ಮಳೆ ಸುರಿದು, ಬೀದಿಗಳಲ್ಲಿ ಮೊಣಕಾಲು ಮಟ ನೀರು ಹರಿಯಿತು.

ಜರ್ಮನ ಪಕ್ಷಪಾತಿಯಾಗಿ ಪೋಲಂಡದ ಭಾಗವಾಗಿರುವ ಪ್ರದೇಶದಲ್ಲಿ ಬಂಡಾಯದ ದಟ್ಟಿಸ್ಲ ತೋರಿದ್ದರಿಂದ, ಪೋಲಂಡ ಸರಕಾರದವರು ಅಲ್ಲಿ ದಬ್ಬಾಳಿಕೆಯ ಕಾಯದೆಯನ್ನು ಜಾಹೀರಮಾಡಿದ್ದಾರೆ.

ಧಾರವಾಡ—

ಈ ಊರವರಾದ ರಾವಸಾಹೇಬ ಕಲ್ಯಾಣ ಸೀತಾರಾಮ ಯಾರ್ದಿಯವರು ಮಹಾರಾಷ್ಟ್ರ ಪ್ರಾಂತದಲ್ಲಿ ಮಾಮಲೇದಾರರಾಗಿದ್ದಾರೆ. ಇವರನ್ನು ಸೆಕಂಡ ಗ್ರೇಡ ಡೆಪ್ಯುಟಿ ಕಲೆಕ್ಟರ ಮಾಡಿ, ಬೆಳಗಾವಿಯಲ್ಲಿ ಆಗ್ರಿಕಲ್ಚರಲ ಲ್ಯಾಂಡ ರೆಕಾರ್ಡ್ಸ ಖಾತೆಯ ಸುಪರಿಂಟೆಂಡೆಂಟರಾಗಿ ನೇಮಿಸಿದ್ದಾರೆ.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇನು? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ? ಹಲ್ಲುಶೂಲಿಯೋ? ಮುಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು!

ಅಜ್ಜನು— ಕಂದಾ— ಹೌದು ಮುಯ್ಯೆಲ್ಲಾ ನೋಯುತ್ತದೆ

ಕಂದ— ಹಾಗಾದರೆ ಮೊಮೆಂಟ ಕ್ಯುಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ... ನೋವುಗಳ ಪರಿಹಾರವಾಗಿ ಮಾತಾಡುವಿ ... ಕೂಡ್ರುವಿ ... ತುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ತರರ ಪ್ರಿಸ್ಕ್ರಿಪ್ಶನ ... ಔಷಧವನ್ನು ... ಕೊಡುವೆವು.

ವಿಳಾಸ— ಕನಕಾದಿತ ಪಂಡಿತರ ಸ್ಟೋರ್ಸ. ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ

ನೋಟೀಸು.

—೦—

ಮೆ॥ ಡಿ। ಇ। ಆಫ ಲ್ಯಾಂಡ ರಿಕಾರ್ಡ್ಸ ಧಾರವಾಡ ಇವರಿಗೆ–

ರಾಘವೇಂದ್ರರಾವ ಸ್ವಾಮಿರಾವ ದೇಶಪಾಂಡೆ ಆಲದಕಟ್ಟಿ ತಾಲ್ಕು ಹಾನಗಲ್ಲ ಈ ನೋಟೀಸಿನ ದ್ವಾರಾ ತಿಳಿಸುವದೇನಂದರೆ–

ಧಾರವಾಡ ೧ನೇ ವರ್ಗ ಸಬ್ಬಜಡ್ಜ ಕೋರ್ಟ ಅಸಲ ನಂಬರ ೫೨೨/೧೯೨೦ನೇದ್ದರ ಡಿಕ್ರಿ ಪ್ರಕಾರ ವಾದಿಗೆ ಅಂದರೆ ನನಗೆ ದಾವೇ ಆಸ್ತಿಯಲ್ಲಿ ಸರಸ ನಿರಸ ಹಿಸೆ ಮಾಡಿ ೧/೩ ಹಿಸ್ಸೆದ ಜಮೀನುಗಳನ್ನು ನನಗೆ ಪ್ರಥಕ ಮಾಡಿ ಕೊಡಬೇಕಂತಾ ಡಿಕ್ರಿ ಆದ ಸದರ ಕೋರ್ಟ ಲಾ। ಅ। ನಂಬರ ೧೭೪/೧೯೨೩ನೇದ್ದರಲ್ಲಿ ಕೆಲಸ ನಡಿದು ನಾವ ೧-೨ ಪ್ರ॥ ವಾದಿಗಳು ನಮ್ಮೊಳಗೆ ಆಪಸಾತ ಕೆ ಮಾಡಿಕೊಂಡು ಆ ಬಾ॥ ಯಾವತ್ತು ಕೆಲಸ, ಮಾಮಲೇದಾರ ಸಾ॥ ತಾಲ್ಕು ಕರಜಗಿ ಇವರ ಮುಕ್ಷಮ ನಿಕಾಲಿ ಆಗಿ ಈಗ ೨ ವರ್ಷದಿಂದ ನನ್ನ ಸಿಕ್ಕ ಬಂದ ಜಮೀನುಗಳ ವಹಿವಾಟ ಸ್ವತಂತ್ರದಿಂ ನಡಿಸತೇನೆ. ಹೀಗೆ ಇದ್ದು ಮೇಲಿನ ಅಸಲ ನಂಬರೇದ್ದರಲ್ಲಿ ೩ನೇ ಪ್ರ॥ ವಾದಿ ಗುಂದಾಬಾಯಿ ಕೋಂ ನಾರಾಯಣರಾವ ದೇಶಪಾಂಡೆ ಸಾ. ಕಲ್ಲಾಪುರ ತಾ. ಹಾನಗಲ್ಲ ಇವರು ತಮಗೆ ಘೋಡೇರಾವ ಕೃಷ್ಣ ಇವನ ಪೋಟಗಿ ದಶಿಂದ ಕೊಡುವ ಕೆಲವು ಹಳ್ಳಿಗಳಕ್ಷಯು ೧/೩ ಹಿಶೇ ಲಾವಣಿ ಹ ... ಸದರಿ ಸುಂದ್ರಾಬಾಯಿ ತಗೋತ್ತಿದ್ದು ನಮ್ಮ ವಾಟಗೆ ಮುಂದೆ ತಕರಾರ ಬರಬಾರದೆಂತ ಸದರಿ ... ಅವಳಿಗೆ ಪ್ರತಿವಾದಿನ್ನ ಮಾಡಿ ದಾವೇ ಮಾಡಿದ್ದರ ಕೋರ್ಟಿನಿಂದ ಸಮನಸ ಜ್ಯಾರೀ ಆಗೀನೂ ಡಿಕ್ರಿ ... ಗೋ ವ್ಯಾಜ್ಯಕ್ಕೆ ಗೈರ ಹಾಜರ ಇದ್ದಾಳೆ. ಆ ... ಹಾಜರಾಗಿ ತನ್ನದೇನು ತಕರಾರ ತೋರಿಸತಕ್ಕ ... ಅಗ್ಗೆ ಯಾವ ತಕರಾರ ಮಾಡದೆ ಈಗ ಏನೋ ... ಒಂದು ಸುಳ್ಳು ವ ಗೈರ ಕಾಯದೆಶೀರ ತಕರಾರ ನಡಿ ... ಅರ್ಜಿ ವಗೈರೆ ಮಾಡಿ ಯೇನೋ ಒಂದು ಕಪಟ ... ಮಾಡಿ ಪೋಟಗಿ ಪತ್ರದ ಪ್ರಕಾರ (೧೭) ಹಳ್ಳಿಗಳಲ್ಲಿ ... ಕರಜಗಿ ತಾಲ್ಕುದಲ್ಲಿ ಇರೋವುಗಳಲ್ಲಿ ೧/೩ ಹಿಸೇ ... ಸೀರೆ ಮಾಡಿ ಕೊಡಲಿಕ್ಕೆ ಹಣಾ ವಗೈರೆ ಹಾಜರ ಮಾಡಿದಂತೆ ತಿಳಿದು ನಿಮ್ಮ ಕಡಿಂದಾ ವಾಟಣಿ ಮಾಡೋ ಕೆಲಸ ನಡದ್ದು ತಿಳಿದು ಈ ನೋಟೀಸಿನಿಂದಾ ತಿಳಿಸುವದೇನಂದರೆ– ದಿವಾಣಿ ಕೋರ್ಟಿನ ಡಿಕ್ರಿ ವಿರುದ್ಧ ಕೆಲಸ ನಡಸಲಿಕ್ಕೆ ಪಕ್ಷಕಾರ ಕಬೂಲಿಯಿಂದಾ ಕೋರ್ಟಿನ ಡಿಕ್ರಿ ದುರಸ್ತ ಆಗೋ ವರಿಗೂ ಬರುವದಿಲ್ಲಾ. ಈಗ ನೀವು ನಡಸತಕ್ಕ ಕೆಲಸ ಡಿಕ್ರಿ ವಿರುದ್ಧ ವ ಕಾಯದೇ ವಿರುದ್ಧ ಆದೆ ಆದ್ದರಿಂದ ಈಗ ನೀವು ನಡಸತಕ್ಕ ಮುಂದಿನ ಕೆಲಸ ಯೋಕದಂ ಬಂದ ಮಾಡಿ ಸದರಿ ಪ್ರಕರ್ಣ ಕೋರ್ಟಿಗೆ ಕಳಸಬೇಕು ಬಂ ಕೊರ್ಟಿಗೆ ಕಳ್ಸದೆ ಮುಂದಿನ ಕೆಲಸ ನಡಿಸಿದರೆ ಕಾಯದೇಶೀರ ಇಲಾಜ ನಡಿಸಿ ಯೋಗ್ಯ ತಜವೀಜ ಮಾಡಬೇಕಾಗುವದು ಅಂತಾ ಇದರ ಮೂಲಕಾ ಜಾಹೀರ ಮಾಡತೇನೆ. ತಾ ೧೨-೬-೨೬

ಸಹಿ (ಇಂಗ್ಲಿಷ) ರಾಘವೇಂದ್ರ ಸ್ವಾಮಿರಾವ ದೇಶಪಾಂಡೆ

ನೋಟೀಸು

—೦—

ಕೋಡ ತಾಲ್ಕು ಚಿಕ್ಕಮತ್ತೂರ ಗ್ರಾಮದಲ್ಲಿರುವ ಭೀರಪ್ಪಾ ಕುಂಬರ ಅಳ್ಳಿಕಟ್ಟಿ ಸಾ॥ ಚಿಕ್ಕಮತ್ತೂರ ಇವರಿಗೆ–

ಕೋಡ ತಾಲ್ಕು ಚಿಕ್ಕೊಣತಿ ಗ್ರಾಮದಲ್ಲಿರುವ ಭರಮಕ್ಕಾ ಕೋಂ ಭೀರಪ್ಪಾ ಕುರುಬರ ಸಾ॥ ಚಿಕ್ಕೊಣತಿ ನಾನು ಈ ನೋಟೀಸ ಮೂಲಕ ತಿಳಿಸುವದೇನಂದರೆ–

ನೀನು ನನ್ನನ್ನು ಉಡಿಕಿ ಮಾಡಿಕೊಂಡು ಹೋಗಿ ಹತ್ತು ಹನ್ನೆರಡು ತಿಂಗಳ ಒಳ್ಳೇ ರೀತಿಯಿಂದ ಬಾಳುವೆ ಮಾಡುತ್ತಲಿದ್ದು ನಂತರ ನಿನ್ನ ಲಗ್ನದ ಹೆಂಡತಿ ಮಾತು ಕೇಳಿ ನನ್ನ ಮೈಮೇಲಿನ ಎಲ್ಲ ದಾಗೀನೆ ತೊಗೊಂಡು ಒಂದು ಹರಕು ಶೀರೆಯ ಮೇಲೆ ನನ್ನನ್ನು ಹೊರಗೆ ಹಾಕಿದಿ ಆ ವೇಳೆ ನನ್ನ ಉಪಜೀವನಕ್ಕಾಗಿ ಬಹಳ ತ್ರಾಸವಾದ್ದರಿಂದ ನಿನಗೆ ಒಂದು ಪತ್ರದಿಂದ ತಿಳಿಸಿದೆನು ಅದಕ್ಕೆ ನೀನು ಬಂದು ಕರಕೊಂಡು ಹೋಗಲಿಲ್ಲಾ. ಆ ಮೇಲೆ ಎರಡನೆ ಸಾರೆ ನೋಟೀಸ ರಜಿಸ್ಟರ ಮಾಡಿದೆನು ಅದಕ್ಕೂ ನೀನು ದಾದ ಮಾಡಲಿಲ್ಲ. ಅಂದ ಮೇಲೆ ನನ್ನ ಉಪಜೀವನದ ಬಗ್ಗೆ ಕಠಿಣವಾದ್ದರಿಂದ ಅಲ್ಲಿಂದ ಈ ವರೆಗೂ ಅಂದ್ರೆ ಹತ್ತು ಹನ್ನೊಂದು ವರ್ಷವಾಯಿತು ಸಾಲ ಪಟ್ಟಿ ಮಾಡಿ ಉಪಜೀವನ ಮಾಡಿಕೊಳ್ಳುತ್ತಲಿದ್ದೇನೆ ಈಗ ಮೂರನೆಯು ಸಾರೆ ಜಾಹೀರ ನೋಟೀಸಿನ ಮೂಲಕ ತಿಳಿಸುವದೇನಂದರೆ ನೀನು ನನ್ನನ್ನು ಅಲಕ್ಷ ಮಾಡಿದ್ದಲ್ಲಿ ನೋಟೀಸು ಮುಟ್ಟಿದ ಆ ದಿವಸದೊಳಗಾಗಿ ನಾನು ನನ್ನ ಉಪಜೀವನಕ್ಕ ಮಾಡಿಕೊಂಡ ಸಾಲ ರೂ. ೫೦೦ ಕೊಟ್ಟು ನನ್ನನ್ನು ಕರೆದುಕೊಂಡು ಹೋಗಬೇಕು ಇಲ್ಲದಿದ್ದರೆ ಇದೇ ಸೋಡಪತ್ರವೆಂದು ತಿಳಿಯಬೇಕು ತಾ॥ ೧೧-೬-೧೯೨೬ ನೇ ಇಸವಿ

ಈ ಎಡಗೈ ಹೆಬ್ಬಟ್ಟಿನ ಗುರ್ತ ಭರಮಕ್ಕಾ ಕೋಂ ಭೀರಪ್ಪಾ ಕುರುಬರ ಅಳ್ಳಿಕಟ್ಟಿ ಸಾಕೀನ ಚಿಕ್ಕೊಣತಿ

ದಿ ಅಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

೧೯೧೩ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡಿಯುವದು.

K. B. Ankaligi
ಧಾರವಾಡ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:— ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೬ | ಧಾರವಾಡ ಸೋಮವಾರ ತಾರೀಖು ೧೪ನೇ ಜೂನ ೧೯೨೬ | (ಸಂಚಿಕೆ ೧೩೫

ಸರಕಾರದಿಂದ ಪೆಟೆಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗಲ್ಲಿದಾಕ್ಷಣವೇ ಜಾಳಿಗೆಯು ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

—o—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ನೋಟೀಸಿನ ದರಗಳು.

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇದ್ದ ಪ್ರಕಾರ ಕಾಯಂ ಜಾಹೀರಾತುಗಳನ್ನು ಕೊಡತಕ್ಕವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

ನಿತ್ಯಪತ್ರಿಕೆ

೧೨	ತಿಂಗಳಿಗೆ	೧೨—೮—೦ ರೂ
೬	,,	೭—೦—೦ ರೂ
೩	,,	೪—೨—೦ ರೂ
ವಾರಪತ್ರಿಕೆ	೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ ಧಾರವಾಡ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕ್ಯಾಶೀಯ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮುಕ್ಕುಂದರಾವ ಬಿ. ಜತಾಪಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೇ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

———

ವಿಜಯ.

ಧಾರವಾಡ ತಾ- ೧೪-೬-೨೬ ನೇ ಇಸ್ವಿ

ಇಂಗ್ಲಂಡದೊಳಗಿನ ಪಕ್ಷ-ಪರಪಕ್ಷಗಳು

ಹಿಂದಿನ ಸ್ಥಾನದಲ್ಲಿ ಅನೇಕವಾಗಿ ರಾಜಕೀಯ ಪಂಗಡಗಳಿರುತ್ತವೆ. ಹೊಸ ಹೊಸ ಪಕ್ಷಗಳು ಏಳುತ್ತಿರುವವು. ಸ್ವರಾಜ್ಯ ಪಕ್ಷದಲ್ಲಿ ಇಬ್ಬಗೆ ಮುಖ್ಯಗಳಾಗಲಾರದೆಂದು ಎರಡು ವರ್ಷಗಳ ಹಿಂದೆ ಗಟ್ಟಿಮುಟ್ಟಿಯಾದ ಸಂಗತಿಯಾಗಿತ್ತು. ಆದರಲ್ಲಿಯೂ ಪ್ರತಿಯೋಗಿ ಸಹಕಾರರೆಂಬ ಪಕ್ಷ ಹೊರಟಿತು. ರಾಜ್ಯಕಾರ್ಯದಲ್ಲಿ ಯಾವದೊಂದು ಪಕ್ಷವು ಕಡೆತನಕ ಉಳಿಯಲಾರದೆಂದು ಜಗತ್ತಿನೊಳಗಿನ ಪ್ರತ್ಯಕ್ಷ ಬಂದ ಅನುಭವದ ಸಂಗತಿಯಾಗಿರುತ್ತದೆ. ವಿಲಾಯತಿಯ ಪ್ರತಿಯೊಂದು ದೇಶದಲ್ಲಿಯೂ ಪಕ್ಷ-ಪರಪಕ್ಷಗಳು ನಾಯಿಯ ಛತ್ರಿಗಳಂತೆ ಬೆಳೆಯುವದನ್ನೂ ನಾಶವಾಗುವದನ್ನೂ ಕಾಣುತ್ತದೆ. ಇವುಗಳಲ್ಲಿ ಕೆಲವು ಪಕ್ಷಗಳು ಮಾತ್ರ ಸ್ಥಿರವಾಗಿ ಉಳಿಯುವವು. ಇಂಗ್ಲಂಡದಲ್ಲಿರುವ ಕಾನ್ಸರವೇಟಿವ್‌ದಲ್ಲಿ ಕೆಲವರು ಲಿಬರಲರಾಗುವರು. ಕೆಲವರು ಇದರ ಆಚೆ ಮತ್ತು ಧ್ಯೇಯವನ್ನು ಒಪ್ಪದೆ ಲೇಬರನ್ನು ಸೇರುವರು. ಇದಕ್ಕೆ ತೀರ ವಿರುದ್ಧವಾಗಿ ಅನೇಕ ಲಿಬರಲರು ಕಾನ್ಸರವೇಟಿವ್ರಾಗುವರು. ಇವರಲ್ಲಿ ಸಧ್ಯದಲ್ಲಿ ಒಡಂಬಡಿಕೆಯಾಗದಂಥ ಒಡಕು ಹುಟ್ಟಿರುತ್ತದೆ. ಯುದ್ಧ ಕಾಲದಲ್ಲಿ ಮುಖ್ಯಮಾತ್ಯರಾಗಿದ್ದ ಮಿ. ಲಾಯ್ಡ ಜಾರ್ಜ ಸಾಹೇಬರು ಕಲ್ಲಿದ್ದಲಿಯ ಕೂಲಿಕಾರರ ಸಂಪಿಗೆ ಸ್ವಲ್ಪ ಅನುಕೂಲವಾದ ಭಾಷಣ ಮಾಡಿದರು. ಇದರ ಮೇಲೆ, ಲಾರ್ಡ ಆಕ್ಸ್‌ಫರ್ಡರೆಂಬ ಸಾಹೇಬರು ಇವರ ಮೇಲೆ ಸಿಟ್ಟಿಗೆದ್ದು, ತಮ್ಮದೊಂದು ಸ್ವತಂತ್ರ ಪಕ್ಷ ಕಟ್ಟಿದರು. ಇವರಿಬ್ಬರಿಗೂ ರಾಜೀ ಮಾಡಬೇಕೆಂದು ಪಾರ್ಲಮೆಂಟ ಸಭೆಯಲ್ಲಿ ಎರಡು ದಿವಸ ಸತತವಾದ ಪ್ರಯತ್ನ ಮಾಡಿದರು. ಆದರೆ ಇಬ್ಬರೂ ತಂತಮ್ಮ ಹಿಡಿತ ಬಿಡದ್ದರಿಂದ ಪ್ರಯತ್ನವು ನಿಷ್ಫಲವಾಯಿತು. ಆದರೂ ಬಹು ಜನ ಮೆಂಬರರೂ, ತರುಣರಾದ ಲಿಬರಲರೂ ಲಾಯ್ಡ ಜಾರ್ಜರ ಪಕ್ಷವನ್ನೇ ಎತ್ತಿದ್ದಾರೆ. ಈ ಪಕ್ಷದ ಮುಖಂಡರಾಗಿದ್ದ ಮಿ. ಆಸ್ಕ್ವಿಥ ಸಾಹೇಬರು ಲಾರ್ಡರಾದ್ದರಿಂದ, ಇಂಗ್ಲಂಡದಲ್ಲಿ ಇವರ ಅಸ್ತಿತ್ವವೇ ಇಲ್ಲದಂತಾಗಿದೆ. ಪಾರ್ಲಮೆಂಟದ ಚುನಾವಣೆಯಲ್ಲಿ ಲಿಬರಲರು ಕಾನ್ಸರವೇಟಿವ್ರನ್ನು ಸೋಲಿಸಿ, ಪ್ರಧಾನರಾಗುವಂಥ ಯೋಗ್ಯತೆಯುಳ್ಳವರು. ಆದರೆ ಅವರಲ್ಲಾದ ಒಡಕಿನಿಂದ ಅವರೆಂದೂ [illegible] ಆಶೆ ಮಾಡುವಂತಿಲ್ಲ. ಹಿಂದುಸ್ಥಾನದ ಮವಾಳರಂತೆ ಇವರ ಅನುಕಂಪನೀಯ ಅವಸ್ಥೆಯಾಗಿದೆ. ಇವರ ತರುವಾಯ ಲೇಬರ ಪಕ್ಷದಲ್ಲಿ ಮುಖ್ಯವಾಗಿದೆ. ಕಳೆದ ತಿಂಗಳಿನ [illegible] ದ್ಭುತವಾದ ಸಂಪಿಗೆ ಮಿ. [illegible] ಮ್ಯಾಕಡೊನಾಲ್ಡ ಸಾಹೇಬರೇ ಮೊದಲಾದವರು ಅನುಕೂಲರಾಗದ್ದರಿಂದ, ಸಂಪು ತತ್ಕಾಲ [illegible]. ಇವರ ಬೆಂಬಲರಾಗಿದ್ದ ಮಿ. ಲ [illegible] ಮೊದಲಾದವರು ಸ್ವತಂತ್ರ ಪಕ್ಷ ಹೂಡಿಕೊಂಡಿದ್ದಾರೆ. ಇವರೆಲ್ಲರ ಕೂಡ ಇವರದೇ ಒಂದು ಭಾಗವಾದ ಬೊಲ್ಶೆವಿಕರು ತಮ್ಮದೊಂದು ಸ್ವತಂತ್ರ ದಾರಿ ಹಿಡಿದಿದ್ದಾರೆ. ಇವರಿಗೆ ತಮಗೂ ಅರ್ಥಾರ್ಥ ಸಂಬಂಧವಿಲ್ಲೆಂದು ಮವಾಳರಾದಂಥ ಕೂಲಿಕಾರರು ಸಾರಿದ್ದಾರೆ. ಆದುದರಿಂದ ಬೊಲ್ಶೆವಿಕರು ಸ್ವತಂತ್ರ ವೃತ್ತಿಯಿಂದಲೇ ನಡೆಯುವ ನಿರ್ಧಾರ ಮಾಡಿದ್ದಾರೆ. ಸದ್ಯದ ಸಂಪಿನಲ್ಲಿ ಪರದೇಶಿಯರು ಇವರಿಗೇ ಹೆಚ್ಚು ಸಹಾನುಭೂತಿ ತೋರಿಸಿದ್ದಾರೆ. ವಿಲಾಯತಿಯ ಬೊಲ್ಶೆವಿಕ ಸಂಘದವರು ಇವರ ಕೃತ್ಯವನ್ನು ಶ್ಲಾಘಿಸಿ, ಧನಿಗಳ ರಾಷ್ಟ್ರೀಯ ಆಸ್ತಿಯಾದ [illegible] ಸಂಘವನ್ನು ಮುರಿಯಗೊಡಬಾರದೆಂದು ಇವರಿಗೆ ಸ್ಫುರತ್ತು ಬರುವಂಥ ಸಂದೇಶ ಕಳಿಸಿದ್ದಾರೆ. ರಶಿಯಾದಿಂದಂತೂ ಇವರಿಗೆ ದ್ರವ್ಯ ಸಹಾಯವುಂಟು. ಈ ಸಹಾಯವು ರಾಜ್ಯಕ್ರಾಂತಿ ಪ್ರವರ್ತಕವಾಗಿರುತ್ತದೆಂದು ಲಾರ್ಡ ಬರ್ಕನಹೆಡ್ ಸಾಹೇಬರು ಸಿಟ್ಟು ಸೂಸಿದ್ದಾರೆ. ಇಂಗ್ಲಂಡದ ಕೂಲಿಕಾರರ ಸಂಪು, ಲಿಬರಲ ಮತ್ತು ಲೇಬರ ಪಕ್ಷಗಳಲ್ಲಿಯ ಒಡಕಿನ ಮುಖ್ಯಗಳನ್ನು ನೋಡಿದರೆ- ರಾಜಕೀಯ ಸಂಗತಿಗಳು ಹಿಂದುಸ್ಥಾನದಲ್ಲಿ ಮಾತ್ರ ಭೂಮಿಕೆಯಂತೆ ತೋರುವದಿಲ್ಲ. ಪರದೇಶಗಳಲ್ಲಿಯೂ, ಹಿಂದುಸ್ಥಾನಕ್ಕೆ ಐಕ್ಯದ ವೇದಾಂತವನ್ನು ಹೇಳುವ ಇಂಗ್ಲಂಡದಲ್ಲಿಯೂ ಹುಟ್ಟುವಂತೆ ಕಂಡುಬರುವದು. ಆದ್ದರಿಂದ ಇಂಗ್ಲಿಷರು ನಮ್ಮ ಹಿಂದುಸ್ಥಾನದೊಳಗಿನ ಪಕ್ಷ-ಪರಪಕ್ಷಗಳಿಗೆ ನಗುವ ಅಥವಾ ಹೆಸರಿಡುವ ಕಾರಣವೇನೂ ಇರುವದಿಲ್ಲ.

ಇಜಿಪ್ತದ ಹೊಸ ಪಾರ್ಲಮೆಂಟು !!

—o—

ಇಜಿಪ್ತದ ಹೊಸ ಪಾರ್ಲಮೆಂಟ ಸಭೆಯ ಪ್ರಾರಂಭವು ಬಹು ಸಡಗರದಿಂದಾಯಿತು. ಸುಲ್ತಾನ ಫವಾದರೂ, ಝಗ್ಲುಲ ಪಾಶಾನವರೂ ಸಂಭ್ರಮದಿಂದ ಪಾರ್ಲಮೆಂಟ ಸಭೆಗೆ ಹೋಗುವಾಗ ದಾರಿಗುಂಟ ನೆರೆದ ಜನರು ಹರ್ಷಘೋಷ ಮಾಡಿದರು. ಝಗಲುಲ ಪಾಶಾನು ಪಾರ್ಲಮೆಂಟದ ಅಧ್ಯಕ್ಷನಾದನು. ಮುಖ್ಯ ಮಂತ್ರಿಯಾದ ಅಡ್ಲಿ ಪಾಶಾನು ಪ್ರಾರಂಭದ ಭಾಷಣ ಮಾಡಿ, ಇಂಗ್ಲಿಷರ ಕೂಡ ಪ್ರೀತಿಯಿಂದ ನಡೆಕೊಂಡು, ಇಜಿಪ್ತಕ್ಕೆ ಸ್ವಾತಂತ್ರ್ಯ ದೊರಕಿಸುವದೇ ನಮ್ಮ ಧ್ಯೇಯವಾಗಿದೆಂದನು. ಸಾಂಪ್ರತದಲ್ಲಿ ರಾಜ್ಯದ ತುಂಬ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಬೆಳಿಸುವದರಲ್ಲಿ ಮಂತ್ರಿಗಳು ವಿಶೇಷ ಮನಸ್ಸು ಹಾಕುವರು. ಇಂಗ್ಲಿಷರ ಕೂಡ ಸಹಕಾರದಿಂದ ನಡೆಯುವೆವೆಂದು ಅಡ್ಲಿ ಪಾಶಾನು ಕೊಟ್ಟ ಭಾಷೆಯಿಂದ ಅಲ್ಲಿಯ ಪರಿಸ್ಥಿತಿಯು ಶಾಂತವಾಗಿ ಇಂಗ್ಲಿಷರು ಅಲ್ಲಿಗೆ ಕಳಿಸಬೇಕೆಂದಿದ್ದ ಯುದ್ಧದ ಹಡಗಗಳ ಅವಶ್ಯಕತೆಯು ದೂರಾಯಿತು. ಇಜಿಪ್ತವು ರಾಷ್ಟ್ರ ಸಂಘದಲ್ಲಿ ಸೇರಿ, ಮಿಕ್ಕ ದೇಶಗಳಂತೆ ಸರಿಸಮಾನಸ್ಥಾನದ ಭಾವವನ್ನು ಪಡೆಯಬೇಕೆಂದೂ ಈಗಿನ ಮಂತ್ರಿಗಳ ಒಂದು ವಿಚಾರವಾಗಿರುತ್ತದೆ. ಹಿಂದುಸ್ಥಾನದಂತೆ ಎಲ್ಲರೊ [illegible]ಳ್ಳುವವರ ಹಿಂದೆ ಕಳಕಳಿ ಮಾತ್ರ, ಅದರಲ್ಲಿ ಸೇರಿಯೂ ಪ್ರಯೋಜನವಾಗಲಾರದು.

ತಿರುವಲ್ಲೂರಿನಲ್ಲಿಯ ತೇರು ಸುಟ್ಟು ಬೂದಿಯಾಯಿತು.

—o—

ತಂಜಾವರ ಜಿಲ್ಲೆಯಲ್ಲಿ ತಿರುವಲ್ಲೂರೆಂಬಲ್ಲಿ ಶಿವಾಲಯವುಂಟು. ಶಿವನ ತೇರು ಬಹಳ ದೊಡ್ಡದು. ಇಷ್ಟು ದೊಡ್ಡ ತೇರು ದಕ್ಷಿಣ ದೇಶದಲ್ಲಿ ಕ್ವಚಿತವಾಗಿರುವದು. ದೇವರು ರಥಾರೂಢವಾದ ಬಳಿಕ ತಿರುಗಿ ಮೆಟ್ಟಿಗೆ ಬರಬೇಕಾದರೆ ಎಷ್ಟೋ ಸಾರೆ ತಿಂಗಳಾನುತಿಂಗಳು ಬೇಕಾಗುತ್ತದೆ. ಈ ಸಾರೆ ರಥವು ಅರ್ಧ ದಾರಿಗೆ ನಿಂತಿತು. ಇನ್ನೂ ಎರಡು ಪ್ರಾಕಾರ ದಾಟಬೇಕಾಗಿತ್ತು. ಒಂದು ಗಾಲಿ ಮುರಿದು ರಥವು ನಿಂತಿತು. ಹೊಸ ಗಾಲಿ ಹಾಕುವ ಕೆಲಸ ನಡೆದಿತ್ತು. ಆಕಸ್ಮಿಕವಾಗಿ ಬೆಂಕಿ ಹತ್ತಿ, ನೋಡನೋಡುತ್ತಾ ರಥವು ಸುಟ್ಟು ಬೂದಿಯಾಯಿತು. ತೇರಿನ ಹತ್ತರವೇ ಇದ್ದಂಥ ಒಂದು ಕಾಫೀ ಅಂಗಡಿಯೂ ಸುಟ್ಟಿತು. ರಥದಲ್ಲಿದ್ದ ಉತ್ಸವ ಪ್ರತಿಮೆ [illegible]ರು ಪರಾಕಷ್ಟದಿಂದ ಉಳಿಸಿ

ಮಿರಜೆಯ ರೇಲ್ವೆ ಮತ್ತು ನೀರಿನ ಪೂರವಣಿ.

—o—

ಮಿರಜೆಯು ನೀರಿನ ಅರಬಿನ ದೆಸೆಯಿಂದ ಪೆಸರಾದದ್ದು. ಇಂಥ ಸ್ಥಳದಲ್ಲಿ ರೇಲ್ವೆಯ ದೊಡ್ಡ ಜಂಕ್ಷನವಿರುವದು ಕೊಲ್ಹಾಪುರ ಮತ್ತು ಸಾಂಗಲಿಯ ಜಂಕ್ಷನಗಳಲ್ಲದೆ, ಪಂಢರಪುರದ ಹೊಸ ಜಂಕ್ಷನವಾಗುತ್ತಿರುವದು. ಮಾಸ್ತರಿಯ ಆಯಿಸ ರೇಲ್ವೆಯವರು ಈ ಕೆಲಸವನ್ನು ಒತ್ತರದಿಂದ ನಡೆಸಿದ್ದಾರೆ. ಹಳೇ ಮತ್ತು ಹೊಸ ಜಂಕ್ಷನ ಮತ್ತು ಅಲ್ಲಿಯ ಮಿಶನರಿಗಳ ದೊಡ್ಡ ಆಸ್ಪತ್ರೆಗಾಗಿ ಸದರ್ನ ಮರಾಠಾ ರೇಲ್ವೆ ಕಂಪನಿಯವರು ಶಿದ್ದೋಬದೋಡದ ಕೃಷ್ಣಾನದಿಯ ಪೀಠದ ಸೇತುವೆಯ ಹತ್ತರ ನೀರಿನ ಕಾರಖಾನೆ ಇಟ್ಟು, ಅಲ್ಲಿಂದ ಕೊಳವಿ ಹಾಕಿ, ಮಿರಜೆಗೆ ನೀರು ತರುವ ಕೆಲಸವನ್ನು ಪೂರ್ಣ ಮಾಡಿದ್ದಾರೆ. ರೇಲ್ವೆಯು ತನ್ನ ಅರಬನ್ನು ತಪ್ಪಿಸಿಕೊಂಡರೂ, ಮಿರಜೆ ಗ್ರಾಮದವರು ತಮ್ಮ ಭವಣೆ ಎಂದು ತಪ್ಪುವದೆಂದು ಚಿಂತಾಗ್ರಸ್ತರಾಗಿದ್ದಾರೆ. ಮುನಸಿಪಾಲಿಟಿ ರೇಲ್ವೆಯವರು ತಮಗಾಗಿ ಸಂಸ್ಥಾನದ ನೆಲ ಮತ್ತು ಬಂಗಲಿಗಳನ್ನು ತಕ್ಕೊಂಡಿದ್ದು ಇದಕ್ಕಾಗಿ ಒಂದೂವರೆ ಲಕ್ಷ ರೂಪಾಯಿ ಬೆಲೆ ಕೊಡುವರು. ಜನರು ಈ ರಕಮನ್ನು ರೇಲ್ವೆಯವರಂತೆ ತಾವೂ ನಳ ಹಾಕಿಸುವದಕ್ಕೆ ಉಪಯೋಗಿಸಬಾರದೇ?

ರೇಲ್ವೆಯ ಭಯಂಕರ ಅಪಘಾತವು.

—o—

ಜನ್ನರ ಮರಣ.

—o—

ದಕ್ಷಿಣ ಆಫ್ರಿಕೆಯಲ್ಲಿ ಕೇಪ ಟಾವ್ನಿನ ಸಮೀಪದಲ್ಲಿರುವ ಸಣ್ಣ ನದಿಯ ಮೇಲೆ ಉಗಿಬಂಡಿಯು ಸಾಗಿ ಹೋಗುತ್ತಿದ್ದಾಗ, ಇದ್ದಕ್ಕಿದ್ದಹಾಗೆ ಭಯಂಕರ ಅಪಘಾತವಾಗಿ ಇಂಜಿನ ಬಿಟ್ಟು ಉಳಿದ ಡಬ್ಬಿಗಳು ಹೊಳಿಯೊಳಗೆ ಬಿದ್ದವು. ಇದರಿಂದ ೨೪ ಜನರು ಮಡಿದರು. ಅನೇಕರು ಘಾಯವಾದರು. ಮಡಿದವರಲ್ಲಿ ಸರ ಬಿಲಾಂಕಸ ಸಾಹೇಬ ಎಂಬುವರ ಪತ್ನಿಯೂ ಇರುತ್ತಾರೆ.

ಪಂಡಿತ ಮೋತಿಲಾಲ ನೆಹರುರವರು ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಪರದೇಶಗಳಿಗೆ ದನಗಳ ನಿರ್ಗತ ಮಾಡಬಾರದೆಂಬ ಠರಾವು ತಂದಿದ್ದಾರೆ. ಇದು ಆಗಸ್ಟ ತಿಂಗಳಲ್ಲಿ ಅಸೆಂಬ್ಲಿಯಲ್ಲಿ ಚರ್ಚೆಗೆ ಹೊರಡುವದು. ಈ ಚರ್ಚೆಯ ವೇಳೆಯಲ್ಲಿ ಸ್ವರಾಜ್ಯ ಪಕ್ಷೀಯರು ಅಸೆಂಬ್ಲಿಗೆ ಬರಬೇಕೆಂದು ಬಿನ್ನಹ ಪತ್ರವನ್ನು ಪ್ರಸಿದ್ಧ ಮಾಡಿದ್ದಾರೆ. ಆ ಪ್ರಕಾರ ಲೋಕಮತವನ್ನು ಜಾಗೃತ ಮಾಡುತ್ತಾ ಇದ್ದಾರೆ.

ಮಳೆ, ಗಾಳಿ ಮತ್ತು ಆಣೆಕಲ್ಲಿನಿಂದ ಕೊಲ್ಹಾಪೂರದಲ್ಲಾದ ಅನರ್ಥವು.

—o—

ಸೋಮವಾರ ಸಾಯಂಕಾಲದಲ್ಲಿ ಅಕಲ್ಪಿತವಾಗಿ ಧೂಳಿ ಮುಸುಕಿದ ಬಿರುಗಾಳಿಯು ಒಮ್ಮಿಂದೊಮ್ಮೆ ಬೀಸಲಾರಂಭಿಸಿತು. ತಗಡು, ಹಂಚು ಮತ್ತು ಹುಲ್ಲಿನ ಚಪ್ಪರಗಳು ಭೂಕಂಪದಂತೆ ನಡುಗಲಾರಂಭಿಸಿದವು. ಗಾಳಿಯು ಬಲವಾದಂತೆ ಇವು ಸಡಿಲಾದವು. ಗಾಳಿಯ ವೇಗವು ಕಲ್ಪನಾತೀತವಾಗಿ ಅದ್ಭುತವಾಗಲು ಇವು ಸ್ಥಳಬಿಟ್ಟು ಹಾರಿದವು. ಹಂಚು ಅರಳಿಸಿದಂತೆ ಚಟ ಪಟ ಸಪ್ಪಳ ಮಾಡುತ್ತಾ ಹಾರುತ್ತಾ ನೆಲಕ್ಕೆ ಬಿದವು. ತಗಡುಗಳು ಹಾರಿ, ಎಷ್ಟೋ ದೂರ ಬಿದ್ದವು. ಒಣ ಹುಲ್ಲಿನ ಚಪ್ಪರಗಳು ಪಟಗಳಂತೆ ಆಕಾಶದಲ್ಲಿ ಹಾರಿ, ಎಷ್ಟೋ ದೂರ ಹೋಗಿ ಬಿದ್ದವು. ಇದು ಮೊದಲನೆಯ ದಿವಸದ ಹಾನಿಯು. ಎರಡನೆ ದಿವಸ ಅದೇ ವೇಳೆಯಲ್ಲಿ ಇದಕ್ಕೂ ಭಯಂಕರ ಗಾಳಿ ಬೀಸಿತು. ಜಾಮವೆಂಬ ಗಿರಣಿಯ ಚಪ್ಪರವೇ ಹಾರಿ ಬಿತ್ತು. ಇದರಂತೆ ಬೇರೆ ಗಿರಣಿಗಳೂ ಒಮ್ಮೆಯಾಗಿ ನಷ್ಟಕ್ಕೆ ಗುರಿಯಾದವು. ಸ್ವರ್ಗವಾಸಿ ಪಾರಿದರ ಬಂಗ್ಲೆಯಲ್ಲಿಯ ಒಂದು ಮನೆಯ ಇಡೀ ಚಪ್ಪರವು ಹಾರಿ ಒಂದು ಗಿಡಕ್ಕೆ ತೂಗಬಿತ್ತು. ಕಾಡಾಪಿ ಎಂಬವರು ಹೊಸ "ಮಾಳ" ಕಟ್ಟುತ್ತಿದ್ದಾರೆ. ಅದರ ಚಪ್ಪರವೂ ಗೋಡೆಲ್ಲ ಸಹಿತ ಹಾರಿ ದೂರಬಿತ್ತು. ಹಂಚು ಮತ್ತು ಹುಲ್ಲಿನ ಚಪ್ಪರಗಳೊಂದೂ ಉಳಿಯಲಿಲ್ಲ. ಹುಡುಗರೂ, ಹೆಂಗಸರೂ ಮುಂದೇನು ಗತಿಯೆಂದು ಬೈಲಲ್ಲಿ ಜೀವ ಹಿಡಕೊಂಡು ಕೂತರು. ಗಾಳಿಯಿಂದ ಹೀಗೆ ಅನಾಹುತವಾದ ನಂತರ ನಿಂಬೀಕಾಯಿ ಗಾತ್ರ ಆಣೆಕಲ್ಲು ಬಿದ್ದು ಎಷ್ಟೋ ಜನರ ತಲೆಯೊಡೆಯಿತು. ಅನಂತರ ಜಲಪ್ರಳಯದಂಥ ಮಳೆಯಾಗಿ, ಚಪ್ಪರ ಹಾರಿದಂಥ ಮತ್ತು ಗಾಳಿಯಿಂದ ಹೊಯ್ಯಾಡಿದಂಥ ಮನೆಗಳಿಗೆ ಮತ್ತಷ್ಟು ಕೇಡು ಮಾಡಿತು. ಈ ಅಪಘಾತದಲ್ಲಿ ಒಬ್ಬನು ಸತ್ತನು; ಅನೇಕರು ಘಾಯವಾಗಿದ್ದಾರೆ.

ಹೆಬ್ಬೆಟ್ಟಿನ ಗುರುತಿನಿಂದ ಗುರುತು ಹಿಡಿಯುವ ಹೊಸ ಶೋಧ.

—o—

ಪೋಲೀಸರು ಶಿಕ್ಷೆಯಾದಂಥವರ ಎರಡೂ ಕೈಗಳ ಹತ್ತೂ ಬೆರಳುಗಳ ಗುರುತು ತಕ್ಕೊಳ್ಳುವರು. ಇಷ್ಟು ಗುರುತು ತಕ್ಕೊಳ್ಳುವ ಕ್ರಮ ತಪ್ಪಿಸುವಂಥ ಶೋಧವನ್ನು ಕಲಕತ್ತೆಯ ಫಿಂಗರ ಪ್ರಿಂಟ ಖಾತೆಯ ಮುಖ್ಯಾಧಿಕಾರಿಯಾದ ರಾಯಬಹಾದ್ದೂರ ಬೋಸರು ಹಚ್ಚಿದ್ದಾರೆ. ಒಂದೇ ಬೆರಳಿನ ಗುರ್ತಿನಿಂದ ಇಂಥವನೇ ಎಂದು ಹೇಳುವರು. ಮತ್ತು ಈ ಗುರ್ತಿನಲ್ಲಿ ಕೆಲವು ಭಾಗ ಮಾಡಿದ್ದು, ಸ್ವರೂಪದ ತಾರನ್ನು ಕಳಿಸಿದರೆ ಇಂಥವನೇ ಎಂ ತಾವು ಕಲಕತ್ತೆಯಲ್ಲಿಯೇ ಕೂತು ಹೇಳುವಂತೆಯು ಶೋಧ ಹಚ್ಚಿದ್ದಾರೆ.

ವಿವಿಧ ವರ್ತಮಾನ

ಮದ್ರಾಸ ಸರಕಾರದವರು, ಆ ಇಲಾಖೆಯಲ್ಲಿರುವ ಲಾಯಬ್ರರಿಗಳಿಗೆ ಗ್ರ್ಯಾಂಟು ಕೊಡುವದಕ್ಕಾಗಿ ೧,೬೦,೦೦೦ ರೂಪಾಯಿಗಳನ್ನು ಮಂಜೂರ ಮಾಡಿದ್ದಾರೆ. ಪ್ರತಿ ಲಾಯಬ್ರರಿಗೂ ೪೦೦ ರೂಪಾಯಿಗಿಂತ ಹೆಚ್ಚಿಗೆ ಗ್ರ್ಯಾಂಟು ದೊರಕಬಾರದೆಂದು, ಈ ವಿಷಯವಾಗಿ ತೆಗೆದ ಪ್ರೆಸ್ಸ ನೋಟೀಸಿನಲ್ಲಿ ಬರೆದಿರುತ್ತದೆ.

ವರ್ಹಾಡದಲ್ಲಿ ಸಾವಲಿಗರ ಒಂದು ಪರಿಷತ್ತು ಕೂಡಿತ್ತು. ತಮ್ಮ ಜನರಿಗೆ ಸರಕಾರೀ ಕೆಲಸಗಳೂ ಶಿಷ್ಯವೃತ್ತಿಗಳೂ ದೊರೆಯಬೇಕೆಂದೂ, ತಮ್ಮ ಪೈಕಿಯಿಂದ ಕೌನ್ಸಿಲದಲ್ಲಿ ಒಬ್ಬರನ್ನು ನಾಮಿನೇಟ ಮಾಡಿಕೊಳ್ಳಬೇಕೆಂದೂ ಸರಕಾರಕ್ಕೆ ವಿನಂತಿ ಮಾಡಿಕೊಳ್ಳುವ ಠರಾವು ಪಾಸ ಮಾಡಿದರು.

ಬಂಗಾಲದ ಗವ್ಹರ್ನರರಾದ ಲಾರ್ಡ ಲಿಟನ ಸಾಹೇಬರು ರಜೆಯ ಮೇಲೆ ವಿಲಾಯತಿಗೆ ಹೋಗುವದರಿಂದ, ಸರ ಸ್ಟೀಫನ ಸಾಹೇಬರು ಆಕ್ಟಿಂಗ ಗವ್ಹರ್ನರರಾಗುವರು.

ಮುಂಬಯಿ ಮತ್ತು ಮದ್ರಾಸದ ಗವ್ಹರ್ನರರಾಗಿದ್ದ ಲಾರ್ಡ ವಿಲಿಂಗಡನ್ನ ಸಾಹೇಬರು ಕೆನಡಾದ ಗವ್ಹರ್ನರ ಜನರಲರಾಗಿ ನೇಮಿಸಲ್ಪಟ್ಟರು.

ಮಿ. ಅಂಗಡಿಯವರೇ ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಅಧ್ಯಕ್ಷರಾಗಬೇಕೆಂದು ಕಲೆಕ್ಟರರು ಮಂಜೂರಿ ಕೊಟ್ಟರು. ಈ ಮಂಜೂರಿಯ ವಿರುದ್ಧ ಮಿ. ಚಿಕ್ಕೋಡಿಯವರು ನಿಪಾಣಿ ಕೋರ್ಟಿನಲ್ಲಿ ದಾವೇ ಮಾಡಿದ್ದಾರೆ. ಇಂಗ್ರೇಜಿ ಸರಕಾರದವರು ಮಾಡಿರುವ ಕಾಯಿದೆಯ ಪೂರ್ಣ ಉಪಯೋಗವನ್ನು ಮಿ. ಚಿಕ್ಕೋಡಿಯವರು ಮಾಡಿಕೊಳ್ಳುವರು.

ವಿಶಾಖಾಪಟ್ಟಣದಲ್ಲಿ ಬಿಸ್ತಾ ಎಂಬ ಹಡಗಕ್ಕೆ ಪ್ರವಾಸಿಕರನ್ನು ಕರಕೊಂಡು ಹೋಗುತ್ತಿರುವ ನಾವೆಯು ಬುಡಮೇಲಾಗಿ ೧೨ ಜನರು ಸಮುದ್ರಾರ್ಪಣವಾದರು.

R N B 1443

ವಿಜಯ

ಸಾಪ್ತಾಹಿಕ — ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಮಂಗಳವಾರ ತಾರೀಖು ೧೫ನೇ ಜೂನ ೧೯೨೬ (ಸಂಚಿಕೆ ೨೩

ವಿಜಯ

ಧಾರವಾಡ ತಾ- ೧೫-೬-೨೬ ನೇ ಇಸ್ವಿ

ಬೆಳಗಾವ ಜಿಲ್ಹೆಯಲ್ಲಿ ಕೌನ್ಸಿಲ ಚುನಾವಣೆಯ ಉಮೇದವಾರರು.

ಬೆಳಗಾವ ಜಿಲ್ಹೆಯ ಹೊಸಿನ ಎರಡು ಕೌನ್ಸಿಲ ಚುನಾವಣೆಗಳು ಎರಡು ತರದವಾದವು. ಮೊದಲನೆಯ ಚುನಾವಣೆಯಲ್ಲಿ ಅಸಹಕಾರಿ ... ಮತ್ತು ಬ್ರಾಹ್ಮಣೇತರ ಪಕ್ಷದ ... ರಾ. ಬ ... ಮತ್ತು ... ಚುನಾಯಿಸಲ್ಪಟ್ಟರು. ಎರಡನೆಯ ಚುನಾವಣೆಯಲ್ಲಿ ಬ್ರಾಹ್ಮಣೇತರ ಪಕ್ಷದ ... ಹೀಗಾದವು ಮೊನ್ನೆ ... ಮತ್ತು ... ಯವರಿಗೆ ಮೊನ್ನೆ ಅಂಗಡಿ ಮತ್ತು ... ರು ಎದುರಾಳಿಯಾಗಿ ನಿಂತರು. ಕಾಂಗ್ರೆಸ ಪಕ್ಷದವರು ಸಹಾಯ ಮಾಡಿದ್ದರಿಂದಲೇ ಇವರು ಯಶ ಹೊಂದಿದರು. ಇವರೀರ್ವರೂ ಸ್ವರಾಜ್ಯ ಪಕ್ಷದವರೆಂದು ವರ್ತಮಾನ ಪತ್ರಗಳಲ್ಲಿ ಸಾರಲ್ಪಟ್ಟಿತು. ಆದರೆ ಇವರು ಮೊಳೇ ದಾಟಿದ ಮೇಲೆ ... ನ್ನು ಮಂಕೇ ಬಿಟ್ಟರು. ಬ್ರಾಹ್ಮಣೇತರ ಪಕ್ಷದಲ್ಲಿ ಸೇರಿ, ಕಾಂಗ್ರೆಸದ ಧ್ಯೇಯಗಳಿಗೆ ತಿಲಾಂಜಲಿ ಕೊಟ್ಟರು. ಈಗಂತೂ ... ಸಂಗಡದಲ್ಲಿ ಸೇರಿ, ಲೋಕಮಾನ್ಯರನ್ನು ... ದಿದ್ದಾರೆ. ಇಂಥವರಿಗೆ ಕಾಂಗ್ರೆಸ ಪಕ್ಷದಿಂದ ... ವು ಸಿಗುವದೂ, ಏನಿಕೆ ... ಗುತ್ತದೆ. ರಾಜಕೀಯ ಪರಿಸ್ಥಿತಿಯಲ್ಲಿ ... ವಾದ ಬದಲಾವಣೆಯಾದ್ದರಿಂದ ಶ್ರೀ ... ಚಿಕ್ಕೋಡಿಯವರ ವಿಚಾರ ... ರುತ್ತದೆ. ಧಾರವಾಡ ಜಿಲ್ಹೆಗಿಂತ ಇವರ ಜಿಲ್ಹೆಯಲ್ಲಿ ರಾಷ್ಟ್ರೀಯ ಪಕ್ಷವು ... ಈ ಪಕ್ಷದ ಸಹಾಯವಿಲ್ಲದೆ ಯಾರೂ ... ಯಶ ದೊರೆಯುವದೆಂದು ... ಪ್ರತ್ಯಕ್ಷವಾಗಿದ್ದರೂ, ... ದಳವಿಯವರು ಸ್ವಬಲ ಪರಬಲ ... ದೃಷ್ಟಿಯಿಂದ ನೋಡಿ, ಉಮೇದವಾರರನ್ನು ರಚಿಸ ಪಡಿಸಿದ್ದಾರೆ ... ಮಾತ್ರ ಬಲಾಬಲದ ಪರೀಕ್ಷೆ ಮಾಡಬೇಕಾಗಿತ್ತು. ಇವರಿಬ್ಬರೂ ಏಕನಿಷ್ಠರಾದರೂ, ... ದಲ್ಲಿ ಮತಭೇದವುಳ್ಳವರಾದ್ದರಿಂದ, ... ನಡುವೆ ಆಗುವ ಸ್ಪರ್ಧೆಯು ವಿಲಕ್ಷಣವಾಗುವದು. ಇದಿರಲಿ, ಯಾವ ಕೇವಲ ಅಥವಾ ಯಾವ ಹೋಟಲುಗಳಿಂದ ಹಿಂದಿನ ಚುನಾವಣೆಯಲ್ಲಿಯ ಅಂಗಡಿಯವರು ಮೆಂಬರರಾದರೋ ಅದೇ ಸಹಾಯ ಮತ್ತು ಅವೇ ಹೋಟಲುಗಳಿಂದ ಈ ... ವರು ಮೆಂಬರರಾಗಬೇಕೆಂದು ಆತುರಗೊಂಡಿದ್ದಾರೆ. ಈ ಆತುರತೆಯಲ್ಲಿ ಇವರು ಸಂಪೂರ್ಣ ದೀಕ್ಷೆ ... ಕೊಂಡರೆ- ಅವರ ಯಶವು ಗೋಡೆಯ ಮೇಲೆ ಸುಣ್ಣದ ಬೊಟ್ಟು ಇಟ್ಟು ಹೇಳುವಷ್ಟು ಖಂಡಿತವಾಗುವದು. ಆದರೆ ಅವರು ಸ್ವರಾಜ್ಯ ಸಂಘದ ವ್ರತ ಧಾರಣ ಮಾಡದ, ಸಂಯುಕ್ತ ರಾಷ್ಟ್ರೀಯ ಸಂಘದಲ್ಲಿ ಸೇರಬೇಕೆಂದಿದ್ದಾರೆ. ಇಲ್ಲಿಗಿಂತ ... ಗೆಯು ಮೆತ್ತಗೆಂಬ ನುಡಿಗನುಸರಿಸಿ, ಕಾಂಗ್ರೆಸ ಪಕ್ಷದವರು ಇವರ ಕಡೆಗೇ ಒಲಿಯುವರು.

ಕಾಂಗ್ರೆಸ ಪಕ್ಷದವರು ಇನ್ನೂ ಉಮೇದವಾರರನ್ನು ನಿಲ್ಲಿಸಿಲ್ಲ. ಜಿಲ್ಹೆಯ ... ನ್ನು ಸಿಲ್ಲುವದು ಶಕ್ಯವಿಲ್ಲ. ಆದುದರಿಂದ ... ಬ್ಬರನ್ನೇ ಗೊತ್ತು ಮಾಡುವರು. ಮೊನ್ನೆ ನಾರಾಯಣರಾವ ಜೋಶಿ, ರಾಶಿವಡೆಕರ ಮತ್ತು ... ಈ ಪ್ರಕಾರ ಮೂವರು ಅರ್ಜಿ ಕೊಟ್ಟಿದ್ದಾರೆ. ... ಮುಜುಮುದಾರರೆಂಬ ಇನ್ನೊಬ್ಬರು ಯಾವ ಪಕ್ಷದ ಹುಗಿನೊಳಗಿಲ್ಲದೆ, ಸ್ವತಂತ್ರ ಉಮೇದವಾರರಾಗಬೇಕೆಂದಿದ್ದಾರೆ. ಪ್ರತ್ಯಕ್ಷದಲ್ಲಿ ಇವರ ಉಮೇದವಾರಿಯ ಪ್ರಶ್ನವೇ ಇರುವದಿಲ್ಲ. ಕಾಂಗ್ರೆಸ ಪಕ್ಷದವರು ಮೇಲಿನ ಮೂವರಲ್ಲಿ ಯಾರನ್ನು ನಿಲ್ಲಿಸುವರೆಂಬದು ಮಹತ್ವದ ವಿಚಾರವಾಗಿದೆ. ಪ್ರತಿಯೊಬ್ಬರು ತಂತಮ್ಮ ಸ್ಥಿತಿಯಲ್ಲಿ ಪ್ರಸಿದ್ಧ ಗೃಹಸ್ಥರಾಗಿದ್ದಾರೆ. ಇವರನ್ನು ಆರಿಸುವಾಗ ... ಗೊಂದಲದಲ್ಲಿ ಬೀಳದೆ, ದೇವರ ಮುಂದೆ ಚೀಟಿ ಹಾಕಿ ನಿರ್ಣಯ ಮಾಡಬೇಕೆಂದು ಸೂಚಿಸುತ್ತೇವೆ. ಈ ನಿರ್ಣಯವನ್ನು ಮಾಡಿದ ಯಾರೊಬ್ಬರ ಮನಸ್ಸು ಖಿನ್ನವಾಗಲಾರದು.

ಮಿರಜೆಯ ರೇಲ್ವೆ ಮತ್ತು ನೀರಿನ ಪೂರವಠೆ.

ಮಿರಜೆಯು ನೀರಿನ ಅಭಾವದ ದೆಸೆಯಿಂದ ಹೆಸರಾದದ್ದು. ಇಂಥ ಸ್ಥಳದಲ್ಲಿ ರೇಲ್ವೆಯ ದೊಡ್ಡ ಜಂಕ್ಷನವಿರುವದು. ಕೊಲ್ಹಾಪೂರ ಮತ್ತು ಸಾಂಗಲಿಯ ಜಂಕ್ಷನಗಳಲ್ಲದೆ, ಪಂಢರಪುರದ ಹೊಸ ಜಂಕ್ಷನವಾಗುತ್ತಿರುವದು. ಬಾರ್ಸಿಯ ಲಾಯಿಟ ರೇಲ್ವೆಯವರು ಈ ಕೆಲಸವನ್ನು ಬತ್ತರದಿಂದ ನಡೆಸಿದಾರೆ. ಹಳೇ ಮತ್ತು ಹೊಸ ಜಂಕ್ಷನ ಮತ್ತು ಅಲ್ಲಿಯ ವಿ ... ಗಳ ದೊಡ್ಡ ಆಸ್ಪತ್ರೆಗಾಗಿ ಸದರ್ನ ಮರಾಠಾ ರೇಲ್ವೆ ಕಂಪನಿಯವರು ಶಿರೋಳದೋಡದ ಕೃಷ್ಣಾನದಿಯ ಮೇಲಿನ ಸೇತುವೆಯ ಹತ್ತರ ನೀರಿನ ಕಾರಖಾನೆ ಇಟ್ಟು, ಅಲ್ಲಿಂದ ಕೊಳವಿ ಹಾಕಿ, ಮಿರಜೆಗೆ ನೀರು ತರುವ ಕೆಲಸವನ್ನು ಪೂರ್ಣ ಮಾಡಿದ್ದಾರೆ. ರೇಲ್ವೆಯು ತನ್ನ ಅರಬನ್ನು ತಪ್ಪಿಸಿಕೊಂಡರೂ, ಮಿರಜ ಗ್ರಾಮದವರು ತಮ್ಮ ಧನದ ಎಂದು ಶಕ್ಯವದೆಂದು ಚಿಂತಾಗ್ರಸ್ತರಾಗಿದ್ದಾರೆ. ಬಾರ್ಸಿಲಾಯಿಟ ರೇಲ್ವೆಯವರು ತಮಗಾಗಿ ಸಂಸ್ಥಾನದ ನೆಲ ಮತ್ತು ಎಂಗರೆಗಳನ್ನು ತಕ್ಕೊಂಡಿದ್ದು ಇವಕ್ಕಾಗಿ ಒಂದು ಕಾಲು ಲಕ್ಷ ರೂಪಾಯಿ ಬೆಲೆ ಕೊಡುವರು. ಬೇಡುವ ಈ ರಕಮನ್ನು ರೇಲ್ವೆಯವರಂತೆ ತಾವೂ ನೀರು ತರಿಸುವದಕ್ಕೆ ಉಪಯೋಗಿಸಬಾರದೇ!

ಮಳೆ, ಗಾಳಿ ಮತ್ತು ಆಣಿಕಲ್ಲಿನಿಂದ ಬೆಳಗಾವಿಯಲ್ಲಾದ ಅನರ್ಥವು.

... ನು ಐದ ಸಾಯಂಕಾಲದಲ್ಲಿ ಆಕಲ್ಪಿತವಾಗಿ ಭೂತ ಸುರುಕಿದ ಬಿರುಗಾಳಿಯು ಒಮ್ಮಿಂದೊಮ್ಮೆ ... ತಗಡು, ಹಂಚು ಮತ್ತು ಹುಲ್ಲಿನ ಚಪ್ಪರಗಳು ಭೂಕಂಪದಂತೆ ನಡುಗಲಾರಂಭಿಸಿದವು. ಗಾಳಿಯು ಬಲವಾದಂತೆ ಇವು ಸಡಿಲಾದವು. ಗಾಳಿಯ ವೇಗವು ಕಲ್ಪನಾತೀತವಾಗಿ ಅದ್ಭುತವಾಗಲು ಇವು ಸ್ಥಳಬಿಟ್ಟು ಹಾರಿದವು. ಹಂಚು ಅರಳಿನಂತೆ ಚಟ ಪಟ ಸಪ್ಪಳ ಮಾಡುತ್ತಾ ಹಾರುತ್ತಾ ನೆಲಕ್ಕೆ ಬಿದ್ದವು. ತಗಡಗಳು ಹಾರಿ, ಎಷ್ಟೋ ದೂರ ಬಿದ್ದವು. ಬಡವರ ಹುಲ್ಲಿನ ಚಪ್ಪರಗಳು ಪಟಗಳಂತೆ ಆಕಾಶದಲ್ಲಿ ಹಾರಿ, ಎಷ್ಟೋ ದೂರ ಹೋಗಿ ಬಿದ್ದವು. ಇದು ಮೊದಲನೆಯ ದಿವಸದ ಹಾನಿಯು. ಎರಡನೆಯ ದಿವಸ ಅದೇ ವೇಳೆಯಲ್ಲಿ ಇದಕ್ಕೂ ಭಯಂಕರ ಗಾಳಿ ಬೀಸಿತು. ಜಾಲಿಮೆಂಬ ಗಿಡಗಳು ಬಪ್ಪರವೇ ಹಾರಿ ಬಿತ್ತು. ಇದರಂತೆ ಬೇರೆ ಗಿಡಗಳೂ ಬಲವಾಗಿ ನಷ್ಟಕ್ಕೆ ಗುರಿಯಾದವು. ಸ್ವರ್ಗವಾಸಿ ವಾರದರ ಬಂಗ್ಲೆಯಲ್ಲಿಯ ಹಿಂದು ಮನಸು ಇಡೀ ಚಪ್ಪರವು ಹಾರಿ, ಒಂದು ಗಿಡಕ್ಕೆ ತೂಗಬಿತ್ತು. ... ಎಂಬವರು ಹೊಸ "ಮಾಳ" ಕಟ್ಟುತ್ತಿದ್ದರು. ಅದರ ಚಪ್ಪರವೂ ಬೋಳ್ಟು ಸಹಿತ ಹಾರಿ ದೂರಬಿತ್ತು. ಹಂಚು ಮತ್ತು ಹುಲ್ಲು ಚಪ್ಪರಗಳೊಂದೂ ಉಳಿಯಲಿಲ್ಲ. ಹುಡುಗರೂ, ಹೆಂಗಸರೂ ಮುಂದೇನು ಗತಿಯೆಂದು ಜೀವ ಹಿಡಿದುಕೊಂಡು ... ಗಾಳಿಯಿಂದ ಹೀಗೆ ಅನಾಹುತವಾದ ನಂತರ- ನಿಂಬೆಕಾಯಿ ಗಾತ್ರ ಆಣೆಕಲ್ಲು ಬಿದ್ದು ಎಷ್ಟೋ ಜನರ ತಲೆಯೊಡೆಯಿತು. ಅನಂತರ ಬಲ ಪ್ರಳಯದಂಥ ಮಳೆಯಾಗಿ, ಚಪ್ಪರ ಹಾರಿದಂಥ ಮತ್ತು ಗಾಳಿಯಿಂದ ಹೊಡೆದಾಡಿದಂಥ ಮನೆಗಳಿಗೆ ಮತ್ತಷ್ಟು ಕೇಡು ಮಾಡಿತು. ಈ ಅನರ್ಥದಲ್ಲಿ ಒಬ್ಬನು ಸತ್ತನು, ಅನೇಕರು ಗಾಯವಾಗಿದ್ದಾರೆ.

ಬ್ರಾಹ್ಮಣ ಕ್ರಿಶ್ಚನ್ನ- ಬ್ರಾಹ್ಮಣೇತರ ಕ್ರಿಶ್ಚನ್ನ.

ಗೋವೆಯ ಪ್ರಾಂತದಲ್ಲಿ ಪೋರ್ತುಗೀಸರ ಹಿಂಸೆ ಮತ್ತು ಬಲಾತ್ಕಾರದಿಂದ ಲಕ್ಷಾವಧಿ ಜನರು ಕ್ರಿಶ್ಚನ್ನರಾಗಿದ್ದಾರೆ. ಇವರನ್ನು ಪರಧರ್ಮದಲ್ಲಿ ಸೇರಿಸಿಕೊಳ್ಳುವ ತರಹವೂ ವಿಚಿತ್ರವಾಗಿತ್ತು. ರಾತ್ರಿಯಲ್ಲಿ ಬಾವಿಯಲ್ಲಿ ಮಾಂಸದ ಕರಣೆ ಚಲ್ಲುವರು. ಮರುದಿವಸ ಜನರು ಅದರ ನೀರು ಕುಡಿದು, ಉಂಡು ಹೊರಗೆ ಬಂದ ಬಳಿಕ, ಬಾವಿಯಲ್ಲಿದ್ದ ಕರಣೆಯನ್ನು ತೋರಿಸಿ, ನೀವೆಲ್ಲರೂ ಕುಲಭ್ರಷ್ಟರಾದಿರೆಂದು ಹೇಳಿ, ಅವರಿಗೆ ಕ್ರಿಶ್ಚನ್ನ ಧರ್ಮದ ದೀಕ್ಷೆ ಕೊಡುವರು. ಈ ತೆರವಾಗಿ ಕ್ರೈಸ್ತಧರ್ಮದಲ್ಲಿ ಕ್ರಿಶ್ಚನ ರಾದಂಥವರು ಮುನ್ನೂರು ವರ್ಷಗಳಾದರೂ, ಚಾತುರ್ವರ್ಣಗಳನ್ನು ಬಿಡದೆ ಅವುಗಳ ಧರ್ಮಾನುಸಾರವಾಗಿ ನಡೆಯುತ್ತಾ ಬಂದಿದ್ದಾರೆ. ಬ್ರಾಹ್ಮಣ-ಕ್ರಿಶ್ಚನರು ಬ್ರಾಹ್ಮಣೇತರ ಕ್ರಿಶ್ಚನ್ನರನ್ನು ಪಂಕ್ತಿಯಲ್ಲಿ ತಕ್ಕೊಳ್ಳುವದಿಲ್ಲ. ಶರೀರ ಸಂಬಂಧವಂತೂ ದೂರಿನ ಮಾತಾಯಿತು. ಕ್ರಿಶ್ಚನ್ನ ಧರ್ಮವು ಜಾತಿ ಭೇದ ಮಾಡುವಂತಹದಲ್ಲ. ಆದುದರಿಂದ ಬ್ರಾಹ್ಮಣ ಕ್ರಿಶ್ಚನ್ನರು ಪುರಾತನದ ದುರಭಿಮಾನವನ್ನು ಬಿಟ್ಟು, ಎಲ್ಲ ಕ್ರಿಶ್ಚನ್ನರ ಕೂಡ ಅನ್ನೋದಕ ತಕ್ಕೊಳ್ಳಬೇಕು, ಎಂಬ ಚಳವಳಿಯು ಅಲ್ಲಿ ಎದ್ದಿರುತ್ತದೆ.

ಬೆಳಗಾವಿಯ ತುರಂಗದಲ್ಲಿ ಸುರಂಗದ ಸಾಹಿತ್ಯಗಳು!!

ಬೆಳಗಾವಿಯ ಹತ್ತರದಿರುವ ಹಿಂಡಲಗಿಯ ತುರಂಗದಲ್ಲಿ ... ಕಲ್ಲಪ್ಪಾ ಮತ್ತ ಬಲಭೀಮಪ್ಪಾ ಇವರ ಕೋಣೆಯಲ್ಲಿ ಜ್ವಾಲಾಗ್ರಾಹಿ ಪದಾರ್ಥಗಳು ಸಿಕ್ಕವು. ಈ ಅಪರಾಧದ ಪೂರ್ಣ ವಿಚಾರಣೆಯಾಗಿ ಇವರು ಸೆಶನ ಕಮಿಟಿ ಮಾಡಲ್ಪಟ್ಟರು. ಇಂಥ ಅಪರಾಧಗಳ ವಿಚಾರಣೆಗೆ ಬೇರೆ ಏ ಸರಕಾರದ ಪರವ ನಿಗಿ ಬೇಕಾಗುತ್ತದೆ. ಮ್ಯಾಜಿಸ್ಟ್ರೇಟನು ಪಡೆಯದೆ ಕಮಿಟಿ ಮಾಡಿದ್ದನ್ನು ರದ್ದು ಮಾಡಬೇಕೆಂದು ಸರಕಾರೀ ವಕೀಲರು ಕೋರ್ಟಿಗೆ ತಿಳಿಸಿದರು. ಕಮೀಟಿಯ ಆರ್ಡರನ್ನು ರದ್ದು ಮಾಡಬೇಕೆಂದು ಜಡ್ಜರು ಹಾಯಕೋರ್ಟಿಗೆ ಬರೆದಿರುತ್ತಾರೆ.

ಜೇಲರನಿಗೇ ಜೇಲಿನ ಶಿಕ್ಷೆ.

ಮದ್ರಾಸದಲ್ಲಿದ್ದ ಅಸಿಸ್ಟಂಟ ಜೇಲರನಾಗಿದ್ದ ಸುಬ್ಬರಾಜು ... ಎಂಬವನು ಜೇಲಿನ ಹಣದ ದುರುಪಯೋಗ ಮಾಡಿ, ಸುಳ್ಳು ಪಾವತಿಗಳನ್ನು ಹುಟ್ಟಿಸಿದನು. ಈ ಅಪರಾಧಕ್ಕಾಗಿ ಮ್ಯಾಜಿಸ್ಟ್ರೇಟರು ಈತನಿಗೆ ೧೮ ತಿಂಗಳ ಕಠಿಣ ಸ್ಥಳದ ಶಿಕ್ಷೆ ವಿಧಿಸಿದ್ದಾರೆ. ಜೇಲರರು ಕೈದಿಗಳನ್ನು ಪರಿ ಪರಿ ಹಿಂಸೆಯಿಂದ ನಡೆಸಿಕೊಳ್ಳುವರು. ಕೈದಿಗಳಾದ ವಾರ್ಡರರ ಕಯ್ಯಲ್ಲಿ ಈ ಜೇಲರರು ಸಿಕ್ಕು ಕೃತ ಕರ್ಮದ ಪೂರ್ಣ ಪಶ್ಚಾತ್ತಾಪವಾಗದಿರದು. ತಾನು ಪರಲೋಕದ ಸ್ವರ್ಗ- ನರಕ ಕಾಣಲೊಲ್ಲದಿಲ್ಲ. ತಮಗೇ ಆಗುವ ಜೇಲಿನ ಶಾಸನನ್ನು ಅನುಭವಿಸುವಾಗ ತಮ್ಮಿಂದ ಎಂಥ ಪಾಪವಾಗ ತ್ತಿತ್ತೆಂದು ಇವರಿಗೆ ಪದೇ ಪದೇ ಸ್ಮರಣೆಗೆ ಬಂದರೆ- ಸಾಕು.

ಸಂಚರ ವಿದ್ಯಮಾನ ಪ್ರಾಥಮಿಕ ಶಿಕ್ಷಣ.

ಮದ್ರಾಸ ಸರಕಾರದವರು ಐನೂರು ಜನಸಂಖ್ಯೆಯುಳ್ಳಂಥ ಪ್ರತಿಯೊಂದು ಗ್ರಾಮದಲ್ಲಿ ಸಂಚರ ವಿದ್ಯಮಾನ ಪ್ರಾಥಮಿಕ ಶಿಕ್ಷಣದ ಶಾಲೆಯನ್ನು ಹಾಕಿಸಬೇಕೆಂದೂ, ಶಾಲೆಗ ಗ್ರಾಂಟು ಕೊಡಬೇಕೆಂದೂ ವಿಚಾರ ಮಾಡುತ್ತಿದ್ದಾರೆ. ಊರೂರಿಗೆ ಸ್ವತಂತ್ರ ಶಾಲೆಯಾದರೆ- ಮಾಸ್ತರರ ಮೇಲೆ ಗ್ರಾಮಸ್ಥರ ಪೂರ್ಣ ಅಧಿಕಾರವಾಗಿ, ವರ್ಗಾವರ್ಗಿಯ ತಾಪ ತಪ್ಪುವದು. ಮೊದಲಿನಂತೆ ಹಳ್ಳಿಯ ಅಧ್ಯಯನದ ಶಾಲೆಯಂತಾಗುವದು. ಆದರೂ ಶಿಕ್ಷಣವು ವರ್ತಮಾನ ಸುಧಾರಣೆಯ ಪ್ರಕಾರ ನಡೆಯುವದು. ಈ ಪ್ರಕಾರ ಹಳ್ಳಿಯಲ್ಲಿ ಹಾಕುವ ಶಾಲೆಗೆ ಬೇಕಾಗುವ ಕಟ್ಟಡವನ್ನು ಪಂಚರೇ ಒದಗಿಸಿಕೊಡಬೇಕು. ಅದು ವ್ಯರ್ಥ ವ್ಯಾಪಾರವಾಗಿ, ಹೊರಗಿನ ಹೈಸ್ಕೂಲಿನದಾಗಬಾರದೆಂದೂ ವಿದ್ಯಾಖಾತೆಯ ಮಂತ್ರಿಯು ವಿಚಾರವಾಗಿರುತ್ತದೆ.

ತಿರವಲ್ಲೂರಿನಲ್ಲಿಯ ತೇರು ಸುಟ್ಟು ಬೂದಿಯಾಯಿತು.

ತಂಜಾವರ ಜಿಲ್ಹೆಯಲ್ಲಿ ತಿರವಲ್ಲೂರೆಂಬಲ್ಲಿ ಶಿವಾಲಯವುಂಟು. ಶಿವನ ತೇರು ... ದೊಡ್ಡದು. ಇಷ್ಟು ದೊಡ್ಡ ತೇರು ದಕ್ಷಿಣ ದೇಶದಲ್ಲಿ ಕ್ವಚಿತವಾಗಿರುವದು. ದೇವರು ರಥಾರೂಢರಾದ ಬಳಿಕ ತಿರುಗಿ ಮೆಟ್ಟಿಗೆ ಬರಬೇಕಾದರೆ- ಎಷ್ಟೋ ಸಾರೆ ತಿಂಗಳಾನುತಿಂಗಳು ಬೇಕಾಗುತ್ತದೆ. ಈ ಸಾರೆ ರಥವು ಅರ್ಧ ದಾರಿಗೆ ನಿಂತಿತು. ಇನ್ನು ಎರಡು ಪ್ರಾಕಾರ ದಾಟಬೇಕಾಗಿತ್ತು. ಒಂದು ಗಾಲಿ ಮುರಿದು ರಥವು ನಿಂತಿತು. ಹೊಸ ಗಾಲಿ ಹಾಕುವ ಕೆಲಸ ನಡೆದಿತ್ತು. ಅಕಸ್ಮಾತವಾಗಿ ಬೆಂಕಿ ಹತ್ತಿ, ನೋಡನೋಡುತ್ತಾ ರಥವು ಸುಟ್ಟು ಬೂದಿಯಾಯಿತು. ತೇರಿನ ಹತ್ತರದಲ್ಲಿ ಇದ್ದಂಥ ಒಂದು ಕಾಫಿ ಅಂಗಡಿಯೂ ಸುಟ್ಟಿತು. ರಥದಲ್ಲಿದ್ದ ಉತ್ಸವ ಪ್ರತಿಮೆಗಳನ್ನು ಭಕ್ತರು ಪರಾಕಷ್ಟದಿಂದ ಉಳಿಸಿಕೊಂಡರು.

ಇಜಿಪ್ತದ ಮಂತ್ರಿ ಮಂಡಳವು.

ಈ ದೇಶದ ಪ್ರಧಾನ ಮಂಡಲದಲ್ಲಿ ನಾಲ್ವರು ಲಿಬರಲರು ಇಬ್ಬರು ಝಗಲುಲ ಪಾಶ್ಯಾನ ಬೆಂಬಲಿಗರಾಗುವರು:-

ಅದ್ಲಿಪಾಶ್ಯಾ- ಮುಖ್ಯ ಪ್ರಧಾನ ಮತ್ತು ಒಳದೇಶದ ಮಂತ್ರಿ.

ಸಾರವತ ಪಾಶ್ಯಾ- ಪರರಾಷ್ಟ್ರಗಳ ಪ್ರಧಾನಿ

ಮಾರಕಾಸ ಹಾನಾ- ಕೋಶಾಧಿಕಾರಿ.

ಮುಕ್ಲಿಪಾಶ್ಯಾ- ವಿದ್ಯಾಧಿಕಾರಿ

ತ್ಯಾಗಿಸ ಪಾಶ್ಯಾ- ದೇವಾದಾಯ ಧರ್ಮಾದಾಯದ ಭಾಂಡಾಗಾರ

ಫತುಲ್ಲಾ ಪಾಶ್ಯಾ- ಒಕ್ಕಲತನದ ಮಂತ್ರಿ

ಉಸ್ಮಾನ ಬೇ- ಇಂಜಿನಿಯರ ಖಾತೆ

ಝಗಲುಲ ಪಾಶ್ಯಾನು ಪಾರ್ಲಮೆಂಟದ ಅಧ್ಯಕ್ಷನು

ಕಲಕತ್ತೆಯಲ್ಲಿ ಹಿಂದೂ ಜನರ ವಿರುದ್ಧ ಮುಸಲಮಾನರ ಭಯಂಕರ ಕೋಪ.

ಕಲಕತ್ತೆಯಲ್ಲಿ ಹಿಂದೂ ಮುಸಲಮಾನರ ನಡುವೆ ಹುಟ್ಟಿದ ಭಯಂಕರ ದ್ವೇಷವು ಅರುವಿರ ಬದಲಾಗಿ ಹೆಚ್ಚುತ್ತಲುಂಟು. ಸ್ವರ್ಗವಾಸಿ ದೇಶಬಂಧು ದಾಸರು ಮುಸಲಮಾನರಿಗೆ ಕೆಲವು ಅನುಕೂಲತೆಗಳನ್ನೊದಗಿಸಿ ಕೊಟ್ಟು, ಅವರನ್ನು ಸ್ವರಾಜ್ಯ ಪಕ್ಷದಲ್ಲಿ ಸೇರಿಸಿಕೊಂಡು, ಮಂತ್ರಿಗಳ ಸಂಬಳಕ್ಕೆ ಸೋಲಿಸಿದರು. ದೇಶಬಂಧುವಿನ ವ್ಯಕ್ತಿಕ ಸಂಕಲ ದೇಶದ ಶಂಬ ಎದ್ದಂದ ಹಿಂದೂ ಮುಸಲಮಾನ ಭಡಾಕ್ಕಿಯ ಮೂಲಕ ಉಭಯ ಜನಾಂಗಗಳಲ್ಲಿಯೂ ಗುಸುಗುಸಿಯು ದಾಟುತ್ತ ಬಂತು ಕಲಕತ್ತೆಯಲ್ಲಿಯೇ ದಂಗೆಯಾಗಲು ಅದರ ವಿರಾಟ ಸ್ವರೂಪವು ಪ್ರಕಟವಾಗಿ, ಹಾವಿಗೂ, ಮುಂಗುಸಿಗೂ ಇರುವಂತ ಸ್ವಭಾವಸಿದ್ಧವಾದ ದ್ವೇಷವು ಸದ್ಯದಲ್ಲಿ ಹಿಂದೂ ಮುಸಲಮಾನರಲ್ಲುಂಟಾಗಿರುತ್ತದೆ ಕೃಷ್ಣನಗರದಲ್ಲಿ ಒಂಗಾಲ ಪ್ರಾಂತಿಕ ಪರಿಷತ್ತು ಕೂಡಿತ್ತು ಅಲ್ಲಿ ಕೂಡಿದ್ದ ತರುಣ ಬಂಗಾಲಿಗಳು ದೇಶಬಂಧುವು ಮುಸಲಮಾನ ಮುಂದಾಳುಗಳ ಕೂಡ ಮಾಡಿಕೊಂಡಿದ್ದ ಒಡಂಬಡಿಕೆಯನ್ನು ಮುರಿದು ಮೂಲೆಗೊತ್ತಿ ಬಿಟ್ಟ ಮಾಡಿದರು.

ಇದೇ ಸಮಯದಲ್ಲಿ ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿ ಉಪಾಧ್ಯಕ್ಷರಾಗಿರುವ ಮಿ. ಸುರಾವರ್ದಿಯವರ ಪ್ರಕರಣವಿದ್ದಿತು. ಇವರು ದೇಶಬಂಧುವಿನ ಪರಮ ಹಿತೈಷಿಗಳು. ಅವರ ಕೃಪೆ ಮತ್ತು ಹಿಂದೂ ಮುಸಲಮಾನ ಒಪ್ಪಂದದ ಜೊತೆಯಿಂದ ಇವರು ಉಪಾಧ್ಯಕ್ಷರಾದರು. ಸ್ವರಾಜ್ಯ ಪಕ್ಷದ ಸಂಪೂರ್ಣ ಭಕ್ತರು ಕಾಂಗ್ರೆಸ್ಸಿನ ಸಮ್ಮತಿ ಪಡಕೊಳ್ಳದೆ, ಗವರ್ನರರಿಂದಲೇ ಬಿರುದು ಕಾಣಿಕೆ ಪಡೆದ ಬಗ್ಗೆ ಮಹಾತ್ಮರಿಂದ ಸಿಟ್ಟು ಮಾಡಿಸಿಕೊಂಡಿದ್ದಾರೆ ಸ್ವರಾಜ್ಯ ಪಕ್ಷದವರೂ, ಪ್ರಾಂತಿಕ ಮಹಾಸಭೆಯವರಂತೆ ಭಯ ಬಿಡುವನ್ನು ಇವರನ್ನು ತಾಳಗೊಟ್ಟರು. ದಂಗೆಯ ವೇಳೆಯಲ್ಲಿ ಸ್ವರಾಜ್ಯ ಪಕ್ಷದವರಂತೆ ಕಟ್ಟು ವ್ಯಕ್ತಿಯಾಗಿರದೆ ಸ್ವಜನಾಭಿಮಾನದಿಂದ ಕೆಲವು ಅಕ್ರಮದ ಕೃತ್ಯಗಳನ್ನು ಮಾಡಿದರು ಮ್ಯುನಿಸಿಪಾಲಿಟಿಯ ಉಪಾಧ್ಯಕ್ಷರೆಂದು ಮಾಡಬೇಕಾಗಿದ್ದ ಸಾರ್ವಜನಿಕ ಕಾರ್ಯದಲ್ಲಿ ವಿಮುಖರಾಗಿ ಕರ್ತವ್ಯಭ್ರಷ್ಟರಾದರು ಈ ಪ್ರಕಾರ ಸಿಂಧುವಲ್ಲದ ಇವರ ನಡತೆ ಕಂಡು, ಉಳಿದ ಮೆಂಬರರು ಇವರ ಮೇಲೆ ಒತ್ತಾಯಿಸಿ, ಇವರಿಗೆ ರಾಜೀನಾಮೆ ಕೊಡಲು ಸೂಚಿಸಿದರು. ಆದರೆ ಇವರು ದುರಾಗ್ರಹ ಹಿಡಿದ, ರಾಜೀನಾಮೆ ಕೊಡುವದಕ್ಕೊಪ್ಪದ ಕಾರಣ, ಮ್ಯುನಿಸಿಪಾಲಿಟಿಯಲ್ಲಿ ದೊಡ್ಡ ಬಿಕ್ಕಟ್ಟು ಬಿದ್ದಿತು ೭೪ ಜನ ಮೆಂಬರರು ಇವರ ನಡತೆಯ ಬಗ್ಗೆ ವಿಚಾರ ಮಾಡಲು ಒಂದು ಕಮೀಟಿ ನೇಮಿಸಬೇಕೆಂದು ಅಧ್ಯಕ್ಷರಿಗೆ ಒಂದು ವಿನಂತಿ ಪತ್ರ ಬರೆದರು ಈ ೭೪ ಜನರಲ್ಲಿ ಮುಸಲಮಾನ ಮೆಂಬರನೊಬ್ಬನೂ ಇರುವದಿಲ್ಲ. ಆದರೆ ಯುರೋಪಿಯನ್ನ ಮೆಂಬರದ್ದಾರೆ ಹಿಂದೂ ಜನರೇ ಇದ್ದರೆ ಅದು ಜಾತಿ ದ್ವೇಷವೆನಿಸುತ್ತಿತ್ತು. ಯುರೋಪಿಯನ್ನರೂ ಸೇರಿರುವದರಿಂದ, ಮಿ ಸುರಾವರ್ದಿಯವರಿಂದ ಅಕ್ಷಮ್ಯವಾದ ತಪ್ಪಾಗಿರಬೇಕೆಂದು ಸಹಜವಾದ ಊಹೆಯಾಗಿರುತ್ತದೆ.

೭೪ ಜನ ಮೆಂಬರರು ಕೂಡಿ ಮಾಡಿದ ವಿಚಾರವು ಆ ಬಗ್ಗೆ ಕಮೀಟಿ ನೇಮಿಸಬೇಕೆಂದು ಅಧ್ಯಕ್ಷರಿಗೆ ವಿನಂತಿ ಮಾಡಿಕೊಳ್ಳುವ ಠರಾವಿನ ಸಂಗತಿಯೂ ಗುಪ್ತವಾಗಿರುತ್ತದೆ ಒಂದು, ಒಂದೂವರೆ ತಿಂಗಳಿಂದ ಈ ವಿಷಯವು ಹೊರಗೆ ಬರದಂತೆ ಆಗುತ್ತಿದ್ದರೂ, ಮಿ. ಸುರಾವರ್ದಿಯವರಿಂದ ಅದು ಅಪರಾಧವಾದದೆಂದು ಪ್ರತೀತಿ ಬಂದಿರುವದಿಲ್ಲ. ಅಧ್ಯಕ್ಷರೂ ಒಳಗಿನ ಸಂಗತಿಗಳನ್ನು ಬಲ್ಲವರಾದ್ದರಿಂದ, ಅವರು ಒಂದು ಕಮೀಟಿ ನೇಮಿಸಿದರು. ಇದರಲ್ಲಿ ಯುರೋಪಿಯನ್ನರಂತೆ ಒಬ್ಬಿಬ್ಬ ಮುಸಲಮಾನರೂ ಇದ್ದಾರೆ. ಆದರೆ ಈ ಮುಸಲಮಾನ ಮೆಂಬರರು ಸ್ವಜಾತ್ಯಭಿಮಾನದ ದೆಸೆಯಿಂದ ಕಮೀಟಿಯಲ್ಲಿ ಸೇರಲು ಒಪ್ಪಿರುವದಿಲ್ಲ. ಕಮೀಟಿಯು ನಿರ್ಣಯದ ಪ್ರಕಾರ ಸರಕಾರಕ್ಕೆ ಬರೆದು, ಸರಕಾರವಂತ ಇವರನ್ನು ಬ್ರಿಸ್ಕೃತರ ಅ

ಧಿಕಾರದಿಂದ ಬಿಡುಗಡೆ ಮಾಡಬೇಕಾಗುತ್ತಿಗೆ ಮಿ. ಸುರಾವರ್ದಿಯವರ ಅಭಿಮಾನಿಗಳೆಂದರೆ ತಮ್ಮ ಆದರ ಸ ಮೇಲ್ತ ಆಘಾತವೆಂದು ಮುಸಲಮಾನರು ಈ ವಿಷಯವನ್ನು ಧೃವಕ್ಕೇರಿಸ ಪಡಿಸಿಕೊಂಡಿದ್ದಾರೆ

ಮಿ ಸುರಾವರ್ದಿಯವರ ಮೇಲೆ ಬಂದ ಗಂಡಾಂತರದ ಬಗ್ಗೆ ಹಿಂದೂ ಮೆಂಬರರ ಕೃತ್ಯವನ್ನು ನಿಷೇಧಿಸಲೋಸುಗ ವಹಿಸಿ ದಿವಸಗಳ ಕೆಳಗೆ ಟಾವ್ನಹಾಲಿನಲ್ಲಿ ಪ್ರಚಂಡ ಬಾಹೀರ ಸಭೆಯನ್ನು ಕರೆದಿದ್ದರು. ಎಲ್ಲ ಮುಸಲಮಾನರಿಗೆ ಸಭೆಗೆ ಬರಲು ಅನುಕೂಲವಾಗಬೇಕೆಂದು ಉಪ್ಪಾಸ ವ್ಯವಹಾರವನ್ನು ಬಂದು ಮಾಡಿ ಸಭೆಯ ಜನವು ಮೇಲಿಗೆ ... ಸುಮಾರು ... ಸ ನಡೆದವು.

೧ ಮಿ ಸುರಾವರ್ದಿಯವರು ಅಧಿಕಾರದಿಂದ ಮಾಡಿದ ಕೃತ್ಯವು ನಿಷ್ಪಕ್ಷಪಾತವಾಗಿರುತ್ತದೆ

೨ ಮುಸಲಮಾನರು ಹಿಂದೂ ಜನರ ವಿರುದ್ಧ ತಪ್ಪು ರಕ್ಷಣೆ ಮಾಡಿಕೊಳ್ಳತಕ್ಕದ್ದು

೩ ಹಿಂದೂ ಜನರ ಕೃತ್ಯದ ನಿಷೇಧವೆಂದು ಮುಸಲಮಾನ ಮೆಂಬರರು ರಾಜೀನಾಮೆ ಕೊಡತಕ್ಕದ್ದು.

ಮೇಲಿನ ಮೂರೂ ಠರಾವುಗಳನ್ನು ಮುಸಲಮಾನರ ಚಳವಳಿಯನ್ನು ನೋಡಲಾಗಿ ಅವರು ಹಿಂದೂ ಜನರ ಮೇಲೆ ಎಷ್ಟು ಕೋಪಿಸಿದ್ದಾರೆಂದು ತಿಳಿದು ಬರುತ್ತದೆ ಈ ಸಭೆಯ ಠರಾವು ಪಾಸಾದ ನಂತರ "ನೀವು ರಾಜೀನಾಮೆ ಕೊಡುವಿರಾ" ಎಂದು ಮೆಂಬರರನ್ನು ಕೇಳಲು ನಮ್ಮ ಮತದಾರರ ಮತವನ್ನು ಕೇಳಬೇಕಾಗುವದೆಂದು ಇವರು ಉತ್ತರ ಕೊಟ್ಟಿದ್ದಾರೆ ಇದರಿಂದ ಬಲವಂತದಿಂದ ರಾಜೀನಾಮೆ ಕೊಡಿಸಿ, ಹೆಸರಿಗೆ ಉಮೇದವಾರರನ್ನು ನಿಲ್ಲಿಸಿ, ಚುನಾವಣೆಯಾದ ಕೂಡಲೆ ರಾಜೀನಾಮೆ ಕೊಡಿಸಿ, ಪುನಃ ಪುನಃ ಚುನಾವಣೆಯ ಪಿಡುಗು ಹುಟ್ಟಿಸಬೇಕೆಂದು ಮಾಡಿದ್ದಾರೆ.

ವಾದ್ಯದ ದೆಸೆಯಿಂದ ಬಂಗಾಲ ಸರಕಾರದ ಠರಾವು.

ಬಂಗಾಲ ಸರಕಾರದವರು ಮಸೀದೆಗಳ ಮುಂದೆ ವಾದ್ಯ ಬಾರಿಸುವ ವಿಷಯವಾಗಿ ಪ್ರಸಿದ್ಧವಾದ ಠರಾವು ಹಿಂದೂ ಮುಸಲಮಾನರಿಬ್ಬರನ್ನೂ ಅಸಮಾಧಾನ ಪಡಿಸಿದೆ ಮುಸಲಮಾನರ ... ಯೆಂದು ಮಸೀದೆಯ ಮುಂದೆ ವಾದ್ಯವನ್ನು ನಿಲ್ಲಿಸಿ ಬಿಡುವದಿಲ್ಲ ... ಆವರ ಅನ್ಯಾಯವು ಹಿಂದೂ ಜನರ ಧೃತಿಯಿಂದ ಆಗುವದು ಮಂಗಳ ಕಾರ್ಯದಲ್ಲಿ ವಾದ್ಯ ನಿಲ್ಲಿಸುವದು ಅವಲಕ್ಷಣವಾಗುತ್ತದೆಂದು ಸಾವಿರ ವರ್ಷಗಳಿಂದ ರೂಢಿ ಧಾರ ಮಾಡುತ್ತಿದ್ದ ಇಂಗ್ಲಿಷ ಜನರಿಗ ತಿಳಿಯದೆ ಇದ್ದದ್ದು ಆಶ್ಚರ್ಯ ... ಮುಸಲಮಾನರು ಬರುವ ಮೊದಲಿನಿಂದಲೂ ಹಿಂದೂ ಜನರು ಈ ದೇಶದಲ್ಲಿ ವಾಸವಾಗುತ್ತಿದ್ದರು. ಅವರು ವಾದ್ಯ ಬಾರಿಸ್ಸ ದೇವರ ಪೂಜೆ. ಇತರ ಮಂಗಳಕರವಾದ ಮೆರವಣಿಗೆ ತೆಗೆಯುತ್ತಾ ಇದ್ದರು ಈ ಪದ್ಧತಿಯು ನಿಜವಿರುತ್ತದೆಂದು ಇಂದಿಗೂ ಪ್ರತ್ಯಕ್ಷವಾಗಿ ಹಳ್ಳಿಗಳಲ್ಲಿ ಕಂಡು ಬರುವದು ಮುಸಲಮಾನರು ತಮ್ಮ ಮಸೀದೆಗಳಲ್ಲಿ ನಿಮಾಜ ಮಾಡುತ್ತಿರುವಾಗ ಹಿಂದೂ ಜನರ ಮೆರವಣಿಗೆಯು ಅವಿಚ್ಛಿನ್ನವಾಗಿ ಹೋಗುವದನ್ನು ಕಣ್ಣಾರೆ ಕಾಣಬಹುದು. ವಾದ್ಯದ ಗೊಂದಲವೆಲ್ಲ ಪಟ್ಟಣಗಳಲ್ಲುಂಟು. ಇದು ಕೂಡ ಇತ್ತಲಾಗಿನ ಜಗಳವು ಪುರಾತನದಿಂದ ವಾದ್ಯ ನಿಲ್ಲಿಸುವ ಪದ್ಧತಿ ಇದ್ದರೆ ಮುಸಲಮಾನರು ಹಿಂದೆಯೇ ಕಾಗಿ ನೀತು, "ದೀನ್ ಸತ್ತ ಬಜಾವ್" ಎಂದು ಆದರ ಹೂಡುತ್ತಿದ್ದಿಲ್ಲ. ಈ ಜಗಳವು ತೀರ ಇತ್ತಲಾಗಿನದೆಂದು ಸರಕಾರದ ದಪ್ತರದಲ್ಲಿಯೇ ಬೇಕಾದಷ್ಟು ದಾಖಲೆ ದೊರೆಯಬಹುದಾಗಿರುತ್ತದೆ. ಹಿಂದುಸ್ಥಾನ, ಹಿಂದೂ ಜನರು, ಪುರಾತನದ ಸಾಂಪ್ರದಾಯ ... ಸಂಗತಿಗಳನ್ನು ಲಕ್ಷಕ್ಕೆ ಬಿಟ್ಟನಂತೀ ಒಬ್ಬಿಕ್ಕೆ ಕಿವಿ, ಮುಸಲಮಾನರಿಗೆ ಅನುಕೂಲವಾಗಿ, ಮುಸಲಮಾನರು ಹಿಂದೂ ಜನರಿಗಿಂತ ಮೊದಲು ಈ ದೇಶದಲ್ಲಿದ್ದವರನ್ನು ಮೊತ್ತ ಹೊಸಮು ... ಮಾಡುವರು. ಇನ್ನೂ ನಿಮಾಜ ನದು ಕೇಳ

ಗಳು ಈ ಐದೂ ವೇಳೆಗಳಲ್ಲಿ ಹಿಂದೂ ಜನರು ಮಸೀದೆಗಳ ಮುಂದೆ ವಾದ್ಯ ಬಾರಿಸಬಾರದೆಂಬಿದರ ಅರ್ಥವು ಹಿಂದೂ ಜನರು ಆ ಹೊತ್ತುಗಳನ್ನು ಬಿಟ್ಟು ತಮ್ಮ ಕಾರ್ಯಗಳನ್ನು ಮಾಡಬೇಕೆಂದು ಹೇಳುವಂತಾಗುತ್ತದೆ. ಈ ಪ್ರಕಾರ ಹೇಳುವದು ಹಿಂದೂ ... ಹೃದಾಕಿದಂತಾಗುತ್ತದೆ ಈ ಪ್ರಕಾರ ಗವರ್ನರರಸಾಹೇಬರು ಹಿಂದೂ ಜನರ ನಿಸರ್ಗದತ್ತವಾದ ಧರ್ಮ ಸ್ವಾತಂತ್ರ್ಯಗಳ ಮೇಲೆ ಗದಾ ಪ್ರಹಾರ ಮಾಡಿದರು, ಮುಸಲಮಾನರು ಆ ಸಂತೃಪ್ತರಾಗಿದ್ದಾರೆ ನಮಾಜದ ಐದು ವೇಳೆಗಳೆಂದು ಕುರಾಣದಲ್ಲಿ ಹೇಳಿದ್ದರೂ, ಬಹಳ ಜನರು ಸದಾ ಸಕಾಲದಲ್ಲಿ ನಮಾಜ ಮಾಡುತ್ತಾರೆ. ಆದುದರಿಂದ ಹಿಂದೂ ಜನರು ಯಾವಾಗಲು ಮಸೀದೆಗಳ ಮುಂದೆ ವಾದ್ಯ ಹಿಡಿದುಕೊಂಡು ಬರಬಾರದು. ಇದರ ಎದುರು ಗವರ್ನರ ಸಾಹೇಬರ ಮಾಡಿದ ಹುಕುಮು ತಮಗೆ ಸಮಾಧಾನವಾಗಿರುತ್ತದೆ ಆದುದರಿಂದ ಈ ಹುಕುಮನ್ನು ರದ್ದುಪಡಿಸಿಕೊಳ್ಳಲಿಕ್ಕೇ ಬೇಕೆಂದು ಮುಸಲಮಾನರು ಚಳವಳಿ ನಡೆಸತಕ್ಕವರಿದ್ದಾರೆ. ಈ ರೀತಿ ಗವರ್ನರಸಾಹೇಬರ ಹುಕುಮು ಎರಡೂ ಜನಾಂಗಗಳನ್ನು ಅಸಂತೋಷ ಅಸಮಾಧಾನದಲ್ಲಿ ಸಿಲುಕಿಸುತ್ತದೆ

ಈಜಿಪ್ತದಲ್ಲಿದ್ದ ಇನ್ನೊಂದು ಧೂಮಕೇತು!!

ಝಗಲುಲ ಪಾಶ್ಯಾನು ಈಜಿಪ್ತವನ್ನು ಸರ್ವತಂತ್ರ ಸ್ವತಂತ್ರ ಮಾಡಲೋಸುಗವಾಗಿ ಬ್ರಿಟಿಶ ಹಾಯ ಕಮೀಶನರಸಾಹೇಬರನ್ನು ಹತ್ತಾಯ ಪಡಿಸಿದ ರಾಜಕೀಯ ಧೂಮಕೇತುಯು ಹುಟ್ಟಿಗೆ ಕಡಿಮೆಯಾಗುತ್ತದೆಂಬುವಷ್ಟರಲ್ಲಿ ಆ ವೇಳೆಯಲಿಗೆ ನ್ಯಾಯದಾನ ನೊಡಲಲ್ಲಿ ಮೊದಲಿದ್ದ ಮಿ. ಕೇರಿಶಾ ಎಂಬ ಹೆಸರಿನ ಇಂಗ್ರೇಜ ಜಡ್ಜರು ರಾಜೀನಾಮೆ ಕೊಟ್ಟು ಉರಿಯುವದರಲ್ಲಿ ಉರುವಲ ಹಾಕಿದ್ದಾರೆ ಆ ದೇಶದಲ್ಲಾದ ಕೊಲೆಗಳ ಮೂಲ ಪ್ರವರ್ತಕರೂ ಸಂಘಗಾರರೂ ಎಂಬ ಐದು ಜನರ ಮೇಲೆ ಖಟ್ಲೆಯಾಗಿ, ಅವರ ವಿಚಾರಣೆಯು ಮಿ. ಕೇರಿಶಾ ಮತ್ತು ಇಬ್ಬರು ಈಜಿಪ್ತದ ಜಡ್ಜರು ಈ ಪ್ರಕಾರ ಮೂವರ ಮುಂದೆ ನಡೆಯಿತು. ಇವರಲ್ಲಿ ನಾಲ್ವರು ನಿರ್ದೋಷಿ ಎಂದು ಬಂಧಮುಕ್ತರಾದರು. ಕೇರಿಶಾಸಾಹೇಬರು ಒಬ್ಬನಿಗೆ ಮರಣದಂಡನೆ ಆಗಬೇಕಾಯಿತು ಈ ತೀರ್ಪು ಹೇಳಲ್ಪಟ್ಟನಂತರ ಕೆಲ ದಿವಸಗಳಲ್ಲಿ ಝಗಲುಲ ಪಾಶ್ಯಾನ ಬಿಡುಗಡೆಯು ಉಲ್ಲಾಸದಿಂದಲೇ ... ಕೇರಿಶಾಸಾಹೇಬರು ಸ್ವಾಭಿಮಾನದಿಂದಲು ಸ್ವಜನಾಭಿಮಾನಪ್ರೇರಿತರಾಗಿ, ಈ ನ್ಯಾಯನಿರ್ಣಯವು ಅನ್ಯಾಯದ್ದಾಗಿರುತ್ತದೆಂದು ಹೇಳಿ ರಾಜೀನಾಮೆ ಕೊಟ್ಟರು ವಾಸ್ತವಿಕವಾಗಿ ನೋಡಿದರೆ ನಾಮೆಯರು ಈಜಿಪ್ತ ಸರಕಾರದ ನ್ಯಾಯ ಮಂತ್ರಿಯ ಕೈಯಲ್ಲಿ ರಾಜೀನಾಮೆ ಕೊಡತಕ್ಕದ್ದು ರಾಜಕೀಯ ಸ್ಥಿತಿಯನ್ನು ನೋಡಿ ಬ್ರಿಟಿಶ ಹೈ ಕಮೀಶನರ ... ರಾಜೀನಾಮೆಯನ್ನು ... ಕೊಟ್ಟರು ಈಜಿಪ್ತದ ಜಡ್ಜರು ಸ್ವಜನರ ಪಕ್ಷಪಾತಮಾಡಿ, ತೀರ್ಪು ಬರೆಯುವದರಿಂದ ವರಕೀಯು ಅ ನ್ಯಾಯದ ... ತೀರ ಅನುಚಿತವಾಗುತ್ತದೆಂದು ರಾಜೀನಾಮೆಯಲ್ಲಿ ಬರೆದಿರುತ್ತಾರೆ. ಕೇರಿಶಾಸಾಹೇಬರು ಈ ಪ್ರಕಾರ ಸ್ಪಷ್ಟವೆಂದು ಬರೆದು ರಾಜೀನಾಮೆ ಕೊಟ್ಟದ್ದನ್ನು ಇಂಗ್ಲಿಷ ಪತ್ರಗಳು ಅನುಮೋದಿಸಿ, ಸಾಹೇಬರನ್ನು ಮನಃಪೂರ್ವಕವಾಗಿ ಹೊಗಳಿದ್ದಾವೆ ಈ ಸಾಹೇಬರು ಅಲ್ಲಿ ೩೫ ವರ್ಷಗಳಿಂದ ಜಡ್ಜರಾಗಿದ್ದಾರೆ. ಅವರಿಗೆ ಇದೊಂದೇ ಪ್ರಕರಣದಲ್ಲಿ ಸಂಶಯವು ಅಲ್ಲಿ ಕಯ್ಯಲ್ಲಿ ಜೀವ ಬಿಡಬೇಕೆಂದು ... ದಥ ಹೊತ್ತು ಬಂತೆಂದು ಕೇಳಿದ್ದು ಆಶ್ಚರ್ಯವೇ ಸರಿ. ಅಂಥ ಆಶ್ಚರ್ಯಕ್ಕೆ ಅವರ ದೃಷ್ಟಿಯಿಂದ ಕಾರಣವೂ ಉಂಟು. ದೋಷಮುಕ್ತರಾದಂಥ ನಾಲ್ವರು ದೊಡ್ಡ ದೊಡ್ಡ ಯೋಗ್ಯತೆಯುಳ್ಳವರು ಇವರಲ್ಲಿ ಮೊದಲು ... ಎಂಬವನು ಹಿಂದಕ್ಕೆ ವಿದ್ಯಾಖಾತೆಯ ಮಂತ್ರಿಯಾಗಿದ್ದನು ಝಗಲುಲ ಪಾಶ್ಯಾನು ಪ್ರಸ್ತುತದ ತನ್ನ ಪ್ರಧಾನ ಮಂಡಳದಲ್ಲಿ ಇವನನ್ನು ಪುನಃ ಅದೇ ಸ್ಥಳದಲ್ಲಿ ಯೋಜಿಸತಕ್ಕವನಿದ್ದನು. ಕೊಲೆಗಳನ್ನು ಅಥವಾ ಕೊಲೆಗಾರರನ್ನು ಕಟ್ಟಿಕೊಳ್ಳುವಂಥ ಸಂಘದಲ್ಲಿ ಸೇರಿದವನು ಪುನಃ ಮಂತ್ರಿಯಾಗುವದು ಬ್ರಿಟಿಶ ಮುತ್ಸದ್ದಿಗಳಿಗೂ ನ್ಯಾಯಪಂಡಿತರಿಗೂ

ವಿಪರೀತ ಕೃತ್ಯವಾಗಿ ಚಿತ್ತಭ್ರಮಣ ಪಡಿಸುವಂಥಾಗುವದು ಸಹಜವಾದದ್ದು. ಆದರೆ ಪ್ರತ್ಯಕ್ಷ ದೃಷ್ಟಾಂತವು ಕೇರಿಶಾಸಾಹೇಬರ ರಾಜೀನಾಮೆಯಲ್ಲಿ ವ್ಯಕ್ತವಾಗುತ್ತದೆ. ಸಾಹೇಬರು ಕೆಲಸದಿಂದ ನಿವೃತ್ತರಾಗುವದು ಅಲ್ಲಿ ಸ್ವದೇಶಿಯರ ಪ್ರಾಬಲ್ಯ ಹೆಚ್ಚಾಗುವದಕ್ಕೆ ಬೆಂಬಲ ಕೊಡುವದೆಂಬುದು ನಿರ್ವಿವಾದವು. ಇದರಲ್ಲಿ ಮುಖ್ಯವಾಗಿ ಒಂದು ಪ್ರಶ್ನೆಯುಂಟು. ಈಜಿಪ್ತವಾಗಲಿ ಇನ್ನೊಂದು ದೇಶವಾಗಲಿ, ಪರಕೀಯರನ್ನು ಯಾವದೊಂದು ಜವಾಬದಾರಿಯ ಕೆಲಸದಲ್ಲಿ ಸೇರಿಸಿಕೊಂಡು, ಅವರ ಕಯ್ಯಲ್ಲಿ ತಮ್ಮ ಜುಟ್ಟು ಕೊಡುವದೇ ತಪ್ಪು. ಅವರು ಪ್ರಸಂಗಾನುಸಾರ ಸ್ವಜನ ಹಿತವನ್ನೇ ನೋಡುವರು. ಅವರ ನಿರ್ಣಯಗಳಾದರೂ ಅದೇ ತೆರದಾಗಿ ಆಗುವವು ಪರಕೀಯರಿಂದ ನಿಷ್ಪಕ್ಷಪಾತ ಅಥವಾ ಸ್ವದೇಶಾಭ್ಯುದಯದ ಸಹಾಯದಲ್ಲಿ ವಿವೇಕವಾದ ನ್ಯಾಯದೊರೆಯುವದೆಂದು ತಿಳಿಯುವದು ತೀರ ಮೂಢತನವು

ಈಜಿಪ್ತದ ಹೊಸ ಪಾರ್ಲಮೆಂಟು !!

ಈಜಿಪ್ತದ ಹೊಸ ಪಾರ್ಲಮೆಂಟ ಸಭೆಯ ಪ್ರಾರಂಭವು ಬಹು ಸಡಗರದಿಂದಾಯಿತು. ಸುಲ್ತಾನ ಫೌಕರೂ, ಝಗಲುಲ ಪಾಶ್ಯಾನವರೂ ಸಂಪ್ರದಾಯದಂತೆ ಪಾರ್ಲಮೆಂಟ ಸಭೆಗೆ ಹೋಗುವಾಗ ದಾರಿಗುಂಟ ನೆರೆದ ಜನರು ಹರ್ಷಘೋಷ ಮಾಡಿದರು. ಝಗಲುಲ ಪಾಶ್ಯಾನು ಪಾರ್ಲಮೆಂಟದ ಅಧ್ಯಕ್ಷನಾದನು ಮುಖ್ಯ ಮಂತ್ರಿಯಾದ ಅದ್ಲಿ ಪಾಶ್ಯಾನು ಪ್ರಾರಂಭದ ಭಾಷಣ ಮಾಡಿ, ಇಂಗ್ಲಿಷರ ಕೂಡ ಪ್ರೀತಿಯಿಂದ ನಡಕೊಂಡು, ಈಜಿಪ್ತಕ್ಕೆ ಸ್ವಾತಂತ್ರ್ಯ ದೊರಕಿಸುವದೇ ತಮ್ಮ ಧ್ಯೇಯವಾಗಿದೆಂದನು ಸಾಂಪ್ರತದಲ್ಲಿ ರಾಜ್ಯದ ಕುಂಟ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಬೆಳೆಸುವದರಲ್ಲಿ ಮಂತ್ರಿಗಳು ವಿಶೇಷ ಮನಸ್ಸು ಹಾಕುವರು. ಇಂಗ್ಲಿಷರ ಕೂಡ ಸಹಕಾರದಿಂದ ನಡೆಯುವೆನೆಂದು ಅದ್ಲಿ ಪಾಶ್ಯಾನು ಹೇಳಿ ಬಿಟ್ಟ ಬಳಿಕ ಅಲ್ಲಿಯ ಪರಿಸ್ಥಿತಿಯು ಶಾಂತವಾಗಿ ಇಂಗ್ಲಿಷರು ಅಲ್ಲಿಗೆ ಕಳಿಸಬೇಕೆಂದಿದ್ದ ಯುದ್ಧದ ಹಡಗಗಳ ಆವಶ್ಯಕತೆಯು ಇಲ್ಲದಾಯಿತು ಈಜಿಪ್ತವು ರಾಷ್ಟ್ರ ಸಂಘದಲ್ಲಿ ಸೇರಿ, ಮಿಕ್ಕ ದೇಶಗಳಂತೆ ಸರಿಸಮಾನತ್ವದ ಭಾವವನ್ನು ಪಡೆಯಬೇಕೆಂಬುದೂ ಈಗಿನ ಮಂತ್ರಿಗಳ ಒಂದು ವಿಚಾರವಾಗಿರುತ್ತದೆ ಹಿಂದಿನಂತೆ ಎಲ್ಲರೂ ಸ್ವಜನರ ಹಿಂದೆ ಕೂಡಿರೆ ಮಾತ್ರ ಅದರಲ್ಲಿ ಸೇರಿಯೂ ಪ್ರಯೋಜನವಾಗಲಾರದು.

ಕಲಕತ್ತೆಯಲ್ಲಿ ವರ್ತಮಾನಪತ್ರಕಾರರಿಗೆ ಶಾಕೀದಿ, ತಿಂಗ್ಳು, ಕೈದು, ಜಾಮೀನು ಮುಚ್ಚಳಿಕೆ.

ಹಿಂದೂ ಮುಸಲಮಾನ ದಂಗೆಯ ವೇಳೆಯಲ್ಲಿ ಜಾತಿ ಜಾತಿಗಳ ನಡುವೆ ದ್ವೇಷ ಹೆಚ್ಚುಗುವಂಥ ಲೇಖಗಳನ್ನು ಬರೆದಂಬ ಆರೋಪದಿಂದ ಅನೇಕ ಪತ್ರಕಾರರನ್ನು ಮ್ಯಾಜಿಸ್ಟ್ರೇಟರ ಮುಂದೆ ನಿಲ್ಲಿಸಿದ ಸಂಗತಿಯನ್ನು ಈ ಮೊದಲು ಬರದಿರುತ್ತೇವಷ್ಟೇ, ಇವರ ವಿಷಯವಾಗಿ ಮ್ಯಾಜಿಸ್ಟ್ರೇಟರು ಮುಂದೆ ಬರೆದ ಪ್ರಕಾರ ತೀರ್ಪು ಹೇಳಿದ್ದಾರೆ

೧ ಮಸುಮಾನ- ಬಂಗಾಲಿ ಸಾಪ್ತಾಹಿಕ ಒಂದು ತಿಂಗಳ ಸಾದಾ ಕೈದು, ೨೦೦ ದಂಡ

೨ ಇಸ್ಲಾಮ ಜಗತ- ಇನ್ನೂರು ರೂಪಾಯಿ ದಂಡ ಇದರ ಮುದ್ರಕನು ಇನ್ನೂರು ರೂಪಾಯಿಗಳ ಜಾಮೀನು ಮುಚ್ಚಳಿಕೆ ಬರಕೊಡತಕ್ಕದ್ದು.

೩ ಬಸುಮತಿ- ಬಂಗಾಲಿ ಪ್ರಸಿದ್ಧ ನಿತ್ಯ ಪತ್ರಿಕೆ- ಒಂದೇ ಶಾಕೀದಿ.

೪ ಹನೀಫ ಪ್ರಕಾಶಕ ಮತ್ತು ಪ್ರಿಂಟರ ಇಬ್ಬರಿಗೂ ಒಂದು ತಿಂಗಳ ಸಾದಾ ಕೈದು ಮತ್ತು ನೂರು ರೂಪಾಯಿ ದಂಡ

೫ ಮಹಮ್ಮದಿ- ಸಂಪಾದಕ- ನಾಲ್ಕು ತಿಂಗಳ ಸಾದಾ ಕೈದು.

೬ ಮಹಮ್ಮದಿ ದಿಲ್ಲಿ- ಎನಸರು ರೂಪಾಯಿಯ ಸ್ವಂತ ಮುಚ್ಚಳಿಕೆ ಮತ್ತು ಒಂದು ವರ್ಷದ ತನಕ ಒಳ್ಳೇ ನಡತೆಯ ಬಗ್ಗೆ ಅಷ್ಟೇ ರಕಮಿನ ಜಾಮೀನ,

೭ ಘೋರಮಿತ- ಆರು ತಿಂಗಳ ಜಾಮೀನು ಮುಚ್ಚಳಿಕೆ.

೮ ಅಮೃತ ಬಝಾರ- ದೋಷಮುಕ್ತ.

ಹಿಂದುಸ್ಥಾನೀ ಸೇವಾದಳ ಕರ್ನಾಟಕ.

ಪತ್ರಿಕೆ ೧.

ಕರ್ನಾಟಕಕ್ಕಿರೀ ಮುಂದೆ ಸಾಗಿರಿ.

ಪ್ರಾಂತದಲ್ಲಿಯ ಕೆಲಸವನ್ನು ಹೆಚ್ಚಿಸುವದ ಕ್ಕಾಗಿಯೂ ಕೆಲಸಗಾರರ ಸಂಬಂಧದ ವ್ಯವಸ್ಥೆ ಮಾ ಡುವದಕ್ಕಾಗಿಯೂ ವ್ಯಾಯಾಮ ಶಾಲೆಗಳನ್ನು ಸ್ಥಾ ಪಿಸುವದಕ್ಕಾಗಿಯೂ ಈ ವರ್ಷ ಸೆಪ್ಟಂಬರ ೩೦ ನೇ ತಾರೀಖಿನೊಳಗಾಗಿ ಕರ್ನಾಟಕದಲ್ಲಿ ೧೦೦೦೦ ಕಾಂ ಗ್ರೆಸ ಸಭಾಸದರನ್ನು ೫೦೦ ಸೇವಾದಳದ ಸಭಾಸದ ರನ್ನು ೫೦೦೦ ರೂ. [illegible] ಬಳ್ಳಾರಿಯಲ್ಲಿ ಶ್ರೀ ಹೊಸ[illegible] ಕೃಷ್ಣರಾವ[illegible] ಅಧ್ಯಕ್ಷತೆಯಲ್ಲಿ ಸೇರಿದ ಕರ್ನಾ[illegible] ಕ ೨ ನೇ ಪರಿಷತ್ತಿನಲ್ಲಿ ೨೦ ೫-೩೭ ನೇ ದಿವಸ ೩೬ ಮಾನಗಳಾಗಿರುವವು.

ಕೂಡಲೇ ಸಂಚಾಲಕರ ಹಾಗೂ ಕೆಲಸಗಾ ರರ ಸಭೆಗೂಡಿತು. ಹಾಗೂ ಇಂಥಿಂಥವರು ಇ ಷ್ಟು ಕೆಲಸವನ್ನು ಮಾಡಬೇಕೆಂದು ನಿ[illegible] ಯ್ತು. ಶ್ರೀ ಹೊಸಕೊಪ್ಪ ಕ[illegible] ಡಾ. ಹರ್ಡೀಕರರವರು ಪ್ರತಿ[illegible] ೧೦೦ ಕಾಂ ಸಭಾಸದರನ್ನು ೭೫ ಸೇವಾದಳ ಸ್ವಯಂಸೇವ ಕರನ್ನು ಕೂಡಿಸುವ ನಿಶ್ಚಯ ಮಾಡಿದ್ದಾರೆ. ಇವ ಲ್ಲದೆ ಧಾರವಾಡ ಜಿಲ್ಲೆಯಲ್ಲಿ ಎಸ್. ಆರ್. [illegible] ಗದಗ, ಶರಗುದಾ, [illegible] ಮುತ್ತು ಸಾತನೀಯ [illegible] ಹುಬ್ಬಳ್ಳಿ, ಇವರು ಎಲ್ಲರೂ ಕೂಡಿ ೨೫೦೦ ಕಾಂ ಸಭಾಸದರನ್ನು ೭೫ ಸೇವಾದಳ ಸಭಾಸದರನ್ನು ಮಾಡುವ ನಿಶ್ಚಯಮಾಡಿರುವರು. ಇದೇ ಪ್ರಕಾರ ಬಾ ಗಲಕೋಟೆಯ ಎಸ್. ಪಿ. ಕಾಜಕರ್ಣಿಯವರು ೧೦೦೦ ಕಾಂ. ಸಭಾಸದರನ್ನು ೫೦ ಸೇವಾದಳ ಸ ಭಾಸದರನ್ನು ಕೂಡಿಸುವರು. ಬೆಳಗಾವ ಜಿಲ್ಲೆ ಯಲ್ಲಿ ಜಿಲೆ ಮತ್ತು ಕೊಗನೋ [illegible] ಕೂಡಿ ೨೦೦೦ ಕಾಂ. ಸಭಾಸದರನ್ನು ಮಾಡುವರು. [illegible] ವೆಂಕಟರಮಣಾಚ್ಯವರು ೫೦೦ ಕಾಂ. ಸಭಾಸದ ರನ್ನು ೩೦ ಸೇವಾದಳ ಸಭಾಸದರನ್ನು ಮಾಡುವರು ಬಳ್ಳಾರಿಯಲ್ಲಿ [illegible] ೧೦೦೦ ಕಾಂ. ಸಭಾಸದರನ್ನು ಹಾಗೂ ೫೦ ಸೇವಾದಳ ಸಭಾಸದ ರನ್ನು ಮಾಡಬೊಪ್ಪಿರುವರು. ಹೀಗೆ ಒಟ್ಟು ಸಂ ಖ್ಯೆ ೧೧,೦೦೦ ಕಾಂ. ಸಭಾಸದರೂ ೫೦೦ ಸೇವಾ ದಳ ಸಭಾಸದರೂ ಆಗುವರು.

ಈ ಕೆಲಸಗಾರರು ತಮ್ಮ ಜಿಲ್ಲೆಯಲ್ಲಿ ಸಾ ಗಲೀ ಬೇರೆ ಜಿಲ್ಲೆಯಾಗಲೀ ಕೆಲಸ ಮಾಡುವರು. ಶ್ರೀ. ಬಸರೂರ, ಕಲ್ಯಾಣಪುರದ ಹಾಗೂ ಗುರು ವಾಡಿ ಇವರು ತಾವು ಅವರವಾರ ಜಿಲ್ಲೆಯಲ್ಲಿ ೨೦೦೦ ಸಭಾಸದರನ್ನು ಕೂಡಿಸುವರೆಂದು ವಚನ ಕೊಟ್ಟಿ ದ್ದಾರೆ. ಮಂಗಳೂರ ಜಿ. ಕಾ. ಕಮಿಟಿಯವರು ೩೦೦೦ ಸಭಾಸದರನ್ನು [illegible] ರಗಳಿಸವರು ೫೦೦ ಸಭಾ[illegible] ಮಾಡಬೊ ಪ್ಪಿರುವರು. ಈ ಜಿಲ್ಲೆಗಳಲ್ಲಿ [illegible] ಗಳ ಹೆಸರುಗಳನ್ನು ನಾವು [illegible] ಡುವೆವು.

ಇದಲ್ಲದೆ ೧ ೦. [illegible] ರೂ. ಈ ಪ್ರಕಾ[illegible] ೫೦೦೦ ರೂ ಮ [illegible] ಇವುಗಳನ್ನು [illegible] ಹೊಸಕೊಪ್ಪ ಕೃಷ್ಣ [illegible] ರು. ಮೇಲ್ಕಾಣಿಸಿದ [illegible] ಅವು ಕೊಡಲ್ಪಡುವು.

ಪ್ರತಿಸಂಚಾಲಕ [illegible] ತಮ್ಮ [illegible] ಕಾಲ್ಗದೆ ನಡೆಯುವಂತೆ [illegible] ಕಾಂಗ್ರೆಸ ಕಮಿಟಿ ಗೆ ಹೇಳಕಳಿಸುವದಕ್ಕಾಗಿದೆ ಪ್ರತಿಯೊಬ್ಬ [illegible] ಅರತ ಬಳಿಗೆ ನಾನು ಸ್ವಂತ [illegible] ಯೋಗ್ಯ ತಾಪತ್ರವು ಇರುವದು. [illegible] ಕರ್ನಾಟಕ ಕಚೇರಿ[illegible] ಕಳುಹಿಸಲ್ಪಟ್ಟಿರುವದು.

ಶಾಲೆಮಾರಿಕ್ಕೆ ಪ್ರತಿಭಾ ದಲ್ಲಿಯ ಕಾರ್ಯ ದ ಪರದಿಯು ಪ್ರಸಿದ್ಧ ಮಾಡಲ್ಪಡುವದು ಮುಂ ಗಳವಾರಕ್ಕಿಂತ ಮೊದಲು ನಮಗೆ ಮುಟ್ಟುವಂತೆ ವಾರದ ವರದಿಯನ್ನು ಪ್ರತಿಯೊಬ್ಬ ಕೆಲಸಗಾರನು ಕಮ್ಮ ಕಳಿಸೀ ಕಳಿಸತಕ್ಕದ್ದು.

(೪) ಈ ಭಾಗದಲ್ಲಿ ಗೊಬ್ಬರದ ಪುರವಠೆಯು ಬಹಳ ಕಡಿಮೆಯಾಗುತ್ತಿದೆ. ಅದನ್ನು ಹೆಚ್ಚಿಸಲಿಕ್ಕೆ ಇತರ ಉಪಾಯಗಳೊಂದಿಗೆ ಮುಳಗಳ್ಳಿಯಂಥ ಹಸಿರೇ ಗೊಬ್ಬರವನ್ನು ತಯಾರಿಸುವ ಕ್ರಮವನ್ನು ಆದಷ್ಟು ತೀವ್ರ ತಿಳಿಸಿಕೊಡಲಿಕ್ಕೆ ಸಂಬಂಧಿಸಿದ ಅಧಿಕಾರಿಗಳಿಗೆ ಒಪ್ಪಿಸಿಕೊಡಲಿಕ್ಕೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೫) ಈ ಭಾಗದಲ್ಲಿ ಬೆಳೆಯುತ್ತಿರುವ ಹತ್ತೀ ಬೆಳೆಯಲ್ಲಿ ಸುಧಾರಣೆಯನ್ನು ಮಾಡಲಿಕ್ಕೆ ಯುಕ್ತಿಸುವಂತೆ ಕೆಂಪುಜೋಳ, ಬಿಳಿಜೋಳ, ಸಜ್ಜೆ, ಸವಣೆ, [illegible] ಮೊದಲಾದ ಎಲ್ಲ ಧಾನ್ಯಗಳ ಬೀಜಗಳನ್ನು ಸುಧಾರಿಸಿ, ಅಂಥಾ ಬೀಜಗಳನ್ನು ತೀವ್ರ ಪ್ರಸಾರಿಸಿ ಕೊಡಲಿಕ್ಕೆ ತಜ್ಞ ಅಧಿಕಾರಿಗಳಿಗೆ ಒಪ್ಪಿಸಿ ಕೊಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೬) ಈ ತಾಲೂಕಿನಲ್ಲಿ ಒಕ್ಕಲುತನದ ಖಾತೆಯ ಸುಧಾರಣೆ [illegible] ಪ್ರಮಾಣದ ಮೇಲೆ ಪ್ರಚಾರ [illegible] ತಾಲೂಕಿನ ಡೆಮ್ನಾ[illegible] [illegible] ಒಬ್ಬ ಫೀಲ್ಡ ಮನ್ನನನ್ನು [illegible] ಕೊಡಲಿಕ್ಕೆ ಮೆ. ಡಾಯರೆಕ್ಟರ [illegible] ಒಕ್ಕಲುತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೭) ಈ ತಾಲೂಕಿನಲ್ಲಿ [illegible] ಭೂಮಿಯು ಮತ್ತು [illegible] ಪ್ರಮಾಣದ ಅಂತರವು ಬಹಳ [illegible] ದಿಂದ ಹೊತ್ತಿಗೆ ಸರಿಯಾಗಿ ಭೂಮಿಗೆ [illegible] ಆಗುವ ಎಲ್ಲ ಮಳೆಯು ಉಪಯೋಗವಾಗದೆ ದುರ್ಭಿಕ್ಷಗಳು ಹೆಚ್ಚಾಗುತ್ತವೆ. ಈ ಭಾಗದಲ್ಲಿ ಒಂದು ಮೋಟಾರ ಟಂಟೆಯನ್ನು ಭಾಡಿಗೆಯಿಂದ ಪೂರೈಸಿದರೆ ಜನರು ಅದರ ಅನುಕರಣಮಾಡಿ, ಕೆಲಮಟ್ಟಿಗೆ ಮೇಲೆ ಹೇಳಿದ ಸಂಕಟದ ನಿವಾರಣೆಯಾಗುವದು. ಆದ್ದರಿಂದ ಈ ಭಾಗಕ್ಕೆ ಈಗಲೇ ಒಂದು ಮೋಟಾರ ಟಂಟೆಯನ್ನು ಭಾಡಿಗೆ ಇಡಬೇಕೆಂದು ಮೆ. ಡಾಯರೆಕ್ಟರ ಸಾಹೇಬ, ಒಕ್ಕಲುತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೮) ಮೋಟಾರ ಟ್ರ್ಯಾಕ್ಟರಕ್ಕೆ ಯಾವ ಯಂತ್ರವನ್ನು ಹೂಡಿದರೆ, ಜವಾರಿ ಹತ್ತೀ ಕಟ್ಟಿಗೆಗಳನ್ನು ಕಿತ್ತಿಕೊಡಲಿಕ್ಕೆ ಪೂರೈಸುವದೆಂಬದನ್ನು ಪರೀಕ್ಷಿಸಿ, ಈ ಕೆಲಸಕ್ಕೆ ಉಪಯೋಗವಾಗುವಂಥ ಒಂದು ಯೋಗ್ಯ ಯಂತ್ರವನ್ನು ಮೋಟಾರ ಟ್ರ್ಯಾಕ್ಟರದೊಂದಿಗೆ ಇದೇ ವರ್ಷ ಈ ಭಾಗದ ರೈತರ ಉಪಯೋಗಕ್ಕೆ ಕೊಡಮಾಡಬೇಕೆಂದು ಮೆ. ಡಾಯರೆಕ್ಟರ ಸಾಹೇಬ, ಒಕ್ಕಲುತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೯) ಬೇರೆ ಬೇರೆ ತರದ ಕಪ್ಪು ಭೂಮಿಗಳನ್ನು ಪರೀಕ್ಷಿಸಿ ಅವುಗಳನ್ನು ಹಾಗೆ ಸುಧಾರಿಸಬೇಕೆಂಬುವದನ್ನು ರೈತರು ಮನಗಾಣುವಂತೆ, ಒಕ್ಕಲುತನದ ಖಾತೆಯವರು ಒಂದು ಮಾದರಿಯನ್ನು ಮಾಡಿ ತೋರಿಸಬೇಕೆಂದು ಮೆ. ಡಾಯರೆಕ್ಟರ ಸಾಹೇಬ, ಒಕ್ಕಲುತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೦) ಗದಗ ಮತ್ತು ರೋಣ ತಾಲೂಕಿನ ಹದ್ದಿನಲ್ಲಿರುವ ಅಡವೀ ದನಗಳ ಹಿಂಡುಗಳನ್ನು ಒಂದನ್ನು ಬಿಡದೆ ಎಲ್ಲ ದನಗಳನ್ನು ಜೀವಂತ ಹಿಡಿಯುವ ಕೆಲಸವನ್ನು ಮಾಡಬೇಕೆಂದು ಮೆ. ಡಾಯರೆಕ್ಟರ ಸಾಹೇಬ, ಒಕ್ಕಲುತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೧) ಜಿಗರಿಗಳ ಹಿಂಡುಗಳಿಂದಲೂ, ಕಾಡುಮಿಕಗಳಿಂದಲೂ ಬೆಳೆಗಳಿಗೆ ಬಹಳೇ ಲುಕ್ಸಾನವಾಗುತ್ತದೆ. ಈ ಅಡವೀ ಮೃಗಗಳ ಕಾಟವನ್ನು ತಪ್ಪಿಸಿಕೊಳ್ಳಲಿಕ್ಕೆ, ಅವುಗಳ ಬಾಧೆ ಇರುವ ಪ್ರತಿಯೊಂದು ಗ್ರಾಮದಲ್ಲಿ ೧೫-೧೬ ಜನರಿಗೆ ಗುರಿ ಹೊಡಿಯಲಿಕ್ಕೆ ಕಲಿಸಿಕೊಡಲಿಕ್ಕೂ, ಅವರಲ್ಲಿ ಬೇಕಾದ ಎಂಟು ಜನರು, ಬೆಳೆಗಳು ಇರುವಾಗ ಆ ಗ್ರಾಮದ ಬೆಳೆಗಳ ಸಂರಕ್ಷಣೆಗೋಸ್ಕರ ಎಂಟು ಬಂದೂಕುಗಳನ್ನು ಉಪಯೋಗಿಸಲಿಕ್ಕೆ ಪರವಾನಿಗಿ ಕೊಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೧೨) ಕಪ್ಪತಗುಡ್ಡದಲ್ಲಿರುವ ಬಂಗಾರದ ಖಣಿಗಳ ಗುಂಡಿಗಳಲ್ಲಿರುವ ನೀರನ್ನು ಪರೀಕ್ಷಿಸಿ ಈ ನೀರು ಬಾಗಾಯತ ಪೈರು ಮಾಡಲಿಕ್ಕೆ ಯೋಗ್ಯವಿದ್ದರೆ, ಹಣ್ಣುಹಚ್ಚಿ ತೋಟಗಳನ್ನು ಮಾಡಲಿಕ್ಕೆ ಈ ನೀರಿನ ಪುರವಠೆ ಮಾಡುವ ಕೆಲಸವನ್ನು ಕೈಕೊಳ್ಳಲಿಕ್ಕೆ ಮೆ. ಡಾಯರೆಕ್ಟರ ಸಾಹೇಬ, ಒಕ್ಕಲುತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೩) ಕಪ್ಪತಗುಡ್ಡದ ಪ್ರದೇಶದಲ್ಲಿಯ ಎಲೆಬಳ್ಳಿಯ ತೋಟಗಳೆಲ್ಲ ನೀರಿನ ಕೊರತೆಯಿಂದ ಹಾಳಾಗಿರುತ್ತವೆ. ಅಲ್ಲಿಯ ಬಾವಿಗಳಿಗೆ ಆಳುಗಳಿಂದ ನಡಿಸುವ ಬೋರಿಂಗ ಮಶಿನದ ಉಪಯೋಗವಾಗುವದಿಲ್ಲ. ಆದದ್ದರಿಂದ ಇಂಜಿನದಿಂದ ನಡೆಯುವ ಡ್ರಿಲಿಂಗ ಮಶೀನ ಹಚ್ಚಿ ಅಥವಾ ಬೇರೆ ಉಪಾಯದಿಂದ ಒಂದು ಬಾವಿಯಲ್ಲಾದರೂ ಸಾಕಷ್ಟು ನೀರಿನ ಪುರವಠೆಯನ್ನು ಮಾಡಿ ತೋರಿಸಿಕೊಡುವ ಕೆಲಸವನ್ನು ತಾವೇ ಕೈಕೊಳ್ಳಬೇಕೆಂದು ಒಕ್ಕಲುತನದ ಅಧಿಕಾರಿಗಳಿಗೆ ವಿನಂತಿ ಮಾಡಿಕೊಳ್ಳಬೇಕು.

(೧೪) ಗದಗ-ಬಂಕಾಪುರದ ಲೈನಕ್ಕೆ ಒಂದು ಶಾಖೆಯನ್ನು [illegible]ಯಿಂದ ಮುಳಗುಂದಕ್ಕೆ ಕೂಡಿಸಿಕೊಡಲಿಕ್ಕೆ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿಗೆ ವಿನಂತಿ ಮಾಡಿಕೊಳ್ಳಬೇಕು.

(೧೫) ಈ ತಾಲೂಕಿನಲ್ಲಿ ಶಕ್ಯವಿದ್ದಂಥ ಭಾಗಗಳಲ್ಲಿ ಇರಿಗೇಶನ ಸೊಸಾಯಿಟಿಗಳನ್ನು ಸ್ಥಾಪನಾ ಮಾಡಲಿಕ್ಕೆ ಲ್ಯಾಂಡ ಡೆವ್ಹಲಪಮೆಂಟ ಆಫೀಸರರನ್ನು ಮತ್ತು ಮಾಯಿನರ ಇರಿಗೇಶನ ಸ್ಕೀಮದ ಆಫೀಸರರನ್ನು ಯೋಗ್ಯ ಸ್ಥಳಗಳನ್ನು ಗೊತ್ತು ಮಾಡಲಿಕ್ಕೆ ಕಳಿಸಬೇಕೆಂತಾ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೧೬) ಪ್ರಾಥಮಿಕ ಶಾಲೆಗಳ ಶಿಕ್ಷಣಕ್ರಮದಲ್ಲಿ ಒಕ್ಕಲುತನ, ಸಹಕಾರ ಮತ್ತು [illegible]

ಗಳ ವಿಷಯಗಳನ್ನು ಸೇರಿಸಬೇಕೆಂದು ಡಿಸ್ಟ್ರಿಕ್ಟ ಲೋಕಲಬೋರ್ಡಿನವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೭) ಮೋಫತ ವ ಸಕ್ತೀ ಶಿಕ್ಷಣವನ್ನು ಆದಷ್ಟು ತೀವ್ರ ಅಮಲಿನಲ್ಲಿ ತರಲಿಕ್ಕೆ ತಗಿದ್ದ ಹಣದಿಂದ ಡಿಸ್ಟ್ರಿಕ್ಟ ಲೋಕಲಬೋರ್ಡಗೆ ಶಕ್ಯವಿರದಿದ್ದರೆ ಲೋಕಲ ಫಂಡ ಆಕರಣೆಯನ್ನು ಪ್ರತಿ ಒಂದು ಆಣೆಯ ವರೆಗೆ ಏರಿಸಬಹುದು. ಈ ಹಣವನ್ನು ಕೇವಲ ಸಕ್ತಿ ಶಿಕ್ಷಣಕ್ಕೇನೇ ಉಪಯೋಗಿಸಬೇಕೆಂದು ಡಿಸ್ಟ್ರಿಕ್ಟ ಲೋಕಲಬೋರ್ಡಿನವರಿಗೆ ತಿಳಿಸಬೇಕು.

(೧೮) ರೈತರನ್ನು ಹಳೇ ಸಾಲಗಳಿಂದ ಮುಕ್ತ ಮಾಡಲಿಕ್ಕೆ ಕೋಆಪರೇಟಿವ್ಹ ಲ್ಯಾಂಡ ಮಾರ್ಗೇಜ ಬ್ಯಾಂಕುಗಳನ್ನು ಸ್ಥಾಪಿಸಲಿಕ್ಕೆ ತೀವ್ರ ಪರವಾನಿಗೆ ಕೊಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೧೯) ಮ್ಯುನ್ಸಿಪಾಲಿಟಿ ಮತ್ತು ಡಿಸ್ಟ್ರಿಕ್ಟ ಲೋಕಲ ಬೋರ್ಡುಗಳ ರಸ್ತೆಗಳ ಮೇಲಿನ ಜಕಾತಿ ಕಟ್ಟೆಗಳನ್ನು ತೆಗೆದು ಹಾಕಬೇಕೆಂದು ಸರಕಾರಕ್ಕೆ ವ ಡಿಸ್ಟ್ರಿಕ್ಟ ಲೋಕಲ ಬೋರ್ಡಗೆ ವಿನಂತಿ ಮಾಡಿಕೊಳ್ಳಬೇಕು.

ಜಾತೀಯ ಜಗಳಗಳನ್ನು ಹ್ಯಾಗೆ ತಪ್ಪಿಸಬೇಕು.

ಜಾತೀಯ ಜಗಳಗಳನ್ನು ಹ್ಯಾಗೆ ತಪ್ಪಿಸಬೇಕೆಂದು ದೇಶದೊಳಗಿನ ಯಾವತ್ತು ಮುಖಂಡರು ವಿಚಾರ ಮಾಡತೊಡಗಿದ್ದಾರೆ. ಕಲಕತ್ತೆಯಲ್ಲಿ ಆದ ಹಿಂದೂ ಮುಸಲಮಾನ ದೊಂಬಿಯನ್ನು ನೋಡಿ ನಮ್ಮ ದೇಶದ ಗತಿಯು ಇನ್ನು ನೆಟ್ಟಗಾಗುವದಿಲ್ಲೆಂದು ಎಲ್ಲರೂ ಹೆದರಿದ್ದಾರೆ, ಬಂಗಾಲದಂತೆಯೇ ಬಿಹಾರದಲ್ಲಿಯೂ ಹಿಂದೂ ಮುಸಲಮಾನ ಜಾತೀಯ ಜಗಳಗಳು ತಲೆ ಎತ್ತಲಿಕ್ಕೆ ಆರಂಭವಾದ ಕಾಲದಲ್ಲಿ ಅಲ್ಲಿಯ ಒಬ್ಬ ಮುಸಲಮಾನ ಪ್ರಮುಖ ರಾಜಕೀಯ ಮುಂದಾಳುಗಳಾದ ಮಿ. ಮಜರುಲ್ಲಹಕ್ಕರು ಇತರ ಮುಸಲಮಾನ ಪ್ರಮುಖ ಗೃಹಸ್ಥರನ್ನೂ ಹಿಂದೂ ಪ್ರಮುಖ ಗೃಹಸ್ಥರನ್ನೂ ಕೂಡಿಕೊಂಡು ಅಲೆಕ್ಶನ್ನಿನಲ್ಲಿ ಹಿಂದೂ ಜನರಿಗೆ ಮುಸಲ್ಮಾನರ ವಿರುದ್ಧವಾಗಿ ಏನಾದರೂ ದೂರುಗಳನ್ನು ತಿಳಿಸತಕ್ಕದ್ದಿದ್ದರೆ ಅವರು ಮುಸಲಮಾನ ಕಾಂಗ್ರೆಸ್ಸ ಮುಂದಾಳುಗಳಿಗೆ ತಿಳಿಸಬೇಕೆಂತಲೂ ಮುಸಲ್ಮಾನರಿಗೆ ಹಿಂದೂ ಜನರ ವಿರುದ್ಧವಾಗಿ ಏನಾದರೂ ದೂರುಗಳನ್ನು ತಿಳಿಸತಕ್ಕದ್ದಿದ್ದರೆ ಅವರು ಹಿಂದೂ ಕಾಂಗ್ರೆಸ್ಸ ಮುಂದಾಳುಗಳಿಗೆ ತಿಳಿಸಬೇಕೆಂತಲೂ ಪ್ರಸಿದ್ಧ ಮಾಡಿರುತ್ತಾರೆ. ಈ ಪ್ರಕಾರ ಹಿಂದೂ ಮುಸಲ್ಮಾನ ಪ್ರಮುಖ ಗೃಹಸ್ಥರು ಕೂಡಿಕೊಂಡು ಒಮ್ಮತದಿಂದ ಕೆಲಸ ಮಾಡಲಿಕ್ಕೆ ಹತ್ತಿದರೆ ಜಾತೀಯ ಜಗಳಗಳು ಆಗುವ ಸಂಭವವಿಲ್ಲ. ಹಿಂದೂ ಜನರ ಏಳಿಗೆಯನ್ನು ನೋಡಿ ಮುಸಲ್ಮಾನರಿಗೆ ಹೊಟ್ಟೆಕಿಚ್ಚು ಮತ್ತು ಮುಸಲ್ಮಾನರ ಏಳಿಗೆಯನ್ನು ನೋಡಿ ಹಿಂದೂ ಜನರಿಗೆ ಹೊಟ್ಟೆಕಿಚ್ಚು ಆಗಲಿಕ್ಕೆ ಹತ್ತಿದ ಕಾಲದಲ್ಲಿ ಜಾತೀಯ ಜಗಳಗಳು ಒಂದಿಲ್ಲೊಂದು ಕಾರಣದಿಂದ ಹೊರಡುತ್ತವೆ. ಸರಕಾರಿ ನೌಕರಿಗಳು, ಸರಕಾರಿ ಪದವಿಗಳು, ಲೆಜಿಸ್ಲೇಟಿವ್ಹ ಅಸೆಂಬ್ಲಿಯ ಚುನಾವಣೆಯು, ಕಾಯದೆ ಕೌನ್ಸಿಲ ಮೆಂಬರ ಚುನಾವಣೆಯು, ಮ್ಯುನಿಸಿಪಾಲಿಟಿ ಚುನಾವಣೆಯು ಲೋಕಲ ಬೋರ್ಡ ಚುನಾವಣೆಯು ಇವೇ ಮೊದಲಾದ ವಿಷಯಗಳ ಸಂಬಂಧವಾಗಿ ಅಸಮಾಧಾನವನ್ನು ಹುಟ್ಟಿಸಿ ಜಾತೀಯ ಜಗಳಗಳನ್ನು ಬೆಳೆಸುತ್ತವೆ. ಈ ಜಗಳಗಳು ಬರೇ ಹಿಂದೂ ಮುಸಲ್ಮಾನರೊಳಗಿನ ಜಗಳಗಳಿಗೆ ಸಂಬಂಧಪಟ್ಟಿಲ್ಲ. ಬ್ರಾಹ್ಮಣ ಬ್ರಾಹ್ಮಣೇತರರೊಳಗಿನ ಜಗಳಗಳಿಗೂ ಕ್ರಿಶ್ಚನ್ನ ಮತ್ತು ನಾನ ಕ್ರಿಶ್ಚನ್ನ ಜನರ ಜಗಳಗಳಿಗೂ ಕಪ್ಪು ಮತ್ತು ಬಿಳಿ ಜನರ ಜಗಳಗಳಿಗೂ ಸಹ ಸಂಬಂಧವಿರುತ್ತದೆ. ಆದ್ದರಿಂದ ಈ ಜಗಳಗಳ ಬೀಜವನ್ನೇ ಸುಟ್ಟು ಬಿಡುವದು ಯೋಗ್ಯವಾಗಿ ಕಾಣುತ್ತದೆ. ಇದೇ ಉದ್ದೇಶದಿಂದ ಸರ ತೇಜ ಬಹಾದ್ದೂರ ಸಪ್ರು ಇವರು ಯಾವ ಭಾಗದಲ್ಲಿ ಅಥವಾ ಯಾವ ಊರಲ್ಲಿ ಜಾತಿ ದ್ವೇಷಗಳು ಹೆಚ್ಚಾಗಿ ಜಾತೀಯ ಕಲಹಗಳು ಬೆಳೆದು ಶಾಂತತಾಭಂಗವು ಆಗುತ್ತದೋ ಅಂಥಲ್ಲಿಯ ಜನರ ರಾಜಕೀಯ ಹಕ್ಕುಗಳನ್ನು ಕಸಕೊಳ್ಳಬೇಕು. ಹಾಗೂ ಅಂಥವರಿಗೆ ಮ್ಯುನಿಸಿಪಾಲಿಟಿ ಲೋಕಲಬೋರ್ಡುಗಳಲ್ಲಿ; ಲೆಜಿಸ್ಲೇಟಿವ್ಹ ಅಸೆಂಬ್ಲಿಯಲ್ಲಿ ಮತ್ತು ಪ್ರಾಂತಿಕ ಕಾಯದೆ ಕೌನ್ಸಿಲುಗಳಲ್ಲಿ ಉಮೇದವಾರರಾಗಿ ನಿಲ್ಲಲಿಕ್ಕೆ ಕೊಡಬಾರದು ಮತ್ತು ಅಂಥವರಿಗೆ ಮತಗಳನ್ನು ಕೊಡುವ ಹಕ್ಕನ್ನು ಇರಗೊಡಬಾರದು ಎಂದು ಸೂಚನೆಯನ್ನು ಮಾಡಿರುತ್ತಾರೆ. ಸರ ತೇಜಬಹಾದ್ದೂರ ಸಪ್ರು ಇವರ ಅಭಿಪ್ರಾಯವನ್ನು ಪಂಡಿತ ಮೋತೀಲಾಲ ನೆಹರೂ ಇವರು ಪೂರ್ಣವಾಗಿ ಮಾನ್ಯ ಮಾಡುವದಲ್ಲದೆ ಇಂಥ ಜನರಿಗೆ ಸರಕಾರಿ ನೌಕರಿ ಮತ್ತು ಸರಕಾರಿ ಪದವಿ ಮುಂತಾದ್ದನ್ನು ಕೊಡಬಾರದೆಂದು ಸಹ ಸೂಚನೆಯನ್ನು ಮಾಡಿರುತ್ತಾರೆ. ಈ ಬಗ್ಗೆ ಕೆಲವು ಕೇಸರಿ ಪತ್ರದವರು ಬರೆಯುವಾಗ ತಮ್ಮ ಅಭಿಪ್ರಾಯವನ್ನು ಸರ ತೇಜಬಹಾದ್ದೂರ ಸಪ್ರು ಮತ್ತು ಪಂಡಿತ ಮೋತೀಲಾಲ ನೆಹರೂ ಇವರ ಸೂಚನೆಯ ವಿರುದ್ಧವಾಗಿ ಬರೆದಿರುತ್ತಾರೆ. ಕೇಸರಿಕಾರರು ಅನ್ನುವದೇನೆಂದರೆ- "ಜಾತೀಯ ಜಗಳಗಳನ್ನು ಬೆಳೆಸಿ ಶಾಂತತಾಭಂಗ ಮಾಡುವವರು ಅಶಿಕ್ಷಿತರೂ ಮನೆಮಾರು ಇಲ್ಲದವರೂ ಸಮಾಜದಲ್ಲಿ ಏನೂ ಯೋಗ್ಯತೆ ಇಲ್ಲದವರೂ ಇರುತ್ತಾರೆ. ಸುಶಿಕ್ಷಿತರೂ ಲೆಜಿಸಲೇಟಿವ್ಹ ಅಸೆಂಬ್ಲಿ, ಪ್ರಾಂತಿಕ ಕಾಯದೆ ಕೌನ್ಸಿಲ, ಮುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳ ಚುನಾವಣೆಯ ಉಮೇದವಾರರೂ ಈ ಗೊಂದಲದಲ್ಲಿ ಎಂದೂ ಬೀಳುವದಿಲ್ಲ." ಕೇಸರಿಕಾರರು ತೋರಿಸುವ ಕಾರಣವು ನಮಗಂತೂ ಮಾನ್ಯವಿಲ್ಲ. ಸರಕಾರಿ ನೌಕರಿಗಳ ಸಲುವಾಗಿಯೂ ಸರಕಾರಿ ಪದವಿಗಳ ಸಲುವಾಗಿಯೂ ಅಸೆಂಬ್ಲಿ, ಕೌನ್ಸಿಲ ಮತ್ತು ಮ್ಯುನಿಸಿಪಾಲಿಟಿ ಲೋಕಲಬೋರ್ಡುಗಳ ಚುನಾವಣೆಯ ಸಲುವಾಗಿಯೂ ಬಂಕೆಯು ಮೊದಲಿಗೆ ಹುಟ್ಟಿ ಬೇರೆ ಬೇರೆ ತರದಿಂದ ಜಾತೀಯ ಜಗಳಗಳು ಬೆಳೆಯುತ್ತವೆಂದು ಸೂಕ್ಷ್ಮವಾಗಿ ಪರೀಕ್ಷೆ ಮಾಡುವವರಿಗೆ ತಾನೇ ತಿಳಿಯುವದು. ಜಾತೀಯ ಜಗಳಗಳನ್ನು ಮಾಡುವ ಸುಶಿಕ್ಷಿತರು ಮತ್ತು ಚುನಾವಣೆಗಳ ಉಮೇದವಾರರು ತಾವೇ ಪ್ರತ್ಯಕ್ಷವಾಗಿ ನಿಂತುಕೊಂಡು ಶಾಂತತಾಭಂಗವನ್ನು ಮಾಡದಿದ್ದರೂ ಅಶಿಕ್ಷಿತರಿಗೆ ಮತ್ತು ಬದಮಾಷರಿಗೆ ಶಾಂತತಾಭಂಗ ಮಾಡಲಿಕ್ಕೆ ಅಂತರಂಗದಲ್ಲಿಯೇ ಉತ್ತೇಜನ ಕೊಡುತ್ತಾರೆ. ಆದ್ದರಿಂದ ಇಂಥವರ ರಾಜಕೀಯ ಹಕ್ಕುಗಳನ್ನು ಕಸಿದುಕೊಳ್ಳುವದು ಉತ್ತಮವಾದ ಉಪಾಯವೆಂದು ನಮ್ಮ ಅಭಿಪ್ರಾಯವಿರುತ್ತದೆ.

ಚಂದ್ರೋದಯ.

ಮದ್ರಾಸ ಸರಕಾರದವರು ತಮ್ಮ ಇಲಾಖೆಯಲ್ಲಿರುವ ಸಾರ್ವಜನಿಕ ವಾಚನಾಲಯಗಳ ಪೋಷಣಾರ್ಥವಾಗಿ ಮುನಸಿಪಾಲಿಟಿಗಳಿಗೂ ಲೋಕಲ್ಲಬೋರ್ಡಗಳಿಗೂ ಗ್ರ್ಯಾಂಟು ಕೊಡುವದಕ್ಕಾಗಿ ೧,೭೦,೦೦೦ ರೂಪಾಯಿಗಳನ್ನು ತೆಗೆದಿಟ್ಟಿರುತ್ತಾರೆ

ಬಡೋದೆಯ ಮಹಾರಾಜರು ೧೭ ಸಾರೆ ವಿಲಾಯತಿ ಮೊದಲಾದ ಪರದೇಶಗಳಿಗೆ ಪ್ರಯಾಣ ಮಾಡುವದಕ್ಕಾಗಿ ೧ ಕೋಟಿ ರೂಪಾಯಿಗಳನ್ನು ಖರ್ಚ ಮಾಡಿರುತ್ತಾರೆಂದು ಕೇಸರಿ ಪತ್ರದ ವಾರ್ತಾದಾಯಕನು ತಿಳಿಸುತ್ತಾನೆ.

ಹಿಂದುಸ್ಥಾನದಲ್ಲಿ ಪ್ರತಿ ತಿಂಗಳ ೨೫೦೦೦ ರೂಪಾಯಿ ಕಿಮ್ಮತ್ತಿನ ಚಹಾ ಮಾರಾಟವಾಗುತ್ತದೆಂದು ಮುಂಬಯಿ ಕ್ರಾನಿಕಲ್ ಪತ್ರ ಬರೆಯುತ್ತದೆ.

ಜಾಹೀರಾತು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿ.

ಜವಳಿ ಪೇಟ ಧಾರವಾಡ

ಸ್ಥಾಪನಾ ೧೯೦೬.

೧೯೨೫ನೇ ಇಸ್ವಿಯ ಮುಂಬಯಿ ಕೋ ಆಪರೇಟಿವ್ಹ ಆಕ್ಟಿನ ಪ್ರಕಾರ ರಜಿಸ್ಟರ ಮಾಡಿರುತ್ತದೆ.

ಚಾಲತಿ ಠೇವು (Current Deposits) ಒಮ್ಮೆ ಇಟ್ಟ ಠೇವಿನ ಒಳಗಾಗಿ ಒಂದು ತಿಂಗಳ ವರೆಗಿನ ಠೇವಿಗೆ ೧೦೦ಕ್ಕೆ ೧ ವರ್ಷಕ್ಕೆ ೩ ೩/೪ದಂತೆ ಬಡ್ಡಿಯು ಕೊಡಲ್ಪಡುವದು.

ಚಾಲತಿ ಲೆಖ್ಖಕ್ಕೆ (Current Accounts) ದಿನದ ಶಿಲ್ಕಿನ ಮೇಲೆ ೧೦೦ಕ್ಕೆ ೧ ವರ್ಷಕ್ಕೆ ೨॥ ಯಂತೆ ಬಡ್ಡಿಯು ಕೊಡಲ್ಪಡುವದು.

ನಿಶ್ಚಿತ ಠೇವು (Fixed Diposit) ಇನ್ನೊಂದು ನೋಟೀಸು ಕೊಡುವವರೆಗೆ ಕೆಳಗೆ ಕಾಣಿಸಿದ ಅವಧಿಯು ನಿಶ್ಚಿತ ಠೇವಿಗೆ ಅದರ ಮುಂದೆ ತೋರಿಸಿದ ಬಡ್ಡಿಯು ಕೊಡಲ್ಪಡುವದು.

೩ ತಿಂಗಳಿಗೆ	೧೦೦ಕ್ಕೆ	೧ ವರ್ಷಕ್ಕೆ	೫ ರಂತೆ
೬ ,,	,,	,,	೫ ೧/೨ ,,
೯ ,,	,,	,,	೬ ,,
೧೨ ,,	,,	,,	೬ ೧/೨ ,,
೨೪ ,,	,,	,,	೭ ,,
೩೬ ,,	,,	,,	೭ ೧/೨ ,,
೪೮ ,,	,,	,,	೭ ೩/೪ ,,
೬೦ ,,	,,	,,	೮ ,,

ಚಕ್ಕುಗಳನ್ನು ಹುಂಡಿಗಳನ್ನು ಹಣ ವಸೂಲಿಗಾಗಲೀ ಹಣ ಕಳಿಸುವದಕ್ಕಾಗಲೀ ಕಡಿಮೆ ದರ ದಿಂದ ತೆಗೆದುಕೊಳ್ಳುವೆವು. ಹಾಗೂ ತಕ್ಕೊಳ್ಳುವೆವು.

ಮುಂಬಯಿ ಹುಂಡಿಗಳನ್ನು ಕೊಡುವೆವು. ಸರಕಾರೀ ಕಾಗದಗಳ ಮೇಲೆ ಅಥವಾ ಯೋಗ್ಯ ತಾರಣ ಗಳ ಮೇಲೆ ಸಾಲಗಳನ್ನು ಕೊಡುವೆವು.

ಬೇರೆ ಹೆಚ್ಚಿನ ಮಾಹಿತಿಗಾಗಲೀ ವ್ಯವಹಾರಗಳ ನಿಯಮ ಪತ್ರಿಕೆಗಳಿಗಾಗಲೀ ಆಫೀಸಿನಲ್ಲಿ ಸೆಕ್ರೆಟ ರಿಯವರ ಕಡೆಗೆ ಚೌಕಸಿ ಮಾಡಬೇಕು.

ತಾ॥ ೧೨-೬-೧೯೨೬

M. B JAKATI,
ಮ್ಯಾನೇಜಿಂಗ ಡಾಯರೇಕ್ಟರ

ಮಾತಾಡುವ ಔಷಧವು.

ಅಪ್ಪಾ! ಮಾತಾಡುವವರಿಲ್ಲೇ? ಕಟಿಗೆ ಕೈ ಹಚ್ಚಿಕೊಂಡು ಏಕೆ ಕೂತಿರುವಿ? ತಲೆನೋವೋ? ಹಲ್ಲುಶೂಲಿಯೋ? ಮೈಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು!

ಅಪ್ಪನು— ಕಂದಾ— ಹಾದು ಮೈಯ್ಯೆಲ್ಲಾ ನೋಯ್ಯುತ್ತದೆ.

ಕಂದ— ಹಾಗಾದರೆ ಮೋಹಿನಿ ಕ್ಯೂಯರ ತಕ್ಕೊಳ್ಳಿ. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೊಡುವಿ ಕಿಮ್ಮತ್ತು ೪೦ ಪೈಸು. ಎರಡೇ ಆಣೆ.

ಕಿಮ್ಮತ್ತಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ಮಿಳಿವ ಸ್ಥಳ— ದಿ [illegible] ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ ಸ್ಟೇಶನರೋಡ ಹುಬ್ಬಳ್ಳಿ

ದಿ ಅಂಗಡಿಗಿ ಬ್ಯಾಂಕ ಲಿಮಿಟೆಡ್

ಧಾರವಾಡ.

೧೯೧೬ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲತಿ ಖಾತೆ, ಠೇವು, ಸೇವಿಂಗ್ಸ ಡಿಪಾಜಿಟು ಸಾಲ ಪತ್ರ, ಹುಂಡಿ, ಮುಂತಾದ ಎಲ್ಲಾ ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಿಕೊಳ್ಳ ಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦, ಸಾಯಂಕಾಲ ೩ ರಿಂದ ೬ ರವರೆಗೆ ನಡೆ ಯುವದು.

K. B. Ankaligi
ಮಾಲಕ

ವಿಜಯದ ವರ್ಗಣೀ ದರ

ಪಿಕ್ಸಪತ್ರಕ್ಕೆ

೧೨ ತಿಂಗಳಿಗೆ		೧೨—೦—೦ ರೂ
೬	,,	೭—೦—೦ ರೂ
೩	,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ಹಣದ ಹಾಗೂ ಪತ್ರ ಕಳಿಸುವ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ಜಾಹೀರಾತಿನ ದರಗಳು.

ತಿಂಗಳು ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದಾಣೆ [illegible] ಪ್ರತಿಯೊಂದು ವಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆ ರು ಆಣೆ [illegible] ಕಾಲಮಿನ ಒಳಗಳಿಗೆ ಇಮ್ಮಡಿ [illegible] ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವರ್ಗಣೀದಾರರಿಗೆ ಸೂಚನೆ.

ಜನವರಿ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭ ವಾಗುವ ನಿತ್ಯ ಮತ್ತು ವಾರ ಪತ್ರದ ವರ್ಗಣೀದಾರರಿಗೆ ಹೊಸವರ್ಷದಿಂದ ವ್ಹಿ. ಪಿ. ಯನ್ನು ಕಳಿಸುವೆವು. ವರ್ಗಣೀ ದಾರರು ವ್ಹಿ. ಪಿ ಸ್ವೀಕಾರ ಮಾಡಿ ವಿಜಯವ ನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾ ರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

(R. N. B. 144)

ವಿಜಯ

ಸಿತ್ಯ ಪತ್ರ — ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ | ಧಾರವಾಡ ಶನಿವಾರ ತಾರೀಖು ೧೯ನೇ ಜೂನ ೧೯೨೬ | ಸಂಖ್ಯೆ ೧೩೯

ಸರಕಾರದಿಂದ ಪೆಟೆಂಟ ದೊರೆತದ



ಮಲ್ಹಾರ ಕಪ್ಪಲಿ.

ತೋಟಗರಿಂಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟಿದ ಕೂಡಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯು ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಿಗೆ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ

ನೋಟೀಸು

ರಾಂಬಾಯಿ ಕೋಂ ಲಕ್ಷ್ಮಣರಾವ ದೇಸಾಯಿ ಬಿಟ್ಟಿದ್ದಾಳೆ ಸಾಕಿನ ಸಂತಿ ಶಾಳಿಪಟ್ಟ ಶಾನಗರ್ ಇವರಿಗೆ-

ನಿಮಗೆ ನಿಃ ಮಾಡುವವರು ತಿಳಿಸುವದೇನೆಂದರೆ ನನ್ನನ್ನು ಬಿಟ್ಟು ಮಕ್ಕಳಿಯೊಡನೆ ನೀವು ತವರುಮನೆಯಲ್ಲಿ ನಿಂತಿದ್ದೀರಿ. ನೀವು ಸರಕಾರಿ ನೌಕರಿ ಕೆಲಸ ಮಾಡುವದು ಯಾವದು ಮಾಡಕೂಡದೆ ಸೋತಕ ಮುಕ್ತಿಸ್ಥಾನ ರ ನೋಡುವಂತೆ ಇರುತ್ತದೆ. ಅದು ಇವತ್ತಿನ ತಾರೀಖಿಗೆ ಸದರಿ ಬಿಟ್ಟು ಮುಕ್ತಿಯಾರ ನಾನು ಅಲ್ಲ ಅಂತ ತಿಳಿಯತಕ್ಕದ್ದು ತಾ|| ೧೬-೬-೨೬ ಇಸ್ವಿ.

ಮಾರ್ತಂಡಭಟ್ಟ ಚಿಂತಾಮಣಿಭಟ್ಟ ದೇಶಪಾಂಡೆ ಹಿರೆಮ್ಯಾಗೇರಿ ಮುಕ್ಕಾಂ ಧಾರವಾಡ.

ಮುಂದಿನ ... ಶಿಕ್ಷಣದ ಪ್ರಕಾರ ಒಬ್ಬ ... ಗೆ ... ಅವಶ್ಯಕವಾಗಿ ... ಸ್ವತಂತ್ರವಾಗಿ ... ಕೊಡುವ ... ವರು ಮಾಡತಕ್ಕ...

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ

ದುಂಗಳವಾರ ಪೇಟೆ ಧಾರವಾಡ.

ಕೋ. ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಜಿಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಾಯಂ ಮತ್ತು ಬೇರೆ ತರದ ಠೇವಣಿಗಳಿಗೆ ಹೆಚ್ಚಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮುಖ್ಯ ...

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳ ಕನ್ನೆರಡು ಆಣೆಯಂತಿರುತ್ತದೆ

ಎ. ಕೆ. ಚಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ಜೂ- ೧೯ -೬-೨೬ ನೇ ಇಸ್ವಿ

ಧಾರವಾಡದಲ್ಲಿ ಬ್ರಾಹ್ಮಣೇತರ ಪಕ್ಷದ ಪೂರ್ಣ ಪರಾಜಯ.

ಮೊನ್ನಿನ ದಿವಸ ಈ ಊರ ಮ್ಯುನಿಸಿಪಾಲಿಟಿ ಮೂರನೇ ವಾರ್ಡಿನ ಚು[illegible]ಣೆ ಕ್ಷನ ವಾಯಿತು. ಡಾಕ್ಟರ ರಾಘವೇಂದ್ರರಾವ ಶಿ[illegible]ಟ್ಟಿ ಮತ್ತು ಶ್ರೀ ರುದ್ರಯ್ಯನವರು ಹಿರೇಮಠ ಇ[illegible]ಬ್ಬರು ಉಮೇದವಾರರಾಗಿದ್ದರು. ಡಾಕ್ಟರ ಶಿರಹಟ್ಟಿಯವರು ಬ್ರಾಹ್ಮಣ- ಲಿಂಗಾಯಿತ- ಮುಸಲಮಾನ ಮೊದಲಾದ ಎಲ್ಲ ಕುಲಗಳ ಸಂಯುಕ್ತ ಮಂಡಲಕ್ಕೆ ಸೇರಿದವರು. ಶ್ರೀ ರುದ್ರಯ್ಯನವರು ಕೇವಲ ಬ್ರಾಹ್ಮಣೇತರ ಪಕ್ಷಕ್ಕೆ ಸೇರಿದವರು. ಈ ಪ್ರಕಾರ ಎರಡೂ ಪಕ್ಷಗಳು ಒಡೆದು ಕಾಣುತ್ತಿದ್ದವು. ಈ ವಾರ್ಡಿನಲ್ಲಿ ಬ್ರಾಹ್ಮಣರಿಗಿಂತ ಬ್ರಾಹ್ಮಣೇತರರ ಹೋಟಗಳು ಆರು ನೂರಕ್ಕಿಂತ ಹೆಚ್ಚಿರುವವು. ಆದರೆ ಚುನಾವಣೆಯಲ್ಲಿ ಡಾಕ್ಟರ ಶಿರಹಟ್ಟಿಯವರು ೫೦ ಕ್ಕಿಂತ ಹೆಚ್ಚು ಮತಗಳಿಂದ ಯಶಸ್ವಿಯಾದರು. ದೇಶಭಕ್ತ ವಿನಾಯಕರಾಯರ ಚುನಾವಣೆಯ ವೇಳೆಯಲ್ಲಿಯೇ ಬ್ರಾಹ್ಮಣೇತರರೆಂಬ ಈ ಹುಚ್ಚ ಮಂಡಳ ಪಕ್ಷಕ್ಕೆ ಅಳಿಗಾಲ ಬಂತೆಂದು ಕಂಡುಬಂತು. ಮುಂದಿನವನ ಕಾಲಿಗೆ ಹತ್ತಿದ ಪೆಟ್ಟಿನಿಂದ ಹಿಂದಿನವರು ಎಚ್ಚರಾಗಬೇಕಾಗಿತ್ತು. ಆದರೆ ಬ್ರಾಹ್ಮಣೇತರ ಸಂಘದವರು ಅನ್ಯರ ಮಕ್ಕಳನ್ನು ಬಾವಿಗೆ ತಳ್ಳಿ [illegible] ಎಷ್ಟು ಆಳು ಇರುವ್ವದೆಂಬ[illegible] [illegible] ನೋಡುವಂತೆ ಪ್ರತ್ಯಕ್ಷ ಕಂಡುಕೊಂಡರು. [illegible] ಎರಡು ಸಾರೆ ಈ ಪಕ್ಷವು ಕೈ[illegible] ಮಾಡಿಕೊಂಡಿತು. ಶ್ರೀ [illegible] ಚುನಾವಣೆಯಾಗಿದ್ದರೆ- ಈ ಪಕ್ಷವು [illegible] ಮುಖ ಕಂಡುತ್ತಿತ್ತು. [illegible]ದ್ದರೂ, ಮುಂದಾಗುವ ಪರಿಣಾಮ [illegible] ಚುನಾವಣೆಯೂ ಮುಗಿಯುತು [illegible] ಯುವದಕ್ಕೆ ಎಷ್ಟು ಪ್ರ[illegible]

[illegible] ಯಿಮ್ಮದ ಶುದ್ಧಿಗಾರರು [illegible] ಹಕ್ಕ ವ ಮುಂ[illegible]

[illegible] ದಾಳುಗಳಾದ ರಾ. ಬ ಕಂಬಳಿಯವರ ವಿಷಯವಾಗಿದ್ದ ಜನಾನುರಾಗವು ಕಡಿಮೆಯಾಗುತ್ತಿರುವದೆಂದು ಬರೆದಿರುತ್ತಾರಷ್ಟೆ, ರಾಣೆಬೆನ್ನೂರವಾಗಲಿ, ಹುಬ್ಬಳ್ಳಿಯಾಗಲಿ, ಎಲ್ಲಾದರೂ ಕೇವಲ ಬ್ರಾಹ್ಮಣೇತರ ಪಕ್ಷವೆಂಬದು ಹಿಂತೆ ಬೀಳುತ್ತಿರುವದೆಂ[illegible] ಕಂಡು ಬರುತ್ತಿರುವದು. ಅದೇ [illegible] ದಿಂದ, ಕ್ಷುದ್ರವಾದ ಸುದ್ದಿಗಾರರು ಹೇಳ[illegible] ನಂತೆ [illegible] ಬಿ ಎಲ್ ಪಾಟೀಲರು ಅಸೆಂಬ್ಲಿಯ ಚುನಾವಣೆಯಲ್ಲಿ ಶ್ರೀ ಬೆನವಿಯವ[illegible] ಸ್ಪರ್ಧೆ ಮಾಡಿ[illegible] ಹಿಂದು [illegible] ತ್ತಿರುವದು [illegible] ಬ್ರಾಹ್ಮಣೇತರ [illegible] [illegible] ಹಾರಿದ್ದ [illegible] ಪ್ರವಾಯು ಹಾಕುವ[illegible]ಕ್ಕಾಗಿ [illegible] ನಗಳ್ಳಿಯ ರಾಜರ ಅಧ್ಯಕ್ಷತೆ [illegible] ಮತ್ತು [illegible] ರುದ್ಧವಾಗಿ ಒಡ್ಡು ಹಾ[illegible] ದ ಠರಾವುಗಳ ಪರಿಣಾಮ [illegible]

ಬಂಗಾಲದ ಸ್ವರಾಜ್ಯ ಪಕ್ಷದಲ್ಲಿ ಐಕ್ಯ.

ಕೃಷ್ಣ ನಗರದಲ್ಲಿ ಕೂಡಿದ್ದ ಬಂಗಾಲದ ಪ್ರಾಂತಿಕ ಪರಿಷತ್ತಿನಲ್ಲಿ ತರುಣ ಬಂಗಾಲಿಗಳು ದೇಶಬಂಧು ದಾಸರು ಮಾಡಿಕೊಂಡಿದ್ದಂಥ ಹಿಂದೂ ಮುಸಲಮಾನ ಐಕ್ಯದ ಒಡಂಬಡಿಕೆಯು ಕಾಗದದ ಮೇಲೆ ನೀರೆರೆದರು. ಒಡಂಬಡಿಕೆಯು ಮುರಿದು ಹಿಂದೂ ಜನರು ಒಡೆದು ನಿಟ್ಟು, ಮುಸಲಮಾನರು ಮತ್ತೊಂದು ನಿಟ್ಟಾದರೆ- ಆಳರಸರಿಗೆ ಆನಂದಾತಿಶಯವಾಗಿ, ಅವರ ಸುದರ್ಶನ ಚಕ್ರವು ಹಿಂದುಸ್ಥಾನದ ಮೇಲೆ ನಿರಂತರವಾಗಿ ತಿರುಗಿ, ಪಾರತಂತ್ರ್ಯವೆಂಬದು ಆರ್ಯಮಾತೆಯ ಹಣೆಯಲ್ಲಿ ಬರೆದಂತಾಗತಕ್ಕದ್ದು. ಈ ಪಾರತಂತ್ರ್ಯ ತಪ್ಪಬೇಕೆಂದು ಕಲಕತ್ತೆ ಮತ್ತು ಬಂಗಾಲದಲ್ಲಿ ತಿಳಿದಂಥ ಎಷ್ಟೋ ಪ್ರಮುಖ ಮುಸಲಮಾನರಿದ್ದಾರೆ. ಇವರು ಮ[illegible] ಸ್ಲೀಗೆಗಳ ಮುಂದಿನ ವಾದ್ಯದ ಗದ್ದಲವನ್ನು ರಾಜ್ಯಕಾರಣದಲ್ಲಿ ಎಷ್ಟೂ ಸೇರ್ಪಡೆ ಮಾಡಗೊಟ್ಟಿಲ್ಲ. ಮೌಲಾನಾ ಅಬ್ದುಲ ಕಲಮ ಆಜಾದ ಮೊದಲಾದ ಮುಸಲಮಾನರು ಸ್ವರಾಜ್ಯ ಮತ್ತು ಹಿಂದೂ ಮುಸಲಮಾನ ಐಕ್ಯದ ಭಕ್ತರೇ ಆಗಿದ್ದಾರೆ. ಈ ಪ್ರಕಾರ ಕಲಕತ್ತೆಯಲ್ಲಿ ಹಿಂದೂ ಮುಸಲಮಾನ ಪ್ರಮುಖರಿಂದ ಕೂಡಿದ ಬಂಗಾಲದ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭೆಯಲ್ಲಿ ಕೃಷ್ಣನಗರದ ತರುಣ ಪಕ್ಷದವರು ಹಿಂದೂ ಮುಸಲಮಾನ ಒಡಂಬಡಿಕೆಯ ಕಾಗದವನ್ನು ರದ್ದು ಮಾಡಿದ ಠರಾವು ತಂದರು. ಆದರೆ ಅವರ ಬಹುಮತವಾಗಲಿಲ್ಲ. [illegible] ನೋಡಗುತ್ತಿವೇ ಬಹುಮತವಾಗಲಿ[illegible]

ತರುಣ ಪಕ್ಷೀಯರು ಸಭೆಬಿಟ್ಟು ಎದ್ದು ಹೋದರು. ಕೆಲವರು ರಾಜೀನಾಮೆ ಕೊಟ್ಟರು. ಬ್ಯಾರಿಸ್ಟರ ಸೇನಗುಪ್ತರು ಮುನಿಸುಗೊಂಡು ಎದ್ದು ಹೋದಂಥವರ ಬದಲಿ ಬೇರೆ ಗೃಹಸ್ಥರನ್ನು ಕಮಿಟಿಯಲ್ಲಿ ಸೇರಿಸಿಕೊಂಡದ್ದಲ್ಲದೆ, ಹಿಂದೂ ಮುಸಲಮಾನ ಪ್ರಮುಖರ ಸಹಿಯಿಂದ ಶಾಂತಿ ಸಮಾಧಾನ[illegible] ವಿನಂತಿ ಪತ್ರಿಕೆಯೊಂದನ್ನು ಪ್ರಸಿದ್ಧ ಮಾಡಬೇಕೆಂದ [illegible] ಮಾಡಿದ್ದಾರೆ. ಈ ಪೂರ್ವದಲ್ಲಿ ಬಂಗಾಲದ [illegible] ಸಂಚಾರ ಮಾಡಿ, ಶಾಂತಿ ಮ[illegible] ವಾನದ ಉಪದೇಶ ಮಾಡಬೇಕೆಂದು ಪ[illegible] ಬಿಟ್ಟಿರುತ್ತಾರೆ. ಬಹಾರದ ಹಿಂದೂ ಮ[illegible] ನ ಪ್ರಮುಖರಂತೆ ಬಂಗಾಲದ ಪ್ರಮು[illegible] ಕರ್ತವ್ಯ ಜಾಗೃತವಾದುದಕ್ಕೆ ಅವರನ್ನು [illegible] ದಿಸಿದರೂ ಸ್ವಲ್ಪೇ ಆಗುತ್ತದೆ.

[illegible] ಮುಕ್ಕಾಲು ಗಳಿಗೆಯ ಪೋಲೀಸ ಕಾಮ ದಾರರು

ಸಂಕಟ ಸಮಯದಲ್ಲಿ ನಾಗರಿಕರನ್ನು ಹಿಡಿದು ಅವರಿಗೆ ಪೋಲೀಸ ಡಗಲಿ ದಾ[illegible]ಕೆ, ಪೋಲೀಸ ಸಿಪಾಯಿ ಅಧವಾ ಕಾಮದಾರರಾಗಿ ಮಾಡುವಂತೆ ಇಂಗ್ರೇಜಿ ಸರಕಾರದ ಒಂದು ಕಾಯದೆಯುಂಟು ಈ ಕಾಯದೆಯ ಪ್ರಕಾರ ದಿಲ್ಲಿಯ ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಒಂದು ನೂರು ನಾಗರಿಕರನ್ನು ಪೋಲೀಸ ಆಪೀಸರರಾಗಿ ನೇಮಿಸಿ, ಬಕರೀದ ಹಬ್ಬದಲ್ಲಿ ಬಂದೋಬಸ್ತು ಇಡುವಂತೆ ಅವರಿಗೆ ಹುಕುಮ ಮಾಡಿ, ಕೆಲಸ ಮಾಡುವ ಕ್ರಮ ಮತ್ತು ಕೆಲಸದಲ್ಲಿ ವಿಮುಖರಾದರೆ- ಆಗತಕ್ಕ ಶಾಸನ ಇವೆರಡನ್ನು ತಿಳಿಸಿ, ಈ ಮುಕ್ಕಾಲು ಗಳಿಗೆಯ ಪೋಲೀಸ ಕಾಮದಾರರ ಹುದ್ದೆಯನ್ನು ಪಟ್ಟಣಿಗರು ಮನ್ನಿಸಲೇಬೇಕೆಂದು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಬಾಲ ವಿವಾಹದ ವಿರುದ್ಧ ಕೊಲ್ಹಾಪೂರ ದರಬಾರದ ಠರಾವು.

ಕೊಲ್ಹಾಪೂರ ಸಂಸ್ಥಾನದಲ್ಲಿ ಬಾಲವಿವಾಹಕ್ಕೆ ಪ್ರತಿಬಂಧ ಮಾಡಬೇಕೆಂದು ಮಹಾರಾಜರು ಒಂದು ಹುಕುಮನ್ನು ಜಾಹೀರ ಮಾಡಿದ್ದಾರೆ[illegible] ಅಲ್ಲಿ ಕಾಯದೆ ಕೌನ್ಸಿಲವಿಲ್ಲ. ಆದುದರಿಂದ ಮಹಾರಾಜರ ಹುಕುಮೇ ಕೌನ್ಸಿಲದಂಥ ಠರಾವಾ[illegible] [illegible]ಳಗಿನ ಹುಡುಗಿ ಮತ್ತು [illegible] [illegible]

ಹೂ ಹುಡುಗಿಯನ ವಿರುದ್ಧ ಮದಿವೆ ಮಾಡತಕ್ಕವರಿಗೆ ಎರಡು ಸಾವಿರ ರೂಪಾಯಿಗಳ ವರೆಗೆ ದಂಡ ಮತ್ತು ಈ ಮದಿವೆಗಳಿಗೆ ಉತ್ತೇಜನ ಕೊಡತಕ್ಕವರಿಗೆ ಐನೂರು ರೂಪಾಯಿಗಳ ವರೆಗೆ ದಂಡ ಮಾಡಲ್ಪಡುವದೆಂದೂ ಜಾಹೀರನಾಮೆಯಲ್ಲಿ ಹೇಳಲ್ಪಟ್ಟಿರುತ್ತದೆ.

ಇಂಗ್ಲಂಡ ಮತ್ತು ರಶಿಯಾದ ವಾಗ್ಯುದ್ಧ

—೦—

ಇಂಗ್ಲಂಡದ ಕಲ್ಲಿದ್ದಲಿಯ ಸಂಪಿನ ಕೂಲಿಕಾರರಿಗೆ ರಶಿಯಾದ ಕೂಲಿಕಾರರು ದಶಲಕ್ಷ ಸಂಖ್ಯೆಯಿಂದ ದ್ರವ್ಯ ಸಹಾಯ ಮಾಡುತ್ತಿದ್ದಾರಷ್ಟೇ; ರಶಿಯಾದ ಕೂಲಿಕಾರರು ಬೋಲ್ಶೆವಿಕರು. ಬೋಲ್ಶೆವಿಕರೆಂದರೆ ಅರಾಜಕರು. ಅರಾಜಕರಿಂದ ಪೋಷಿಸಲ್ಪಡತಕ್ಕವರು ಅರಾಜಕರೇ ಆಗಿ, ಇಂಗ್ಲಂಡದಲ್ಲಿ ರಾಜ್ಯಕ್ರಾಂತಿಯಾಗುವದೆಂದು ಇಂಗ್ಲಿಷ ಮುತ್ಸದ್ದಿಗಳಿಗೆ ಭಯವು. ಬೋಲ್ಶೆವಿಕರೆಂದರಾಯಿತು. ಅಂಥವರಿಗೆ ಕೃಷ್ಣ ಕಂಡಂತಾಗುತ್ತದೆ. ರಶಿಯಾ ಸರಕಾರದವರು ಇಂಗ್ಲಿಷ ಸಂಪುಗಾರರಿಗೆ ದ್ರವ್ಯ ಸಹಾಯ ಮಾಡುವದು ಯಾವ ರೀತಿಯಿಂದಲೂ ನ್ಯಾಯವಾಗುವದಿಲ್ಲ. ಆದ್ದರಿಂದ ಈ ದ್ರವ್ಯಪ್ರವಾಹವನ್ನು ನಿಲ್ಲಿಸಬೇಕೆಂದು ಪರರಾಷ್ಟ್ರಗಳ ಪ್ರಧಾನಿಯಾದ ಮಿ. ಚೆಂಬರಲೆನ ಸಾಹೇಬರು ಲಂಡನದಲ್ಲಿದ್ದ ರಶಿಯಾದ ರಾಯಭಾರಿಗೆ ತಿಳಿಸಿದರು. ರಶಿಯಾ ಸರಕಾರದಿಂದ ಒಂದು ಕಾಸು ಸಹ ಕೊಟ್ಟಿಲ್ಲ. ಕೂಲಿಕಾರರು ಪರಸ್ಪರ ಸಹಾನುಭೂತಿಯಿಂದ ಕೊಟ್ಟಿದ್ದಾರೆ. ಇದು ಸಹಜ ಮತ್ತು ಸ್ವಾಭಾವಿಕ ಕೃತ್ಯವಾಗಿದ್ದು, ಇದರಲ್ಲಿ ಆಕ್ಷೇಪಾರ್ಹವೇನೂ ಇರುವದಿಲ್ಲೆಂದು ರಶಿಯಾ ಸರಕಾರದವರು ಪ್ರತ್ಯುತ್ತರ ಕೊಟ್ಟಿದ್ದಾರೆ.

ಆಳಿಯನ ಮೇಲೆ ಮಾವನ ಫಿರ್ಯಾದಿ

—೦—

ನಾಗಪೂರದಲ್ಲಿ ಚಂದನಮಲ್ಲ ರೆಂಬೋರ್ವ ಗೃಹಸ್ಥರಿದ್ದಾರೆ. ಇವರ ಮನೆಯಲ್ಲಿ ಮದಿವೆ ಜರುಗಿತು. ಜ್ಞಾತಿಯ ಜನರಿಗೆ ಆಮಂತ್ರಣ ಕಳಿಸಿದರೂ ಸ್ವಂತ ಹೆಣ್ಣು ಕೊಟ್ಟ ಮಾವನಿಗೇ ಆಮಂತ್ರಣ ಕಳಿಸಲಿಲ್ಲ. ತನಗೇಕೆ ಆಮಂತ್ರಣ ಕಳಿಸಲಿಲ್ಲೆಂದು ಪ್ರಶ್ನೆ ಮಾಡಲು, ಮಾವನು ಕರಿಯಲಿಕ್ಕೆ ಯೋಗ್ಯನಲ್ಲದವನಿದ್ದಾನೆ. ಈತನ ಕಡೆ ತಾಯಿಗಳು ವಿಜಾತಿಯವರಿದ್ದಾರೆಂದು ಉತ್ತರ ಕೊಟ್ಟನು. ಇದರಿಂದ ತನ್ನ ಅಪಮಾನವಾಯಿತೆಂದು ಮಾವನು ಅಳಿಯನ ಮೇಲೆ ಮಾನಹಾನಿಯ ಫಿರ್ಯಾದಿ ಮಾಡಿದ್ದಾನೆ.

ರಾವಲಪಿಂಡಿಯಲ್ಲಿ

ಶೀಖ-ಮುಸಲಮಾನರ ಭಯಂಕರ ದಂಗೆ.

೧೪ ಜನರು ಸತ್ತರು; ಅನೇಕರು ಘಾಯವಾದರು.

ಕಾಳಿನ ಮಾರ್ಕೆಟು ಸುಟ್ಟು ೧೩೦ ಅಂಗಡಿಗಳು ಬೂದಿಯಾದವು

ಕಲಕತ್ತೆಯಂತೆ ರಾವಲಪಿಂಡಿಯಲ್ಲಿ ಸಹ ಹಿಂದೂ ಮುಸಲಮಾನರ ದಂಗೆ ಜರುಗಿತು. ಶೀಖರು ಗುರು ಅರ್ಜುನ ದೇವರ ಉತ್ಸವ ಸಹಿತವಾಗಿ ಹೊರಟ ಮೆರವಣಿಗೆಯು ಮಸೀದಿಯ ಮುಂದೆ ವಾದ್ಯ ಬಾರಿಸಬಾರದೆಂದು ಮುಸಲಮಾನರು ಕಡಿದು ಹೊಡೆದು ಪ್ರಾರಂಭವಾಯಿತು. ರಾತ್ರಿಯ ವೇಳೆ ಪಟ್ಟಣದ ತುಂಬ ದಂಗೆಯು ಬೇಗ ಹಬ್ಬಿತು. ಪೋಲೀಸರು ದಂಡು ಕರಿಸಿ, ದಂಗೆಯನ್ನು ನಿಲ್ಲಿಸಬೇಕೆನ್ನುವಷ್ಟರಲ್ಲಿ ೧೪ ಜನರು ಸತ್ತು ೪೦ ಜನರು ಘಾಯ ಹೊಂದಿದಂತೆ ಕಂಡು ಬಂತು. ಸತ್ತವರಲ್ಲಿ ೧೧ ಮುಸಲಮಾನ, ೨ ಹಿಂದೂ ಒಬ್ಬ ಶೀಖ ಈ ಪ್ರಕಾರವಿರುತ್ತದೆ. ದಂಗೆಯಲ್ಲಿ ಗುಡಿ ಅಥವಾ ಮಸೀದಿಗಳಿಗೆ ಕೇಡಾಗಿಲ್ಲ. ಮುಸಲಮಾನರು ಹಿಂದೂ ಜನರ ಕಾಳಿನ ಮಾರ್ಕೆಟಿಗೆ ಬೆಂಕಿ ಹಚ್ಚಿದರು. ಬೆಂಕಿ ಹತ್ತಿ, ಬೆಂಕಿಯನ್ನು ಆರಿಸುವಷ್ಟರಲ್ಲಿ ೧೩೦ ಅಂಗಡಿಗಳು ಸುಟ್ಟು ಬೂದಿಯಾದವು. ಕೋಟಿಗಟ್ಟಲೆ ಕೋಟ್ಯವಧಿ ರೂಪಾಯಿಗಳ ಹಾನಿಯಾಗಿರುತ್ತದೆಂದರೆ ಅತಿಶಯೋಕ್ತಿಯಾಗಲಾರದು. ಹಿಂದೂ ಜನರು ಹರತಾಳ ಮಾಡಿ ಎಲ್ಲ ವ್ಯವಹಾರವನ್ನು ಬಂದು ಮಾಡಿದ್ದಾರೆ.

ಸರಕಾರದವರು ದಂಗೆಯ ಸಂಬಂಧವಾಗಿ ಕಠಿಣೋಪಾಯಗಳನ್ನು ಮಾಡಿದ್ದಾರೆ. ಹೊರಗಿನಿಂದ ಬಂದಂಥ ಜನರನ್ನು ಹೆಂಗಸರು ಹುಡುಗರನ್ನು ಸಹ ಊರೊಳಗೆ ಬಿಡುವದನ್ನು ಬಂದು ಮಾಡಿದ್ದರಿಂದ, ರೇಲ್ವೆ ಸ್ಟೇಶನದಲ್ಲಿ ಸಾವಿರಾರು ಜನರು ಕೂತಿರುತ್ತಾರೆ. ಜನರಲ್ಲಿ ದ್ವೇಷ ಬರುವಂಥ ಪತ್ರಿಕೆಗಳನ್ನು ಹಾಕಿ, ವರ್ತಮಾನ ಪತ್ರಗಳನ್ನು ಮುದ್ರಿಸಬಾರದು. ಸುಳ್ಳು ಸುದ್ದಿಗಳನ್ನು ಹರಿಯ ಬಾರದು ಹೀಗೆ ಯಾವ ಪತ್ರಕಾರರು ಮಾಡಿದರೆ ಅವರ ಮೇಲೆ ಖಟ್ಲೆ ಮಾಡಲಾಗುವದೆಂದು ತಾಕೀತು ಕೊಟ್ಟಿದ್ದಾರೆ.

ರಾವಲಪಿಂಡಿಯ ಸದ್ಯಸ್ಥಿತಿಯನ್ನು ಪ್ರತ್ಯಕ್ಷ ನೋಡಿ, ಹಿಂದೂ ಜನರಿಗೆ ಯೋಗ್ಯ ಸಹಾಯ ಮಾಡುವ ಉದ್ದೇಶದಿಂದ ಹಿಂದೂ ಮಹಾಸಭೆಯ ಮುಖಂಡರಾದ ರಾಜಾ ನರೇಂದ್ರನಾಥ, ಡಾಕ್ಟರ ಗೋಕುಲಚಂದ ನಾರಂಗ ಮತ್ತು ಸರದಾರ ಮೆಹತಾಬ ಶಿಂಗರು ಲಾಹೋರಿನಿಂದ ಅಲ್ಲಿಗೆ ಪ್ರಯಾಣ ಬೆಳೆಸಿದ್ದಾರೆ. ಶೀಖರಿಗೆ ಸಹಾಯವಾಗಿ ಎಂದು ಜಥಾಗಳು ಅಲ್ಲಿಗೆ ಹೋಗಬೇಕೆಂದಿದ್ದವು ಗುರುದ್ವಾರ ಕಮೀಟಿಯವರು ಅವುಗಳ ಪ್ರಯಾಣವನ್ನು ತಡೆಗಟ್ಟಿಸಿದ್ದಾರೆ. ಕಲಕತ್ತೆಯಂತೆ ದಂಗೆಯು ಆಗಾಗ್ಗೆ ಪುನಃ ಹೆಳಸಿದೆ, ದಂಗೆಯ ಕೋಲಾಹಲವು ಅಡಗಿರುತ್ತದೆ

ಪಿ. ಚಕ್ರವರ್ತಿ ಎಂಬವರು ಕಲಕತ್ತೆಯ ಫಾರವರ್ಡ ಪತ್ರಿಕೆಯ ಮುಖ್ಯ ಸಂಪಾದಕರಾಗಿದ್ದರು. ಬಂಗಾಲ ಪ್ರಾಂತಿಕ ಸಭೆಯ ಕೆಲಸ ತೀರುವ ತನಕ ಆ ವಿಷಯವಾಗಿ ಲೇಖ ಬರೆಯಕೂಡದೆಂದು ಡಾಯರೆಕ್ಟರರು ಇವರಿಗೆ ತಿಳಿಸಿದರು. ಆದರೂ ಇವರು ಲೇಖ ಬರೆದರು. ಡಾಯರೆಕ್ಟರರು ಮುದ್ರಾಲಯಕ್ಕೆ ಬಂದು, ಇವರ ಸ್ವಂತ ಹಾಜರಿಯಲ್ಲಿ ಲೇಖ ತೆಗೆಸಿ ಹಾಕಿಸಿದರು. ಈ ದುಸುಮುಸಿಯ ಬಳಿಯಿಂದ ಪಿ. ಚಕ್ರವರ್ತಿಯವರು ರಾಜೀನಾಮೆ ಕೊಟ್ಟರು.

ಧಾರವಾಡ—

ಮೊನ್ನಿನ ದಿವಸ ಈ ಊರಲ್ಲಿ ಮ್ಯುನಿಸಿಪಾಲಿಟಿಯ ಉಪಚುನಾವಣೆಯಾಯಿತು. ಡಾಕ್ಟರ ಶಿಂದೆ ಹಟ್ಟಿಯವರಿಗೆ ೨೨೩ ಮತ್ತು ಶ್ರೀ. ರುದ್ರಯ್ಯನವರು ಹಿರೇಮಠ ಇವರಿಗೆ ೧೭೩ ಮತಗಳು ಬಿದ್ದವು. ೧೩ ಮತಗಳು ರದ್ದಾದವು. ಡಾಕ್ಟರ ಶಿಂದಹಟ್ಟಿಯವರು ಮೆಂಬರರಾದರು

ನಿನ್ನಿನ ದಿವಸ ಸಾಯಂಕಾಲದಲ್ಲಿ ಸರ ಇಬ್ರಾಹಿಮ ರಹಿಮತುಲ್ಲಾ ಇವರ ಅಧ್ಯಕ್ಷತೆಯಲ್ಲಿ ಇಲ್ಲಿಯ ಸದರ್ನ ಮರಾಠಾ ಬ್ಯಾಂಕನ್ನು ತೆರೆಯುವ ಸಮಾರಂಭವಾಯಿತು. ನಾಳಿನ ದಿವಸ ಬ್ಯಾಂಕಿನ ಕಟ್ಟಡದಲ್ಲಿಯೇ ಬ್ಯಾಂಕಿನ ವಾರ್ಷಿಕ ಜನರಲ ಮೀಟಿಂಗ ಕೂಡುವದು.

ಇಂದು ಪ್ರಾತಃಕಾಲದಲ್ಲಿ ೯ ಗಂಟೆಗೆ ಎಡವರ್ಡ ಪಾರ್ಕಿನಲ್ಲಿ ಸರದಾರರಿಗೆ ಮ್ಯುನಿಸಿಪಾಲ್ಟಿಯಿಂದ ಮಾನಪತ್ರ ಕೊಡುವ ಸಮಾರಂಭವಾಗುವದು.

ಶ್ರೀ. ಎನ್ ವೆಂಕೋಬರಾವ ಇವರ ಶ್ರೀ ಮಹಾಲಕ್ಷ್ಮೀ ಪ್ರಾಸಾದಿಕ ಶಿರಹಟ್ಟಿ ಕರ್ನಾಟಕ ಸಂಗೀತ ನಾಟಕ ಕಂಪನಿಯವರು ಇಂದು ಶನಿವಾರ ೧೯-೬-೨೬ ಕ್ಕೆ ಶ್ರೀರಾಮ ಪಟ್ಟಾಭಿಷೇಕ ಎಂಬ ನಾಟಕವನ್ನು ಧಾರವಾಡ ಅನ್ನಪೂರ್ಣ ಥಿಯೇಟರಿನಲ್ಲಿ ಆಭಿನಯಿಸುವರು.

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಶೂಲಿಯೋ? ಮಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು ಮಯ್ಯಲ್ಲ ನೋಯುತ್ತದೆ.

ಕಂದ— ಹಾಗಾದರೆ ಪೋರ್ಟ ವೈನ ಕುಮಾರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿನ್ನ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕುಣಿಯುವಿ ಕೂಡ, [illegible] ಎದೆಗೆ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕರ್ನಾಟಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ

ಫಂಡುಗಳ ಗಂಟು ರೂ ೬೭೬-೫-೦ ಹಾಗೂ ರೂ. ೧೧೭೬-೦-೦ ಗಳಷ್ಟು ಆಗಿದೆ. ಇವೆಲ್ಲ ಉದ್ದೇಶಗಳನ್ನು ನೆರವೇರಿಸಲಿಕ್ಕೆ ದೊಡ್ಡದಾದ ಹಾಗೂ ಚಂದವಾದ ಕಟ್ಟಡವೊಂದು ಬೇಕಾಯಿತು; ಹಾಗೂ ಅಂಥ ಸ್ವಂತ ಕಟ್ಟಡವನ್ನು ಕಟ್ಟಿಸುವ ಕಾರ್ಯವನ್ನು ವಹಿಸಿ ಅದನ್ನು ಸಫಲಮಾಡುವದರಲ್ಲಿ ಬಂದಿದೆ. ಈ ಪ್ರಯತ್ನಗಳ ಫಲವೆಂದರೆ ಇಂದು ದಯಾಘನರಾದ ತಮ್ಮೊಡನೆ ನಾವೆಲ್ಲ ಕೂಡಿಕೊಂಡಿರುವ ಬಹು ಸುಂದರವಾದೀ ಕಟ್ಟಡವೇ ಸರಿ. ರಿಝರ್ವ ಫಂಡಿನಿಂದ ಉಪಯೋಗಿಸಲ್ಪಟ್ಟಿರುವ ಸರಾಸರಿ ೩೮೦೦೦ ರೂ ಗಳಷ್ಟು ಹಣವು ಈ ಕಟ್ಟಡಕ್ಕೆ ವೆಚ್ಚವಾಗಿದೆ. ಇದರ ಪ್ಲ್ಯಾನ್ ಹಾಗೂ ಎಸ್ಟಿಮೇಟಗಳು ಪಬ್ಲಿಕವರ್ಕ್ಸ ಖಾತೆಯವರಾದ ಮಿ. ಬರ್ವೆಯವರಿಂದ ಮಾಡಲ್ಪಟ್ಟವು. ಹಾಗೂ ಮಿ ಹಲೀಕರರವರು ಪ್ರತಿದಿನ ಕಟ್ಟು ಕೆಲಸದ ಮೇಲ್ವಿಚಾರಣೆಯನ್ನು ವಹಿಸಿದ್ದರು. ಕಟ್ಟಡದ ಬೆಲೆಯನ್ನು ಹಿಡಿದು ರಿಝರ್ವ ಫಂಡಿನ ಹಣವು ಇಂದಿಗೆ ರೂ ೬೧೩೧೪_೮ ೮ ಗಳಷ್ಟು ಆಗಿದೆ. ಇದೇ ಬ್ಯಾಂಕಿನ ಅಲ್ಪೇತಿಹಾಸವು.

ಪ್ರೇಮದಿಂದಲೂ ಕಲ್ಯಾಣಬುದ್ಧಿಯಿಂದಲೂ ನಮ್ಮ ವಿನಂತಿಯನ್ನು ಮಾನ್ಯಮಾಡಿ, ಇಲ್ಲಿಯವರೆಗೆ ದಯಮಾಡಿ ಬಂದು ಈ ಭವ್ಯವಾದ ಕಟ್ಟಡದ ಅನಾವರಣ ಸಮಾರಂಭವನ್ನು ಮಾಡಲಿಕ್ಕೆ ಬಂದದ್ದಕ್ಕಾಗಿ ನಾವೆಲ್ಲರೂ ತಮಗೆ ಕೃತಜ್ಞರಾಗಿದ್ದೇವೆ. ತಮ್ಮ ದಯಾನುಗ್ರಹದಿಂದ ಈ ಸಂಸ್ಥೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ, ಧಾರವಾಡಸ್ಥರಿಗೆ ಹಾಗೂ ಎಲ್ಲ ಜನರಿಗೆ ಹೆಚ್ಚೆಚ್ಚು ಉಪಯೋಗವುಳ್ಳದ್ದಾಗಲೆಂದು ಆಶಿಸುತ್ತೇನೆ.

ನಾಮದಾರ ಸರ್ ಇಬ್ರಾಹಿಮ ರಹಿಮತುಲ್ಲಾ ಇವರು ತಮ್ಮ ಭಾಷಣದಲ್ಲಿ ಹೇಳಿದ್ದರ ಸಾರಾಂಶವು:—

ನಿಮ್ಮ ಈ ಕೋ ಆಪರೇಟಿವ್ಹ ಬ್ಯಾಂಕಿನವರು ಸ್ವಂತದ ಇಷ್ಟು ದೊಡ್ಡ ಇಮಾರತಿಯನ್ನು ಕಟ್ಟಿಸಿದ್ದು ನೋಡಿ ಬಹಳೇ ಆನಂದವೆನಿಸುತ್ತದೆ. ನನ್ನನ್ನು ಇಲ್ಲಿಗೆ ನೀವು ಬರಮಾಡಿಕೊಂಡದ್ದು ನನಗೆ ಎಳ್ಳಷ್ಟೂ ಅನಾನುಕೂಲತೆ ಇಲ್ಲವೆ ತೊಂದರೆ ಆಗಿಲ್ಲ; ಆದರೆ ನನಗೆ ಇದೊಂದು ಬಹುಮಾನವೇ ಎಂದು ನಾನು ಸಂತೋಷಪಡುತ್ತೇನೆ. ನಿಮ್ಮ ಇತಿಹಾಸ ಪ್ರಸಿದ್ಧ ನಗರಕ್ಕೆ ಮತ್ತು ಈ ಭಾಗಕ್ಕೆ ಬರಬೇಕೆಂದು ನಾನು ಬಹು ದಿವಸದಿಂದ ಆಶಿಸುತ್ತಿದ್ದೆನು. ಇನ್ನು [illegible] ದಿವಸ ಈ ಪ್ರಾಂತದಲ್ಲಿ ಅಲೆದಾಡಿ [illegible]ದು ನನ್ನ ಕೋರಿಕೆಯು[illegible]

ಈ [illegible] ಕೋ. ಆ. ಕ್ರೆ. ಸೊ. ಬ್ಯಾಂಕನ್ನು [illegible] ಸನ್ [illegible] ಇಸವಿಯಿಂದ ಕೇವಲ ಬಂಡವಲಿನಿಂದ ಸ್ಥಾಪಿಸಿ ಈ ವರೆಗೆ ಸತತ ಹಾಗು ಅವ್ಯಾಹತ ಶ್ರಮಪಟ್ಟು ಇಷ್ಟು ಘನತೆಗೆ ತಂದ ಬಗ್ಗೆ ನಾನು ಇದರ ಚಾಲಕರಿಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಇಲ್ಲಿಯ ನಾಗರಿಕರ ಬಹು ದೊಡ್ಡ ಕೊರತೆಯು ಈ ಬ್ಯಾಂಕಿನಿಂದ ದೂರಾಯಿತು; ಕಾರಣ ಊರವರೆಲ್ಲರು ಈ ಬ್ಯಾಂಕಿನ ಋಣದಲ್ಲಿರುವರು. ಯಾವದೇ ಕೆಲಸವನ್ನು ಕೈಕೊಂಡು ಯಶಸ್ವಿಯಾಗಿ ಮಾಡಿ ತೋರಿಸಲಿಕ್ಕೆ ಸ್ವಾರ್ಥತ್ಯಾಗಿಗಳಾದ ಆತುರತೆಯುಳ್ಳ ಕಾರ್ಯ ವಾಹಕರು ಬೇಕಾಗುತ್ತದೆ. ಇದರಂತೆ ನಿಮಗೆ ಶ್ರೀ. ಹಲೀಕರ ಹಾಗು ಶ್ರೀ. ಜೋಗಿ ಇವರು ದೊರೆತದ್ದು ನೋಡಿ ಆನಂದವೆನಿಸುತ್ತದೆ. ಇವರ ಹಾಗು ಇವರ ಕೂಡ ಕೆಲಸ ಮಾಡುವರಾವತ್ತೂ ಅಭಿನಂದನಕ್ಕೆ ಅರ್ಹರಿರುತ್ತಾರೆ.

ಹಿಂದುಸ್ಥಾನದ ಎದುರಿನ ಈಗಿನ ಮುಖ್ಯ ಪ್ರಶ್ನೆಂದರೆ- ಆರ್ಥಿಕ ಅವನತಿಯು. ಜನರಿಗೆ ಅನುಕೂಲತೆಗಳ ಅಭಾವದಿಂದ ಬಹಳೇ ತೊಂದರೆಯಾಗುತ್ತದೆ. ಇದರ ಬಗ್ಗೆ ಸರಕಾರದವರು ತಗಾಯಿ ಪ್ರಾರಂಭ ಮಾಡಿದರು. ಆದರೆ ಅದರಿಂದ ಸಹ ಜನರಿಗೆ ಸಾಕಷ್ಟು ಅನುಕೂಲತೆಯಾಗಲಿಲ್ಲ. ಕಾರಣ ಸಹಾಯ ಪಡೆಯಲರ್ಹರಿದ್ದವರಿಗೆ ನೆರವಾಗಲು ಎಲ್ಲರೂ ಒಕ್ಕಟ್ಟಾಗಬೇಕು. ಇದೇ ಸಹಕಾರವು.

ಸಹಕಾರದ ತತ್ವಗಳು ನಿಮಗೆ ಮೊದಲೇ ತಿಳಿದವೆ. ಪ್ರತ್ಯೇಕವಾಗಿ ಹಾಗು ಸಾಂಘಿಕ ರೀತಿಯಿಂದ ಪ್ರಯತ್ನ ಪಟ್ಟು ಅಗತ್ಯವಿದ್ದವರಿಗೆ ಸಹಾಯ ಮಾಡುವದರಿಂದಲೇ ನಿಜವಾದ ಲಾಭವಾಗುವದು. ಈ ಸಹಕಾರ ಚಳುವಳಿಯಿಂದ ಲಾಭವಾದದ್ದೇ ಆಗಿದ್ದರೆ ನೀವೆಲ್ಲರೂ ಇದರಲ್ಲಿ ಸೇರಲೇ ಬೇಕು.

ಧಾರವಾಡ ಜಿಲ್ಹೆಯಲ್ಲಿ ಅನೇಕ ತರದ ಸಹಕಾರ ಸಂಘಗಳ ಸುಗ್ಗಿಯೇ ಆದೆ ಎಂದು ಕೇಳಿ ನನಗೆ ಸಮಾಧಾನವೆನಿಸಿತು.

ಒಕ್ಕಲತನದ ದುರ್ಲಕ್ಷ್ಯ ಮಾಡಿ ಇತರ ಉದ್ಯೋಗ ಧಂದೆಗಳಿಗೆ ಉತ್ತೇಜನ ಕೊಡಲ್ಪಡುತ್ತದೆಂಬೂ ಕೆಲ ಜನರ ದೂರುಂಟು; ನನ್ನ ಮತದಿಂದ ಈ ದೂರು ತಪ್ಪಿರುತ್ತದೆ. ಶೇತಕಿ ಹಾಗು ಉದ್ಯೋಗ ಧಂದೆಗಳು ಒಂದೇ ಇರುತ್ತವೆ ಇತರ ಧಂದೆಗಳಿಲ್ಲದಿದ್ದರೆ ಕೇವಲ ಒಕ್ಕಲತನದಿಂದ ಜನರ ಸಂಸಾರ ಸಾಗುವದು ಬಲು ಕಠಿಣವಾಗುವದು. ಕಾರಣ ಇವೆಲ್ಲ ಶ್ರಮ ವಿಭಾಗಗಳವೆ.

ಮಾನವ ಪ್ರಾಣಿಯು ಅಗತ್ಯವಿದ್ದ ಜನರಿಗೆ ಶಕ್ಯವಿದ್ದ ಯಾವತ್ತೂ ರೀತಿಯ ಸಹಾಯ ಮಾಡುವದು ಆತನ ಕರ್ತವ್ಯವಿರುತ್ತದೆಂದು ಹೇಳಿ ಇನ್ನೊಮ್ಮೆ ಬ್ಯಾಂಕಿನ ಚಾಲಕರ ಅಭಿನಂದನೆ ಮಾಡುತ್ತೇನೆ.

ಧಾರವಾಡ—

ಇಲ್ಲಿಯ ಕರ್ನಾಟಕ ಕಾಲೇಜದಲ್ಲಿರುವ ಸಂಸ್ಕೃತ ಪಂಡಿತರಾದ ಶ್ರೀ ರದ್ದಿಶಾಸ್ತ್ರಿಯವರು ಕೆಲಸದಿಂದ ನಿವೃತ್ತರಾಗುವರು. ಇವರು ಮರಾಟಿಗರು. ಮರಾಟಿಯಿಂದ ಕನ್ನಡದಲ್ಲಿ ತಿಳಿಸಿ ಹೇಳುವದು ಬಹಳ ಬಗಿಯಾಗಿ, ವಿದ್ಯಾರ್ಥಿಗಳ ಬಹಳ ಹಾನಿಯಾಗುತ್ತಿತ್ತು. ಸಂಸ್ಕೃತ ಪಂಡಿತರಾದಂಥ ಅನೇಕ ಕನ್ನಡಿಗರಿದ್ದಾರೆ. ಕೆಲವರು ಅರ್ಜಿ ಕೊಡ ಮಾಡಿದ್ದಾರೆ. ಕಾಲೇಜದ ಪ್ರಿನ್ಸಿಪಾಲರು ಕನ್ನಡಿಗರನ್ನೇ ನೇಮಿಸಿಕೊಳ್ಳುವರೆಂದು ನಂಬಿದ್ದೇವೆ.

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 144

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ರವಿವಾರ ತಾರೀ ೨೨ನೇ ಜೂನ ೧೯೨೭ (ಸಂಚಿಕೆ ೧೪೦

ಸರಕಾರದಿಂದ ಪೆಟೆಂಟ ದೊರೆಕಿದ



ಮುಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗಲ್ಪದುತ್ತಲೇ ಜಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೨ ಗ್ಯಾಲನ್.	ಬೆಲೆ	೨೦ ರೂ.
ನಂ ೨	೫೫ ,,	,,	೩೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

—o—

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ ಧಾರವಾಡ.

ವಿಜಯದ ವರ್ಗಣೀ ದರ

—o—

... ತಿಂಗಳಿಗೆ	೧೨—೦—೦ ರೂ
	೬—೦—೦ ರೂ
,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೇಳಿಗ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ...

ಮ್ಯಾನೇಜಿಂಗ್ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಐದು ಲಕ್ಷದ ಮೇಲಿಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚೆನ್ನಾಗಿ ಬಡ್ಡಿ ದೊರಿಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವಪರಾವ ಬಿ. ...

ಮ್ಯಾನೇಜಿಂಗ್ ಡಾಯರೆಕ್ಟರ

ನೋಟೀಸಿನ ದರಗಳು.

—o—

ತಿಂಗಲ ಕಾಲಮಿನ ಹತ್ತು ವಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ವಳಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ... ಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ... ಕಾಯಂ ಜಾಹೀರಾತುಗಳನ್ನು ಕೊಡ ... ಪತ್ರಿಕೆಕ್ಕೆ ಪತ್ರವ್ಯವಹಾರ ಮಾಡಬೇಕು.

ಮ್ಯಾನೇಜರ ವಿಜಯ, ಧಾರವಾಡ

ವಿಜಯ.

ಧಾರವಾಡ [illegible] ೩೦-೬-೧೯೩೬ ನೇ ಇಸ್ವಿ

ಕೌನ್ಸಿಲ ಚುನಾವಣೆಯ ವಿಷಯವಾಗಿ

ವೀರಶೈವರ ವಿಚಾರದ ಮೇಲೆ ವಿಚಾರ.

ಕೌನ್ಸಿಲ ಚುನಾವಣೆಯು ಸದ್ಯದಲ್ಲಿ ಮುಖ್ಯ ಚರ್ಚೆಯ ವಿಷಯವಾಗಿರುತ್ತದೆ. ಈ ಚರ್ಚೆಯು ಉತ್ತರ ಕರ್ನಾಟಕ ಪ್ರಾಂತದಲ್ಲಿ ಬೆಳಗಾವಿ, ಧಾರವಾಡ ಮತ್ತು ವಿಜಾಪೂರದಲ್ಲಿ ಪ್ರಬಲವಾಗಿ ಎದ್ದಿರುತ್ತದೆ. ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಉಮೇದವಾರರು ಬ್ರಾಹ್ಮಣರಿದ್ದು, ಉದಾರ [illegible] ವಾ ಬ್ರಾಹ್ಮಣೇತರ ಪಕ್ಷದವರೆಲ್ಲರೂ ವೀರಶೈವರಾಗಿದ್ದಾರೆ. ಎರಡೂ ಬಣವು ತೋರಿಕೆಯಲ್ಲಿ ಬ್ರಾಹ್ಮಣೇತರರೆನಿಸಿದರೂ, ನಿಜವಾದ ಸ್ಪರ್ಧೆಯು ಬ್ರಾಹ್ಮಣ ಮತ್ತು ವೀರಶೈವರಲ್ಲಾಗುವದು. ಕಾಂಗ್ರೆಸ ಪಕ್ಷದಿಂದ ಒಬ್ಬೊಬ್ಬರೇ ಉಮೇದವಾರರಿದ್ದಾರೆ. ಪ್ರತಿಯೊಂದು ಜಿಲ್ಹೆಯ ಪರಿಸ್ಥಿತಿಯು ಬೇರೆಯಾಗಿರುತ್ತದೆ. ಬೆಳಗಾವಿ ಮತ್ತು ಧಾರವಾಡದಲ್ಲಿ ಇಬ್ಬರು ಆರಿಸಲ್ಪಡತಕ್ಕವರು. ವೀರಶೈವರಲ್ಲಿ ಮೂವರು ಉಮೇದವಾರರಾದರೆ- ಒಂದು ಸ್ಥಳವನ್ನು ಕಾಂಗ್ರೆಸ ಪಕ್ಷದವರು ಆಕ್ರಮಿಸುವರೆಂದೂ, ವೀರಶೈವರು ಪರಸ್ಪರ [illegible] ದೆಸೆಯಿಂದ ಒಂದೊಂದು ಸ್ಥಳ ಕಳಕೊಳ್ಳುವರೆಂದೂ ವೀರಶೈವರ ಚಿಂತೆಯು. ವಿಜಾಪೂರ ಜಿಲ್ಹೆಯಲ್ಲಿ ಒಬ್ಬ ಬ್ರಾಹ್ಮಣ ಮತ್ತು [illegible] ವೀರಶೈವರಾಗಿದ್ದಾರೆ. [illegible] ಸದ್ಯದಲ್ಲಿ [illegible] ದ್ದಾರೆ. [illegible] ವರು ಶ್ರೀ [illegible] ಶ್ರೀನಿವಾಸರಾಯರನ್ನು [illegible] ಅಸಮರ್ಥರಾಗಿರುವರೆಂಬ ಭಾವನೆ [illegible] ಇವರನ್ನು ಹಿಂದಕ್ಕೆ ಸರಿಸಿ, ರಾವಸಾಹೇಬ [illegible] ಯವರನ್ನು ಕಣದಲ್ಲಿ ನಿಲ್ಲಿಸಬೇಕೆಂಬ ಮನ [illegible] ದೆ. ವೀರಶೈವರ ಸ್ನೋಸ್ನಿಕರಿಗಾಗಿ [illegible] ದಲ್ಲಿ ನಾವು ಅಲ್ಲ ಹೋಗುವದು [illegible] ಶ್ರೀಮಂತ ಸರ ದೇಸಾ [illegible] ದಲ್ಲಿ [illegible] ವಿಚಾರ [illegible] ಅವರಿಂದ [illegible] ಅದಲ್ಲಿ [illegible] ಪ್ರಶ್ನ

ಗಳನ್ನು ಧಾರವಾಡ ಮತ್ತು ಬೆಳಗಾವಿ ಜಿಲ್ಹೆಯವರು ಕೇಳಲಿಲ್ಲ. ಶ್ರೀಮಂತ ಸರ ದೇಸಾಯರು ಮಿ. ಹಾರ್ಸಿಮನ್ನರಿಗೆ ಪಾಸಪೋರ್ಟ ಕೊಡಬೇಕೆಂಬ ಠರಾವಿನ ಮೇಲೆ ಪ್ರಜಾಪಕ್ಷಕ್ಕೆ ಅನುಕೂಲವಾಗಿ ಮತಕೊಟ್ಟಿದ್ದು, [illegible] ತ್ತದೆ. ಇಂಥ ಮನೋವೃತ್ತಿ [illegible] ಹಳಕಟ್ಟಿಯವರಲ್ಲಿ [illegible] ಗಿ ಹೇಳುವಂತಾಗಿರುತ್ತದೆ. [illegible] ನ್ನು ಹಿಂದೆ ಸರಿಸುವದು ಇವರ [illegible] ದಂತಾಗುತ್ತದೆಂದು, ನಮ್ಮ [illegible] ಇದ್ದಾಗಿಯೂ ವಿಜಾಪೂರದ ಶ್ರೀ [illegible] ಮೂಲಿಗೂ [illegible] ಬೆಳಗಾವಿಯಲ್ಲಿ [illegible] ಅಂಗರಾಯವರನ್ನು [illegible] ಕೌನ್ಸಿಲಿನ [illegible] ಕ್ಕಿಂತ [illegible] ಹೊರಗ್ಗೆ ಮುಂದೆ [illegible] ವಿಹಿತ [illegible] ಗುತ್ತದೆ

ಸಂತಾರ ಮತ್ತು [illegible] ಸ್ವರಾಜ್ಯದ [illegible]

ಮದ್ರಾಸ ಇಲಾಖೆಯ ಕೌನ್ಸಿಲ ಚುನಾವಣೆಯು ಸಪ್ಟಂಬರ ತಿಂಗಳ [illegible] ವಸ ನಡೆಯುವದು. [illegible] ಮತ್ತು ಲೋಕಲ ಬೋರ್ಡುಗಳ [illegible] ತಾವು ಹೊಂಟಿದ್ದರೆ- ನೋಟು ಕೊಡುವದರ ಹೊರತು ಚುನಾವಣೆಯಲ್ಲಿ ಪ್ರತ್ಯಕ್ಷ ಪ್ರತ್ಯಕ್ಷವಾಗಿ ಯಾವ ತರದ ಭಾಗ ತಕ್ಕೊಳ್ಳಕೂಡದೆಂದು ಆ ಸರಕಾರದವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ. ಮದ್ರಾಸದಾಗಲಿ, [illegible] ಸರಕಾರಗಳಾಗಲಿ, ಇಂಥ ಜಾಹೀರನಾಮೆಯನ್ನು ಚುನಾವಣೆಯ ಪೂರ್ವದಲ್ಲಿ ಪ್ರಸಿದ್ಧ [illegible] ಜಾಹೀರನಾಮೆಯು ಹೊಸದಲ್ಲ. ಹಿಂದೆ ಇದೇ ರೀತಿಯಾಗಿ ಪ್ರಕಟವಾದಂತವದು. ಅದುದರಿಂದ ಕಾಮದಾರರು ಊರು ಬಿಟ್ಟರೂ ಹಣವುಷ್ಟ ಹೊರಗೆ [illegible] ದೂರುಳಿಯುವರೆಂದು ಆಶಿಸುತ್ತೇವೆ.

ಹುನಗುಂದ ತಾಲೂಕ ಅಮೀನಗಡದಲ್ಲಿ ಒಂದು ವಿಚಿತ್ರ ರೋಗವು ಪ್ರಕಟವಾಗಿದೆ. ಇದರಿಂದ ಹೆಣ್ಣು ಮಕ್ಕಳ ಕೈಕಾಲುಗಳೇ ಹೋಗುತ್ತವೆ. ಇವರ ಮೇಲೆಯೇ ದೇವತಾ ಕೋಪವೇಕೆ!

ಅಭೂತಪೂರ್ವ ಗಾಳಿಯು.

ಹುಡುಗರು ಹಕ್ಕಿಯಂತೆ ಹಾರಿದವು.

ಒಂದೂ ಮ[illegible]ಯು ಗಟ್ಟಿ [illegible] ಯುಳಿಯಲಿಲ್ಲ.

ಗು[illegible] ಪ್ರಾಂತಕ್ಕೆ ಸೇರಿದ ಧಂಧುಕಾ ಪಟ್ಟಣದ [illegible] ಸ್ಥಳದ [illegible] ಕೇಳಿಸಿ [illegible] ಯಿತು. ಒಂದು [illegible] ತವಕ ಊರ [illegible] ಒಂದು ಮೈಲು [illegible] ಗಾಳಿಯಂತೆ [illegible] ಬೀಸಿತು. ಗಾಳಿಯ [illegible] ದ ಆ [illegible] ಒಂದು [illegible] ಬೀಳಲಿಲ್ಲ [illegible] ಒಂದು [illegible] ಹೊಡೆದ [illegible] ಒತ್ತ [illegible] ಹಾಯಿತು. [illegible] ಬಂದು ಊರ [illegible] ಎರಡು ಎತ್ತುಗಳನ್ನು [illegible] ಮನೆಗೆ ಬರುತಿದ್ದ [illegible] ಹುಡುಗರು ಪಕ್ಷಿಯಂತೆ ಹಾರಿ, ಊರ [illegible] ಒಂದು ಹೊಲದಲ್ಲಿ ಬಿದ್ದವು. ಎ[illegible] ಹುಡುಗರ ಚಪ್ಪರ [illegible] ಎಲ್ಲಿ ಬಿದ್ದಿರುತ್ತವೆಂ[illegible] ದಂತಾಗಿರುತ್ತದೆ. ರೇಲ್ವೆ ಸ್ಟೇಶನದಲ್ಲಿ [illegible] ಡಬ್ಬಿ ಮತ್ತು ವ್ಯಾಗನಗಳು [illegible] ಕೊಡದಿಂದ ಉರುಳಿ, ನಾಲ್ಕು ಮೈಲು [illegible] ಹುಲ್ಲಿನ ಹೊರೆಗಳು ಹಾರಿ, [illegible] ಲಿನ ಮೇಲೆ ಬಿದ್ದವು.

ಮಳೆಯ ಕಾಲಸ್ಥಿತಿಯು—

ಮೃಗ ಪ್ರವೇಶವಾಗಿ ಎಂಟು ದಿವಸವಾಯಿತು. ಆದರೂ ಮಳೆಯು ಸರಿಯಾದ ಸುದ್ದಿಯಿಲ್ಲ. ಮಳೆ ಬರುವದೆಂದು ಸಿಮುಲಾದ ವೇಧಶಾಲೆಯವರು ಮುಂದಾಗಿ ಸುದ್ದಿ ಕಳಿಸಿದ್ದು ಸೀಳಿಗಿಟ್ಟಿದ್ದಾಯಿತು. ಮಂಗಳೂರ, ಕಾರವಾರದಲ್ಲಿ ದಿನಾಲು ಒಂದೆರಡು ಇಂಚು ಮಳೆಯಾಗುತ್ತಲೇ ಇರುವದು. ಅದು ಅಲ್ಲಿ ಕಾದ ಹಂಚಿನ ಮೇಲೆ ತುಸು ನೀರು ಹಾಕಿದಂತಾಗುತ್ತಿರುವದು. ಅಷ್ಟು ಸರುವುಗಳು ಬಂದು ಬೆಳಗಾವಿ ಮತ್ತು ಜಿಲ್ಹೆಯ ಸೀಮೆಯಲ್ಲಿ ಬಿತ್ತಿಗೆಗೆ ಅನುಕೂಲವಾಗುವಷ್ಟು ಮಳೆಯಾಗಿರುವದು. ಆದರೆ ಇನ್ನು ಮಳೆಗಾಲದ ಜಡಿಮಳೆಯು ನಿಸಲಾರದು. ಹವಾಮಾನವು ಲೋಕ ವಿಲಕ್ಷಣವಾಗಿರುವದು. ಪ್ರಾತಃಕಾಲದಲ್ಲಿ ಗಿಡ್ಡ ಮೋಡ ಹಾಕಿ, ಹೊತ್ತು ಏರಿದಂತೆ ಬಿಸಿಲು ಕಾಯುವದು. ಆಕಾಶದೊಳಗಿನ ಈಗಿನ ಚಿನ್ಹ[illegible] ಮೃಗ ಮಳೆಯು [illegible] [illegible]

ಸದರ್ನ ಮರಾಠಾ ಬ್ಯಾಂಕಿನ ಹೊಸ ಕಟ್ಟಡವನ್ನು ತೆರೆಯುವ ಸಮಾರಂಭವು.

ಈ ಸಮಾರಂಭವು ಮೊನ್ನಿನ ದಿವಸ ಬಹು ಸಂಭ್ರಮದಿಂದ ನೆರವೇರಿತು. ಸಮಾರಂಭಕಾಲದಲ್ಲಿ ಡಾಯರೆಕ್ಟರರು ಸರ ಇಬ್ರಾಹಿಮ ರಹಿಮತುಲ್ಲಾ ಇವರಿಗೆ ಕೊಟ್ಟ ಮಾನಪತ್ರವೂ, ಅದಕ್ಕೆ ಅವರು ಕೊಟ್ಟ ಉತ್ತರವೂ ಕೆಳಗೆ ಕೊಟ್ಟಂತಿರುತ್ತವೆ.

ಮಾನಪತ್ರ

ಸರ ಇಬ್ರಾಹಿಮ ರಹಿಮತುಲ್ಲಾ

ಕೆ. ಸಿ. ಎಸ್. ಐ. ಸಿ. ಐ. ಇ.

ಮುಂಬಯಿ ಕಾಯದೆ ಮಂಡಲದ ಅಧ್ಯಕ್ಷ,

ಮಹನೀಯರಿಗೆ—

ಮಹನೀಯರೇ,

ಸದರ್ನ ಮರಾಠಾ ಅರ್ಬನ್ನ ಕೋ- ಆಪರೇಟಿವ್ಹ ಕ್ರೆಡಿಟ ಬ್ಯಾಂಕಿನ ಕಾರ್ಯಕಾರೀ ಮಂಡಳದ ಚೇರಮನ್ನ ಹಾಗು ಡಾಯರೆಕ್ಟರರುಗಳಿಂದ ನಾವು ತಮಗೆ ಪ್ರೇಮ ಪೂರ್ವಕವಾಗಿ ಸ್ವಾಗತವನ್ನೀಯಲು ಆನಂದಪಡುತ್ತೇವೆ. ನಮ್ಮ ಇಲಾಖೆಯ ಕಾಯದೆ ಮಂಡಳದಲ್ಲಿ ಸರ್ವಾನುಮತದಿಂದ ನಿಯೋಜಿತರಾದ ಆ ಮಂಡಲದ ಮಾನ್ಯನೆಯ ಅಧ್ಯಕ್ಷರಾದ ತಮಗೆ ಸ್ವಾಗತ ಮಾಡುವ ಈ ಆನಂದಮಯವಾದ ಪವಿತ್ರ ಕರ್ತವ್ಯದಲ್ಲಿ ನಮ್ಮ ಸಂಸ್ಥೆಯ ಸಂಬಂಧವಾಗಿ ಸಹಾನುಭೂತಿಯುಳ್ಳವರೂ ಅದರ ಕೆಲಸದಲ್ಲಿ ಆಸ್ಥೆ ತೋರ್ಪಡಿಸುವವರೂ ಆದ ನಮ್ಮ ಮಿತ್ರರೂ, ನಾಗರಿಕ ಬಾಂಧವರೂ ಹಾಗು ಸಹಕಾರಿ ಬಂಧುಗಳೂ ಸಹ ಪ್ರತ್ಯಕ್ಷ ಬಂದು ನಮಗೆ ಬೆಂಬಲ ಕೊಟ್ಟಿದ್ದಾರೆ.

ನಮ್ಮ ಸಲುವಾಗಿ ಇಲ್ಲಿಗೆ ದಯಮಾಡಿಸುವದಕ್ಕಾಗಿ, ತಮ್ಮ ಅಧಿಕಾರಸ್ಥಾನಕ್ಕೆ ಸಂಬಂಧಪಟ್ಟ ಅನೇಕ ಕೆಲಸಗಳನ್ನು ತಾವು ಬಿಟ್ಟು ಬಂದಿರುವಿರೆಂಬುದನ್ನು ನಾವು ಅರಿತಿರುವೆವು. ಈ ಸಣ್ಣ ಸಂಸ್ಥೆಯ ಹೊಸ ಕಟ್ಟಡದ ಅನಾವರಣ ಸಮಾರಂಭವನ್ನು ಮಾಡಲಿಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟದ್ದು ಅಭಿಮಾನದ ಹಾಗೂ ಸಂತೋಷದ ಸಂಗತಿಯಾಗಿದೆ.

ತಮ್ಮ ದಯಾಪೂರಿತವಾದ ಈ ಕೃತ್ಯದಿಂದ, ಬಹು ಸಂಖ್ಯಾಕರಾದ ಜನರ ಕಲ್ಯಾಣ ಹಾಗೂ ಆರ್ಥಿಕ ಉನ್ನತಿಗಳನ್ನುಂಟು ಮಾಡುತ್ತಿರುವ ಸಹಕಾರಿ ಚಳವಳಿಯಲ್ಲಿ ತಮಗಿದ್ದ ವಿಶೇಷ ಕಳಕಳಿಯು ವ್ಯಕ್ತವಾಗುತ್ತದೆ. ಹಿಂದುಸ್ಥಾನದ ಸ್ವಾತಂತ್ರ್ಯೇಚ್ಛುಗಳಿಗೆ ತಾವು ಮಾಡಿದ ಪರಿಶ್ರಮವೂ ಇಂಡಸ್ಟ್ರಿಯಲ್ ಕಮಿಶನ ಎಂಬ ಔದ್ಯೋಗಿಕ ವಿಚಾರಣಾ ಮಂಡಲವನ್ನು ನಿಯಮಿಸಲಿಕ್ಕೆ ತಾವು ಮಾಡಿದ ಸಾಹಸವೂ ಪ್ರಸಿದ್ಧ ಉಂಟು. ಅದರಂತೆ ತಮ್ಮಿಂದ ಸಮಾಜ ಜ್ಞಾತಿಗಳಿಗೆ ಲಭಿಸುವ ಸೇವೆಯನ್ನು ವರ್ಣಿಸಲು ಸಾಧ್ಯವಿಲ್ಲ. ಬಹು ಜನರ ಹಿತಕ್ಕೆ ಸಂಬಂಧಿಸಿದಂದೆ ರೆವಿನ್ಯೂ ಶಿಕ್ಷಣ ಖಾತೆಗಳ ಮೇಲೆ ಎಕ್ಸಿಕ್ಯುಟಿವ್ಹ ಕೌನ್ಸಿಲದ ಮೆಂಬರಾಗಿ ಬಹು ಜನರಿಗೆ ಸಮಾಧಾನವಾಗುವಂತೆ ತಾವು ತಮ್ಮ ಕರ್ತವ್ಯವನ್ನು ಸಫಲಗೊಳಿಸಿರುವಿರಿ. ಜನರ ಕಲ್ಯಾಣಕ್ಕೆ [illegible] ಹೋರಾಡುತ್ತಿರುವ ಅಂತಃಕರಣ [illegible] ಅನುಭವಗಳಿಂದ ಪ್ರೇರಿತರಾಗಿ, ಈ ಪ್ರಾಂತದ ಇತಿಹಾಸ ಪ್ರಸಿದ್ಧವಾದ ಪಟ್ಟಣಕ್ಕೆ ಬಂದು ಈ ಸಮಾರಂಭವನ್ನು [illegible] ತಾವು ನಮ್ಮನ್ನು [illegible] ನ್ನೀರಿ.

ಮಹನೀಯರೇ, ಈ ಸಂದರ್ಭದಲ್ಲಿ ಈ ಸಂಸ್ಥೆಯ ಇತಿಹಾಸವನ್ನು ತಿಳಿಸಬೇಕೆನ್ನುವ [illegible] ಇಚ್ಛೆಯು [illegible]. ಬಹಳ ಕಾಲದ ಮೊದಲು ಧಾರವಾಡ ಜಿಲ್ಲೆಯ [illegible] ಜಿಲ್ಲೆಯ [illegible] ಈ ಜಿಲ್ಲೆಯ ಗದಗ ತಾಲೂಕಿನ [illegible] ಗ್ರಾಮದಲ್ಲಿ ೧೯೦೫ ರಲ್ಲಿ ಮೊ. ಜಿ. [illegible] ರಜಿಸ್ಟರರಿದ್ದಾಗ [illegible] ದಿಂದ ಮೊದಲ ಸಹಕಾರಿ ಸಂಘವು ಸ್ಥಾಪಿತವಾಯಿತು. ಅದಕ್ಕೆ ಸ್ವಲ್ಪ ಸಮಯದಲ್ಲೇ ನಮ್ಮ ಬ್ಯಾಂಕು ಹೊರಬರುವ [illegible]. ೧೯೦೬ ರಲ್ಲಿ [illegible] ರೆವಿನ್ಯೂ ಆಫೀಸನಲ್ಲಿ ಕಾರಕೂನರಾಗಿದ್ದ ಮಿ. ಸೈಯ್ಯದ ಫಾಜಲುದ್ದೀನ ಹಾಗು ಮಿ. ಪಟ್ಟಾಭಿರಾಮಯ್ಯ ಎಂಬುವರು ಗೃಹಸ್ಥರು, ಆ ಕಾಲಕ್ಕೆ ಪ್ರಸಿದ್ಧ ವಕೀಲರೂ ಈ ಭಾಗದ ಪ್ರಸಿದ್ಧ ಸಹಕಾರಿ ಚಳವಳಿಯ ಪುರಸ್ಕರ್ತರೂ ಆಗಿದ್ದ ಮಿ. ವಿಶ್ವನಾಥರಾವ ಹೆಳವೀಕರ ವಕೀಲ ಇವರಿಗೆ ಭೆಟ್ಟಿಯಾಗಿ "ಧಾರವಾಡದ ಲ್ಲೊಂದು ಸಹಕಾರಿ ಸಂಘವನ್ನು ಸ್ಥಾಪಿಸಿರಿ, ನಾವು ಉಳಿದ ವೇಳೆಯಲ್ಲಿ ಅದರಲ್ಲಿ ಕೆಲಸ ಮಾಡುತ್ತೇವೆ" ಎಂದು ತಿಳಿಸಿದರು. ಮಿ. ಹೆಳವೀಕರರು ಕೂಡಲೆ ಈ ವಿಚಾರಕ್ಕೆ ಬೆಂಬಲ ಕೊಟ್ಟು ಹೊಸದೊಂದು ಸಂಘವನ್ನು ಸ್ಥಾಪಿಸಲುದ್ಯುಕ್ತರಾದರು. ಅದರಂತೆ ಅವರು ಕೆಲವು ಸ್ನೇಹಿತರ ಹಾಗು ಸಹಾನುಭೂತಿಯುಳ್ಳವರ ಸಹಾಯದಿಂದ ಸಂಘವನ್ನು ಸ್ಥಾಪಿಸಿ, ೧೯೦೬ ನೆಯ ಇಸವಿಯ ಡಿಸೆಂಬರ ೧೨ ನೇ ತಾರೀಖಿನ ದಿವಸ ಅದನ್ನು ರಜಿಸ್ಟರ ಮಾಡಿಸಿ, ೧೯೦೭ ನೇ ಇಸವಿಯ ಮಾರ್ಚ ತಿಂಗಳಿಂದ ಅತ್ಯಲ್ಪ ಸಾಧನಗಳಿಂದ ಅಲ್ಲಿ ಕೆಲಸ ಪ್ರಾರಂಭಿಸಿದರು. ಆ ಕಾಲದಲ್ಲಿ ಫಕ್ತ ಮೇಲೆ ಹೇಳಿದ ಕಾರಕೂನರ ಪಾಲಿನಿಂದ ಬ್ಯಾಂಕು ನಡಿಸುವ ವಿಚಾರವನ್ನು ಎಷ್ಟೋ ಜನರು ಹೀಯಾಳಿಸಿದರು. ಆದರೆ ಅಂಥ ಜನರೇ ಮುಂದೆ ಕಾಲಾಂತರದಿಂದ ಸಂಘದಲ್ಲಿ ಸೇರಿ ಬಂಡವಲ ಠೇವುಗಳನ್ನಿಟ್ಟು ಸಂಘವನ್ನು ಉನ್ನತಿಗೆ ತರಲು ಸಹಾಯ ಮಾಡಹತ್ತಿದರು.

ಮಿ. ಹೆಳವೀಕರ ಹಾಗೂ ಅವರ ಸಹಾಯಕರಾದ ಮಿ. ಫಕರುದ್ದೀನ ಇವರುಗಳು ತೋರಿಸಿದ ಉತ್ಸಾಹಕ್ಕೂ ಕರ್ತವ್ಯದಕ್ಷತೆಗೂ ನಾವು [illegible] ಮಿ. [illegible] ಬ್ಯಾಂಕಿನ [illegible]ದ್ದಾರೆ. [illegible] ೧೯೧೧ [illegible] ಹೆಳವೀಕರರವರು ತಮ್ಮ ಚೇರ [illegible] ಮಿ. ವ್ಹಿ. ಎನ್. ಜೋಗ, ಬಿ. ಎ. ಎಲ್. ಎಲ್ ಬಿ ಎಮ್. ಎಲ್. ಸಿ. ಇವರ ಸಲುವಾಗಿ ಬಿಟ್ಟುಕೊಟ್ಟರು. ಮಿ. ಜೋಗರವರೇ ಇದುವರೆಗೆ ಬ್ಯಾಂಕಿನ ಅಭ್ಯುದಯಕ್ಕಾಗಿ ವಿಶೇಷ ಲಕ್ಷ್ಯಪೂರೈಸುತ್ತಿದ್ದಾರೆ.

ಈ ಸಂಸ್ಥೆಯ ಉದ್ದೇಶವು- ಕೈಗಾರಿಕೆಯವರು ಮಧ್ಯಮ ವರ್ಗದವರಿಗೆ, ಸಣ್ಣ ವ್ಯಾಪಾರ ಮಾಡುವಂಥವರಿಗೆ ಹಾಗೂ ಅಲ್ಪಸಾಧನಗಳುಳ್ಳವರಿಗೆ, ಸಾಲಕೊಟ್ಟು ಸುಲಭ ಕಂತುಗಳಿಂದ ಅದನ್ನು ತೀರಿಸಿಕೊಳ್ಳುವದಾಗಿರುತ್ತದೆ. ಬ್ಯಾಂಕಿನ ಮೆಂಬರರ ಸಂಖ್ಯೆಯು ೨೮೫೫ ರ ವರೆಗೆ ಬೆಳೆದದೆ. ಶೇರುಗಳ ಬಂಡವಲವು ೯೧,೭೫೫ ರೂ. ಗಳಿದ್ದು ಠೇವುಗಳ ಒಟ್ಟು ೪,೩೪,೫೭೫-೪-೫ ರೂ. ಗಳಾಗಿವೆ; ಹಾಗೂ ಬಳಕೆಯಲ್ಲಿದ್ದ ಒಟ್ಟು ಬಂಡವಲವು ೫೭೭೮೦೯೪-೧೩-೧ ರೂ ಗಳಷ್ಟು ಆಗಿದೆ. ಬ್ಯಾಂಕಿನ ಉಪಯೋಗವು ಎಲ್ಲ ವರ್ಗಗಳ, ಜಾತಿಗಳ ಹಾಗೂ ಉದ್ಯೋಗಗಳ ಜನರಿಗೆ ಆಗುತ್ತದೆ. ಧನಸಹಾಯವನ್ನಷ್ಟೇ ಮಾಡುವದಲ್ಲದೆ, ಮೆಂಬರ ಜನರಿಗೆ ಔಷಧೋಪಚಾರ, ಶಿಕ್ಷಣ ಇವೇ ಮೊದಲಾದ ಮಾರ್ಗಗಳಿಂದಲೂ ಸಹಾಯ ಮಾಡುವ ಉದ್ದೇಶವು ಬ್ಯಾಂಕಿನದಾಗಿರುತ್ತದೆ. ಈ ಉದ್ದೇಶದಿಂದಲೇ, ಮಿ. ಜೋಗರವರು ಚೇರಮನ್ನರಾದಂದಿನಿಂದ ಔಷಧೋಪಚಾರದ ಹಾಗೂ ಶಿಕ್ಷಣ ಫಂಡುಗಳು ತೆಗೆಯಲ್ಪಟ್ಟಿವೆ. ದುರ್ಭಿಕ್ಷ ಹಾಗೂ [illegible] ದ ವೇಳೆ ಉಳಿದ ಪಟ್ಟಿಕೆ [illegible] ಫಂಡುಗಳಿಗೆ ಹಣ ಪೂರೈಸಲ್ಪಡುತ್ತ[illegible] ಇವೇ ಮೊ

ಜಾಹೀರ ನೋಟೀಸು

ರಾ॥ ಯಲ್ಲಪ್ಪಾ ಗೋಣೆಪ್ಪಾ ಕಟಗಿ ಸಾ॥ ನ್ಯಾಗಡ್ಡಗಲ್ಲಿ ಧಾರವಾಡ ಇವರಿಗೆ—

ಇದರಿಂದ ಗೋಣೆಪ್ಪಾ ಬಿನ್ ಎಲ್ಲಪ್ಪಾ ಕಟಗಿ ಸಾ॥ ಧಾರವಾಡ ನಾನು ಜಾಹೀರ ನೋಟೀಸ ಕೊಡುವದೇನಂದರೆ- ನೀನು ನನ್ನ ಬಾಪನಿದ್ದು ನನ್ನನ್ನು ೨೬-೨೭ ವರ್ಷದ ತನಕ ಜೋಪಾನ ಮಾಡಿಕೊಂಡು ಬಂದಿದ್ದು ಅಲ್ಲಿ ಯಲಿಕಡೆ ನನ್ನ ತಾಯಿಯು ಸಹ ಮೃತಪಟ್ಟಿದ್ದರಿಂದ ನೀನು ಪುನಃ ಎರಡನೇ ಲಗ್ನ ಮಾಡಿಕೊಂಡಿದ್ದು ಸದರಿ ಮಲತಾಯಿಗೂ ನನಗೂ ತಂಟೆ ವಗೈರೆ ನಡದ ಕಾರಣ ನೀನು ಆವೆಯಿಂದ ನನ್ನನ್ನು ಹೊರಗೆ ಹಾಕಿದಿ. ನಾನು ನಿಮ್ಮ ಆಡಿಪೆಯಿಂದ ಹೊರ ಬಿದ್ದಾಗ್ಯೂ ನಮ್ಮ ಪಿತ್ರಾರ್ಜಿತ ಆಸ್ತಿ ಕನಿಷ್ಠ ಎಲ್ಲಂದರೂ ೭-೮ ಸಾವಿರ ರೂಪಾಯಿ ಆಸ್ತಿ ನಿನ್ನ ತಾಬೇದಲ್ಲಿತ್ತು ಆದರೆ ಕೆಲವು ದಿವ್ಸದ ಮೇಲೆ ನನಗೆ ಒಂದು ತರದ ರೋಗ ಉತ್ಪನ್ನವಾಗಿ ಕೈಕಾಲು ಮುಟಗಿ ಆಗಿ ತಲೆ ವಗೈರೆ ಕೆಟ್ಟ್ಯಾಗ್ಯೆ ನನ್ನ ಮಲತಾಯಿಯ ಚಿತಾವಣಿಯಿಂದ ಮುಂಚಿನ ನನ್ನ ಮೇಲಿನ ಮೋಹ ತೊರೆದು ಇಡೀ ಆಸ್ತಿಯು ಮೇಲಿದ್ದ ನನ್ನ ಹಕ್ಕನ್ನ ಮುಣಗಿಸುವ ಇರಾದೆಯಿಂದ [illegible] ಒಂದು ಕಾಗದ ಬರಸಿ ನನಗೆ ಓದಲಿಕ್ಕೆ ಸಹಾ ಬಾರದ್ದ ಮೂಲಕ ನನ್ನ ಹೆಬ್ಬೆಟ್ಟಿನ ಗುರ್ತಾ ತಕ್ಕೊಂಡಿದ್ದೀಯಂತೆ ಅದು ಸಹಾ ನನಗೆ ಇಗ್ಗ್ಯೂ ನೆನಪಿ [illegible] ಹಾಗ್ಯೆ ನೆನಪಾಗಲಿಕ್ಕೆ ಕಾರಣವೇನಂದ್ರೆ ನನ್ನ ಮಲತಾಯಿಯು ಹೊಟ್ಟೇಲೆ ಒಬ್ಬ ಮಗಳಿದ್ದು ಆಕೆಯ ಹೆಸರಲೆ ನಮ್ಮ ಪಿತ್ರಾರ್ಜಿತ ರೋಖ ರೂಪಾಯಿ ಖರ್ಚ ಮಾಡಿ ಒಂದು ಜಮೀನು ತಕ್ಕೊಂಡಿದ್ದು ಈಗ ಅದರ ಪೈಕಿ ಕೆಲವು ಜಮೀನನ್ನು ನೊಂದ ವಗೈರೆ ನನ್ನ ಕಬೂಲ ಇಲ್ಲದೆ ಗುಪ್ತರೀತಿಯಿಂದ ಮಾಡು ತ್ತಾರೆಂದು ಮತ್ತು ಮನೆಯ ಅಳಿಯತನಕ್ಕೆ ಬೇರೆ ಒಬ್ಬ ಮನುಷ್ಯನನ್ನು ತಂದು ಇಟ್ಟುಕೊಂಡು ಸದರಿಯವನ ಹೆಸರಲೆ ನಮ್ಮ ಪಿತ್ರಾರ್ಜಿತ ರೋಖ ಸಾವಿರ ರೂಪಾಯಿ ಖರ್ಚ ಮಾಡಿ ಬೇರೆ ಹೊಸಮನಿ ಕಟ್ಟಿಸಿದ್ದು, ನನ್ನ ಕಬೂಲ ಇಲ್ಲದೆ ಸದರಿ ಮನಿಗೆ ಸದರಿಯವನನ್ನು ವಾರಸ್ದಾರನನ್ನಾಗಿ ನೇಮಣೂಕ ಮಾಡಿಕೊಂಡು ನೊಂದ ವಗೈರೆ ಮಾಡುತ್ತಾರೆಂದು ಸುದ್ದೀ ಕೇಳಿ ಈ ನೋಟೀಸ ಕೊಡುವ ಭಾಗ ಬಿತ್ತು ಕಾರಣ ನಾನು ನಿನ್ನ ಹೊಟ್ಟೆಯಲಿ ಒಬ್ಬನೇ ಮಗನಿದ್ದು ಇಡೀ ಆಸ್ತಿಯ ಮೇಲೆ ನನ್ನದೇ ಹಕ್ಕು ಇದ್ದು ಈಗ ನಿನ್ನ ಎರಡನೇ ಹೆಂಗಸಿಗೆ, ಆಕೆಯ ಎರಡನೇಯ ವರಿಗೆ ನೊಂದ ವಗೈರೆ [illegible] ಕಬೂಲ ಇಲ್ಲದೆ ಗುಪ್ತರೀತಿಯಿಂದ [illegible] ಆವರವರ ಮೇಲೆ ಯೋಗ್ಯವಾದ [illegible] ಕೂಡಿಸಲಾಗುವದು ಮತ್ತು ಎಲ್ಲ ವ್ಯವಹಾರವು ರದ್ದಂತಾ ತಿಳಿಯುಬೇಕು ಅಂತಾ ಬರಕೊಟ್ಟ ಜಾಹೀರ ವಿನಂತಿ.

ತಾರೀಖು ೧೯-೬-೧೯೩೬ ನೇ ಇಸ್ವಿ

ಈ ಎಡಗೈ ಹೆಬ್ಬೆಟ್ಟಿನ ಗುರ್ತಾ ಗೋಣೆಪ್ಪಾ ಬಿನ್ನ ಎಲ್ಲಪ್ಪಾ ಕಟಗಿ ಸಾ॥ ಧಾರವಾಡ ಈತನದು ಇರುತ್ತದೆ.

ನೋಟೀಸು

ಬಸವಣ್ಣೆಪ್ಪಾ ಗುರುಸಿದ್ದಪ್ಪಾ ಶಿಲವಂತರ ಸಾ॥ ಧಾರವಾಡ ಇವರಿಗೆ-

ಕೆಳಗೆ ಸಹಿ ಮಾಡಿದವನು ನೋಟೀಸು ಕೊಡುವದೇನಂದರೆ- ನನ್ನ ಸೋದರ ಸೊಸೆಯಾದ ಯಲ್ಲವ್ವಾ ಈಕೆಯನ್ನು ನಿನಗೆ ನಾನು ಲಗ್ನ ಮಾಡಿ ಕೊಟ್ಟು ಅಜಮಾಸು ೧೦-೧೧ ವರ್ಷಗಳಾದವು ಇವತ್ತಿನ ವರೆಗೂ ನೀನು ಆವಳನ್ನು ಪ್ರಪಂಚ ಮಾಡ ಲಿಕ್ಕೆ ಕರಕೊಂಡು ಹೋಗಿಲ್ಲ ಅಥವಾ ಇವತ್ತಿನ ವರೆಗೂ ಕರೆಯಲಿಕ್ಕೂ ಸಹ ಬಂದಿಲ್ಲ ನಾನು ಈ ವಳಗಾಗಿ ನಾಲ್ಕೆಂಟು ಸಾರೆ ನಿನ್ನ ಕಡೆಗೆ ಪಂಚರನ್ನು ಕರಕೊಂಡು ಬಂದು ನಮ್ಮ ಹುಡಿಗಿಯನ್ನು ಕರಕೊಂಡು ಹೋಗಿಲ್ಲ ಅಂತಾ ಕೇಳಿದರೆ ಪ್ರತಿಸಾರೆ ಸ್ವಲ್ಪ ದಿವಸಗಳಲ್ಲಿ ಒಂದು ಕರಕೊಂಡು ಹೋಗುತ್ತೇನೆಂದು ಹೇಳದಾಂಥವರು ಇವತ್ತಿನವರೆಗೂ ಬಂದು ಕರಕೊಂಡು ಹೋಗಿರುವದಿಲ್ಲ ಇವತ್ತಿನ ವರೆಗೆ ಎಂದರೆ ಸದರಿಯವಳ ಹೊಟ್ಟೆ ಬಟ್ಟೆಯ ಬಾಬತ್ತು ೩೦೦-೪೦೦ ರೂಪಾಯಿಗಳನ್ನು ಸಾಲ ಮಾಡಿದ್ದೇನೆ ಈಗ್ಗೆ ಸಾಲಗಾರರ ತಸ್ತಿ ಜೋರಾದ್ದರಿಂದ ಈ ನೋಟೀಸು ನಿನಗೆ ಕೊಡುವ ಭಾಗಬಿತ್ತು ಸದರಿ ನೋಟೀಸು ಮುಟ್ಟಿದ ೮ ದಿವಸಗಳೊಳಗಾಗಿ ಸದರಿ ರಕಮನ್ನು ಸಾಲಗಾರರಿಗೆ ಮುಟ್ಟಿಸಿ ಪಾವತಿ ತೆಗೆದುಕೊಂಡು ಸದರಿಯವಳನ್ನು ಕರಕೊಂಡು ಹೋಗಬೇಕು ಒಂದು ವೇಳೆ ತಪ್ಪಿದರೆ ಈ ನೋಟೀಸೇ ನೋದಬೇಕೆಂದು ತಿಳಿಯಬೇಕು. ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಆದೆ ತಾ॥ ೧೭-೬-೩೬ ಇಸ್ವಿ

ಶಿವಪ್ಪಾ ಸೋಮಪ್ಪಾ ನತಕಟ್ಟಿನ ಹೆಬ್ಬಳ್ಳಿ

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ! ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ ತಲೆನೋವೋ! ಹಲ್ಲುತೂಲಿಯೋ! ಮಯ್ಯಲ್ಲಿ ನೋಯುತ್ತದೆಯೋ! ಆಗಿರುವದಾದರೂ ಏನು!

ಅಜ್ಜನು— ಕಂದಾ— ಹೌದು ಮಯ್ಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯೂರಿನ ತಕ್ಕೊಳ್ಳು. ಒಂದೇ ಕ್ಷಣದಲ್ಲಿ [illegible] ನೋವುಗಳ ಪರಿಹಾರವಾಗಿ ಮಾತಾಡುವಿ [illegible] ತುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧಗಳನ್ನು ತಯಾರ ಮಾಡಿ ಕೊಡುವೆವು.

ವಿಳಾಸ— ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತು ಡ್ರಗ್ಗಿಸ್ಟ,
ಸ್ಟೇಶನರೋಡ ಹುಬ್ಬಳ್ಳಿ

ಶ್ರೀ ಅಂಕಲಿಗಿ ಬ್ಯಾಂಕ ಲಿಮಿಟೆಡ್
ಧಾರವಾಡ.

೧೯೧೩ ಇಸ್ವಿಯ ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಬ್ಯಾಲಂಸ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ ವಸೂಲಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ರವರೆಗೆ ನಡೆಯುವದು.

K. B. Ankaligi
ರಾಶಿವ [illegible]

ಚಂದಾದಾರರಿಗೆ ಸೂಚನೆ.

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿತ್ಯ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಂತಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಕ್ಕೌತುಕ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

(R. N. B. 144)

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭೧ ಧಾರವಾಡ ಸೋಮವಾರ ತಾರೀಖು ೨೯ ನೇ ಜೂನ ೧೯೩೬ (ಸಂಚಿಕೆ ೧೪೨

ಸರಕಾರದಿಂದ ಪೇಟಂಟ ದೊರೆತಿದ

ಮಲ್ಲಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ಜಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ ರೂ.
ನಂ ೨	೨೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್

ಕಿರ್ಲೋಸ್ಕರವಾಡಿ

ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

—o—

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ

ಧಾರವಾಡ.

ವಿಜಯದ ವರ್ಗಣೀ ದರ

—o—

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಅಣ್ಣೆ ರಷ್ಟು ಆಗಿಯಂತಿರುತ್ತದೆ.

ಎ. ಕೆ. ಶೆಟ್ಟಿ,

ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ.

ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ್ ನಿಂದ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಾಯಿಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಹಾಗಿ,

ಮ್ಯಾನೇಜಿಂಗ ಡಾಯರೆಕ್ಟರ

ಹೋಮಿಯೋಪಥಿ ಪದರಗಳು.

—o—

ಸಿಂಗಲ ಕಾಲಮಿನ ಹತ್ತು ಪಂಕ್ತಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಂಕ್ತಿಗೆ ಒಂದು ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಎರಡು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆಣೆ ಡಬಲ್ ಕಾಲಮಿನ ಒಳಗಳಿಗೆ [illegible] ಕಾಯಂ ಜಾಹೀರಾತುಗಳನ್ನು ಕೊಡ ಬಯಸುವವರು ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ಧಾರವಾಡ ಜಿಲ್ಲಾ ಕುರುಬರ ೧ನೇ ಪರಿಷತ್ತು
ದೇವೀ ಹೊಸೂರು.

—೦—

(ಒರೆದು ಬಂದದ್ದು)

ಮೊದಲು ಪ್ರಸಿದ್ಧ ಮಾಡಿದ ಮೇರೆಗೆ ತಾ. [illegible]-೬-೧೯೩೭ ನೇ ದಿವಸ ಪರಿಷತ್ತಿನ ಅಧ್ಯಕ್ಷರನ್ನು ಹಾಗು ಯಾವತ್ತು ಸಭಿಕರನ್ನು ಸ್ವಾಗತಪೂರ್ವಕ ಕರಕೊಂಡು ಬಂದ ಬಳಿಕ ಮಧ್ಯಾನ್ಹದ ೪ ಘಂಟೆಗೆ ಮನೋಹರವಾದ ಮಂಟಪದಲ್ಲಿ ಪರಿಷತ್ತಿನ ಕಾರ್ಯವು ಪ್ರಾರಂಭವಾಯಿತು. ಈ ಸಭೆಗೆ ಮುಂಬಯಿ ಶಾಯಿದೆ ಕೌನ್ಸಿಲದ ಹಿಂದಿನ ಮೆಂಬರರಾದ ಶ್ರೀಮಂತ ದೇಸಾಯಿ ದ್ಯಾಮಪ್ಪಾ ನಬಗರ ಕೊಲ್ಹಾಪೂರ, ಕೊಲ್ಹಾಪೂರ ಸಂಸ್ಥಾನದ ಕಂಕಣವಾಡಿ ಮಹಾಸ್ವಾಮಿಗಳು, ಶ್ರೀ ಚಿದಾನಂದ ಸ್ವಾಮಿಗಳು ಗದಗ, ಮೆ|| ಡೆ ಡಾಯರೆಕ್ಟರ ಲೋಕಲ ಬೋರ್ಡ ದಕ್ಷಿಣ ಭಾಗ ಧಾರವಾಡ, ಮೆ|| ಮಾಮಲೇದಾರ ಹಾವೇರಿ, ವ್ಹಿ ಎಸ ಬೆಳಗ ಎಮ ಎಲ್ ಸಿ ಧಾರವಾಡ, ಯಲ್ಲಪ್ಪಾ ಸಾಮ್ರಾಣಿ, ತಿಮ್ಮಣ್ಣಾ ಮುದಿರೆಡ್ಡಿ, ದೇಸನಗೌಡಾ ಪಾಟೀಲ ಬಿ. ಎ ಎಲ್ ಎಲ್ ಬಿ ಹಾಯ್ಕೋರ್ಟ ವಕೀಲ ಧಾರವಾಡ, ಅಲ್ಲೀಸಾಹೇಬ ಚೌಧರಿ, ನಿಂಗಪ್ಪಾ ಕಡಬಿಹಾಳ, ಡಾಕ್ಟರ ಮಿಂಚಿ ಹಾವೇರಿ, ಲಚ್ಚಪ್ಪಾ ಭಂಡಾಗಾರ ಗೋಕಾಕ, ವೆಂಕಟೇಶ ಗಳಗನಾಥ, ಸಂಪಾದಕ ಬಸವರಾಜ ಹಾವೇರಿ, ರಾಮನಗೌಡಾ ಹುಲಕೋಟಿ ಬಿ ಎ ಜೆ, ಪಾವಟೆ ಬಿ ಎ ಟಿ, ಕಾರ್ಯದರ್ಶಿ ಪ್ರಾಣಿದಯಾ ಜ್ಞಾನ ಪ್ರಸಾರಕ ಸಂಘ ದಾವಣಗೆರೆ ಮೊದಲಾದವರು ಜಿಲ್ಲೆಯ ಯಾವತ್ತು ಭಾಗಗಳ ಹಾಗು ಕರ್ನಾಟಕ ಮಹಾರಾಷ್ಟ್ರಗಳ ಸುಮಾರು ಎರಡು ಸಾವಿರ ಜನರು ಕೂಡಿದ್ದರು.

ಪ್ರಾರಂಭದಲ್ಲಿ ಪಂಡಿತ ಶ್ರೀಕಂಠಶಾಸ್ತ್ರಿ ಸಲವರಿ ಇವರಿಂದ ರಚಿಸಲ್ಪಟ್ಟ ಹಾಲುಮತ ಹಾಗು ಅಧ್ಯಕ್ಷರ ಸ್ವಾಗತ ಪದ್ಯಗಳನ್ನು ಹಾಡಿದ ನಂತರ ಸ್ವಾಗತ ಮಂಡಳದ ಅಧ್ಯಕ್ಷರಾದ ಶ್ರೀ ಭೀಮನಗೌಡಾ ಮಾಗೌಡರ ಇವರು [illegible] ಸ್ವಾಗತಪರ ಭಾಷಣ ಮಾಡಿದ ಮೇಲೆ ಅ[illegible] ಚುನಾವಣೆಯಾಯಿತು. ಬಳಿಕ ಅಧ್ಯ[illegible] ಭಾಷಣ ಮಾಡಿದ ಮೇಲೆ ಶ್ರೀ [illegible] ಕೊಲ್ಹಾಪೂರ ಇವರು ಕರ್ನಾಟಕ [illegible] ಸಂಘದ ಇತಿಹಾಸವನ್ನು ಹೇಳಿದರು. [illegible] ಬರೆದ ಕೆಲವು ಪ್ರಮುಖರ ಭಾಷಣ [illegible]ಕಾಲದ ೯ ಘಂಟೆಗೆ ಸಭೆಯು [illegible]ಕ್ಕೆ ನಿಲ್ಲಿಸಲ್ಪಟ್ಟಿತು.

[illegible] ಪಂಡಿತ ಶ್ರೀಕಂಠಶಾಸ್ತ್ರಿಯವರು [illegible] ಹೋಳಕರ ಇವರ ಸುಶ್ರಾವ್ಯ ಕೀರ್ತನವನ್ನು ಮಾಡಿದರು. ಮರುದಿವಸ ಮುಂಜಾನೆ ಸಭೆಯ ಕಾರ್ಯವು ಸುರುವಾಗಿ ಠರಾವುಗಳು ಆದವು. ಮತ್ತು ಘಂಡಿನ ಕಾರ್ಯವು ನಡೆದು ಅಷ್ಟಕ್ಕೆ ನಿಲ್ಲಿಸಲ್ಪಟ್ಟಿತು. ಮಧ್ಯಾನ್ಹದ ೧ ಗಂಟೆಗೆ ಶ್ರೀ ದೇವಣಾ[illegible]ಪ್ಪಾ ನಬಗರ ಇವರ ಅಧ್ಯಕ್ಷತೆಯ ಕೆಳಗೆ ಕರ್ನಾಟಕ ಕುರುಬರ ಕೌನ್ಸಿಲದ ೩ ನೇ ಅಧಿವೇಶನವು ಕೂಡಿ ಶ್ರೀ ದೇಸನಗೌಡಾ ಪಾಟೀಲ ವಕೀಲ ಇವರಿಗೆ ಕರ್ನಾಟಕ ಕುರುಬರ ಸಂಘದಿಂದ ಮಾನಪತ್ರ ಕೊಡುವ ಸಮಾರಂಭವು ಬಹು ಉಚ್ಚ ಥಾಟದಿಂದ ನೆರವೇರಿತು. ಶ್ರೀಯುತ ದೇಸನಗೌಡರ ಮಾನಪತ್ರಕ್ಕೆ ಸಮಯೋಚಿತ ಉತ್ತರ ಕೊಟ್ಟ ಮೇಲೆ ಈ ಸಮಾರಂಭವು ಮುಗಿಯಿತು.

ನಾಲ್ಕು ಗಂಟೆಗೆ ಮತ್ತೆ ಸಭೆಯ ಕಾರ್ಯವು ಸುರುವಾಗಿ ಘಂಡಿಗೆ ೧೦೦೦ [illegible] ಕು ಕೂಡಿದ್ದವು [illegible] ಸ್ಟದ ದೇಣಿಗಿಯಾಯಿತು. [illegible] ಗಾರಿಕೆ ಸ್ಪರ್ಧೆಗಳಲ್ಲಿ [illegible] ಅಧ್ಯಕ್ಷರ ಹಸ್ತದಿಂದ ಇನಾಮು ಹಂಚಲ್ಪಟ್ಟವು. ಅಧ್ಯಕ್ಷರು ಉಪಸಂಹಾರದ ಭಾಷಣ ಮಾಡಿದ ಮೇಲೆ ಶ್ರೀ ಬಸಪ್ಪಾ ಫಕೀರಪ್ಪಾ ಕಲ್ಲಣ್ಣವರ ಜನರಲ ಸೆಕ್ರೆಟರಿ ಇವರು ಅಧ್ಯಕ್ಷರ ಹಾಗು ಸಭಿಕರ ಮತ್ತು ಸ್ವಯಂಸೇವಕರ ಆಭಾರ ಮನ್ನಿಸಿದ ಮೇಲೆ ಅಧ್ಯಕ್ಷರಿಗೆ ಹೂ ಮಾಲೆ ಹಾಕಿ ಯಾವತ್ತರಿಗೂ ತಾಂಬೂಲ ಸಮರ್ಪಿಸಿ ಹಾಲುಮತದ ಜಯಘೋಷದೊಡನೆ ಈ ಪರಿಷತ್ತಿನ ಕಾರ್ಯವು ಸಮಾಪ್ತಿಯಾಯಿತು. ಸಭೆಯಲ್ಲಿ ಕೆಲವು ಉಪಚಾರದ ಠರಾವುಗಳು ಪಾಸಾದ ನಂತರ ಸಮಾಜಕ್ಕೆ ಸಂಬಂಧಿಸಿದ ಕೆಳಗಿನ ಠರಾವುಗಳು ಪಾಸಾದವು.

(೧) ಶ್ರೀಮಂತ ಯಶ್ವಂತರಾವ ಹೋಳಕರ ಮಹಾರಾಜ ಇಂದೂರ ಇವರ ಆಯುರಾರೋಗ್ಯ ಚಿಂತನೆ (೨) ಹಾವೇರಿಯಲ್ಲಿ ಕುರುಬರ ಬೋರ್ಡಿಂಗ ಸ್ಥಾಪಿಸುವದು (೩) ಗದಗ ಹಾವೇರಿ ಧಾರವಾಡ ಈ ಪಟ್ಟಣಗಳಲ್ಲಿ ನಮ್ಮ ಸಮಾಜದ ವಿದ್ಯಾರ್ಥಿಗಳ ವಸತಿಗೃಹಕ್ಕೆ ಪುಕ್ಕಟ್ಟಾಗಿ ಜಾಗೆಯನ್ನು ಕೊಡುವದಕ್ಕಾಗಿ ಮುಖರ್ಜೀನ ಕಲೆಕ್ಟರ ಸಾಹೇಬ ಧಾರವಾಡ ಇವರಿಗೆ ವಿನಂತಿ ಮಾಡಿಕೊಳ್ಳುವದು (೪) ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಶೀಘ್ರ ಸುರುವು ಮಾಡಬೇಕೆಂದು ವಿನಂತಿ. (೫) ಗೋರಕ್ಷಣೆ ಮಾಡುವದು (೬) ನಮ್ಮ ಸಮಾಜದ ಜನರು ಹಿಂದುಸ್ಥಾನ ಸಂರಕ್ಷಕ ಸೈನ್ಯ ಬಾಯ್ಜ ಸ್ಕಾಟ ಗರ್ಲ ಗಾಯಿಡಗಳಲ್ಲಿ ಸೇರತಕ್ಕದ್ದು. (೭) ಹದ್ದುಮಾಸ್ತರ ಅಲಾವನ್ಸನ್ನು ತೆಗೆದು ಸಾರೇ ಪವಾಂ[illegible] ಪದ್ಧತಿಯನ್ನು ತೀವ್ರ ಅಮಲಿನಲ್ಲಿ ತರಲಿಕ್ಕೆ ಸರಕಾರಕ್ಕೆ ಆಗ್ರಹದ ವಿನಂತಿ (೮) ನಮ್ಮ ಸಮಾಜದ ಶಿಕ್ಷಕರಿಗೆ ಹೆಡ್ಡ ಮಾಸ್ತರ ಸುಪರವಾಯಿಝರ ಮೊದಲಾದವುಗಳಿಂದ ಪ್ರೋತ್ಸಾಹಿಸಬೇಕು. (೯) ಶಾಯಿದೆ ಕೌನ್ಸಿಲ ಲೋಕಲ ಬೋರ್ಡ, ಮ್ಯುನಿಸಿಪಾಲಿಟಿ ಹಾಗೂ ಸ್ಕೂಲಬೋರ್ಡಗಳಲ್ಲಿ ಸಮಾಜದ ಜನರನ್ನು ನಾಮಿನೇಶನ ಮಾಡಲಿಕ್ಕೆ ಸರಕಾರಕ್ಕೆ ಆಗ್ರಹದ ವಿನಂತಿ (೧೦) ನಮ್ಮ ಸಮಾಜದ ಜನರಿಗೆ ಪಡ ಜಮೀನು, ಕುರಿಗಳಿಗೆ ಅಡವಿ ಮತ್ತು ಬಂದೂಕ ಲಾಯಿಸೆನ್ಸ ಕೊಡಬೇಕು. ಮತ್ತು ಲ್ಯಾಂಡ ಮೋರ್ಗೇಜ ಬ್ಯಾಂಕು ಸ್ಥಾಪಿಸಲಿಕ್ಕೆ ಸರಕಾರಕ್ಕೆ ಆಗ್ರಹದ ವಿನಂತಿ (೧೧) ನಮ್ಮ ಸಮಾಜದ ಕನ್ನಡ ಮುಲ್ಕೀ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ಟ್ರೇನಿಂಗ ಕಾಲೇಜ ಹಾಗೂ ಇತರ ಖಾತೆಗಳಲ್ಲಿ [illegible] ಮೊದಲು ಸೇರಿಸಬೇಕು [illegible] ಇಂಗ್ರೇಜಿ ಕಲಿಯುವವರಿಗೆ ಮಾಫೀ ಸ್ಕಾಲರ[illegible] ಕೊಡಬೇಕು (೧೨) ನಮ್ಮ ಸಮಾಜದ ಯೋಗ್ಯ ಜನರಿಗೆ ಸರಕಾರೀ ಒಕ್ಕಲತನ ಖಾತೆಗಳಲ್ಲಿ [illegible] ಮೊದಲಾದ ಸ್ಥಳಗಳನ್ನು ಕೊಡಬೇಕು, (೧೩) ಕರ್ನಾಟಕ ಕುರುಬರ ಸಂಘದ ಶಾಖೆಗಳು ಅಲ್ಲಲ್ಲಿ ಸ್ಥಾಪಿಸುವದು ಮತ್ತು ಪ್ರಚಾರಕರನ್ನು ನೇಮಿಸುವದು.

— —

ಸರ ಇಬ್ರಾಹಿಮ ರಹಿಮತುಲ್ಲಾ ಸಾಹೇಬರಿಗೆ
ಧಾರವಾಡ ಮ್ಯುನಿಸಿಪಾಲಿಟಿ
ಮತ್ತು
ಅಂಜುಮನದವರು ಕೊಟ್ಟಂಥ
ಮಾನಪತ್ರಗಳು.

—೦—

ನಾಮದಾರ ಸರ ರಹಿಮತುಲ್ಲಾ ಸಾಹೇಬರಿಗೆ ಧಾರವಾಡ ಮ್ಯುನಿಸಿಪಾಲಿಟಿ ಹಾಗು ಅಂಜುಮಾನದವರು ಶನಿವಾರ ತಾ|| ೧೯-೬-೧೯೩೭ ದಿವಸ ಮುಂಜಾನೆ ಎರಡು ಮಾನಪತ್ರಗಳನ್ನು ಸಮರ್ಪಿಸಿದರು. ಮಿ. [illegible]ಸಾಹೇಬರು ಮ್ಯುನಿಸಿಪಾಲಿಟಿಯ ಮಾನಪತ್ರವನ್ನು ಹಾಗು ಮೌಲ್ವಿ ವಲಿಉಲ್ಲಾ[illegible] ಅಂಜುಮಾನದ ಉರ್ದು ಮಾನಪತ್ರವನ್ನು ಓದಿದರು. ತರವಾಯ ಸರ ಇಬ್ರಾಹಿಮರವರು ಭಾಷಣ ಮಾಡಿದ್ದರ ಸಾರಾಂಶವು—

ಧಾರವಾಡ ಮ್ಯುನಿಸಿಪಾಲಿಟಿಯ ಅಧ್ಯಕ್ಷರೇ ಮತ್ತು ಸಭಾಸದರೇ ತಾವು ನನಗೆ ಮಾಡಿದ ಸನ್ಮಾನದ ಬಗ್ಗೆ ನಾನು ನಿಮ್ಮೆಲ್ಲರ ಆಭಾರ ಮನ್ನಿಸಲಿಕ್ಕೆ ನನಗೆ ಶಬ್ದಗಳೇ ಇಲ್ಲ. ನಾನು ಸಾರ್ವಜನಿಕ ಚಟುವಟಿಕೆಯಲ್ಲಿ ಕಳೆದ ೩೦ ವರ್ಷಗಳಿಂದ ತೊಡಗಿರುವೆನು. ಜನಸೇವೆ ಮಾಡುವದು ನನ್ನ ಜನ್ಮತಃ ಬಂದ ಗುಣವಿರುವದು,

ಜನರ ಸೇವೆ ಅಥವಾ ಸಾರ್ವಜನಿಕ ಸೇವೆ ಅಂದರೆ ಒಂದೇ ಆದೆ. ಸರಕಾರಿ ಮತ್ತು ಜನ್ಮಸರಕಾರಿ ಸೇವೆಯಲ್ಲಿ ಭೇದವಿಲ್ಲ. ನಾನು ಶಾಲೆಯ ವಿದ್ಯಾರ್ಥಿ ಇದ್ದಾಗ್ಗೆ ವೃತ್ತಪತ್ರ ಓದುತ್ತಿದ್ದಾಗ್ಗೆ ಮ್ಯುನಿಸಿಪಾಲಿಟಿಯಲ್ಲಿ ಸೇರಿ ಜನರ ಸೇವೆ ಮಾಡಬೇಕೆಂಬ ಉತ್ಕಟೇಚ್ಛೆಯುಂಟಾಯಿತು ೧೮೯೦ರಲ್ಲಿ ಮೊದಲನೇ ಸಾರೆ ನಾನು ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ಆರಿಸಲ್ಪಟ್ಟ ಸಭಾಸದನಾದೆನ, ತಕರವಾಸಿಗಳ ಸೇವೆ ಮಾಡುವದೇ ನನ್ನ ಮನೋದಯವಿತ್ತು. ಮುಂದೆ ನಾನು ಮ್ಯುನಿಸಿಪಾಲಿಟಿಯ ಚೇರಮನ್ನ ಹಾಗು ೧೯೦೯ ರಲ್ಲಿ ಮುಂಬಯಿ ನಗರದ ಅಧ್ಯಕ್ಷ ಪದಕ್ಕೆ ಏರಿದೆನು ಇದೇ ವರ್ಷದಲ್ಲಿ ಮುಂಬಯಿ ಕೌನ್ಸಿಲದಲ್ಲಿ ನನ್ನ ನೇಮಣೂಕಿಯಾಯಿತು. ಅಂದಿನಿಂದ ಈ ವರೆಗೆ ನಾನು ಮುಂಬಯಿ ಅಥವಾ ಹಿಂದುಸ್ಥಾನದ ಕೌನ್ಸಿಲದ ಸಭಾಸದನಾಗಿ ಉಳಿದಿದ್ದೇನೆ

ಸಾರ್ವಜನಿಕ ಕೆಲಸ ಮಾಡಲು ರಾಜಮಾರ್ಗವಿಲ್ಲ. ಆದರೆ ಲಕ್ಷ್ಯಪೂರ್ಣ ಅಭ್ಯಾಸ, ಪರಿಶ್ರಮ, ಉತ್ಕಟೇಚ್ಛೆ ಇವುಗಳೇ ಬೇಕಾಗುತ್ತವೆ. ಇವಿದ್ದರೆ ಪ್ರತಿಯೊಬ್ಬ ವಿದ್ಯಾರ್ಥಿಗೆ ಹೆಚ್ಚಿನ ಸೌಲಭ್ಯಗಳು ದೊರೆಯುವವು.

ನಾನು ಮುಂಬಯಿ ಕೌನ್ಸಿಲದಲ್ಲಿ ಸೇರಿದ ಕೂಡಲೆ ಪ್ರಾಥಮಿಕ ಶಿಕ್ಷಣವು ಆವಶ್ಯವೆಂದು ನನಗೆ ಅನಿಸಿ ೧೯೧೦ರಲ್ಲಿ ನಾನು ಈ ಪ್ರಶ್ನೆಯನ್ನು ಎತ್ತಿದೆನು. ಈಗ ಪ್ರಾ. ಶಿಕ್ಷಣವನ್ನು ಬೇಕೆನ್ನದಿದ್ದ ಮಾನವನು ಸಿಗುವದೇ ದುರ್ಲಭ. ನೀವು ಪ್ರಾ. ಶಿಕ್ಷಣವನ್ನು ಪ್ರಸಾರ ಮಾಡಲಿಕ್ಕೆ ಪ್ರಯತ್ನಪಟ್ಟದ್ದು ಕಂಡು ಆನಂದವಾಗುತ್ತದೆ. ಮೊದಲು ಪ್ರಾ. ಶಿಕ್ಷಣ ಪ್ರಸಾರ ಮಾಡಿ ತರುವಾಯ ಸಕ್ತಿ ಶಿಕ್ಷಣ ಕೊಡಬೇಕೆಂಬ ನಿಮ್ಮ ವಿಚಾರವು ಯೋಗ್ಯವಿದೆ ಆದರೆ ನಿಮಗೆ ದುಡ್ಡಿನ ಕೊರತೆ ಆದೆ ಎಂದು ಹೇಳುತ್ತೀರಿ. ಇದು ಸರ್ವರಿಗೂ ಸಾಮಾನ್ಯವಾದ ಕೊರತೆಯು. ಯೋಗ್ಯ ಪ್ರತಿಫಲವು ದೊರೆಯುವದರಿಂದ ಬ್ಯಾಂಕುಗಳಲ್ಲಿ ಬಂಡವಲು ಹಾಕಬೇಕೆಂದು ಉತ್ತೇಜಿಸುವಂತೆ ಹೇಳುತ್ತಾರೆ ಆದರೆ ಶಿಕ್ಷಣದಲ್ಲಿ ವೆಚ್ಚ ಮಾಡಿದ ಹಣವು ಅಗಣಿತ ಲಾಭವನ್ನು ಕೊಡುವದು.

ನಿಮ್ಮಲ್ಲಿ ೧ ನೇ ವರ್ಗದ ಇಂಗ್ಲಿಷ ಕಾಲೇಜು ಆಗಿದ್ದು ನೀವು ವಿಶ್ವವಿದ್ಯಾಲಯದ ಬಗ್ಗೆ ಪ್ರಯತ್ನ ಮಾಡುತ್ತಿರುವಿರಿ; ಇದಕ್ಕೆ ಎಲ್ಲರೂ ನೆರವಾಗಬೇಕು ಮತ್ತು ನಿಮ್ಮ ಇಚ್ಛೆಯು ಶೀಘ್ರವಾಗಿ ಕೈಗೂಡಲೆಂದು ನಾನು ಆಶಿಸುತ್ತೇನೆ ನೀವು ಲಿಂಗಾಯತ ಪಂಥದವರು ಈ ಊರಲ್ಲಿ ಕೆಲಸ ನಡೆಸುತ್ತಿರುವದನ್ನು ನೋಡಿ ನನಗೆ ಆನಂದವಾಗಿರುತ್ತದೆ ಧಾರವಾಡವು ಸಹಕಾರ ಚಳವಳಿಯ ಅಗ್ರಸ್ಥಾನವಿರುವದು. ಇದೇ ಸಹಕಾರ ಬುದ್ಧಿಯು ಮುನಿಸಿಪಾಲಿಟಿಯೆಂಬ ಸ್ಥಾನಿಕ ಸ್ವರಾಜ್ಯ ಸಂಸ್ಥೆಯಲ್ಲಿ ಸಹ ತುಂಬಿ ತುಳುಕಬೇಕೆಂದು ನನ್ನ ಕೋರಿಕೆ ಸಾಧಿಕ ಸಹಕಾರದಿಂದ ಮಾಡುವ ಸ್ಥಿತಿಗೆ ಬಂದು ಮುಂದೆ ನಿಮ್ಮ ಮಾತೃಭೂಮಿಗಾಗಿ ಸ್ವರಾಜ್ಯ (ಸೆಲ್ಫ ಗವರ್ನಮೆಂಟ) ವನ್ನು ಸಂಪಾದಿಸಿರಿ

ಬಕರೀದದ ದೆಸೆಯಿಂದ
ದಿಲ್ಲಿಯಲ್ಲಿ ಹಿಂದೂ ಜನರ ಹರತಾಳ.

ಬಕರೀದ ಹಬ್ಬದ ದಿವಸ ಮುಸಲಮಾನರು ಮಸಜೀದ ದರವಾಜಾ ಎಂಬ ಹೆಸರಿನ ಬೀದಿಯಲ್ಲಿ ಬಲೀ ಕೊಡುವದಕ್ಕಾಗಿ ಆಕಳ ಒಯ್ಯುವರು ಕಳೆದೆರಡು ವರ್ಷ ಇದರ ದೆಸೆಯಿಂದಲೇ ಹಿಂದೂ ಮುಸಲಮಾನ ದಂಗೆಯಾಯಿತು ಈ ಬಾಗಿಲದಿಂದ ಆಕಳ ಒಯ್ಯಗೊಡಬೇಡಿರೆಂದು ಹಿಂದೂ ಜನರು ಸರಕಾರಕ್ಕೆ ವಿನಂತಿ ಮಾಡಿಕೊಂಡರು. ಈ ವಿನಂತಿಯು ಅರಣ್ಯರೋದನವಾದುದರಿಂದ, ಹಿಂದೂ ಜನರು ಮೂರು ದಿವಸ ಹರತಾಳ ಮಾಡಿ, ತಮ್ಮ ತೀವ್ರವಾದ ನಿಷೇಧವನ್ನು ವ್ಯಕ್ತಪಡಿಸಬೇಕೆಂದು ನಿರ್ಧಾರ ಮಾಡಿದ್ದಾರೆ.

ಕೆಮಾಲ ಪಾಶ್ಯಾನನ್ನು ಕೊಲ್ಲುವ ಒಳಸಂಚು.

ಸ್ಮರ್ನಾ ಪಟ್ಟಣದಲ್ಲಿ ಘಾಜಿ ಕೆಮಾಲ ಪಾಶ್ಯಾನನ್ನು ಕೊಲ್ಲಬೇಕೆಂದು ಮಾಡಿದ ಒಳಸಂಚು ಕಂಡುಬಿದ್ದದೆ ಪೋಲೀಸರು ಅನೇಕರನ್ನು ದಸ್ತಗಿರ ಮಾಡಿದ್ದಾರೆ.

ಇಂಗ್ಲಿಷರ ವಿರುದ್ಧ ರಶಿಯಾದಲ್ಲಿ ಚಳವಳಿ

ರಶಿಯಾದ ಕೂಲಿಕಾರರು ಇಂಗ್ಲಂಡದ ಕೂಲಿಕಾರರಿಗೆ ಕಳಿಸುವ ಆಪದ್ಧನವನ್ನು ಇಂಗ್ಲಿಷ ಮುತ್ಸದ್ದಿಗಳು ತಿರಸ್ಕರಿಸುವದರ ನಿಷೇಧ ಮಾಡುವದಕ್ಕಾಗಿ ಮಾಸ್ಕೋ ಪಟ್ಟಣದ ತುಂಬ ಕೂಲಿಕಾರರ ಪ್ರಚಂಡ ಜಾಹೀರ ಸಭೆಗಳು ಕೂಡಿದವು ಇಂಗ್ಲಿಷ ವಕಾಲತಿಗೆ ಈ ಸಭೆಗಳ ಬಿಸಿಯಿಂದ ಅಪಾಯ ತಪ್ಪಬಾರದೆಂದು ಸರಕಾರದವರು ಪೋಲೀಸ ಬಂದೋಬಸ್ತು ಇಟ್ಟಿದ್ದರು.

ಕಳೆದ ಗುರುವಾರದ ದಿವಸ ಕಲಕತ್ತೆಯಲ್ಲಿ ಬಹಳ ದೊಡ್ಡ ಮಳೆ ಸುರಿಯಿತು. ಬೀದಿಗಳಲ್ಲಿ ಮೊಳಕಾಲಮಟ ನೀರು ಹರಿಯಿತು. ಮೂರು ತಾಸಿನ ತನಕ ಟ್ರಾಮ ಸಹ ಬಂದಾಯಿತು.

ಕೌನ್ಸಿಲ ಚುನಾವಣೆ

ಚುನಾವಣೆಯ ಸಂಪೂರ್ಣ ವಿವೇಚನೆಯು

ಬ್ರಾಹ್ಮಣ ಬ[illegible] [illegible]ಚಾರ, ಪ್ಲೆಮಾಳ, ರಾಷ್ಟ್ರೀಯ, [illegible] ಸ್ತ್ರೀಯ ಮಂಕಾದ ಪಕ್ಷ[illegible]ಹೀರ ಸಂದೇಶಗಳನ್ನೂ, ಭಾಷಣಗ[illegible]ಕಟ್ಟಾಗಿ ವಿಜಯದಲ್ಲಿ ಪ್ರಸಿದ್ಧ ಮಾಡುವ ಸ್ಪೇಶಲ ವ್ಯವಸ್ಥೆಯು ಮಾಡಿದ್ದೇವೆ. ವಿಜಯದ ಓದುಗರು ಚುನಾವಣೆಯನ್ನು ಕುರಿತು ವಿವಿಧ ಲೇಖನಗಳ, ಕಾಲೋಚಿತ ಟೀಕೆಗಳೂ ಯಾವ ಕನ್ನಡ ಪತ್ರದಲ್ಲಿಯೂ ದೊರೆಯವು

ಆದುದರಿಂದ ತಪ್ಪದೆ ವಿಜಯವನ್ನು ಓದಿರಿ.

ಪೋಸ್ಟಿನ ಶಕ್ಯವಿದ್ದವರು ದಿನಾಲು, ಇಲದವರು ವಾರ ವಾರಕ್ಕೆ ತಪ್ಪದೆ ಓದಬೇಕು. ಓದದವರು ಕಣ್ಣಿದ್ದರೂ ಕುರುಡರಾಗುವರು. ಪ್ರತಿಯೊಂದು ಪಂಗಡದವರೂ ಕುಲದವರೂ ಪ್ರಸಿದ್ಧ ಮಾಡುವ ಲೇಖಗಳನ್ನು ಓದಿಕೊಂಡ ನಂತರ ಜಾತ್ಯಾಭಿಮಾನ ಮತ್ತು ಪಕ್ಷಾಭಿಮಾನದ ತೊಡಕಿನಲ್ಲಿ ಬೀಳದೆ, ದೇಶಹಿತ ಮಾಡುವಂಥ ಪಕ್ಷಕ್ಕೇ ಹೋಟು ಕೊಡಬೇಕೆಂಬ ವಿವೇಕವು ತಾನಾಗಿ ಅಂತಃಕರಣದಲ್ಲಿ ಮೂಡುವದು.

ಕಾರಣ ಚುನಾವಣೆ ಮುಗಿಯುವ ತನಕ ವಿಜಯವನ್ನು ಓದಿರಿ. ಮತ್ತು ಆ ನಂತರ ಯಾವ ಪಕ್ಷದ ಮೇಲ್ಮೆಯಾಗಿ ಆದೇಶ ಕರ್ತೃತ್ವ ಮಾಡುವ ಹಂಬಲ ತೋರುವದೆಂಬದನ್ನು ಓದಿರಿ. ಅಂದರೆ ಒಂದು ವರ್ಷದ ತನಕ ಓದ ಬರುವ ಎಲ್ಲರು ವಿಜಯವನ್ನು ಕೈತಕ ಓದಬೇಕು. ಓದ ಬರದವರು ಅನ್ಯರಿಂದ ಓದಿಸಿಕೊಂಡು ತಿಳಕೊಳ್ಳಬೇಕು.

ದೇಶಹಿತವನ್ನೇ ಮೂಲ ಹಿಡಿದಿಟ್ಟುಕೊಳ್ಳುವವರು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ಚಂದಾ ನಿರ್ಣಯ:- ಅಂಚೆವೆಚ್ಚ ಸೇರಿ ವರ್ಷಕ್ಕೆ ದಿನ ಪತ್ರಕ್ಕೆ ೧೨-೮-೦. ವಾರ ಪತ್ರಕ್ಕೆ ೩-೧೨-೦

R N B 1443

ವಿಜಯ

ಸಾಪ್ತಾಹಿಕ ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಲಾಚಾರ್ಯ ಜೋಸಕೇರಿ.

ವರ್ಷ ೬) ಧಾರವಾಡ ಮಂಗಳವಾರ ತಾರೀಖು ... ಮಾನ್ಯರ ... (ಸಂಚಿಕೆ ೨೩

ವಿಜಯ.

ಧಾರವಾಡ ತಾ- ೨೨-೬-೨೦ ನೇ ಇಸ್ವಿ

ಧಾರವಾಡದಲ್ಲಿ ಬ್ರಾಹ್ಮಣೇತರ ಪಕ್ಷದ ಪೂರ್ಣ ಪರಾಜಯ.

ಮೊನ್ನಿನ ದಿವಸ ಈ ಊರ ಮ್ಯುನಿಸಿಪಾಲಿಟಿಯ ಮೂರನೇ ವಾರ್ಡಿನ ಚುನಾವಣೆ ಇತ್ತು. ಆ ವಾರ್ಡಿಗೆ ಡಾಕ್ಟರ ರಾಮಚಂದ್ರರಾವ ಶಿವಪುಟ್ಟಿ ಮತ್ತು ಶ್ರೀ ರುದ್ರಯ್ಯನವರು ಹಿರೇಮಠ ಇವರಿಬ್ಬರು ಉಮೇದವಾರರಾಗಿದ್ದರು. ಡಾಕ್ಟರ ಶಿವಪುಟ್ಟಿಯವರು ಬ್ರಾಹ್ಮಣ-ಲಿಂಗಾಯತ- ಮುಸಲಮಾನ ಮೊದಲಾದ ಎಲ್ಲ ಕುಲಗಳ ಸಂಯುಕ್ತ ಮಂಡಲಕ್ಕೆ ಸೇರಿದವರು. ಶ್ರೀ ರುದ್ರಯ್ಯನವರು ಕೇವಲ ಬ್ರಾಹ್ಮಣೇತರ ಪಕ್ಷಕ್ಕೆ ಸೇರಿದವರು. ಈ ಪ್ರಕಾರ ಎರಡೂ ಪಕ್ಷಗಳು ಒಡೆಮುಕಾಣುತ್ತಿದ್ದವು. ಈ ವಾರ್ಡಿನಲ್ಲಿ ಬ್ರಾಹ್ಮಣರಿಗಿಂತ ಬ್ರಾಹ್ಮಣೇತರರ ಮತಗಳು ಆರುನೂರಕ್ಕಿಂತ ಹೆಚ್ಚಿರುವವು. ಆದರೆ ಚುನಾವಣೆಯಲ್ಲಿ ಡಾಕ್ಟರ ಶಿವಪುಟ್ಟಿಯವರು ೫೦ ಕ್ಕಿಂತ ಹೆಚ್ಚು ಮತಗಳಿಂದ ಯಶಸ್ವಿಯಾದರು. ದೇಶಭಕ್ತ ವಿಜಾಪುರಕರಾಮರ ಚುನಾವಣೆಯ ವೇಳೆಯಲ್ಲಿಯೇ ಬ್ರಾಹ್ಮಣೇತರರೆಂಬ ... ಪಕ್ಷಕ್ಕೆ ... ಒಂದೆರಡು ... ಮುಂದಿನವನ ಕಾಲಿಗೆ ಹತ್ತಿದ ... ನವರು ... ಬ್ರಾಹ್ಮಣೇತರ ... ಅನ್ಯರ ... ಗೆ ತಳ್ಳಿ ನೀರು ಎಷ್ಟು ... ನ್ನು ನೋಡುವಂತೆ ... ಒಮ್ಮೆಯಲ್ಲ, ಎರಡು ... ತೋರಿಸಿ ... ವಾರ್ಷಿಕ ಚುನಾವಣೆಯೂ ... ಇದೇ ತರಹವಾಗಿ ಅಧೋಮುಖ ಹೊಂದುತ್ತಿರುವದು ಮುಂದೆ ಏನಾದರೂ, ಮುಂದಾಗುವ ಪರಿಣಾಮವನ್ನು ಈ ಉಪಚುನಾವಣೆಯು ಮುಂಗಡ ... ಮಾಡಿ ಹೇಳಿತೆಂದು ಒರೆಯುವದಕ್ಕೆ ಎಷ್ಟೂ ಪ್ರತ್ಯವಾಯವಿರುವದಿಲ್ಲ.

ಮುಂಬಯಿ ಟಾಯಿಮ್ಸದ ಸುದ್ದಿಗಾರರು ಈ ಜಿಲ್ಹೆಯಲ್ಲಿ ಬ್ರಾಹ್ಮಣೇತರ ಪಕ್ಷದ ಮುಂದಾಳುಗಳಾದ ರಾ. ಬ. ಕಂಬಳಿಯವರ ವಿಷಯವಾಗಿದ್ದ ಜನಾನುರಾಗವು ಕಡಿಮೆಯಾಗುತ್ತಿರುವದೆಂದು ಬರೆದಿರುತ್ತಾರಷ್ಟೆ, ಧಾರವಾಡದಲಾಗಲಿ, ಹುಬ್ಬಳ್ಳಿಯಲ್ಲಾಗಲಿ, ಎಲ್ಲಾದರೂ ಕೇವಲ ಬ್ರಾಹ್ಮಣೇತರ ಪಕ್ಷವೆಂಬುದು ಹಿಂದೆ ಬೀಳುತ್ತಿರುವದೆಂದೇ ನಿಶ್ಚಳವಾಗಿ ಕಂಡು ಬರುತ್ತಿರುವದು. ಅದೇ ವಿಚಾರದಿಂದ, ಟಾಯಿಮ್ಸದ ಸುದ್ದಿಗಾರರು ಹೇಳುವಂತೆ ರಾ. ಬ. ಬಿ. ಎಲ್ ಪಾಟೀಲರು ಅಸೆಂಬ್ಲಿಯ ಚುನಾವಣೆಯಲ್ಲಿ ಶ್ರೀ ಬೆಳವಿಯವರ ಕೂಡ ಸ್ಪರ್ಧೆ ಮಾಡಲು ಹಿಂದು ಮುಂದೆ ನೋಡುತ್ತಿರಬಹುದು. ಬ್ರಾಹ್ಮಣೇತರ ಪಕ್ಷವು ಭೂತಯನಕ್ಕೆ ಹಾಕಿದ್ದನ್ನು ಕಂಡು, ಇದಕ್ಕೆ ಪುನಃ ಪ್ರಾಣವಾಯು ಹಾಕುವದಕ್ಕಾಗಿ ಪುಣೆಯಲ್ಲಿ ಪಾಸಗಲ್ಲಿನ ರಾಜರ ಅಧ್ಯಕ್ಷತೆಯಲ್ಲಿ ಸ್ಪೇಶಲ ಸಭೆಯನ್ನು ಕೂಡಿಸುವರು. ಮಹಾ ಪ್ರವಾಹಕ್ಕೆ ವಿರುದ್ಧವಾಗಿ ಒಡ್ಡು ಹಾಕುವಂತ ಈ ಸಭೆಯಲ್ಲಾದ ಠರಾವುಗಳ ಪರಿಣಾಮವಾಗುವದೇ ಖಂಡಿತ

ಧಾರವಾಡ ಜಿಲ್ಹೆಯ ಕೌನ್ಸಿಲ ಚುನಾವಣೆಯು.

ಮೆಸರ್ಸ ಜೋಗ, ಕಂಬಳಿ, ಹುಲಕೋಟಿ ಮತ್ತು ಹೊಸಮನಿಯವರ ಬಲಾಬಲದ ವಿಚಾರ.

ಮುಂಬಯಿ ಟಾಯಿಮ್ಸ ಆಫ ಇಂಡಿಯಾ ಕ್ಕೆ ಧಾರವಾಡದ ಸುದ್ದಿಗಾರರು ಪ್ರಸ್ತುತದ ಚುನಾವಣೆಯನ್ನು ಕುರಿತು ಒಂದು ಲೇಖವನ್ನು ಪ್ರಸಿದ್ಧ ಮಾಡಿದ್ದಾನೆ. ಅದರ ಸಾರಾಂಶವು ಕೆಳಗೆ ಕೊಟ್ಟಿರುತ್ತೇವೆ-

ಬೇರೆ ಸ್ಥಳಗಳಂತೆ ಬರುವ ಚುನಾವಣೆಯ ದೆಸೆಯಿಂದ ಇಲ್ಲಿಯೂ ರಾಜಕೀಯ ವಿಚಾರವಾಗಿ ಲೋಕ ಜಾಗೃತಿಯುಂಟಾಗಿದೆ. ಧಾರವಾಡದಲ್ಲಿ ಎರಡೇ ರಾಜಕೀಯ ಪಕ್ಷಗಳಿರುವವು. ಒಂದು ಸ್ವರಾಜ್ಯ, ಮತ್ತೊಂದು ಬ್ರಾಹ್ಮಣೇತರ. ಪ್ರತಿಯೋಗಿ ಸಹಕಾರವೆಂಬುದು ಬಹುತೇಕವಾಗಿ ಗೊತ್ತೇ ಇಲ್ಲ. ಪ್ರಕೃತದಲ್ಲಿ ಬ್ರಾಹ್ಮಣೇತರ ಪಕ್ಷದ ಜೋಕ್ಮೆಯು, ಸ್ಥಾನಿಕ ಸಂಸ್ಥೆಗಳು ಅದರ ಅಧಿಕಾರಕ್ಕೊಳಪಟ್ಟಿರುತ್ತವೆ. ಕಾಂಗ್ರೆಸ ಕಮಿಟಿಗಳು ಧಾರವಾಡ, ಹುಬ್ಬಳ್ಳಿ, ಗದಗ, ಮತ್ತು ಹಾನಗಲ್ಲದಲ್ಲಿ ಮಾತ್ರ ಜಾಗರೂಕವಾಗಿರುತ್ತವೆ.

ಸ್ಥಾನಿಕ ಕಾಂಗ್ರೆಸ ಕಮಿಟಿಯವರು ಮಿ. ಜೋಗರನ್ನು ತಮ್ಮ ಉಮೇದವಾರರಾಗಿ ನೇಮಿಸಿದ್ದಾರೆ. ಇವರು ಸಧ್ಯ ಕೌನ್ಸಿಲದ ಮೆಂಬರರಾಗಿದ್ದಾರೆ. ಮತ್ತು ಮೊದಲಿನಿಂದ ಕಾಂಗ್ರೆಸದ ದೀರ್ಘಭಕ್ತರಾಗಿದ್ದಾರೆ. ಇವರು ತಾಲೂಕಾ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾಗಿದ್ದು, ಜಿಲ್ಹೆಯ ಅಲ್ಲಾಗುವ ಎಲ್ಲ ಚಳವಳಿಗಳಲ್ಲಿ ಭಾಗ ತಕ್ಕೊಳ್ಳುತ್ತಾರೆ. ಈ ಜಿಲ್ಹೆಯ ಎರಡು ಸ್ಥಳಗಳ ದೆಸೆಯಿಂದ ಇನ್ನು ಮೂವರು ಉಮೇದವಾರರಿದ್ದಾರೆ. ರಾ. ಬ ಕಂಬಳಿಯವರೊಬ್ಬರು. ಇವರು ಬ್ರಾಹ್ಮಣೇತರ ಪಕ್ಷದ ಚಾಲಕರೂ ಹುಬ್ಬಳ್ಳಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರೂ, ಕೌನ್ಸಿಲದ ಎರಡನೆಯ ಮೆಂಬರರೂ ಆಗಿದ್ದಾರೆ. ಉಳಿದ ಇಬ್ಬರು ಗೃಹಸ್ಥರು ಮೆಸರ್ಸ ಹುಲಕೋಟಿ ಮತ್ತು ಹೊಸಮನಿಯವರಾಗಿದ್ದಾರೆ. ಮಿ ಅನ್ನದಾನಪ್ಪ ಹುಲಕೋಟಿಯವರು ಒಬ್ಬ ಪ್ರಮುಖ ವಕೀಲರಿದ್ದು, ಡಿಸ್ಟ್ರಿಕ್ಟ ಲೋಕಲಬೋರ್ಡಿನ ಅಧ್ಯಕ್ಷರಾಗಿದ್ದಾರೆ. ಈ ಮೊದಲು ಕೌನ್ಸಿಲದ ಮೆಂಬರರಿದ್ದರು. ಎರಡನೆಯವರು ಮಿ ಸಿದ್ದಪ್ಪಾ ಹೊಸಮನಿಯವರು. ಇವರು ಹಾವೇರಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರು, ಡಿಸ್ಟ್ರಿಕ್ಟ ಲೋಕಲಬೋರ್ಡಿನ ಸ್ಪೆಶಲಕೋರ್ಟಿನ ಚೇರಮನ್ನರು ಮತ್ತು ಒಬ್ಬ ಪ್ರಮುಖ ವಕೀಲರಾಗಿದ್ದಾರೆ.

ಎರಡು ಸ್ಥಳಗಳ ದೆಸೆಯಿಂದ ನಾಲ್ವರು ಉಮೇದವಾರರಾಗಿದ್ದಾರೆ. ಒಬ್ಬರು ಬ್ರಾಹ್ಮಣರು ಮತ್ತು ಸ್ವರಾಜ್ಯ ಪಕ್ಷೀಯರು. ಉಳಿದ ಮೂವರು ಬ್ರಾಹ್ಮಣೇತರರೂ ಕಾಂಗ್ರೆಸೇತರರೂ ಆಗಿದ್ದಾರೆ. ಹಿಂದಿನ ಚುನಾವಣೆಯಲ್ಲಿ ಇವರೇ ನಾಲ್ವರು ಸ್ಪರ್ಧಿಸಿದರು. ಮೆಸರ್ಸ ಜೋಗ ಮತ್ತು ಕಂಬಳಿಯವರು ಯಶಸ್ವಿಯಾದರು. ಪ್ರಕೃತದಲ್ಲಿ ಮಿ. ಜೋಗರು ಒಂದು ಸ್ಥಳವನ್ನು ಆಕ್ರಮಿಸಬಹುದು. ಏಕೆಂದರೆ- ಬ್ರಾಹ್ಮಣರೂ, ಕಾಂಗ್ರೆಸ ಪಕ್ಷೀಯರೂ ಇವರಿಗೇ ಓಟು ಕೊಡುವರು. ಜಿಲ್ಹೆಯಲ್ಲಿ ಅನೇಕರು ಇವರ ಕೆಲಸದ ದೆಸೆಯಿಂದ ಅಸಮಾಧಾನ ಪಟ್ಟಿದ್ದರೂ, ಕಾಂಗ್ರೆಸದ ಅಭಿಮಾನದ ದೆಸೆಯಿಂದ ಇವರಿಗೆ ಸಹಾಯ ಮಾಡಿ, ಇವರಿಗೇ ಓಟು ಕೊಡುವರು. ಇಬ್ಬರೇ ಬ್ರಾಹ್ಮಣೇತರರು ನಿಂತರೆ- ಜೋಗರ ಮತದ ಭಾಗವು ಕುಸು ಕಡಿಮೆಯಾಗುವದು. ಆದರೆ ಇದು ಸಂಭವ ವಿಲ್ಲ ... ಸ್ಥಳಗಳಿದ್ದರೂ, ಕಾಂಗ್ರೆಸವು ಒಬ್ಬರನ್ನೇ ನಿಲ್ಲಿಸಿದ್ದು ಜಾಣತನದ ಕೆಲಸವಾಗಿರುತ್ತದೆ.

ಮೂವರು ಬ್ರಾಹ್ಮಣೇತರರಲ್ಲಿ ಸ್ಪರ್ಧೆಯು ಜುರುಗುವದು ನಡೆಯುವದು. ರಾವಬಹಾದ್ದೂರ ಕಂಬಳಿಯವರು ಲೋಕಪ್ರಿಯತೆಯನ್ನು ಕಳಕೊಳ್ಳುತ್ತಿದ್ದಾರೆ ಆದುದರಿಂದ ಉಳಿದ ಇಬ್ಬರು ಇವರ ಮೇಲೆ ಹೂಡ ಸಾರಿಗಿಂತ ಜನ್ನಾಗಿ ಹೆಚ್ಚಿಗೆ ಓಟುಗಳನ್ನು ದೊರಕಿಸಬಹುದು.

ಅಸೆಂಬ್ಲಿಯ ಉಮೇದವಾರರು-

ಎರಡು ತಿಂಗಳ ಹಿಂದೆಯೇ ರಾವಬಹಾದ್ದೂರ ಬಿ. ಎಲ್. ಪಾಟೀಲರು ತಾವು ಅಸೆಂಬ್ಲಿಯ ಚುನಾವಣೆಯಲ್ಲಿ ಉಮೇದವಾರರಾಗುವಂತೆ ಜಾಹೀರ ಮಾಡಿದ್ದರು. ಆದರೆ ಈಗ ಸ್ವಸ್ಥರಾಗಿದ್ದಾರೆ. ಬೆಳಗಾವಿಯ ಮಿ. ಬೆಳವಿಯವರೂ ಒಬ್ಬ ಉಮೇದವಾರರಾಗಿದ್ದಾರೆ. ಈಗ ಇವರು ಮೆಂಬರರೂ ಆಗಿರುವರು. ಇವರು ಕಾಂಗ್ರೆಸದ ಅಭಿಮಾನಿಗಳಾದ ಹಳೇ ಗೃಹಸ್ಥರಾಗಿದ್ದಾರೆ. ರಾ. ಬ. ಪಾಟೀಲರು ಇವರ ವಿರುದ್ಧ ಸಧ್ಯ ಹೊಡೆದು ಕುಸ್ತಿಯ ಕಣದಲ್ಲಿ ನಿಲ್ಲುವ ವಿಷಯವಾಗಿ ದೀರ್ಘ ವಿಚಾರ ಮಾಡುತ್ತಿರಬಹುದು. ರಾ. ಬ. ಪಾಟೀಲರು ಉಮೇದವಾರರಾಗಿ ನಿಂತರೆ- ಅವರಿಗೆ ಯಶ ಬರುವ ಸಂಭವವು ಅಷ್ಟು ನಿಚ್ಚಳವಾಗಿರುವದಿಲ್ಲ.

ಟಾಯಿಮ್ಸದ ಸುದ್ದಿಗಾರರು ಯಥಾರ್ಥ ಬರೆದಿರುವದರಿಂದ, ಅದನ್ನು ಇಷ್ಟು ವಿಸ್ತೃತವಾಗಿ ಬರೆದಿರುತ್ತೇವೆ. ಇದರಲ್ಲಿ ವಿಜಯಕರ್ತರು ಸೇರಿಸತಕ್ಕದ್ದೇನೂ ಇರುವದಿಲ್ಲ.

ಕೌನ್ಸಿಲ ಚುನಾವಣೆಯು ವಿಜಯವಾಗಿ

ವೀರಶೈವರ ವಿಚಾರದ ಮೇಲೆ ವಿಚಾರ.

ಕೌನ್ಸಿಲ ಚುನಾವಣೆಯು ಸಧ್ಯದಲ್ಲಿ ಮುಮ್ಮುಡಿ ಜರಿಯ ವಿಷಯವಾಗಿರುತ್ತದೆ. ಈ ಜರಿಯು ಉತ್ತರ ಕರ್ನಾಟಕ ಪ್ರಾಂತದಲ್ಲಿ ಬೆಳಗಾವಿ, ಧಾರವಾಡ ಮತ್ತು ವಿಜಾಪೂರದಲ್ಲಿ ಪ್ರಬಲವಾಗಿ ಎದ್ದಿರುತ್ತದೆ. ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ಉಮೇದವಾರರು ಬ್ರಾಹ್ಮಣರಿದ್ದು, ಉದಾರ ಅಥವಾ ಬ್ರಾಹ್ಮಣೇತರ ಪಕ್ಷದವರೆಲ್ಲರೂ ವೀರಶೈವರಾಗಿದ್ದಾರೆ. ಎರಡನೇ ಬಣವು ತೋರಿಕೆಯಲ್ಲಿ ಬ್ರಾಹ್ಮಣೇತರರೆನಿಸಿದರೂ, ನಿಜವಾದ ಸ್ಪರ್ಧೆಯು ಬ್ರಾಹ್ಮಣ ಮತ್ತು ವೀರಶೈವರಲ್ಲಾಗುವದು. ಕಾಂಗ್ರೆಸದ ಪತಿಯಿಂದ ಒಬ್ಬೊಬ್ಬರೇ ಉಮೇದವಾರರಿದ್ದಾರೆ. ಪ್ರತಿಯೊಂದು ಜಿಲ್ಹೆಯ ಪರಿಸ್ಥಿತಿಯು ಬೇರೆಯಾಗಿರುತ್ತದೆ. ಬೆಳಗಾವಿ ಮತ್ತು ಧಾರವಾಡದಲ್ಲಿ ಇಬ್ಬರು ಆರಿಸಲ್ಪಡತಕ್ಕವರು. ವೀರಶೈವರಲ್ಲಿ ಮೂವರು ಉಮೇದವಾರರಾದರೆ- ಒಂದು ಸ್ಥಳವನ್ನು ಕಾಂಗ್ರೆಸ ಪಕ್ಷದವರು ಆಕ್ರಮಿಸುವರೆಂದೂ, ವೀರಶೈವರು ಕಂತಮ್ಮೊಳಗಿನ ಅನೈಕ್ಯದ ದೆಸೆಯಿಂದ ಒಂದೊಂದು ಸ್ಥಳ ಕಳಕೊಳ್ಳುವರೆಂದೂ ವೀರಶೈವರ ಚಿಂತೆಯು. ವಿಜಾಪೂರ ಜಿಲ್ಹೆಯಲ್ಲಿ ಒಬ್ಬ ಬ್ರಾಹ್ಮಣ ಮತ್ತು ಮೂವರು ವೀರಶೈವರಾಗಿದ್ದಾರೆ. ಒಬ್ಬರಂತೂ ಸಧ್ಯದಲ್ಲಿ ಮೆಂಬರರಿದ್ದಾರೆ. ಈ ಮೂವರು ಶ್ರೀ. ಕೌಜಲಗಿ ಶ್ರೀನಿವಾಸರಾಯರನ್ನು ಸರಿಗಟ್ಟಲು- ಅಸಮರ್ಥರಾಗಿರುವರೆಂಬ ಭಾವನೆಯಿಂದ ಇವರನ್ನು ಹಿಂದಕ್ಕೆ ಸರಿಸಿ, ರಾವಸಾಹೇಬ ಹಳಕಟ್ಟಿಯವರನ್ನು ಕಣದಲ್ಲಿ ನಿಲ್ಲಿಸಬೇಕೆಂಬ ಮಸಲತ್ತು ನಡೆದಿರುತ್ತದೆ. ವೀರಶೈವರ ಸ್ವೋನ್ನತಿಗಾಗಿ ಮಾಡುವ ಏರ್ಪಾಡಿನಲ್ಲಿ ನಾವು ಅಡ್ಡ ಹೋಗುವದು ವಿಹಿತವಲ್ಲ. ರಕ್ಷಕನಾಗಿಯ ಶ್ರೀಮಂತ ಸರ ದೇಸಾಯಿಯು ಕೌನ್ಸಿಲದಲ್ಲಿ ಮಾಡಿದ ಕೆಲಸದ ವಿಚಾರ ಮಾಡಿದರೆ. ಅವರು ಮೆಂಬರರಾಗಲು ಅಪಾತ್ರರಿದ್ದಾರೆಂದು ನಮ್ಮ ವಾಸೋದ್ದೇಶಕರಿಯಂತೂ ಹೇಳುವದಿಲ್ಲ. ಅವರು ಕೌನ್ಸಿಲದಲ್ಲಿ ಕೇಳಿದಂಥ ಪ್ರಶ್ನೆಗಳನ್ನು ಧಾರವಾಡ ಮತ್ತು ಬೆಳಗಾವಿ ಜಿಲ್ಹೆಯವರು ಕೇಳಲಿಲ್ಲ. ಶ್ರೀಮಂತ ಸರ ದೇಸಾಯರು ಮಿ. ಹಾರ್ಡಿಮನ್ನರಿಗೆ ವಾಸಪ್ರೋಟ ಕೊಡಬೇಕೆಂಬ ಠರಾವಿನ ಮೇಲೆ ಪ್ರಜಾಪಕ್ಷಕ್ಕೆ ಅನುಕೂಲವಾಗಿ ಮತಕೊಟ್ಟಿದ್ದು, ಅತ್ಯಂತ ಪ್ರಶಂಸಾರ್ಹವಾಗಿರುತ್ತದೆ. ಇಂಥ ಮನೋಧೈರ್ಯವು ರಾವಸಾಹೇಬ ಹಳಕಟ್ಟಿಯವರಲ್ಲಿ ಹುಟ್ಟಲಾರದೆಂದು ಧಾರಾಳವಾಗಿ ಹೇಳುವಂತಾಗಿರುತ್ತದೆ. ಆದಕಾರಣ ಇವರನ್ನು ಹಿಂದೆ ಸರಿಸುವದು ಇವರ ಅಪಮಾನ ಮಾಡಿದಂತಾಗುತ್ತದೆಂದು ನಮ್ಮ ಸಿಳುವಳಿಕೆಯಾಗುತ್ತದೆ. ಇಷ್ಟಾಗಿಯೂ ವಿಜಾಪೂರದಲ್ಲಿ ಶ್ರೀಮಂತ ದೇಸಾಯರನ್ನು ಮೂಲೆಗೊತ್ತಿದರೆ- ಧಾರವಾಡ ಮತ್ತು ಬೆಳಗಾವಿಯಲ್ಲಿ ರಾ ಬ ಕಂಬಳಿ ಮತ್ತು ಮಿ. ಅಂಗಡಿಯವರನ್ನು ಹಿಂದಕ್ಕೆ ಸರಿಸಬೇಕಾಗುವದು. ಏಕೆಂದರೆ- ಕೌನ್ಸಿಲವು ಯಾರೊಬ್ಬರ ಮಿರಾಸಿಯಲ್ಲ. ವ್ಯಕ್ತಿಯ ಆತ್ಮ ಮತ್ತು ಬುದ್ಧಿಯ ಬಲಕ್ಕಿಂತ ಜಾತಿಬಲದಿಂದ ಯಾರಾದರೂ ಮೆಂಬರರಾಗಬೇಕಾದರೆ- ಹಳಬರಿಗೆ ಹಿಂದಿರಲಿಕ್ಕೆ ಹೇಳಿ, ಹೊಸಬರನ್ನು ಮುಂದೆ ತರುವದು ವಿಹಿತ ಧರ್ಮವಾಗುತ್ತದೆ.

ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲಬೋರ್ಡಿನ ದಾವೆಯು.

ಮಿ. ಅಂಗಡಿಯವರೇ ಡಿಸ್ಟ್ರಿಕ್ಟ ಲೋಕಲ ಬೋರ್ಡಿನ ಅಧ್ಯಕ್ಷರಾಗಬೇಕೆಂದು ಅಲ್ಲಿಯ ಕಲೆಕ್ಟರಸಾಹೇಬರು ಉತ್ತರ ಕೊಟ್ಟ ಕೂಡಲೆ, ಮಿ. ಚಿಕ್ಕೋಡಿಯವರ ಪತಿಯಿಂದ ಇಬ್ಬರು ಮೆಂಬರರು ದಿವಾಣಿ ಕೋರ್ಟಿನಲ್ಲಿ ದಾವೆ ಮಾಡಿದ್ದಾರೆ. ದಾವೆಯ ಕಲಮುಗಳು—

೧ ಮಿ. ಅಂಗಡಿಯವರು ಯೋಗ್ಯ ರೀತಿಯಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟಿಲ್ಲ.

೨ ಮಿ. ಚಿಕ್ಕೋಡಿಯವರು ಅಧ್ಯಕ್ಷ ಪದದ ಚಾರ್ಜನ್ನು ಮಿ. ಅಂಗಡಿಯವರಿಗೆ ಕೊಡಬಾರದು.

೩ ಬೇರೆ ಅಧ್ಯಕ್ಷನನ್ನು ಆರಿಸುವ ತನಕ ಮಿ. ಮಿ. ಚಿಕ್ಕೋಡಿಯವರೇ ಅಧ್ಯಕ್ಷರಾಗಿ ಕೆಲಸ ಮಾಡುವಂತೆ, ಅವರನ್ನು ಒತ್ತಾಯ್ಯ ಪಡಿಸಬೇಕು.

೪ ಮೇಲಿನ ವಿನಂತಿಗಳ ಪ್ರಕಾರ ಅಮಲಿನಲ್ಲಿ ತರುವದಕ್ಕ ಮಿ. ಅಂಗಡಿ, ಚೀಫ ಆಫೀಸರ ಮತ್ತು ಚಿಕ್ಕೋಡಿಯವರಿಗೆ ನೋಟೀಸು ಆಗಬೇಕು.

ದಾವೆಯು ಬೆಳಗಾವಿಯ ಫರ್ಸ್ಟಕ್ಲಾಸ ಸಬ್ಬ ಜಡ್ಜ ಕೋರ್ಟಿನಲ್ಲಿ ಮಾಡಲ್ಪಟ್ಟಿರುತ್ತದೆ.

ಇಂಗ್ಲಿಷರ ವಿರುದ್ಧ ರಶಿಯಾದಲ್ಲಿ ಚಳವಳಿ.

ರಶಿಯಾದ ಕೂಲಿಕಾರರು ಇಂಗ್ಲಂಡದ ಕೂಲಿಕಾರರಿಗೆ ಕಳಿಸುವ ಆಪದ್ಧನವನ್ನು ಇಂಗ್ಲಿಷ ಮುತದ್ದಿಗಳು ತಿರಸ್ಕರಿಸುವದರ ನಿಷೇಧ ಮಾಡುವದಕ್ಕಾಗಿ ಮಾಸ್ಕೋ ಪಟ್ಟಣದ ಹುಂಬ ಕೂಲಿಕಾರರ ಪ್ರಚಂಡ ಜಾಹೀರ ಸಭೆಗಳು ಕೂಡಿದವು. ಇಂಗ್ಲಿಷ ವಕೀಲಾತಿಗೆ ಈ ಸಭೆಗಳ ಜನಸ್ತೋಮದಿಂದ ಅಪಾಯ ತಪ್ಪಬಾರದೆಂದು ಸರಕಾರದವರು ಪೋಲೀಸ ಬಂದೋಬಸ್ತು ಇಟ್ಟಿದ್ದರು.

ಸದರ್ನ ಮರಾಠಾ ಬ್ಯಾಂಕಿನ ಹೊಸ ಕಟ್ಟಡವನ್ನು ತೆರೆಯುವ ಸಮಾರಂಭವು.

ಈ ಸಮಾರಂಭಕ್ಕೆ ವೆಸ್ಟ್ ನ ಎನಡ ಬಹು ಸಂಘ್ರದ ಮಂದಿ ನೆರೆದಿರಲು ಸಭಾರಂಭಕಾಲದಲ್ಲಿ ಡಾಯರೆಕ್ಟರು ಸರ ಇಬ್ರಾಹಿಮ ರಹಿಮತುಲ್ಲಾ ಇವರಿಗೆ ಕೊಟ್ಟ ಮಾನಪತ್ರವೂ, ಅದಕ್ಕೆ ಅವರು ಕೊಟ್ಟ ಉತ್ತರವೂ ಈ ಕೆಳಗೆ ಕೊಟ್ಟಿರುತ್ತೇವೆ.

ಸಂಪಾದಕ

ಸರ ಇಬ್ರಾಹಿಮ ರಹಿಮತುಲ್ಲಾ

ಕೆ. ಸಿ. ಎಸ್. ಐ. ಸಿ. ಐ. ಇ

ಮುಂಬಯಿ ಶಾಸನ ಮಂಡಲದ ಅಧ್ಯಕ್ಷ

ಮಹನೀಯರಿಗೆ—

ಮಹನೀಯರೇ,

ಸದರ್ನ ಮರಾಠಾ ಜಾಯಿಂಟ ಸ್ಟಾಕ ಲಿಮಿಟೆಡ್ ಕ್ರೆಡಿಟ ಬ್ಯಾಂಕಿನ ಕಾರ್ಯಕಾರೀ ಮಂಡಲದ ಚೇರಮನ್ನ ಹಾಗು ಡಾಯರೆಕ್ಟರುಗಳಿಂದ ನಾವು ತಮಗೆ ಪ್ರೇಮ ಪೂರ್ವಕವಾಗಿ ಸ್ವಾಗತವನ್ನೀಯಲು ಆನಂದಪಡುತ್ತೇವೆ. ನಮ್ಮ ಈ ಶಾಖೆಯ ಶಾಸನ ಮಂಡಲದಲ್ಲಿ ಸರ್ವಾನುಮತದಿಂದ ನಿಯೋಜಿತರಾದ ಆ ಮಂಡಲದ ಮೊದಲನೆಯ ಅಧ್ಯಕ್ಷರಾದ ತಮಗೆ ಸ್ವಾಗತ ಮಾಡುವ ಈ ಆನಂದಮಯವಾದ ಪವಿತ್ರ ಕಾರ್ಯದಲ್ಲಿ ನಮ್ಮ ಸಂಸ್ಥೆಯ ಸಂಬಂಧವಾದ ಸಹಾನುಭೂತಿಯುಳ್ಳವರೂ ಆದರ ಕೆಲಸದಲ್ಲಿ ಅಭಿವೃದ್ಧಿ ಹೊಂದಿಸುವವರೂ ಆದ ನಮ್ಮ ಮಿತ್ರರೂ, ನಾಗರಿಕ ಬಾಂಧವರೂ ಹಾಗು ಸಹಕಾರಿ ಬಂಧುಗಳೂ ಸಹ ಪ್ರಸನ್ನ ಬಂದು ನಮಗೆ ಬೆಂಬಲ ಕೊಟ್ಟಿದ್ದಾರೆ.

ನಮ್ಮ ಸಲುವಾಗಿ ಇಲ್ಲಿಗೆ ದಯಮಾಡಿಸುವದಕ್ಕಾಗಿ, ತಮ್ಮ ಅಧಿಕಾರಸ್ಥಾನಕ್ಕೆ ಸಂಬಂಧಪಟ್ಟ ಅನೇಕ ಕೆಲಸಗಳನ್ನು ತಾವು ಬಿಟ್ಟು ಬಂದಿರುವದನ್ನು ನಾವು ಅರಿತಿರುವೆವು. ಈ ಸಭೆಯ ಸಂಸ್ಥೆಯ ಹೊಸ ಕಟ್ಟಡದ ಅನಾವರಣ ಸಮಾರಂಭವನ್ನು ಮಾಡಲಿಕ್ಕೆ ತಾವು ಒಪ್ಪಿಗೆಯನ್ನು ಕೊಟ್ಟದ್ದು ಆಭಿಮಾನದ ಸಂಗತಿ ಸಂತೋಷದ ಸಂಗತಿಯಾಗಿದೆ.

ತಮ್ಮ ದಯಾಪೂರಿತವಾದ ಈ ಕೃತ್ಯದಿಂದ, ಬಹು ಸಂಖ್ಯಾಕರಾದ ಜನರ ಕಲ್ಯಾಣ ಕಾಗೆ, ಆರ್ಥಿಕ ಉನ್ನತಿಗಳನ್ನುಂಟು ಮಾಡುತ್ತಿರುವ ಸಹಕಾರ ಚಳವಳಿಯಲ್ಲಿ ತಮಗಿದ್ದ ವಿಶೇಷ ಆಸಕ್ತಿಯು ವ್ಯಕ್ತವಾಗುತ್ತದೆ. ಹಿಂದುಸ್ಥಾನದ ವ್ಯಾಪಾರೋದ್ಯೋಗಗಳಿಗೆ ತಾವು ಮಾಡಿದ ಸಹಾಯಗಳೂ, ಇಂಡಸ್ಟ್ರಿಯಲ್ ಕಮಿಶನ ಎಂಬ ಔದ್ಯೋಗಿಕ ವಿಚಾರ ಮಂಡಲವನ್ನು ನಿಯಮಿಸಿದ ಲಕ್ಷ್ಯ ತಾವು ಮಾಡಿದ ಸಾಹಸವೂ ಪ್ರಸಿದ್ಧ ಉಂಟು. ಅದರಂತೆ ನಮ್ಮಿಂದ ಸಮಾಜ ಸ್ವಾಸ್ಥ್ಯಗಳಿಗೆ ಒದಗುವ ಸೇವೆಯನ್ನು ವರ್ಣಿಸಲು ಸಾಧ್ಯವಿಲ್ಲ. ಬಹು ಜನರ ಹಿತಕ್ಕೆ ಸಂಬಂಧಿಸಿದ ಅನೇಕ ಶಿಕ್ಷಣ ಸಂಸ್ಥೆಗಳ ಮೇಲೆ ಎಗ್ಜಿಕ್ಯೂಟಿವ್ ನಿಲ್ಲದ ಮೇಲಾಗಿ ಬಹು ಜನರಿಗೆ ಸಹಕಾರ ವಾಗುವಂತೆ ತಾವು ತಮ್ಮ ಕರ್ತವ್ಯವನ್ನು ಸಫಲಗೊಳಿಸಿರುವಿರಿ. ಜನರ ಕಲ್ಯಾಣಕ್ಕೆ ತಾವು ತೋರಿಸುತ್ತಿರುವ ಅಂತಃಕರಣ ಸಹಾನುಭೂತಿಗಳಿಂದ ಪ್ರೇರಿತರಾಗಿ, ಈ ಪುರಾತನ ಇತಿಹಾಸ ಪ್ರಸಿದ್ಧವಾದ ಪಟ್ಟಣಕ್ಕೆ ಬಂದು ಈ ಸಮಾರಂಭವನ್ನು ನೆರವೇರಿಸಲಿಕ್ಕೆ ನಾವು ತಮ್ಮನ್ನು ಪ್ರಾರ್ಥಿಸಿದ್ದೇವೆ.

ಮಹನೀಯರೇ ಈ ಸಂದರ್ಭದಲ್ಲಿ ಈ ಸಂಸ್ಥೆಯ ಇತಿಹಾಸವನ್ನು ಬೆಳಗಿನೆಯನ್ನು ವಿವರಿಸುವದು ಅಪ್ರಸ್ತುತವಾಗದು. ಇದೇ ಬೆಳಗಾವಿ ಜಿಲ್ಲೆಯ ಧಾರವಾಡ ಜಿಲ್ಲೆಯೇ ಸಹಕಾರ ಚಳವಳಿಯ ಜನ್ಮಸ್ಥಾನವಾಗಿರುವದು. ಈ ಜಿಲ್ಲೆಯ ಗದಗ ತಾಲೂಕಿನ ಕಣಗಿನಹಾಳ ಗ್ರಾಮದಲ್ಲಿ ೧೯೦೫ ರಲ್ಲಿ ಮಿ. ಜೆ. ಮ್ಯಾಕನೀಲಸಾಹೇಬರು ಕಲೆಕ್ಟರಿದ್ದಾಗ ಎಲ್ಲಕ್ಕೂ ಮೊದಲನೆಯದಾದ ಸಹಕಾರಿ ಸಂಘವು ಸ್ಥಾಪಿತವಾಯಿತು ಅತಿ ಸಣ್ಣ ಪ್ರಮಾಣದಿಂದಲೇ ನಮ್ಮ ಬ್ಯಾಂಕು ಹೊರಟಿರುವದು. ೧೯೧೭ ರಲ್ಲಿ ಇದೇ ರೀತಿ ಅಸೋಸಿಯೇಷನಲ್ಲಿ ಆಗಿನ ಕಲೆಕ್ಟರರಾಗಿದ್ದ ಮಿ. ಸ್ಯೆಯ್ಯದ ಫಕರುದ್ದೀನ ಹಾಗು ಮಿ. ಪಟ್ಟಾಭಿರಾಮಯ್ಯ ಎಂಬ್ಬವರು ಗೃಹಸ್ಥರು, ಆ ಕಾಲಕ್ಕೆ ಪ್ರಸಿದ್ಧ ವಕೀಲರಾದ ಈ ಗದಗ ಪಟ್ಟಣ ಸಹಕಾರ ಚಳವಳಿಯ ಪ್ರವರ್ತಕರೂ ಆಗಿದ್ದ ಮಿ. ವಿಶ್ವನಾಥರಾವ ಪಳೇಕರ ವಕೀಲ ಇವರಿಗೆ ಬೆಟ್ಟಿಯಾಗಿ "ಸಾರ್ವಜನಿಕ ಲಿಮಿಟೆಡ್ ಸಹಕಾರಿ ಸಂಘವನ್ನು ಸ್ಥಾಪಿಸಿರಿ, ನಾವು ಅದಕ್ಕೆ ಬೇಕಾದ ಸಹಾಯವನ್ನು ಕೊಡುತ್ತೇವೆ" ಎಂದು ತಿಳಿಸಿದರು. ಮಿ. ಪಳೇಕರರು ಈ ಬಗ್ಗೆ ಈ ವಿಚಾರಕ್ಕೆ ಬೆಂಬಲ ಕೊಟ್ಟು ಒಂದು ಸಂಘವನ್ನು ಸ್ಥಾಪಿಸಲು ಪ್ರಯತ್ನಿಸಿದರು. ಅದರಂತೆ ಅವರು ಕೆಲವು ಸ್ನೇಹಿತರ ಹಾಗು ಸದ್ಗೃಹಸ್ಥರ ಸಹಾಯದಿಂದ ಸಂಘವನ್ನು ಸ್ಥಾಪಿಸಿ, ೧೯೧೭ ನೆಯ ಇಸವಿಯ ಡಿಸೆಂಬರ ೨೯ ನೇ ತಾರೀಖಿನ ದಿವಸ ಅದನ್ನು ರಜಿಸ್ಟರ ಮಾಡಿಸಿ, ೧೯೧೮ ನೇ ಇಸವಿಯ ಮಾರ್ಚ ತಿಂಗಳಿಂದ ಅತ್ಯಲ್ಪ ಸಾಧನಗಳಿಂದ ಅಲ್ಲಿ ಕೆಲಸ ಪ್ರಾರಂಭಿಸಿದರು. ಆ ಕಾಲದಲ್ಲಿ ಫಕ್ತ ಮೂರೇ ರೂಪಾಯಿಗಳ ಪಾಲಿನಿಂದ ಬ್ಯಾಂಕು ನಡೆಸುವ ವಿಚಾರವನ್ನು ಎಷ್ಟೋ ಜನರು ಹೀಯಾಳಿಸಿದರು. ಆದರೆ ಅಂಥ ಜನರೇ ಮುಂದೆ ಕಾಲಾಂತರದಿಂದ ಸಂಘದಲ್ಲಿ ಸೇರಿ ಬಂಡವಲ ಠೇವುಗಳನ್ನಿಟ್ಟು ಸಂಘವನ್ನು ಉನ್ನತಿಗೆ ತರಲು ಸಹಾಯ ಮಾಡಿದರು.

ಮಿ. ಪಳೇಕರರ ಹಾಗೂ ಅದರ ಸಹಾಯಕರಾದ ಮಿ. ಫಕರುದ್ದೀನ ಇವರಿಬ್ಬರು ತೋರಿಸಿದ ಉತ್ಸಾಹಕ್ಕೂ ಕರ್ತವ್ಯದಕ್ಷತೆಗೂ ನಾವು ಋಣಿಯಾಗಿದ್ದೇವೆ. ಮಿ. ಫಕರುದ್ದೀನರವರು ಇಂದಿಗೂ ಬ್ಯಾಂಕಿನ ಸಕ್ರಿಯರಾಗಿದ್ದಾರೆ. ಬ್ಯಾಂಕು ... ಪ್ರಗತಿಯನ್ನು ತೋರಿಸುತ್ತಿದೆ. ಮಿ. ಪಳೇಕರರವರು ೧೯೧೮-೧೯ ರ ವರೆಗೆ ಚೇರಮನ್ನರಾಗಿದ್ದರು ಮಧ್ಯದಲ್ಲಿ ೧೯೨೨-೨೩ ರಲ್ಲಿ ಮಾತ್ರ ಬಂದು ವರ್ಷದ ಮಟ್ಟಿಗೆ ಮಿ. ಚಾಂದೋರಕರರು ಚೇರಮನ್ನರಾಗಿದ್ದರು. ೧೯೨೩-೨೪ರ ಕೊನೆಯ ವರೆಗೆ ಮಿ. ಪಳೇಕರರವರು ತಮ್ಮ ಚೇರಮನ್ನ ಜಾಗೆಯನ್ನು ಮಿ. ವ್ಹಿ. ಎನ್. ಜೋಗ, ಬಿ. ಎ. ಎಲ್. ಎಲ್. ಬಿ. ಎಮ್. ಎಲ್. ಸಿ. ಇವರ ಸಲುವಾಗಿ ಬಿಟ್ಟುಕೊಟ್ಟರು. ಮಿ. ಜೋಗರವರೇ ಇದು ವರೆಗೆ ಬ್ಯಾಂಕಿನ ಅಭ್ಯುದಯಕ್ಕಾಗಿ ವಿಶೇಷ ಲಕ್ಷ್ಯಪೂರೈಸುತ್ತಿದ್ದಾರೆ.

ಈ ಸಂಸ್ಥೆಯು ಉನ್ನತವು ಕೈಗಾರಿಕೆಯ ಕೆಲಸ ಮಾಡುವಂಥವರಿಗೆ, ಸಣ್ಣ ವ್ಯಾಪಾರಮಾಡುವಂಥವರಿಗೆ ಹಾಗೂ ಅಲ್ಪಸಾಧನಗಳುಳ್ಳವರಿಗೆ, ಸಾಕಷ್ಟು ಸುಲಭ ಕಂತುಗಳಿಂದ ಅದನ್ನು ತೀರಿಸಿಕೊಳ್ಳುವದಾಗಿರುತ್ತದೆ. ಬ್ಯಾಂಕಿನ ಮೆಂಬರ ಸಂಖ್ಯೆಯು ೩೦೦ ರ ವರೆಗೆ ಬೆಳೆದಿದೆ. ಶೇರುಗಳ ಒಳ ಕೆಲವು ೧೫,೬೦೦ ರೂ. ಗಳಷ್ಟು ಠೇವುಗಳು ಒಟ್ಟು ೧,೬೬,೦೦೦ ರೂ. ಗಳಾಗಿವೆ, ಹಾಗೂ ಬಳಕೆಯಲ್ಲಿದ್ದ ಒಟ್ಟು ಬಂಡವಲವು ೫೦೦,೦೦೦ ರೂ. ಗಳಷ್ಟು ಆಗಿದೆ. ಬ್ಯಾಂಕಿನ ಉಪಯೋಗವು ಎಲ್ಲ ವರ್ಗಗಳ, ಜಾತಿಗಳ ಹಾಗೂ ಉದ್ಯೋಗಗಳ ಜನರಿಗೆ ಆಗುತ್ತದೆ. ಧನಸಹಾಯವನ್ನಷ್ಟೇ ಮಾಡುವದಲ್ಲದೆ, ನೌಕರ ಜನರಿಗೆ ಔದ್ಯೋಗಿಕ ಶಿಕ್ಷಣ ಇವೇ ಮೊದಲಾದ ಮಾರ್ಗಗಳಿಂದಲೂ ಸಹಾಯ ಮಾಡುವ ಉದ್ದೇಶವು ಬ್ಯಾಂಕಿನದಾಗಿರುತ್ತದೆ. ಈ ಉದ್ದೇಶದಿಂದಲೇ, ಮಿ. ಜೋಗರವರು ಚೇರಮನ್ನರಾದಂದಿನಿಂದ ಔದ್ಯೋಗಿಕ ಪ್ರಚಾರದ ಹಾಗೂ ಶಿಕ್ಷಣ ಫಂಡುಗಳು ತೆಗೆದಿಡಲ್ಪಟ್ಟಿವೆ. ರಿಝರ್ವ್ ಫಂಡ ಹಾಗೂ ಡಿವ್ಹಿಡೆಂಡ ಈಕ್ವಲಾಯಿಝೇಶನ ಫಂಡ ಉಳಿದ ಹಣ್ಣುಗಳು ಲಾಭದಲ್ಲಿ ಈ ಎರಡೂ ಫಂಡುಗಳಿಗೆ ಹಣ ಸೇರಿಸಲ್ಪಡುತ್ತದೆ. ಇವೆರಡೂ ಫಂಡುಗಳ ಗಂಟು ೧೯೩೬-೩೭ ಹಾಗೂ ರೂ. ೧೧೮೦೦ ಗಳಷ್ಟು ಆಗಿದೆ. ಇವೆಲ್ಲ ಅಭ್ಯುದಯಗಳನ್ನು ನೆರವೇರಿಸಲಿಕ್ಕೆ ಹೊಂದಿಕೊಂಡ ಹಾಗೂ ಸುದೃಢವಾದ ಕಟ್ಟಡವೊಂದು ಬೇಕಾಯಿತು; ಹಾಗೂ ಅಂಥ ಸ್ವಂತ ಕಟ್ಟಡವನ್ನು ಕಟ್ಟಿಸುವ ಕಾರ್ಯವನ್ನು ವಹಿಸಿ ಅದನ್ನು ಸಫಲಮಾಡುವದರಲ್ಲಿ ಬಂದಿದೆ. ಈ ಪ್ರಯತ್ನಗಳ ಫಲವೆಂದರೆ ಇಂದು ದರ್ಶನೀಯವಾದ ತಮ್ಮೆದುರಿಗೆ ನಾವೆಲ್ಲ ಕಾಣುತ್ತಿರುವ ಬಹು ಸುಂದರವಾದೀ ಕಟ್ಟಡವೇ ಸರಿ. ರಿಝರ್ವ್ ಫಂಡಿನಿಂದ ಉಪಯೋಗಿಸಲ್ಪಟ್ಟಿರುವ ಸುಮಾರು ೭೦೦೦೦ ರೂ. ಗಳಷ್ಟು ಖರ್ಚು ಈ ಕಟ್ಟಡಕ್ಕೆ ವೆಚ್ಚವಾಗಿದೆ. ಆರ್ಕಿಟೆಕ್ಟ್ ಹಾಗೂ ಎಂಜಿನಿಯರ ಗಳು ಪಟ್ಟಣದ ಪ್ರಸಿದ್ಧರಾದ ಮಿ. ಬಿನೇಯರವರು ಮಾರ್ಗದರ್ಶನ ಮಾಡಿದ ಸಹಕಾರದಿಂದ ಈ ಕಟ್ಟಡವು ತಯಾರಾಯಿತು. ... ಮಿ. ಪಳೇಕರರವರು ತಮ್ಮ ... ಹಾಗೂ ... ರವರು ... ಕಟ್ಟಡದ ... ಮಾಡಿದ್ದಾರೆ.

ಪ್ರೇಮದಿಂದಲೂ ಕಳಕಳಿಯಿಂದಲೂ ನಮ್ಮ ವಿನಂತಿಯನ್ನು ಸ್ವೀಕರಿಸಿ, ಇಲ್ಲಿಯವರೆಗೆ ದಯಮಾಡಿಸಿದಿರಿ. ಈ ಘಟ್ಟದ ಕಟ್ಟಡದ ಅನಾವರಣ ಸಮಾರಂಭವನ್ನು ನೆರವೇರಿಸಲು ಒಪ್ಪಿದ್ದಕ್ಕಾಗಿ ಸಾರ್ವಜನಿಕರು ತಮಗೆ ಕೃತಜ್ಞರಾಗಿದ್ದಾರೆ. ತಮ್ಮ ದಯಾನುಗ್ರಹದಿಂದ ಈ ಸಂಸ್ಥೆಯು ಉತ್ತರೋತ್ತರ ಅಭಿವೃದ್ಧಿಯನ್ನು ಹೊಂದಿ, ಎಲ್ಲರಿಗಾಗಿ ಹಾಗೂ ಎಲ್ಲ ಜನರಿಗೆ ಹೆಚ್ಚು ಉಪಯೋಗವುಳ್ಳದ್ದಾಗಲೆಂದು ಬಯಸುತ್ತೇವೆ.

ನಾಮದಾರ ಸರ್ ಇಬ್ರಾಹಿಮ ರಹಿಮತುಲ್ಲಾ ಇವರು ತಮ್ಮ ಭಾಷಣದಲ್ಲಿ ಹೇಳಿದ್ದರ ಸಾರಾಂಶವು —

ನಿಮ್ಮ ಈ ಕೋ. ಆಪರೇಟಿವ್ ಬ್ಯಾಂಕಿನವರು ಸ್ವಂತದ ಇಷ್ಟು ದೊಡ್ಡ ಇಮಾರತಿಯನ್ನು ಕಟ್ಟಿಸಿದ್ದು ನೋಡಿ ಬಹಳೇ ಆನಂದವೆನಿಸುತ್ತದೆ. ನನ್ನನ್ನು ಇಲ್ಲಿಗೆ ನೀವು ಬರಮಾಡಿಕೊಂಡದ್ದು ನನಗೆ ಎಲ್ಲಕ್ಕೂ ಆನಂದದಾಯಕವಾಗಿದೆ. ಆದರೆ ನನಗೆ ಇದೊಂದು ಬಹುಮಾನವೇ ಎಂದು ನಾನು ಸಂತೋಷಪಡುತ್ತೇನೆ. ನೀವು ಐತಿಹಾಸಿಕ ಪ್ರಸಿದ್ಧ ನಗರಕ್ಕೆ ಮತ್ತು ಆ ಭಾಗಕ್ಕೆ ಬರಬೇಕೆಂದು ನಾನು ಬಹು ದಿವಸಗಳಿಂದ ಆಶಿಸುತ್ತಿದ್ದೆನು. ಒಮ್ಮೆ ಕೆಲವು ದಿವಸ ಈ ಪ್ರಾಂತದಲ್ಲಿ ಇರಬೇಕಾದೀತು ಎಂಬ ಅಪೇಕ್ಷೆಯು ನನ್ನ ಕೆಲವು ದಿನ ಈ ಕೆಲಸದಲ್ಲಿ ಇರಬೇಕೆಂದು ನನ್ನ ಹಂಬಲವುಂಟು.

ಈ ಸ. ಮ. ಅ. ಕೋ. ಕ್ರೆ. ಸೊ. ಬ್ಯಾಂಕಿನ ಚೇರಮನ್ನ ಹಾಗೂ ಇತರ ಕಾರ್ಯಕರ್ತರು ಬಹು ಉತ್ಸಾಹದಿಂದ ಸ್ಥಾಪಿಸಿ ಈ ವರೆಗೆ ಅದರ ಹಣದ ವ್ಯವಹಾರವನ್ನು ನಿಷ್ಠೆಯಿಂದ ನಡೆಸಿದ್ದರಿಂದ ... ದರ ... ಈ ಬ್ಯಾಂಕಿನಿಂದ ... ಕರ್ತವ್ಯವನ್ನು ... ಜನರು ... ಈ ಬ್ಯಾಂಕಿನ ಸಹಾಯದಿಂದ ... ಅವರು. ... ಕೆಲಸವನ್ನು ಶ್ಲಾಘಿಸಿದೆ. ... ಕಾರ್ಯ ... ವು ಬೇರೆ ... ಶ್ರೀ ... ನಾನು ಅವರಿಗೆ ... ಹಾಗು ... ಇವರು ... ಸಂತೋಷವಾಗುತ್ತದೆ.

ಇವರು ... ಸಹಕಾರ ... ಸಂಘದ ... ಆಗಿದೆ ... ವ್ಯಕ್ತಿ ... ಅನುಕೂಲತೆಗಳ ... ಬಹಳೇ ... ರೆಯಾಗುತ್ತದೆ. ... ನೀವಾದವರು ... ಕಾಯ ... ಮಾಡಿದ ... ದ ಸಹ ಜನರಿಗೆ ... ಅನುಕೂಲವಾಗಲಿಲ್ಲ. ... ಕಾರಣ ... ಸಹಾಯ ... ಬೇಕೆಂದು ... ದೇ ಸಹಕಾರವು.

ಸಹಕಾರದ ತತ್ವಗಳು ನಿಮಗೆ ಹೊಸದೇನಲ್ಲ. ಪ್ರತ್ಯೇಕವಾಗಿ ಹಾಗು ಸಾಂಘಿಕ ರೀತಿಯಿಂದ ಪ್ರಯತ್ನ ಪಟ್ಟು ಅಗತ್ಯವಿದ್ದವರಿಗೆ ಸಹಾಯ ಮಾಡುವದರಿಂದಲೇ ನಿಜವಾದ ಲಾಭವಾಗುವದು. ಈ ಸಹಕಾರ ಚಳುವಳಿಯಿಂದ ಈ ಭಾಗದಲ್ಲಿಯೇ ಆಗಿದ್ದರೆ ನೀವೆಲ್ಲರೂ ಇದರಲ್ಲಿ ಸೇರಲೇ ಬೇಕು.

ಧಾರವಾಡ ಜಿಲ್ಲೆಯಲ್ಲಿ ಅನೇಕ ತರದ ಸಹಕಾರ ಸಂಘಗಳು ಸ್ಥಾಪನೆಯಾಗಿವೆ ಎಂದು ಕೇಳಿ ನನಗೆ ಸಮಾಧಾನವೆನಿಸಿತು.

ಒಕ್ಕಲತನದ ಮೇಲಕ್ಕೆ ಮಾಡಿ ಇತರ ಉದ್ಯೋಗ ಧಂದೆಗಳಿಗೆ ಉತ್ತೇಜನ ಕೊಡತಕ್ಕದ್ದು ದಿಂದಲೂ ಕೆಲ ಜನರ ದೂರಾಗುವದು; ನನ್ನ ಮತದಿಂದ ಈ ದೂರಿಗೆ ತಪ್ಪಿರುತ್ತದೆ. ಶೇತಕಿ ಹಾಗು ಇತರ ಉದ್ಯೋಗ ಧಂದೆಗಳು ಒಂದೇ ಇರುತ್ತವೆ. ಇತರ ಧಂದೆಗಳಿಲ್ಲದಿದ್ದರೆ ಕೇವಲ ಒಕ್ಕಲತನದಿಂದ ಜನರ ನಿರ್ವಾಹ ಸಾಗುವದು ಬಲು ಕಠಿಣವಾಗುವದು. ಕಾರಣ ಇವೆಲ್ಲ ಕ್ರಮ ವಿಭಾಗಗಳವೆ.

ಮಾನವ ಪ್ರಾಣಿಯು ಅಗತ್ಯವಿದ್ದ ಜನರಿಗೆ ರಕ್ಷಿಸಿಕೊಳ್ಳ ಯಾಂತ್ರಿಕ ರೀತಿಯ ಸಹಾಯ ಮಾಡದ ನಮ್ಮ ಆ ಕರ್ತವ್ಯವಿರುತ್ತದೆಂದು ಹೇಳಿ ಇನ್ನಿದನ್ನು ಒಪ್ಪಿಕೊಂಡು ತಾಳಿದ ಆಶೀರ್ವದಿಸಿ ಮಾಡುತ್ತೇನೆ.

ವಿಜಾಪೂರ ಜಿಲ್ಲೆಯ ಮತದಾರರಿಗೆ ವಿನಂತಿಯು

—o—

ಪ್ರಿಯ ಬಂಧುಗಳೇ,

ನಾನು ಬರುವ ಕೌನ್ಸಿಲ್ ಚುನಾವಣೆಯಲ್ಲಿ ವಿಜಾಪೂರ ಜಿಲ್ಲೆಯ ಪರವಾಗಿ ಉಮೇದವಾರನಾಗಿ ನಿಂತಿದ್ದೇನೆ. ಕಳೆದ ಮೂರಕ್ಕೂ ವರುಷಗಳವರೆಗೆ ನಾನು ಮಾಡಿದ ದೇಶಸೇವೆಯು ಮತ್ತು ಆ ಜಿಲ್ಲೆಯ ಬಗ್ಗೆ ವಿಶೇಷವಾಗಿ ಮಾಡಿದ ಕಾರ್ಯಗಳು ತಮ್ಮ ಎದುರಿಗೆ ಇವೆ. ಅವುಗಳನ್ನು ನಾನು ಬಾಯಿಯಿಂದ ವರ್ಣಿಸುವ ಕಾರಣವಿಲ್ಲ. ನನ್ನ ಗುಂಡಿನ ವರ್ಗದ ಬಗ್ಗೆ ಮತ್ತು ತಮ್ಮ ಜಿಲ್ಲೆಯ ನಿಜವಾದ ಹಿತ ಸಂರಕ್ಷಣೆ ಇದ್ದದ್ದರ ಬಗ್ಗೆ ನಾನು ಅವರಿಗೆ ಮಾಡಿದ ದೇಶಸೇವೆಯೇ ಸಾಕ್ಷಿ. ನಾನು ಅದನ್ನೆ ಒಂದರ ಕೌನ್ಸಿಲದಲ್ಲಿ ಹೋಗಿ ಏನೇನು ಮಾಡುವೆನು ಎಂಬುದರ ಕಲ್ಪನೆಯು ಕೊಡುವದು ಈಗ ಸಾಧ್ಯವಿಲ್ಲ.

ಆದರೆ ಸ್ವತಂತ್ರ ಪಕ್ಷ ಮತ್ತು ಹಿತಗಳ ಸಂರಕ್ಷಣೆಗಾಗಿ ಹೋರಾಡುವ ಒಬ್ಬ ಸ್ವಾರ್ಥರಹಿತ ನಿರ್ಭಯ ತತ್ವನಿಷ್ಠನಾದ ಸೇವಕನನ್ನು ನಮ್ಮ ಜಿಲ್ಲೆಯು ತನ್ನ ಪ್ರತಿನಿಧಿಯನ್ನಾಗಿ ಆರಿಸಬೇಕೆಂದು ಹೇಳುತ್ತೇನೆ.

ಕೌನ್ಸಿಲದ ಒಳಗಿನ ರಾಜಕಾರಣದಲ್ಲಿ, ರಾಷ್ಟ್ರೀಯ ಸಭೆಯ ಧೋರಣವನ್ನು ಅನುಸರಿಸುತ್ತಲೇ ತನ್ನಾಳಿಕೆಯ ಸಾಂಸ್ಕೃತಿಕ ಮತ್ತು ರಾಜಕೀಯ ಏಕೀಕರಣ ವಿಷಯಕ್ಕೆ ವಿಶೇಷ ಪ್ರಯತ್ನಿಸುವೆನು. ಮೇಲಾಗಿ, ಶಿಕ್ಷಣವನ್ನು ಸಾರ್ವತ್ರಿಕ ಮಾಡುವ ಸಂಬಂಧದಲ್ಲಿ, ಮದ್ಯಪಾನದ ವ್ಯಸನವನ್ನು ಹೋಗಲಾಡಿಸುವದರಲ್ಲಿ, ಅಸ್ಪೃಶ್ಯತೆಯನ್ನು ಅಳಿಸಿಹಾಕುವದರಲ್ಲಿ ಸಕಲ ಕೆಳವರ್ಗದವರ ದುಃಸ್ಥಿತಿಯನ್ನು ಉತ್ತೇಜನ ಪಡಿಸುವಲ್ಲಿ ಮತ್ತು ನಮ್ಮ ಜಿಲ್ಲೆಯನ್ನು ಆಗಾಗ್ಗೆ ಕಾಡುತ್ತಿರುವ ಬರಗಾಲದ ಪ್ರತಿಬಂಧಕದ ಬಗ್ಗೆ ನನ್ನ ಸರ್ವಸ್ವವನ್ನು ಉಪಯೋಗಿಸಿ ಕೆಲಸ ಮಾಡುವೆನು.

ಇವೆಲ್ಲ ತಮ್ಮ ಸಹಾನುಭೂತಿ, ಬೆಂಬಲ, ಮತ್ತು ಸಹಕಾರದಿಂದಲೇ ಸಾಧಿಸುವೆನು.

ಕೇವಲ ನಿಸ್ವಾರ್ಥವನ್ನು ಮಾತ್ರ ಆಲೋಚಿಸಿ ಸೇವೆ ಮಾಡುತ್ತಿರುವೆನೆಂದೂ ಮನದಲ್ಲಿಟ್ಟು ಮತವನ್ನು ನನಗೆ ಕೊಟ್ಟು ನನ್ನಿಂದ ಆಗಬೇಕಾದ ದೇಶಸೇವೆಯಲ್ಲಿ ಭಾಗಿಗಳಾಗಿ ತಮ್ಮಿರಾ ಸಾತ್ವಿಕ ನನ್ನ ಉದ್ದೇಶವನ್ನಾಗಿ ನೀವಾಗಬೇಕೆಂದು ಕೇಳಿರುವ

ತಮ್ಮ ವಿಧೇಯ,

ಬೆಳಗಲಿ ಶ್ರೀನಿವಾಸರಾವ

ಸರಕಾರ ಮತ್ತು ಸ್ಥಾನಿಕ ಸ್ವರಾಜ್ಯದ ಉಮೇದವಾರರಿಗೆ ಎಚ್ಚರಿಕೆ.

—o—

ಮದ್ರಾಸ ಇಲಾಖೆಯ ಕೌನ್ಸಿಲ ಚುನಾವಣೆಯು ನಮ್ಮೀ ತಿಂಗಳ ಎಂಟನೆಯ ತಾರೀಖಿನ ದಿವಸ ನಡೆಯುವದು. ಸರಕಾರ, ಮ್ಯುನಿಸಿಪಾಲ್ಟಿ ಮತ್ತು ಲೋಕಲ ಬೋರ್ಡುಗಳ ಅಧಿಕಾರಿಗಳು ತಾವು ಹೋಟಾರದರು. ಹೋಟು ಕೊಡುವದರ ಹೊರತು ಚುನಾವಣೆಯಲ್ಲಿ ಪ್ರತ್ಯಕ್ಷ ಪ್ರತ್ಯಕ್ಷವಾಗಿ ಯಾವ ತರದ ಭಾಗ ತಕ್ಕೊಳ್ಳಕೂಡದೆಂದು ಆ ಸರಕಾರದವರು ಜಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ. ಮದ್ರಾಸವಾಗಲಿ, ಅನ್ಯಾವ ಸರಕಾರಗಳಾಗಲಿ, ಇಂಥ ಜಾಹೀರನಾಮೆಯನ್ನು ಚುನಾವಣೆಯ ಪೂರ್ವದಲ್ಲಿ ಪ್ರಸಿದ್ಧ ಮಾಡುವದು. ಜಾಹೀರನಾಮೆಯು ಹೊಸದಲ್ಲ. ಹಿಂದೆ ಇದೇ ರೀತಿಯಾಗಿ ಪ್ರಕಟವಾದಂತಹದು. ಅದುದರಿಂದ ಕಾಮದಾರರು ಊರು ಬಿಟ್ಟರೂ ಹಾನಿಯಷ್ಟು ಹೊರಗೆ ಎಂಟಕೆ ದೂರಿಕೊಳ್ಳಬಾರದೆಂದು ಅರಿಸುತ್ತೇವೆ.

ಹುನಗುಂದ ತಾಲೂಕು ಅಮೀನಗಡದಲ್ಲಿ ಒಂದು ವಿಚಿತ್ರ ರೋಗವು ಪ್ರಕಟವಾಗಿದೆ. ಇದರಿಂದ ಹೆಣ್ಣು ಮಕ್ಕಳ ಕೈಕಾಲುಗಳೇ ಹೋಗುತ್ತವೆ. ಇವರ ಮೇಲೆಯೇ ದೇವತಾ ಕೋಪ ವೇಕೆ?

ನಿಜಾಮ ಹೈದರಾಬಾದಿನಲ್ಲಿ ಹಿಂದೂ ಮುಸಲಮಾನರ ಕಲಹದ ಸೀಳಿಗೆಟ್ಟ ಸುದ್ದಿಯು.

ಕೆಲಕೆತ್ತೆಯು ಹಿಂದೂ-ಮುಸಲಮಾನರ ದಂಗೆಯು ಸೊಗಡು ಹಿಂದುಸ್ಥಾನವನ್ನೆಲ್ಲ ವ್ಯಾಪಿಸಿದರೂ, ಅದರಂಥ ಅನರ್ಥವು ಎಲ್ಲಿಯೂ ಆಗಲಿಲ್ಲ. ಎಷ್ಟೋ ಕಡೆಗೆ ಹೂಲು ಎದ್ದಿತು. ಹಿಂದೂ ಮುಸಲಮಾನರು ಕರ್ತವ್ಯ ಜಾಗ್ರತರಾದ್ದರಿಂದ, ಹೂಲಿಗೆ ಹೂಲೇ ಆಯಿತು. ಇಂಥ ಹೂಲು, ಸೀಳಿಗೆಟ್ಟ ಸುದ್ದಿಯು ನಿಜಾಮ ಹೈದರಾಬಾದಿನಲ್ಲಿದ್ದಿತು. ಆದರೆ ಅದು ಲೋಕವಿಲಕ್ಷಣವಾಯಿತು. ಹಿಂದೂ ಜನರು ಹೀಂಗೆ ಮಾಡಬೇಕೆಂದು ಪರ ಇಲಾಖೆಗಳಿಂದ ಶಸ್ತ್ರ, ಬಂದೂಕು, ಮದ್ದು ಗುಂಡು ತರಿಸಿದ್ದಾರೆಂಬದಾಗಿ ಮುಸಲಮಾನರು ಸುದ್ದಿ ಹುಟ್ಟಿಸಿದರು. ಅಧಿಕಾರಿಗಳು ಈ ಬಗ್ಗೆ ಸೂಕ್ಷ್ಮರೀತಿಯಿಂದ ವಿಚಾರ ಮಾಡಿ, ಇದೆಲ್ಲ ಸುಳ್ಳು ಸುದ್ದಿಯೆಂದು ಮನಗಂಡರು. ಆದರೂ ಧರ್ಮದುರಭಿಮಾನದಿಂದ ನಾಲ್ಕು ದೇಶದಿಂದ ಒಂದೇ ವರ್ಷದ ಹಿಂದಿನ ಶಕ್ತಿ ಸಹಿತ ಹಿಂದೂ ... ರ ಮುಖಂಡರಾದ ಬ್ಯಾರಿಸ್ಟರ ... ನ್ನು ಕೊಂದು ಧರ್ಮದ ಸೇವೆ ತೀರಿಸಿಕೊಳ್ಳಬೇಕೆಂದು ಅವರ ಮನೆಗೆ ಹೋದನು. ... ಅವರು ಆಗ ಮನೆಯಲ್ಲಿರಲಿಲ್ಲ. ಒಂದು ಮೋಟಾರ ಬಂತು. ಅದರಲ್ಲಿದ್ದ ... ಅವನು ಅವರನ್ನು ಕೊಲ್ಲಬೇಕೆಂದು ... ಆ ಮನುಷ್ಯ ಸಂಗಡಲೆ ಹಿಡಿದನು. ... ನಾಯಕರಿಗೂ ತಿಳಿಯಿತು. ನಾಯಕರು ... ಪೋಲೀಸರು ಅವನನ್ನು ದಸ್ತಗಿರ ಮಾಡಿ, ನಾಯಕ ಅವರ ರಕ್ಷಣೆಗಾಗಿ ಮನೆಯ ಮುಂದೆ ಸಿಪಾಯರ ಕಾವಲ ಇಟ್ಟಿದ್ದಾರೆ.

ಮುಸಲಮಾನರ ಎಳು ಸಭೆಗಳು.

ಬಂಗಾಲ ಸರಕಾರದವರು ಪ್ರಾರ್ಥನೆಯ ಸಮಯದಲ್ಲಿ ಮಸ್ಜಿದಿನ ಮುಂದೆ ವಾದ್ಯ ಬಾರಿಸಬಾರದೆಂದು ಹಾಕಿದ ನಿರ್ಬಂಧವನ್ನು ನಿಷೇಧಿಸುವ ... ಗಜನವಿಯವರ ಅಧ್ಯಕ್ಷತೆಯಲ್ಲಿ ಮುಸಲಮಾನರ ಪ್ರಚಂಡ ಸಭೆ ಕೂಡಿತ್ತು. ಒಂದು ಸ್ಥಳವು ನಾಲ್ವರಿಂದ ... ಸ್ಥಳಗಳಲ್ಲಿ ಸಭೆ ಕೂಡಿದವು. ಧಾರ್ಮಿಕ ವಿಚಾರದಿಂದ ಹಿಂದೂ ಮುಸಲಮಾನರಲ್ಲಿ ವಾದ್ಯ ಬಾರಿಸುವ ಮತ್ತು ಗೋವಧೆಯ ಎರಡು ಪ್ರಶ್ನೆಗಳು ಮುಖ್ಯವಾದ್ದಾಗಿವೆ. ಹಿಂದೂ ಜನರು ಮಸೀದಿಗಳ ಮುಂದೆ ಬಾರಿಸುವದನ್ನು ಪೂರಾ ನಿಲ್ಲಿಸಿದರೆ ಹಿಂದೂ ಜನರಿಗೆ ... ಗೋವಧೆ ... ದನ್ನು ನಾವು ... ಗಜನವಿಯವರು ಹಿಂದೂ ಜನರಿಗೆ ... ಕೊಟ್ಟಿದ್ದಾರೆ. ಮುಸಲಮಾನರ ... ಒಂದು ಪ್ರಸಿದ್ಧ ... ಹಿಂದೂ ಜನರು ವಾದ್ಯ ... ಪ್ರತಿಯೊಂದು ಮಸೀದಿಯ ಮುಂದೆ ವಾದ್ಯ ಬಾರಿಸಬಾರದೆಂದು ಆಗ್ರಹ ಕೊಡುವದಕ್ಕೆ ಹಿಂದೂ ಜನರು ಎಂದಿಗೂ ಸಮ್ಮತಿಸಲಾರರು.

ಅಕಾಲೀದಳದ ದೆಸೆಯಿಂದ ಒಂದೇಟಿಸ್ಸು.

ಬಂಗಾಲದ ... ಹಿಂದೂ ಮುಸಲಮಾನ ... ಹಿತ ನ್ಯಾಯವು ... ಹಿಂದೂ ... ಗೆಯನ್ನು ... ಪೋಲೀಸ ... ಹೇಳಿ ... ಉತ್ತರ ಕೊಟ್ಟರು. ... ಅವರಿಗೆ ... ಹುಟ್ಟುವ ... ಪೋಲೀಸರು ... ಸಿದ್ಧತೆ ... ಪೋಲೀಸರನ್ನು ... ಕಡೆಯ ದುರ್ಧರ ...

ಬ ಆಡಳಿತಗಳಿಗೆ ಮೆರೆಸುತ್ತಿದ್ದಾರೆ. ಸರಕಾರವಾದ ಸ್ವಾಯತ್ತಸ್ವರೂಪ ದಬ್ಬಾಳಿಕೆಯಿಂದಲೇ ಅಸಂತೋಷವನ್ನು ದೂರ ಮಾಡಬೇಕೆಂಬದೇ ಸರಕಾರದ ಉದ್ದೇಶವಾಗಿರುತ್ತದೆಂದು ಈ ಒಂದೇಟಿಸ್ಸಿನಿಂದ ಧ್ವನಿತವಾಗುತ್ತದೆ.

ಮೂವರ ಮುಖ್ಯಾಲು ಗಳಿಗೆಯ ಪೋಲೀಸ ಕಾರಭಾರಿಗಳು.

ಸಂಕಟ ಸಮಯದಲ್ಲಿ ನಾಗರಿಕರನ್ನು ಹಿಡಿದು ಅವರಿಗೆ ಪೋಲೀಸ ತಗಲಿ ಹಾಕಿ, ಪೋಲೀಸ ಸಿಪಾಯಿ ಅಧಿಕಾರ ಕಾಯಮ ... ಮಾಡುವಂತೆ ಇಂಗ್ರೇಜಿ ಸರಕಾರದ ಒಂದು ... ಈ ಕಾಯಿದೆಯ ಪ್ರಕಾರ ... ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಒಂದು ಸಾರೆ ... ನಾಗರಿಕರನ್ನು ಪೋಲೀಸ ಅಧಿಕಾರಿಗಳನ್ನಾಗಿ ನೇಮಿಸಿ, ... ಒಂದೇಟಿಸ್ಸು ... ಕೆಲಸ ಮಾಡುವದು ಮತ್ತು ಕೆಲಸದಲ್ಲಿ ... ಆಗಿಕ್ಕೆ ... ಈ ಮೂವರ ಮುಖ್ಯಾಲು ಗಳಿಗೆಯ ಪೋಲೀಸ ಕಾರಭಾರದ ... ಪಟ್ಟಣಿಗರು ... ಬಾಹೀರನಾಮೆಯನ್ನು ಪ್ರಸಿದ್ಧ ಮಾಡಿದ್ದಾರೆ.

ಬಾಲ ವಿವಾಹದ ವಿರುದ್ಧ ಕೊಲ್ಹಾಪೂರ ದರಬಾರದ ಠರಾವು.

ಕೊಲ್ಹಾಪೂರ ಸಂಸ್ಥಾನದಲ್ಲಿ ಬಾಲವಿವಾಹಕ್ಕೆ ಪ್ರತಿಬಂಧ ಮಾಡಬೇಕೆಂದು ಮಹಾರಾಜರು ಒಂದು ಹುಕುಮನ್ನು ಹೊರಡಿಸಿದ್ದಾರೆ. ಆಕ್ಟ ಜಾರಿಗೆ ಬಂದಿಲ್ಲ. ಆದುದರಿಂದ ಮಹಾರಾಜರ ಹುಕುಮೇ ಕಾನೂನಿನಂತೆ ಠರಾವಾಗುತ್ತದೆ. ಹದ್ದು ವರ್ಷದೊಳಗಿನ ಹುಡುಗಿ ಮತ್ತು ೧೮ ವರ್ಷದೊಳಗಿನ ಹುಡುಗನ ಮದುವೆ ಮಾಡಬಾರದೆಂದೂ ಹುಕುಮಿನ ವಿರುದ್ಧ ಮದುವೆ ಮಾಡಿದವರಿಗೆ ಎರಡು ನೂರು ರೂಪಾಯಿಗಳ ವರೆಗೆ ದಂಡ ಮತ್ತು ಆರು ತಿಂಗಳ ವರೆಗೆ ... ಶಿಕ್ಷೆ ... ರೂಪಾಯಿಗಳ ವರೆಗೆ ದಂಡ ... ಬಾಹೀರನಾಮೆಯಲ್ಲಿ ಹೇಳಲ್ಪಟ್ಟಿರುತ್ತದೆ.

ಆಳಿಯನ ಮೇಲೆ ಮಾವನ ಫಿರ್ಯಾದಿ.

ನಾಗಪೂರದಲ್ಲಿ ... ಹಾಕ್ತರಿದ್ದಾರೆ. ಅವರ ಮನೆಯಲ್ಲಿ ಮದುವೆ ... ಜಾತಿಯ ಜನರಿಗೆ ಆಮಂತ್ರಣ ಕಳಿಸಿದರೂ ಸ್ವಂತ ಅಳಿಯನಿಗೆ ಮಾತ್ರ ಆಮಂತ್ರಣ ಕಳಿಸಲಿಲ್ಲ. ಅಳಿಯನಿಗೆ ಆಮಂತ್ರಣ ಕಳಿಸಲಿಲ್ಲವೆಂದು ... ಮಾವನು ಕಡಿ ... ಉತ್ತರ ಕೊಟ್ಟನು. ... ತನ್ನ ಅಪಮಾನವಾಯಿತೆಂದು ಮಾವನು ಅಳಿಯನ ಮೇಲೆ ಮಾನಹಾನಿಯ ಫಿರ್ಯಾದಿ ಮಾಡಿದ್ದಾನೆ.

ಧರ್ಮಾ ಶಾಲೆಯನ್ನು ತೆರೆಯುವ ಸಮಾರಂಭವು.

ಅಳಿದ ... ಶ್ರೀಮನ್ಮಹಾರಾಜರವರು ಧರ್ಮಾ ನದಿಗೆ ... ಶಾಲೆಗಳ ನೀರನ್ನು ... ಸಮಾರಂಭವನ್ನು ಮಾಡುವದಕ್ಕಾಗಿ ಸ್ಪೇಶಲ ಟ್ರೇನಿನಿಂದ ಶಿವಮೊಗ್ಗೆಯ ... ದ ... ಬಂದರು. ... ಮತ್ತು ಧರ್ಮಾ ನದಿಗಳು ... ಹರಿಯುತ್ತಿರುವವು. ... ನದಿಗೆ ... ಶಾಲೆಗಳಲ್ಲಿ ... ಧರ್ಮಾ ನದಿಗೆ ಕಾಲುವೆಗಳಿದ್ದಿಲ್ಲ. ... ಹೊಲಗಳಿಂದ ... ಆದುದರಿಂದ ... ಶಾಲೆಗಳಲ್ಲಿ ... ನೀರಾವರಿಯಾಗಿ, ರೈತರು ... ಮುಖ್ಯ ಬೆಳೆಯೆಂದರೆ ... ಮಾಡುತ್ತಾರೆ.

ಡಾಕ್ಟರ ಮಲ್ಲಯ್ಯನವರಿಂದ ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ಶಾಜನ ಕಂಪನಿಯು

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ... ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು:— ಪಿನಸ, ಅರೆತಲೆ ನೋವು, ತಲೆಯೊಳಗಾಗುವ ಬೇರೆ ವಿಕಾರಗಳು, ಕಣ್ಣುಗಳಲ್ಲಿ ಆಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಿಟಿಕೆಯನ್ನು ಕೂಡಿಸಿದರೆ ... ಸುಗಂಧವಾಗುವದು. ಮಾದರಿ ಡಬಿ ಉಚಿತವಾಗಿ ದೊರೆಯುವದು.

ಕೀಮತಿ ಒಂದಕ್ಕೆ ೧೦ ಆಣೆಗೆ. ಡಜನಕ್ಕೆ ೨-೪-೦ ವ್ಹಿ. ಪಿ. ಪೋಸ್ಟಚಾರ್ಜ ಬೇರೆ.

ದಯವಿಟ್ಟು ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ತಂತಿ ವಿಳಾಸ— ನಸ್ಯಮ. } ಪಿ. ವ್ಹಿ. ಶಾಜನ ಮತ್ತು ಕಂಪನಿ, ೪೪ ಗೋವಿಂದಪ್ಪ ನಾಯಕನ ಬೀದಿ, ಜಾರ್ಜಟೌನ, ಮದ್ರಾಸ

ಮಾತಾಡುವ ಔಷಧವು.

ಆಹಾ! ... ಮಾತಾಡುವದಲ್ಲವೇ! ಜಲಿಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ಕರೆಸೋ! ... ನಮ್ಮಲ್ಲಿ ನೋಯುತ್ತದೆಯೋ? ಆಗದವರಾರೂ ಏನು?

— ಕಿಂದಾ— ಕೊರಡು ಮುಚ್ಚಲ್ಲ ನೋಯುತ್ತದೆ.

... ಹೊರಟವರೆ ... ಕ್ವಯರ ತಕ್ಕೊಳ್ಳು, ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ಸೋಲ್ವುಗಳ ಪರಿಹಾರವಾಗಿ ಮಾಡುವುದು ಮತ್ತು ಕ್ಷಣದಲ್ಲಿ ನಿಮ್ಮನ್ನು ತಿರ ... ಎರಡೇ ಅಣೆ.

ನಮ್ಮಲ್ಲಿ ಬೇಕಾದ ಡಾಕ್ಟರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ...

ವಿಳಾಸ— ಕನಕಾ ಬಿನ್ನ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ

ದು, ಸುಖವಾಗಿದ್ದು, ಅವರ ದರಿದ್ರತನವು ಹಿಂಗುವದೆಂದು ಮಹಾರಾಜರು ತಮ್ಮ ಭಾಷಣದಲ್ಲಿ ಅಭಿಪ್ರಾಯ ಪಟ್ಟಿದ್ದಾರೆ. ಭದ್ರಾನದಿಯಂತೆ ಈ ಮುದ್ವತಿ ನದಿಗೂ ದೊಡ್ಡ ಒಡ್ಡು ಹಾಕಿ, ಅದರಿಂದಲೂ ರೈತರ ಕಲ್ಯಾಣ ಮಾಡುವಂತೆ ಮೈಸೂರ ಸರಕಾರದ ಯೋಜನೆಯಾಗಿರುತ್ತದೆ.

ದಿ ಧಾರವಾಡ ಬ್ಯಾಂಕ ಲಿಮಿಟೆಡ್ ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಪತ್ತೇ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ... ಆಗುವಂತಿರುತ್ತದೆ

ಎ. ಕೆ. ಕಟಿ
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟಿ ಧಾರವಾಡ.

... ಬ್ಯಾಂಕಿನ ವ್ಯವಹಾರದಲ್ಲಿ ... ಪ್ರಕಾರ ... ತಿಳಿಸಲಾಗುತ್ತದೆ.

... ಎಲ್ಲ ಪ್ರಕಾರ ವ್ಯವಹಾರ ... ಮಾಡುವರು.

ಸೆಕ್ರೆಟರಿ ಮ. ಜಕಾತಿ,
... ಡಾಯರೆಕ್ಟರ

... ದರಗಳು.

... ಬಡ್ಡಿಯ ದರವು ... ಒಂದು ವರ್ಷಕ್ಕೆ ... ಕಾಯಂ ಠೇವಣಿಗಳಿಗೆ ... ವತ್ತಿಕ್ಕೆ ... ವ್ಯವಹಾರ ನಡೆಯುವದು.

ಮ್ಯಾನೇಜರ ವಿಜಾಪುರ ಧಾರವಾಡ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ಆರು ತಿಂಗಳು, ವರ್ಷ ಮತ್ತು ಅದಕ್ಕೂ ಹೆಚ್ಚು ಕಾಲವರ್ಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರೆ ರೂಪಾಯಿ ಬಡ್ಡಿ ಕೊಡಲಾಗುವದು. ಹೆಚ್ಚು ಕಾಲದ ಠೇವಿಯಿಂದ ಸಮಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ಪತ್ತೇ ಇಟ್ಟುಕೊಳ್ಳಲ್ಪಡುವವು ... ಮುಂತಾದ ವ್ಯವಹಾರವು ನಡೆಯುವವು.

ಮೆಸರ್ಸ ದೇಶಪಾಂಡೆ ಮತ್ತು ಕಂಪನಿ ಮ್ಯಾನೇಜಿಂಗ ಏಜಂಟ್ಸ. — ಅಣ್ಣಾಚಾರ್ಯ ಕಟ್ಟಿ ಜೋಶಿಮಠ.

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲ ವಿಧವಾದ ಊದುಬತ್ತಿಗಳು ಸೇರು ೧ಕ್ಕೆ ೧-೦-೦ ರ ಭಾಗವೂ ... ತೀರ್ಥ ... ದು, ಶೃಂಗಾರಕೈಲ, ... ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ ... ಆರ್ಡರ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಅಂಡ ಸನ್ಸ, ಸುಗಂಧದ್ರವ್ಯಗಳ ವ್ಯಾಪಾರ ...

ಕುಲಕರ್ಣಿ ನಸ್ಸ ಕಂಪನಿ ಇವರ ೩, ೪, ೮, ೯, ಮತ್ತು ೪ ಪ್ರಕಾರದ

ವತನದಾರ ರೆಂಟೆಗಳು



ಇವುಗಳ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ
ಕುಲಕರ್ಣಿ ನಸ್ಸ ಕಂಪನಿ
... ಧಾರವಾಡ

ಅತ್ಯದ್ಭುತ! ಅಮೇರಿಕಾಖಂಡದ ಅತ್ಯದ್ಭುತ!!

ಪ್ರಸಿದ್ಧ ಶಾಸ್ತ್ರಜ್ಞರೊಬ್ಬರು ಕಂಡು ಹಿಡಿದ ಸಿದ್ಧೌಷಧ

[illegible] ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾಖಂಡದ ಪ್ರಖ್ಯಾತ ಶಾಸ್ತ್ರಜ್ಞರೊಬ್ಬರು ಅನೇಕ ವರ್ಷಗಳಿಂದ ಬಹು ಧನ ವ್ಯಯ ಮಾಡಿರುವರು. ಸಂಶೋಧನೆಗಳನ್ನು ಮಾಡಿ [illegible]

ಎಲಿಕ್ಸಿರ್ ಆಫ ಲೈಫ್

ಅಥವಾ

ಜೀವನಾಧಾರ

[illegible] ಪಥ್ಯವಿಲ್ಲದ ಅನುಪಾನ ಭೇದದಿಂದ ಅನೇಕ ರೋಗಗಳಿಗೆ ಉಪಯೋಗಿಸಬಹುದು. ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ ಭೇದಿ ಅಥವಾ ಕಾಲರಾ, ಕೆಮ್ಮು, ನೆಗಡಿ, ಮಲೇರಿಯಾ, ಜ್ವರ, ಇತರ ವಿವಿಧವಾದ ಜ್ವರಗಳು, ನರಗಳ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮಲಬದ್ಧತೆ ನಾಯಿಕೆಮ್ಮು, ಸ್ತ್ರೀವ್ಯಾಧಿ ಮುಂತಾದ ಎಲ್ಲ ಬಗೆಯ ಸಾಂಕ್ರಾಮಿಕ ರೋಗಗಳಿಗೆ ಇನ್‌ಫ್ಲುಯೆಂಜಾ, ಪ್ಲೇಗು, ಹಾವು, ಚೇಳು ಮುಂತಾದ ವಿಷ ಜಂತುಗಳ ಕಡಿತಕ್ಕೆ ಬಾಲಗ್ರಹ ಇವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಬಹುದು. [illegible] ರೋಗವಿಲ್ಲದವರು ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತರವಿದ್ದಂತೆಯೇ. ಡಾಕ್ಟರರಿಗೆ ಕೊಡತಕ್ಕ ಫೀಗಳನ್ನು ಈ ಜೀವನಾಧಾರ [illegible] ಡಾಕ್ಟರರಿಗೆ ಕೊಡಬೇಕಾಗಿಲ್ಲ. ಸೀಸೆ ಒಂದಕ್ಕೆ ೧-೮-೦ ಟಪಾಲ ಖರ್ಚು ಬೇರೆ [illegible]

ಜೀವನಾಧಾರ ಡಿಪೋ,
ಮೈಸೂರ.

ಬ್ರಾಂಚ— ಜೀವನಾಧಾರ ಡಿಪೋ,
ಹುಬ್ಬಳ್ಳಿ

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ— ಮುಂಜಾನೆ ೧೧ ರಿಂದ ಮಧ್ಯಾಹ್ನದ ೩-೩೦ ವರೆಗೆ. ಶನಿವಾರ ೧೧ ರಿಂದ ಮಧ್ಯಾಹ್ನದ ೧ ವರೆಗೆ

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು

ಚಾಲೂ ಖಾತೆಗಳು— ಪ್ರತ್ಯೇಕವಾಗಿ ತೆಗೆಯಲಾಗುವವು

ಮುದ್ದತಿ ಠೇವುಗಳು— ಬಡ್ಡಿಯ ದರದಿಂದ ತೆಗೆದುಕೊಳ್ಳಲ್ಪಡುವವು

ಸೇವ್ಹಿಂಗ ಬ್ಯಾಂಕ— ವುಗಳನ್ನು ತೆಗೆದುಕೊಳ್ಳುವದು [illegible] ದರ ೪ ರೂ.

ಸರಕಾರೀ ಹಾಗೂ ಇತರ ಶೇರುಗಳು

ಸುರಕ್ಷಿತವೆಂದು ಸಲುವಾಗಿ ತೆಗೆದುಕೊಳ್ಳಲ್ಪಡುವವು. [illegible] ಬಡ್ಡಿ ಹಾಗೂ ನಫೆ [illegible] ಬರುವದು [illegible] ಕೊಡಲ್ಪಡುವವು. ವ್ಯಾಪಾರೀ ಹುಂಡಿಗಳು [illegible] ತೆಗೆದುಕೊಳ್ಳಲಾಗುವವು. ಚೆಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ [illegible] ದರ ಹಾಗೂ ನಿಯಮಗಳ ಪ್ರತಿಗಳೂ, ಠೇವಣಿ ಪತ್ರಗಳೂ ಸದರೀ ಬ್ಯಾಂಕದಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ಆರ್. ಎ. ಬ್ರೂಸ,
ತಾ|| ೨೨-೮-೩೨ ಬ್ರಾಂ ಏಜಂಟ

ಆಯುರೌಷಧಿ ಕಾರಖಾನಾ ಕಿತ್ತೂರ

ಮನ್ಮಥವಿಲಾಸ— ಈ ಗುಳಿಗೆಯು ಸೇವನೆಯಿಂದ ಅತ್ಯಂತ ಕಾಮೋದ್ದೀಪನ ಮತ್ತು ವೀರ್ಯವರ್ಧಕ ಮನೋಲ್ಲಾಸವಾಗಿ ಶಕ್ತಿ ಬರುತ್ತದೆ. ೩೦ ಗುಳಿಗೆಗಳಿಗೆ ೧ ರೂ ೧೦ [illegible] ೪ ರೂ

ಹುರುಕಿನ ಔಷಧ— ಬಾಟಲಿ ೧ ಕ್ಕೆ ೧ ಆಣೆ ೧೦೦ ಕ್ಕೆ ೨ ರೂ [illegible] ಆಣೆ

ಕಣ್ಣಿನ ಔಷಧ— ಬಾಟಲಿ ೧ ಕ್ಕೆ ೩ ಪೈ ೧೦೦ ಕ್ಕೆ ೧ ರೂ.

ಜೇಡಿನ ಔಷಧ— ಬಾಟಲಿ ೧ ಕ್ಕೆ ೬ ಪೈ, ೧೦೦ ಕ್ಕೆ ೨ ರೂ.

ಜ್ವರದ ಗುಳಿಗೆ— ಈ ಗುಳಿಗೆಗಳು ಮೋಸಮಿ ಜ್ವರ, ಮಲೇರಿಯಾ, ಇನ್‌ಫ್ಲುಯೆಂಝಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿರುವ ಮತ್ತು ಪ್ರವಾಸಿಗರಿಗೆ ಉಪಯುಕ್ತವಾದಂಥವಿರುತ್ತವೆ. ೪೦ [illegible] ೧ ರೂ. ೧೦೦ ಕ್ಕೆ ೩ ರೂ

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ [illegible] ಸುಖಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆಯುರೌಷಧಿ ಕಾರಖಾನಾ, ಪೋ. ಕಿತ್ತೂರ ಜಿಲ್ಲಾ ಬೆಳಗಾವ

ಅಪೂರ್ವ ಗ್ರಂಥವು!!! ಶ್ರೀ. ವಿದ್ಯಾರಣ್ಯ ಪುಸ್ತಕಮಾಲೆ ೪ ಚಂದಾದಾರರಾಗಿರಿ!

ಕರ್ನಾಟಕ ಸಾಮ್ರಾಜ್ಯ ಸಂಪುಟ ೧

[ಪ್ರಾಚೀನ ಕಾಲದಿಂದ ೭೫೭ ರ ವರೆಗೆ]

ಡೆಮಾಯ ಕ್ರೌನ ಷೋಡಶಪತ್ರಿ ಪುಟ ಸಂಖ್ಯೆ ಸುಮಾರು ೨೭೫.

ಮನೋಜ್ಞವಾದ ಮುದ್ರಣ ೧೬ ಅಪೂರ್ವವಾದ ಚಿತ್ರಗಳು.

ಬರಹಗಾರರು— ರಾಮಚಂದ್ರ ಹಣಮಂತ ದೇಶಪಾಂಡೆ ಎಮ್. ಎ.

ಈ ಅತ್ಯುಪಯುಕ್ತವಾದ ಮಹತ್ವದ ಗ್ರಂಥವನ್ನು ಪ್ರಖ್ಯಾತ ವಿಮರ್ಶಕ ವಿಚಕ್ಷಣ ರಾ. ನರಸಿಂಗರಾವ ಹಾ. ಕೃಷ್ಣಶಾಸ್ತ್ರಿಗಳೂ ನೋಡಿ ಪಸಂದ ಮಾಡಿರುತ್ತಾರೆ. ಇದು ಈಗ ಅಚ್ಚಾಗುತ್ತಲಿದ್ದು ಮುಂದಿನ ಜೇಷ್ಠ (ಜೂನ) ಮಾಸದಲ್ಲಿ ಮಾರಾಟಕ್ಕೆ ಸಿದ್ಧವಾಗುವದು. ಬೆಲೆಯ ವಿವರ—

	ರೂ. ಆ. ಪೈ.
೧ ಶ್ರೀ. ವಿದ್ಯಾರಣ್ಯ ಪುಸ್ತಕ ಮಾಲೆಯ ಚಂದಾದಾರರಿಗೆ	೧—೪—೦
೨ ಮುಂಗಡವಾಗಿ ಹಣ ಕಳಿಸುವವರಿಗೆ	೧—೬—೦
೩ ಮೇಲ್ಕಂಡ ಅವಧಿಯಲ್ಲಿ ವ್ಹಿ. ಪಿ. ಯಿಂದ ಬೇಡುವವರಿಗೆ	೧—೭—೦

ಅಂಚೆವೆಚ್ಚ ೬ ಆಣೆ ಪ್ರತ್ಯೇಕ. ಸ್ವಲ್ಪೇ ಪ್ರತಿಗಳನ್ನು ಮುದ್ರಿಸುವದರಿಂದ ಗ್ರಾಹಕರು ತ್ವರೆ ಮಾಡಬೇಕು. ಇಲ್ಲವಾದರೆ ನಿರಾಶೆಗೆ ಒಳಗಾಗುವ ಸಂಭವವಿದೆ. ಹೊಸದಾಗಿ ಚಂದಾದಾರರಾಗಬಿಚ್ಛಿಸುವವರು ೮ ಆಣೆ ಪ್ರವೇಶ ಫೀಯನ್ನು ಅಂಚೆ ಟಿಕೀಟು ರೂಪದಿಂದ ಕಳಿಸಿ ಬರೆಯತಕ್ಕದ್ದು

ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ (ಶಾಲೆಯ ಉಪಯೋಗ [illegible]) ಕಳಾ ಚಿತ್ರಗಳೂ ಬರವಣಿಗೆಗಳೂ ದೊರೆಯುವವು.

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಘ ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.
ಮಾಳಮಡ್ಡಿ ಧಾರವಾಡ. ವ್ಯವಸ್ಥಾಪಕ

ಸರಕಾರದಲ್ಲಿ ರಜಿಸ್ಟರ್ ಆದಂಥ

ಅನೇಕ ಸರ್ಟಿಫಿಕೇಟುಗಳು ಮತ್ತು ಸುವರ್ಣಪದಕಗಳು ಸಂಪಾದಿಸಿದ

ರಕ್ತಶುದ್ಧಿ! ದ್ರಾಕ್ಷಾರ್ಕಮಧು ಧಾತುವರ್ಧಕ!

ಈ ಮಧುವು ಮಹೌಷಧಿಯಾಗಿದ್ದು ಬಹಳ ಸಿಹಿಯಾಗಿಯೂ ರುಚಿಕಾರಕವಾಗಿಯೂ ಇರುತ್ತದೆ. ಈ ಮಧುವಿನ ಸೇವನದಿಂದ ವಾತ, ಪಿತ್ತ, ಕಫ ಈ ತ್ರಿದೋಷಗಳ ವಿಕಾರದಿಂದಾದ ಬೇನೆಯು ಹೋಗುವದು. ೬೦-೭೦ ವರ್ಷದ ಮುದುಕರ ಕಾಮ ವಿಕಾರವು ಕೂಡ ತರುಣರಂತೆ ಪ್ರವರ್ಧಮಾನವಾಗುವದು. ನಿಜವಾಗಿ ಒಂದೇ ಸಪ್ತಾಹದಲ್ಲಿ ಅನುಭವಕ್ಕೆ ಬರುವದು. ಜನನೇಂದ್ರಿಯದೊಳಗಿನ ಶಕ್ತಿಯು ಹೋಗಿ ಪ್ರಾಪ್ತವಾದ ನಪುಂಸಕತ್ವವು ಇಲ್ಲದಂತಾಗುವದು. ಮೂತ್ರಕ್ಕೆ ಹೋಗುವ ಪೂರ್ವದಲ್ಲಿ ಅಥವಾ ಕಡೆಗೆ ಹೋಗುವ [illegible] ಉಂಟಾಗುವದು— ಪರಮಾ ಹಾಗೂ [illegible] ಮಾತ್ರ ಸರ್ವದಾ ನಿರ್ದೋಷವಾಗುವದು. ಮೂರೇ ದಿನದಲ್ಲಿ ಗುಣಬರುವದು. ತರುಣ ಸ್ತ್ರೀಪುರುಷರು ಈ ದ್ರಾಕ್ಷಾರ್ಕ ಮಧುವಿನ ಸೇವನ ಮಾಡಿ ಇದರೊಳಗಿನ ಗುಣ ಸಾಕ್ಷ ಮಾಡಬೇಕು. ಇದರಿಂದ ಕ್ಷಯ ರೋಗ, ಉದರರೋಗ, ದಮ್ಮು ಇವುಗಳು ನಾಶವಾಗುವವು. ದಿನದಲ್ಲಿ ಮೂರಾವರ್ತಿ ಊಟ ಮಾಡಿದರೂ ಅನ್ನ ಪಚನವಾಗಿ ಹಸಿವು ಚನ್ನಾಗಿ ಆಗುತ್ತದೆ. ಇದರ ಅನುಭವವು ಮೊದಲನೇ ದಿವಸವೇ [illegible]. ದೇಹ ಪುಷ್ಟ ಆಗುವದು. ವೈದ್ಯರು ಎಷ್ಟೋ ದಿವಸದ ಶಾಸ್ತ್ರ ಇದ್ದರೂ ಒಂದು ವಾರದಲ್ಲಿ ನಾಶವಾಗುವದು. ಈ ಔಷಧಕ್ಕೆ ಪಥ್ಯವಿಲ್ಲ. ಸ್ತ್ರೀಸಂಭೋಗ ಬಿಡುವ ಕಾರಣವಿಲ್ಲ. [illegible] ಇದರ ೧೦ ದಿವಸ ಸಾಲುವ ಒಂದು ಬಾಟಲಿಯಿಂದ ಗುಣ ಬರುವದು. [illegible] ಒಂದು ಬಾಟಲಿಯ ಕಿಮ್ಮತ್ತು ೧—೪—೦, ಮೂರು ಬಾಟಲಿಯ ಕಿಮ್ಮತ್ತು [illegible]—೪—೦, ಮೂರು ಬಾಟಲಿಗಳನ್ನು ಒಂದೇ ಪಾರ್ಸಲ [illegible] ಕಳಿಸುವೆವು. [illegible] ಡಜನ್ ಬಾಟಲಿಗಳ ಕಿಮ್ಮತ್ತು ೧೨ ರೂಪಾಯಿ ಮತ್ತು ೧ ಬಾಟಲಿ ಪುಕ್ಕಟೆ [illegible] ಖರ್ಚ ಬೇರೆ ಬೀಳುವದು. ಏಜಂಟರ ಕಡೆಯಿಂದ ಒಂದು ಬಾಟ್ಲಿಗೆ ೧—೪—೦, [illegible], ಡಜನ್ [illegible]—೦—೦,

ಮ್ಯಾನೇಜರ— ದ್ರಾಕ್ಷಾರ್ಕಮಧು ಆಫೀಸು, ಪೋ. ನಿಪ್ಪಾಣಿ ಜಿ. ಬೆಳಗಾವ

ದಿ ಅಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ

೧೯೧೭ [illegible] ಸ್ಥಾಪಿಸಲ್ಪಟ್ಟಿದೆ.

ಹೊಸ [illegible] ಬ್ಯಾಂಕಿನ ವ್ಯವಹಾರ [illegible]. ಚಾಲೂ ಖಾತೆ, ಠೇವು, ಸೇವ್ಹಿಂಗ್ಸ [illegible] ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು [illegible]

ಈ ಬ್ಯಾಂಕಿನ ಕೆಲಸವು [illegible] ರವರೆಗೆ ನಡೆಯುವದು.

K. B. ANKALIGI,

೧೬ ಚಿತ್ರ ಪಟಗಳು ಕೂಡಿದ್ದು ಸಚಿತ್ರ [illegible] ಸ್ಮೃತಿ ಕಥೆ.

ಈ ಕಥೆಯು ಧರ್ಮಶಾಸ್ತ್ರ [illegible] ಬ್ರಾಹ್ಮಣ, ವೈಶ್ಯ, ಶೂದ್ರವೆಂಬ ನಾಲ್ಕು ವರ್ಣದವರು ನಡೆಯತಕ್ಕ [illegible] ಸ್ಮೃತಿ ಸಾರಗಳನ್ನು ಬೋಧಿಸುವದು.

೧ ಕಥಾ ರೂಪದಲ್ಲಿ ಚಿತ್ರಕಥಾ ಚಮತ್ಕಾರ [illegible] ಇದರಿಂದ ಸ್ತ್ರೀಯರೂ ಪುರುಷರೂ ಬಾಲಕರೂ [illegible] ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ವಿಷಯಗಳು ಇದರಿಂದ ತಿಳಿದು ಬರುವವು. ೩ ಈ ಕಥೆಯನ್ನು ಓದುವದರಿಂದ ಮನಸ್ಸನ್ನು [illegible] ೪. ವಿವೇಕಾವಿವೇಕವನ್ನು ಉಂಟು ಮಾಡುವದು. ಬೇಕಾದವರು ವ್ಹಿ. ಪಿ. ಪೋಸ್ಟ ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ [illegible] ರೂಪಾಯಿ ಎರಡು, ಟಪಾಲ ಹಾಸಿಲು ನಾಲ್ಕಾಣೆ

೧ ಸಚಿತ್ರ [illegible] ಕಥೆ. [illegible] ಪುಟಗಳು ಕ್ರಯ ೨-೪-೦ ೨ ಸಚಿತ್ರ [illegible] ಕಥೆ [illegible] ಪುಟಗಳು ಕ್ರಯ ೨ ೦-೦

೩ ಸಚಿತ್ರ [illegible] ಸಂವಾದ [illegible] ಪುಟಗಳು ೧-೬-೦ ಇವುಗಳಿಗೆ ಟಪಾಲ ಖರ್ಚ ಬೇರೆ

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ)ಗೆ ಬರೆದರೆ ಕಳಿಸುವೆವು.

ನಮ್ಮ ವಿಳಾಸ— ಎಮ್. ಆರ್. ಕೃಷ್ಣಸ್ವಾಮಿ ಶೆಟ್ಟಿ, ಬುಕ್ಕಡಿಪೋ,
ಚಿಕ್ಕಪೇಟೆ ಬೆಂಗಳೂರ ಸಿಟಿ.

ಬಾಣಂತೀ ಗುಳಿಗೆಗಳು.

ವಯೋವೃದ್ಧರೂ ಅನುಭವಶಾಲಿಗಳೂ ಆದ ಸುಪ್ರಸಿದ್ಧ ವಿದ್ವಾನ್ ವೈದ್ಯ ಪಂ. ವಾ. ವೇ. ಮೂ. ಕೃಷ್ಣಾಚಾರ್ಯ [illegible] ಅವರು ನಮಗೆ ಆಶೀರ್ವಾದದಿಂದ ಈ ಔಷಧ ಮಾಡುವ ಕ್ರಮವನ್ನು ಕಲಿಸಿರುವರು. ವೈದ್ಯ ವಿಷಯದಲ್ಲಿ ಮುಖ್ಯವಾಗಿ ಈ ಬಾಣಂತಿ ಗುಳಿಗೆಗಳ ಬಗ್ಗೆ ಆಚಾರ್ಯರ ಕೀರ್ತಿಯು ೫೦-೬೦ ವರ್ಷಗಳಿಂದ ಸಮೀಪದಲ್ಲಿ ಎಲ್ಲ ಕಡೆಗೂ ಹಬ್ಬಿರುವದು. ಸಮೀಪದಲ್ಲಿರುವವರಿಗೆ ಈ ಔಷಧದ ಉಪಯೋಗವಾಗುವಂತೆ ದೂರದಲ್ಲಿರುವ ನಮ್ಮ ಬಾಂಧವರಿಗೂ ಇದರ ಪ್ರಯೋಜನವಾಗಬೇಕೆಂದು ನಾವು ಇದನ್ನು ಪ್ರಸಿದ್ಧ ಪಡಿಸುತ್ತೇವೆ. ಈ ಗುಳಿಗೆಗಳ ಸೇವನದಿಂದ ಜ್ವರ, ಅರುಚಿ, ಕೆಮ್ಮು, ರಕ್ತ [illegible] ಹೋಗುವದು, ವಾಯುವಿಕಾರ, ಅಗ್ನಿಮಾಂದ್ಯ, ಹೊಟ್ಟೆಯುಬ್ಬಸ, ಅತಿಸಾರ, ಕಫ, ಮಸ್ತಕ ಶೂಲೆ ಮುಂತಾದ ಬಾಣಂತಿಯರ ಎಲ್ಲ ರೋಗಗಳು [illegible] ನಿರ್ಮೂಲವಾಗುವವು [illegible] ಲಕ್ಷಣವಿದ್ದರೂ ತಪ್ಪದೇ ಗುಣವಾಗುವದು. ಸ್ತ್ರೀಯರು ಹಡೆದ ಕೂಡಲೆ ಇವುಗಳನ್ನು ಸೇವಿಸಿದರೆ ಮುಂದೆ ಬಾಣಂತಿ ರೋಗದ ಭಯವೇ ಇಲ್ಲ. ಆದ್ದರಿಂದ ಬಾಣಂತಿಯರು ಯಾರೇ ಆಗಲಿ ಈ ಔಷಧವನ್ನು ನಿರ್ಭಯದಿಂದ ಸೇವಿಸಬಹುದು. ಗರ್ಭಿಣಿಯರು ಅವಶ್ಯವಾದ ಈ ಔಷಧವನ್ನು ಸಂಗ್ರಹಿಸಲಿಕ್ಕೆ ಮರೆಯಬಾರದು. ಅನುಪಾನ ಪತ್ರಿಕೆಯು ಔಷಧದೊಂದಿಗೆ ಜೋಡಿಯುವದು. ೪೦ ಗುಳಿಗೆಗಳುಳ್ಳ ಡಬ್ಬಿ ಗಳ ಬೆಲೆ ೬-೦-೦ ಟಪಾಲ ಖರ್ಚ ಬೇರೆ ಒಬ್ಬರಿಗೆ ಒಂದು ಡಬ್ಬಿಯು ಸಾಕು.

ಶಂಕರ ನಿವಾಸ
“ ಮಾಳಮಡ್ಡಿ ” ಧಾರವಾಡ

ಡಾ. ಎಸ್. ಆರ್. ಕಿತ್ತೂರ
“ ಸಕಲಸಂಜೀವಿನಿ ” [illegible] ಧಾರವಾಡ

ಗದಗ ತಾಲೂಕ ಬೆಂಚಲಿಯಲ್ಲಿ
ರಾವಬಹಾದ್ದೂರ [illegible] ಮುಡಿಬಿದರಿ ಬಿ. ಎ.
ಡಿಸ್ಟ್ರಿಕ್ಟ ಡೆಪ್ಯುಟಿ ಕಲೆಕ್ಟರ ಇನ್ ಭಾಗ ಧಾರವಾಡ
ಇವರ ಅಧ್ಯಕ್ಷತೆಯು ಕೆಳಗೆ
ಗ ದ ಗ ತಾ ಲೂ ಕಿ ನ

ಮೊದಲನೇ ಒಕ್ಕಲತನದ ಸಭೆ ಮತ್ತು ದನಗಳ ಪ್ರದರ್ಶನ.

ತಾ|| ೧೫, ೧೬, ೧೭, ಮೇ ೧೯೩೨ನೇ ದಿವಸಗಳಲ್ಲಿ ಕೂಡಿ ಕೆಳಗೆ ಬರೆದ ಠರಾವುಗಳು [illegible] ಮಾಡಿ ನಿರ್ಣಯಿಸಿ [illegible] ಪಾಸಾದವು.

(೧) ಮುಂಬಯಿ ಸರಕಾರ ಬೆಂಚಿ ಆಕ್ಟಿನ ವಾದರಿಯಂತೆ, ಜಮೀನುಗಳ ಲಾವಣಿ ದರವು ನೀರೆ ಬೇರೆ ಭಾಗದ ಜಮೀನಿನ ಸ್ಥಿತಿಯ ಪ್ರಕಾರ [illegible] ಮಾಡಲಿಕ್ಕೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೨) ವಿಜಾಪುರದ ಹತ್ತಿ ಬೆಳೆಯುವ ಭಾಗದಲ್ಲಿ ಪ್ರಾರಂಭಿಸಲ್ಪಡುವ ಅಪ್ಲಂಡ ಹತ್ತಿ[illegible] ಬೆಳೆಗಳು ಬಹಳ ಶುದ್ಧ ಉಳಿಯುವದು ಅವಶ್ಯವಿದೆ. ಬೀಜಗಳನ್ನು ಶುದ್ಧ ಉಳಿಸಲಿಕ್ಕೆ, ಮತ್ತು ಈ ಭಾಗಕ್ಕೆ ಉಪಯೋಗವಾಗುವಂಥ ಬೀಜಗಳ, [illegible] ಗಳ ಹಾಗೂ ಜಾನುವಾರುಗಳ ಬೇರೆ ಬೇರೆ ಪ್ರಯೋಗ[illegible] ಮಾಡಿ ನೋಡುವದು ಅತ್ಯಂತ ಅವಶ್ಯವಿದೆ. ಈ ಪ್ರಯೋಗಗಳನ್ನು ಮಾಡ[illegible] ಈ ಭಾಗದಲ್ಲಿ [illegible] ಮತ್ತು ಪ್ರಯೋಗದ ಸರಕಾರೀ [illegible] ವದನ್ನು ಶೀಘ್ರ ಪ್ರಾರಂಭ ಮಾಡಲಿಕ್ಕೆ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೩) [illegible] ಮತ್ತು ಅಪ್ಲಂಡ ಹತ್ತಿ[illegible] ಕೀಡೆಗಳ ಉಪಾಯಗಳನ್ನು [illegible] ಅವಶ್ಯವಿದ್ದು, [illegible] ಹತ್ತಿ ಬೆಳೆಯು[illegible] ವ ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೪) ಈ ಭಾಗದಲ್ಲಿ ಗೆಲ್ಲ[illegible] ಯು ಬಹಳ ಕಡಿಮೆಯಾಗುತ್ತದೆ [illegible] ಲಿಕ್ಕೆ ಇತರ ಉಪಾಯಗಳೇನಿವೆ [illegible] ನ ಪತ್ತೇ ಹಚ್ಚುವದನ್ನು [illegible] ಷ್ಟು ಶೀಘ್ರ [illegible] ಅಧಿಕಾರಿಗಳಿಗೆ [illegible] ವಿನಂತಿ ಮಾಡಿಕೊಳ್ಳಬೇಕು.

(೫) ಈ ಭಾಗದಲ್ಲಿ ಬೆಳೆ [illegible] ದೇಶದಲ್ಲಿ ಸುಧಾರಣೆಯನ್ನು ಮಾಡ[illegible] ವಂತೆ ಕಬ್ಬು, ಜೋಳ, ಬಿಳಿ ಜೋಳ, [illegible] ಮುಂತಾದ ಎಲ್ಲ ಧಾನ್ಯಗಳ ಬೀಜಗಳನ್ನು ಸುಧಾರಿಸಿ, ಜಮೀನು ಪೀಡೆಗಳನ್ನು ತೀವ್ರ [illegible] ಮಾಡಿ ಕೊಡಲಿಕ್ಕೆ ತಜ್ಞ ಅಧಿಕಾರಿಗಳಿಗೆ ಒಪ್ಪಿಸಿ ಕೊಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೬) ಈ ತಾಲೂಕಿನಲ್ಲಿ ಒಕ್ಕಲತನದ ಖಾತೆಯ ಸುಧಾರಣೆ ಕೆಲಸ [illegible] ಪ್ರಮಾಣದ ಮೇಲೆ ಪ್ರಾರಂಭದಲ್ಲಿ ಬರಲಿಕ್ಕೆ ಗದಗ ತಾಲೂಕಿನ [illegible] ಪ್ಲಾಟ ಕೋ. [illegible] ಮನ್ನನ್ನು ನಿರಂತರವಾಗಿ (ಕಾಯಂ) [illegible] ಮಿ. ರಾಯಚೆಲ್ಕರ ಸಾಹೇಬ, ಒಕ್ಕಲತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೭) ಈ ತಾಲೂಕಿನಲ್ಲಿ ಸಾಗುವಳಿಯ ಜಮೀನು ಮತ್ತು ಹೊಡೆದ ಎಮ್ಮೆಗಳ ಪ್ರಮಾಣದ ಅಂತರವು ಬಹಳ ಹೆಚ್ಚು ದೊರೆಯುವದರಿಂದ ಹುಲ್ಲಿಗೆ ಸಮೃದ್ಧಿವಾದ ಭೂಮಿಗೆ ಜಾಗ ಇಲ್ಲದೆ, ಇರುವ ಎಲ್ಲ ಜಮೀನು ಉಪಯೋಗವಾಗದೆ ಬಿದ್ದುಕೊಳ್ಳುವದು ಹೆಚ್ಚಾಗುತ್ತದೆ. ಈ ಭಾಗದಲ್ಲಿ ಒಂದು ಪೋಟೋ [illegible] ನ್ನು ಸ್ಥಾಪಿಸುವುದರಿಂದ ಹುಲ್ಲಿನ ಬೆಳೆ ಬಹಳ ಲಾಭವಾಗಿ, ಕೆಲಮಟ್ಟಿಗೆ ಮೇವಿನ ಸಂಕಟದ ನಿವಾರಣೆಯಾಗುವದು. ಆದ್ದರಿಂದ ಈ ಭಾಗಕ್ಕೆ ಈಗಲೇ ಒಂದು ಪೋಟೋ ಲಾಬಿಯನ್ನು ಬೇಗನೆ ಇಡಬೇಕೆಂದು ಮಿ. ರಾಯಚೆಲ್ಕರ ಸಾಹೇಬ, ಒಕ್ಕಲತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೮) ನೋಟೋಂ ಟ್ರ್ಯಾಕ್ಟರಿಕ್ಕೆ ಯಾವ ಯಂತ್ರವನ್ನು ಹೂಡಿದರೆ, ಜವಾರಿ ಹತ್ತೀ ಕಟ್ಟಿಗೆಗಳನ್ನು [illegible] ಪ್ರಯೋಗ ಮಾಡುವದನ್ನು ಪರೀಕ್ಷಿಸಿ, ಈ ಕೆಲಸಕ್ಕೆ ಉಪಯೋಗವಾಗುವಂಥ ಒಂದು ಯೋಗ್ಯ ಯಂತ್ರವನ್ನು ವ್ಯಾಪಾರ ಉತ್ಪನ್ನದಿಂದೊದಗಿ ಇದೇ ವರ್ಷ ಈ ಭಾಗದ [illegible] ಉಪಯೋಗಕ್ಕೆ ತಂದುಕೊಡಬೇಕೆಂದು ಮಿ. ರಾಯಚೆಲ್ಕರ ಸಾಹೇಬ, ಒಕ್ಕಲತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೯) ಬೇರೆ ಬೇರೆ ತರದ ಕಲ್ಟಿವೇಟರ[illegible] ಗಳನ್ನು ಪರೀಕ್ಷಿಸಿ ಅವುಗಳನ್ನು ಹಾಗೆ ಸುಧಾರಿಸಬೇಕೆಂಬುವದನ್ನು ರೈತರು ತಿಳಿಯುವಂತೆ, ಒಕ್ಕಲತನದ ಖಾತೆಯವರು ಒಂದು ಪಾಂಪ್ಲೆಟನ್ನು ಮಾಡಿ ಪ್ರಸಿದ್ಧಿಸಬೇಕೆಂದು ಮಿ. ರಾಯಚೆಲ್ಕರ ಸಾಹೇಬ, ಒಕ್ಕಲತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೦) ಗದಗ ಮತ್ತು ರೋಣ ತಾಲೂಕಿನ [illegible] ದಲ್ಲಿರುವ ಅಪಾಯಕರವಾದ ಹಿಂಡುಗಳಲ್ಲಿ ಒಂದು ಸಣ್ಣ ಬೆಳೆಯ ಎಲ್ಲ ರೋಗಗಳನ್ನು ಜೀವಂತ ಹಿಡಿಯುವ ಕೆಲಸವನ್ನು ಮಾಡಬೇಕೆಂದು ಮಿ. ರಾಯಚೆಲ್ಕರ ಸಾಹೇಬ, ಒಕ್ಕಲತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೧) ಜಗದಾರ ಹಿಂಗುಣೆಯಿಂದಲೂ, ಕಾಡ ಕುದುರೆಗಳಿಂದಲೂ ಬೆಳೆಗಳಿಗೆ ಬಹಳ ಲುಕ್ಸಾನವಾಗುತ್ತದೆ. ಈ ಅಪಾಯದ ಪ್ರಾಣಿಗಳ ಕಾಟವನ್ನು ತಪ್ಪಿಸಿಕೊಳ್ಳಲಿಕ್ಕೆ, ಇವುಗಳ ಜಾಡು ಇರುವ ಪ್ರತಿಯೊಂದು ಗ್ರಾಮದಲ್ಲಿ ೧೫-೨೦ ಜನರಿಗೆ ಗುಂಡಿ ಹೊಡೆಯಲಿಕ್ಕೆ ಲೈಸೆನ್ಸು ಕೊಡಲಿಕ್ಕೂ, ಅದರಲ್ಲಿ ಬೇಕಾದ ಜನರು, ಬೇಗನೆ ಇಲ್ಲವಾಗಿ ಆ ಗ್ರಾಮದ ಬಳಿಗೆ [illegible] ಒಂದೊಂದಾಗಿ [illegible] ಉಪಯೋಗವಾಗಲಿಕ್ಕೆ ಪರವಾನಿಗಿ ಕೊಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೧೨) ಕಪ್ಪತಗುಡ್ಡದಲ್ಲಿರುವ ಭಂಗಾರದ ಖನಿ [illegible] ಪರೀಕ್ಷಿಸಿ ಈ [illegible] ಮಾಡಲಿಕ್ಕೆ ಯೋಗ್ಯವಿದ್ದ [illegible] ಗಳನ್ನು ಮಾಡಲಿಕ್ಕೆ ಈ [illegible] ಕಂಪನಿಯನ್ನು ಕೈಕೊಳ್ಳಲಿಕ್ಕೆ ಮಿ. ರಾಯಚೆಲ್ಕರ ಸಾಹೇಬ, ಒಕ್ಕಲತನದ ಖಾತೆ ಇವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೩) ಕಪ್ಪತಗುಡ್ಡದ ಪ್ರದೇಶದಲ್ಲಿಯ ಎಲ್ಲ [illegible] ಕೆಳಗಿನ ಕೆರೆಗಳಿಂದ ಹಾಗೂ ಮತ್ತು [illegible] ಜಮೀನುಗಳಿಗೆ ಅನುಗಳಿಂದ ನಡೆಸುವ ಬಾವಿಗಳ ಉಪಯೋಗವಾಗಲಿ. ಅದಕ್ಕೆ [illegible] ನಡೆಯುವ [illegible] ಉಪಾಯ [illegible] ಸಾಕಷ್ಟು ನೀರಿನ ಸ್ಥಳಗಳನ್ನು ಮಾಡಿ ತೋರಿಸಿಕೊಡುವ ಕೆಲಸವನ್ನು ಸರಕಾರ ಕೈಕೊಳ್ಳಬೇಕೆಂದು ಒಕ್ಕಲತನದ ಅಧಿಕಾರಿಗಳಿಗೆ ವಿನಂತಿ ಮಾಡಿಕೊಳ್ಳಬೇಕು.

(೧೪) ಗದಗ-ಬೆಟಗೇರಿಯ ಮೈನಿಸಿಪಾಲಿಟಿ ಒಂದು [illegible] ಜೇಡಲಿಯಿಂದ ಮೂಳೆಗೊಬ್ಬರ [illegible] ಡಿಸ್ಟ್ರಿಕ್ಟ ಲೋಕಲ ಬೋರ್ಡಿಗೆ ವಿನಂತಿ ಮಾಡಿಕೊಳ್ಳಬೇಕು.

(೧೫) ಈ ತಾಲೂಕಿನಲ್ಲಿ ಕಬ್ಬಿಣದಂಥ ಭಾಗಗಳಲ್ಲಿ ಇರಿಗೇಶನ ಸೊಸಾಯಿಟಿಗಳನ್ನು ಸ್ಥಾಪನೆ ಮಾಡಲಿಕ್ಕೆ ಲ್ಯಾಂಡ ಡೆವ್ಹಲಪಮೆಂಟ ಬೋರ್ಡ [illegible] ಇರಿಗೇಶನ ಸ್ಕೀಮದ [illegible] ಯೋಗ್ಯ ಸ್ಥಳ ಪತ್ತೆ ಹಚ್ಚಿ ಕೊಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೧೬) ಪ್ರಾಥಮಿಕ ಶಾಲೆಗಳ ಶಿಕ್ಷಣಕ್ರಮದಲ್ಲಿ ಒಕ್ಕಲತನ, ಸಹಕಾರ ಮತ್ತು ಹೈಜೀನ [illegible] ವಿಷಯಗಳನ್ನು ಸೇರಿಸಬೇಕೆಂದು ಡಿಸ್ಟ್ರಿಕ್ಟ ಲೋಕಲಬೋರ್ಡಿನವರಿಗೆ ವಿನಂತಿ ಮಾಡಿಕೊಳ್ಳಬೇಕು.

(೧೭) ಶೋಧಿತ ವ ಸಕ್ತಿೀ ಶಿಕ್ಷಣವನ್ನು ಆದಷ್ಟು ಶೀಘ್ರ ಆಮಲಿನಲ್ಲಿ ತರಲಿಕ್ಕೆ ಈಗಿದ್ದ ಹಣದಿಂದ ಡಿಸ್ಟ್ರಿಕ್ಟ ಲೋಕಲಬೋರ್ಡಿಗೆ ಕಷ್ಟವಿದ್ದರೆ ರೋಣ ಫಿ.ತ ಅಕರಣೆಯನ್ನು ಪು[illegible] ಒಂದು ಆಣೆಯ ವರೆಗೆ ಏರಿಸಬಹುದು. ಈ ಹಣವನ್ನು ಕೇವಲ ಸಕ್ತೀ ಶಿಕ್ಷಣಕ್ಕೇನೇ ಉಪಯೋಗಿಸಬೇಕೆಂದು ಡಿಸ್ಟ್ರಿಕ್ಟ ಲೋಕಲಬೋರ್ಡಿನವರಿಗೆ ತಿಳಿಸಬೇಕು.

(೧೮) [illegible] ಮತ್ತು [illegible] ಬ್ಯಾಂಕುಗಳನ್ನು ಸ್ಥಾಪಿಸಲಿಕ್ಕೆ ಶೀಘ್ರ ಪ್ರಯತ್ನ ಮಾಡಬೇಕೆಂದು ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕು.

(೧೯) ಸ್ಟ್ಯಾಂಪು [illegible] ಮತ್ತು ಡಿಸ್ಟ್ರಿಕ್ಟ [illegible] ರೇಗಳ ಮೇಲಿನ [illegible] ರೆಗೆ [illegible] ಕೊಡಬೇಕೆಂದು ಸರಕಾರಕ್ಕೆ [illegible] ಮಾಡಿಕೊಳ್ಳಬೇಕು.

ಕೈದಿಗಳ ಹಿತಕ್ಕಾಗಿ
[illegible] ಕರ್ನಾಟಕ ಜೈಲ ಕಮಿಟಿ.

ಸಂಘಾಪೂರದ ಜೈಲ ಕಮಿಟಿಯ [illegible] ರು [illegible] ಕರ್ನಾಟಕ ಕೈದಿಗಳ [illegible] ಸಹಾಯ ಮಾಡುವದೇ ಈ ಕಮಿಟಿಯ [illegible] ದ ಗದಗ[illegible] ಹಾಗೂ ನಾಯಕ [illegible] ಕಾರ್ಯಗಳನ್ನು ಮಾಡುವಂತೆ ಸದರಿ ಕಮಿಟಿ ಹಾಗೂ ಬೆಳ್ಳ ಹಿಂದೆ ದ್ವಾರೆ ಎಷ್ಟೋ ಜನ ಸಜ್ಜನರು ಪ್ರಮಾದದಿಂದ ಹುರಗೆ ಹಾಕಲ್ಪಡಗುತ್ತಾರೆ ಇಂಥವರು ಕುರಿತ ದಲ್ಲಿ ಒಳ್ಳೆ ನಡತೆಯಿಂದ ಇರುತ್ತಾರೆಂದು ಕಂಡು ಬಂದರೆ ಇವರ ಶಿಕ್ಷೆ ಮುಗಿಯುವದಕ್ಕೂ [illegible] ನಡತೆಯ ಮೇಲೆ ಬಿಡಿಸಿಕೊಡುವರು [illegible] ಇದೂ ಒಂದು ಕಾರ್ಯವಾಗಿ [illegible] ಇಂಥವನ್ನು ಸಿಲಿಯಾರಣೆಯ [illegible] ನ ಮಾಡಲಿಕ್ಕೆ ಹಚ್ಚುವದು. ಪಂಚಾಯಿ [illegible] ದ ಇದರಿಂದ [illegible] ಸ್ವಸ್ಥವಾಗಿರುತ್ತವೆ.

ಏಹಾರದಲ್ಲಿ
ಹಿಂದೂ ಮುಸಲಮಾನ ಐಕ್ಯವು.

ಏಹಾರದಲ್ಲಿ ಹಿಂದೂ ಮುಸಲಮಾನರಲ್ಲಿ ಐಕ್ಯವನ್ನುಂಟು ಮಾಡಲು [illegible] ಮುಸಲಮಾನರ ಪ್ರಯತ್ನ ಮಾಡಿ [illegible] ನಡೆದರು. ಹಿಂದೂ ಮುಸಲಮಾನರು ಪರಸ್ಪರ ಪಮಾಗಳ [illegible] ಮಾಡಿದರು. ಮುಸಲಮಾನರು ಹಿಂದೂ ಜನ [illegible] ಗುಂಪಾದವರನ್ನು ಕಡಿಸುವರು ತಪ್ಪು. ಮುಸಲಮಾನರು ಕಾಂಗ್ರೆಸ ಟಿಕೀಟಿನ ಮೇಲೆ ಸ್ವರಾಜ್ಯ ಪಕ್ಷದ ಪಕ್ಷದಿಂದ ಚುನಾವಣೆಯಲ್ಲಿ ಉಮೇದವಾರರಾಗಬೇಕೆಂದು ಗೊತ್ತಾಯಿತು. ಇದರ ಪ್ರಾಂತದವರು ಬಹಾರದ ಅನುಕರಣ ಮಾಡಬೇಕಾದುದು ಅವಶ್ಯಕ.

ಮ್ಯುನಿಸಿಪಾಲ್ಟಿಯ ೧೯ ನೆಂಬರಾಂ ರಾಜೀನಾಮೆ

[illegible] ಮ್ಯುನಿಸಿಪಾಲಿಟಿ [illegible] ಮಾನ [illegible] ರಾಜೀನಾಮೆ [illegible] ರರಾದವರು [illegible] ಮೆಂಬರು ರಾಜೀನಾಮೆ ಕೊಡುವುದೆಂದು ಮಾಡಿದ್ದಾರೆ. ಮುನಿಸಿಪಾಲ ಮೆಂಬರು [illegible] ಮಕ್ಕಳವರಾಗಿದ್ದು, ಹಿಂದೂ ಜಯಕ್ಕಾಗಿ [illegible] ಆಡಿಕೊಳ್ಳುವ ಕಾಗದ [illegible] ರಾಜೀನಾಮೆ ಕೊಡುತ್ತೇವೆಂದು ಇವರು ಚಾಹೀರ ಮಾಡಿದ್ದಾರೆ.

ಗುಪ್ತ ವಕ್ತೃ ಗಂಭೀರ ಭಾಷಣ.

ಸ್ವರಾಜ್ಯ ಪಕ್ಷದ ಹಿರಿಯ ಪ್ರಮುಖರಾಗಿ ಹೆದ್ದಿಲ್ಲಿಯ ಅಸೆಂಬ್ಲಿಯ ಅಧ್ಯಕ್ಷರಾಗಿರುವ ಶ್ರೀ. ವ ಟೇಲರಿಗೂ, ಗಣ್ಯರಾದ ಜನರಲ್ಲರಾದ ಲಾರ್ಡ ಆಯರ್ವಿನಸಾಹೇಬರಿಗೂ ಎರಡು ಮೂರು ದಿವಸ [illegible] ಗೆಳಿಂದ ನಿತ್ಯ ಸಂಭಾಷಣೆ ನಡೆದವೆ. ಈ ಸಂಭಾಷಣೆಯು ಏನಿರುವದೆಂದು ಅನೇಕರು ಇವರಿಗೆ ಪ್ರಶ್ನೆ ಮಾಡಿದರು. ಇದು ಗುಪ್ತವಾಗಿದ್ದು, ಬ್ಯಲಿಗೆ ಬರತಕ್ಕದ್ದಲ್ಲೆಂದೂ, ಸಂಭಾಷಣೆಯು ಇನ್ನೂ ಮುಗಿದಿಲ್ಲೆಂದೂ ಇವರು ಉತ್ತರ ಕೊಟ್ಟಿದ್ದಾರೆ. ಮಹಾತ್ಮರು ಲಾರ್ಡ ಬಿರ್ಕನಹೆಡರ ಕೂಡ ಸತತವಾಗಿ ಆರು ದಿವಸ ಸಂಭಾಷಣೆ ಮಾಡಿದರೂ, ಸ್ವರಾಜ್ಯ ಪಕ್ಷಪಾತಿ ಆ ಸಾಹೇಬರ ಮೊದಲಿನ ಮತದಲ್ಲಿ ಎಷ್ಟು ಬದಲಾಗಿಲ್ಲೆಂಬುದನ್ನು ಇಲ್ಲಿ ಹೇಳುವದು ಅವಶ್ಯಕವಾಗಲಾರದು.

ವಿವಿಧ ವರ್ತಮಾನಗಳು.

ವಿಜಾಪೂರದಲ್ಲಿ [illegible] ಮಹಾ ಜನರಲ್ಲಿ ಕೆಲವೊಂದು ಪ್ರತಿಕ್ಷೆಗಾಗಿ ಪುನಃ ಸ್ವತಂತ್ರವಾಗಿ ಒಂದು ಒಂದು ದಿವಸ ಹೇಳಿ ಬಂದಾಗಿತ್ತು.

ಬೆಳಗಾವಿಯ ಮಿ. [illegible] ಅಧ್ಯಕ್ಷತೆಗಾಗಿ ಜಗಜಾಪುರ ಮೆಸ್ಸ [illegible] ಗದಿ ಮುಖ್ಯ [illegible] ಕ್ಷೇತ್ರದವರು ತಮ್ಮ ತಮ್ಮ ಪಕ್ಷ [illegible] ದೆಲು ಹಾಕಬೇಕು. [illegible] ದೆಲು ಹಾಕುವದು [illegible] ಆವರದೇ ಸ್ವಾತಂತ್ರ್ಯ ಎಂದು [illegible] ದು ಪುಣೆಯ ಜಾಗರೂಕ ಪತ್ರವು ಟೀಕೆ ಮಾಡಿದೆ.

ಸಾಂಗಲಿ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ ಮಿ. ಮಾಳಗಾವಕರ ಮೇಲೆ ಬಿಟ್ಟ ಮಾಡಬೇಕೆಂದು ಮೆಸರ್ಸ ಭಾವಸಾರ, ಅವರಿಗೆ ನೋಟೀಸುಕೊಲೆ ಹೊಡೆದವರು [illegible] ಇರೇ ವಾದಿ ಕೊಂಡಿದ್ದಕ್ಕೆ, ಬೇಕರು, [illegible] ಸಂಸ್ಥಾನ ಜಪ್ತಿ ಮಾಡಿದರು.

ವರ್ಹಾಡ ಮತ್ತು ನಾಗಪೂರದ ಕಾಂಗ್ರೆಸ ಕಮಿಟಿಗಳಲ್ಲಿ ಸ್ವರಾಜ್ಯ [illegible] ಬಹುಮತವಿರುವದರಿಂದ, ಸ್ವರಾಜ್ಯ ಪಕ್ಷದಿಂದ ಕಾಂಗ್ರೆಸ ಪರವಾಗಿ ಕಮಿಟಿಯು ಅಲ್ಪಮತವಾಗಿ ಚುನಾವಣೆಯಲ್ಲಿ ಉಮೇದವಾರರಾಗುವರು.

ಮದ್ರಾಸದಲ್ಲಿ ಬ್ರಾಹ್ಮಣೇತರ ಪಕ್ಷದವರು ಸ್ವಾಂದರ್ಯ ಮಹಾಸಭೆಯಲ್ಲಿ ಮದ್ರಾಸದ ಸರ್ಕಾರ ಪಕ್ಷದ ಕೊಡಿಸಿದ್ದರು. ಸ್ವರಾಜ್ಯ ಪಕ್ಷದ ಪ್ರಶ್ನೆಗಳಿಗೆ ಉತ್ತರ ಕೊಡುವದಾಗದ್ದರಿಂದ, ಸಭೆಯಲ್ಲಿ ಗೊಂದಲವೆದ್ದು ಸಭೆಯು ಮುರಿಯಿತು. ಸ್ವರಾಜ್ಯ ಪಕ್ಷವು ಸ್ವತಃ ಸಭೆ ಮಾಡಿ, ಶ್ರೀನ್ನಿವಾಸ ಮುಂದೆ ಕಾಂಗ್ರೆಸ ಧ್ಯೇಯವಿಟ್ಟರು.

ದಿಲ್ಲಿಯಲ್ಲಿ ಜನರಿಂದ ತಾಪವು ಅತಿಶಯ ಭಯಂಕರವಾಗಿದೆ. ದಿನಾಲು ತಾಪದಿಂದ ಎಷ್ಟೋ ಮಕ್ಕಳು ಸಾಯುತ್ತಿರುವವು.

ಮದ್ರಾಸ ಸರಕಾರದವರು ತಮ್ಮ ಇಲಾಖೆಯಲ್ಲಿರುವ ಸಾರ್ವಜನಿಕ ವಾಚನಾಲಯಗಳ ಪ್ರೋತ್ಸಾಹಕ್ಕಾಗಿ ಮುನಿಸಿಪಾಲಿಟಿಗಳಿಗೂ ಲೋಕಲ್ ಬೋರ್ಡುಗಳಿಗೂ ಗ್ರಾಂಟು ಕೊಡುವದಕ್ಕಾಗಿ ೧೩,೦೦೦ ರೂಪಾಯಿಗಳನ್ನು ತೆಗೆದಿಟ್ಟಿರುತ್ತಾರೆ.

ಬರೋಡೆಯ ಮಹಾರಾಜರು ೧೬ ಸಾವಿ ವಿಲಾಯಿತಿ ಪ್ರವಾಸದ ಪಡೆಯುವದಕ್ಕಾಗಿ ೧ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆಂದು ಕೇಸರಿ ಪತ್ರದ ವರ್ತಮಾನಗಳು ತಿಳಿಸುತ್ತದೆ.

ತಮಿಳ ದೇಶದ ತನಾರ ಕಿಮ್ಯಲ್ಲಿ ಕೆಲ ವರ್ಷದಿಂದ ಕಾಂಗ್ರೆಸದ ಪಕ್ಷದಿಂದ ಉಮೇದವಾರರಾಗಲು ಸ್ವರಾಜ್ಯ ಕಮಿಟಿಯವರು ನಮ್ಮ ಶಿಕ್ಷಕರ ಶಿಫಾರಸೆಂದು ಡಾಕ್ಟರ ವರದರಾಜ ನಾಯುಡುರವರು ಸ್ವರಾಜ್ಯ ಪ್ಯಾನೆಲಿಂಗ ಕಮಿಟಿಯ ಮುಂಬರ ಕೆಲಸಕ್ಕೆ ರಾಜೀನಾಮೆ ಕೊಟ್ಟರು.

ಸ್ವಾತಂತ್ರ್ಯ ಕಾಂಗ್ರೆಸಿಗೋಸ್ಕರ ವಿವಿಧ ಪಕ್ಷ ಪತ್ರಗಳ ಕಾಮಗಳ ವಿರುದ್ಧ ಹಾಲಿಯ ಫೇರ ಬದಲಾಯಿಸುವದಕ್ಕಾಗಿ ಮಹಾರಾಜರ ಪಲ್ಟಿನ ಮೇಲೆ [illegible] ಮಹಾರಾಜರು ಎರಡು ತಿಂಗಳ ಕಾಲ ಬಿಟ್ಟಿದ್ದಾರೆ. ದೀಡ ಸೇನಾಪತಿಯನ್ನು ಬೇಕೆಂದು ಇದಕ್ಕೆ ತಿಳಿದ್ದಾರೆ.

ಪಂ. ಕೃಷ್ಣಮೂರ್ತಿಯನ್ನು ಅವತಾರ ಪುರುಷನಾಗಿ ಜಾಹೀರ ಧರ್ಮೋದ್ಧಾರಕನಾಗಿ ತಿಳಿಯಬೇಕು. ಇದ್ದುಬಂದರೆ ಥಿಯಾಸೊಫಿಯಿಂದ ವೈಶಿಕ ಕ್ಯವೆಂದು ಅನಿಬೆಸೆಂಟಮ್ಮನವರು ದಾಕಣ್ಯದ ಏಟಿಯನ್ನು ಇವರಿಂಜೋ [illegible] ಏಟು. ಈ ಸಭೆಯು ಲಂಡನದಲ್ಲಿ ಆಯಿತು.

ಮೊರೋಕ್ಕೋದ ಅಬ್ದುಲ ಕರೀಮನಿಗೆ ಅವರ ನನ್ನು ಮಾಡಲಿಕ್ಕೆ ಯತ್ನವನ್ನು ಮಾಡುವರು.

ಫ್ರೆಂಚ್ ಕ್ರಿಶನದ [illegible] ಮುಂದೆ ಎಲ್ಲ ಕಡೆ ತಂಬಾಕ ಹಿಡಿಯುವ ಮನೆಗಳ ಒಂದೆ ಹತ್ತಿ ಇನ್ನೂರು ಅಂಗಡಿಗಳು ಸುಟ್ಟು, ಆಕ್ಷೇಪಕ್ಕಿಂತ ಹೆಚ್ಚು ಹಾನಿಯಾಗಿರುತ್ತದೆ.

ಅನೇಕ ಊರಿನಲ್ಲಿ ಅಂತ್ಯಜರ ಗುಡಿಸಲುಗಳಿಗೆ ಬೆಂಕಿ ಹತ್ತಿ, ೮೦ ಗುಡಿಸಲುಗಳು ಸುಟ್ಟವು.

ಮುದಿಯಾಳ ಕಮಿಟಿಯ ಶಿಫಾರಸ್ಸಿನ ಪ್ರಕಾರ ಬರುವ ಪ್ರಸಂಗದಲ್ಲಿ ಕೌನ್ಸಿಲಗಳ ದೆಸೆಯಿಂದ ಕಾರ್ಯಕಾರಿಗಳು ಅಸ್ಪೃಶ್ಯರಿಗೂ ಸ್ವತಂತ್ರವಾಗಿ ಪ್ರತಿನಿಧಿಗಳನ್ನು ಆರಿಸುವ ಅಧಿಕಾರ ಕೊಡುವ ವಿಚಾರವನ್ನು ಹಿಂದುಸ್ತಾನ ಸರಕಾರದವರು ಮಾಡುತ್ತಲಿದ್ದಾರೆ.

ಧಾರವಾಡ ಜಿಲ್ಲಾ ಕುರುಬರ ೧ನೇ ಪರಿಷತ್ತು ಬೀದಿ ತೋರಿದರು.

—o—

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮೊದಲು ಪ್ರಸಿದ್ಧ ಮಾಡಿದ ಪ್ರಕಾರ ತಾ. ೧೯-೬-೧೯೨೬ ನೇ ದಿವಸ ಸಂಜೆ ಅಧ್ಯಕ್ಷರನ್ನು ಹಾಗು ಯಾವತ್ತು ಸಭಿಕರನ್ನು ಸ್ವಾಗತ ಪೂರ್ವಕ ಕರೆದೊಯ್ದು ಬೀದಿ ಒಳಗ ಮೆರವಣಿಗೆ ದ ಎರಡು ಘಂಟೆಗೆ ಮನೋಹರವಾದ ಮಂಟಪದಲ್ಲಿ ಪರಿಷತ್ತಿನ ಕಾರ್ಯವು ಪ್ರಾರಂಭವಾಯಿತು. ಈ ಸಭೆಗೆ ಮುಂಬಯಿ ಕಾಯಿದೆ ಕೌನ್ಸಿಲದ ಹಿಂದಿನ ಮೆಂಬರರಾದ ಶ್ರೀಮಂತ ದೇಸಾಯಿ ದ್ದಪ್ಪಾ ಸಲಗರ ನೂಲ್ವಾಪೂರ ಕೊಲ್ಹಾಪೂರ ಸಂಸ್ಥಾನದ ಕಂಕಣವಾಡಿ ಮಹಾಸ್ವಾಮಿಗಳು, ಶ್ರೀ ಚಿದಂಬರ ಸ್ವಾಮಿಗಳು ಗದಗ, ಮಿ|| ಡೆ ಡಾಯರೆಕ್ಟರ ಶೇತಕೀ ಖಾತೆ ದಕ್ಷಿಣ ಭಾಗ ಧಾರವಾಡ, ಮಿ|| ಮಾಮಲೇದಾರ ಹಾವೇರಿ, ಮಿ|| ಎನ ಜೋಗ ಎಮ ಎಲ ಸಿ ಧಾರವಾಡ, ಮಲ್ಲಪ್ಪಾ ಸಾಸ್ವಿಹಳ್ಳಿ, ತಿಮ್ಮಣ್ಣಾ ಮೆಣಸಿನಕಾಯಿ, ದೇವನಗೌಡಾ ಪಾಟೀಲ ಬಿ. ಎ ಎಲ್ ಎಲ್ ಬಿ ಹಾಯಕೋರ್ಟ ವಕೀಲ ಧಾರವಾಡ, ಅಲ್ಲೀಸಾಹೇಬ ಚೌಧರಿ, ನಿಂಗಪ್ಪಾ ಕೂಬಿಹಾಳ, ಡಾಕ್ಟರ ಮೀರಜೆ ಹಾವೇರಿ, ಲಚ್ಚಪ್ಪಾ ಭಾಂಡಾಗಾರ ಗೋಕಾಕ, ವೆಂಕಟೇಶ ಗಳಗನಾಥ, ಸಂಪಾದಕ ಬಸವರಾಜ ಹಾವೇರಿ, ರಾಮನಗೌಡಾ ಹುಲಕೋಟಿ ಬಿ ಎ ಜೆ, ಪಾವಟೆ ಬಿ ಎ ಜೆ, ಕಾರ್ವದ ಶ್ರೀ ಪ್ರಾಣಿದಯಾ ಜ್ಞಾನ ಪ್ರಸಾರಕ ಸಂಘ ದಾವಣಗೆರೆ ಮೊದಲಾದವರು ಜಿಲ್ಹೆಯ ಯಾವತ್ತು ಭಾಗಗಳ ಹಾಗು ಕರ್ನಾಟಕ ಮಹಾರಾಷ್ಟ್ರಗಳ ಸುಮಾರು ಎರಡು ಸಾವಿರ ಜನರು ಕೂಡಿದ್ದರು.

ಪ್ರಾರಂಭದಲ್ಲಿ ಪಂಡಿತ ಶ್ರೀಕಂಠಶಾಸ್ತ್ರಿ ನಲವಡಿ ಇವರಿಂದ ರಚಿಸಲ್ಪಟ್ಟ ಹಾಲುಮತ ಹಾಗು ಅಧ್ಯಕ್ಷರ ಸ್ವಾಗತ ಪದ್ಯಗಳನ್ನು ಹಾಡಿದ ಮೇಲೆ ಸ್ವಾಗತ ಮಂಡಳದ ಅಧ್ಯಕ್ಷರಾದ ಶ್ರೀ ಧರ್ಮಗೌಡಾ ಮುದಿಗೌಡರ ಇವರು ತಮ್ಮ ಸ್ವಾಗತಪರ ಭಾಷಣ ಮಾಡಿದ ಮೇಲೆ ಅಧ್ಯಕ್ಷರ ಸೂಚನೆಯಾಯಿತು. ಬಳಿಕ ಅಧ್ಯಕ್ಷರು ತಮ್ಮ ಭಾಷಣ ಮಾಡಿದ ಮೇಲೆ ಶ್ರೀ ಶಂಕರೆಪ್ಪಾ ಹರ್ಲಾಪೂರ ಇವರು ಕರ್ನಾಟಕ ಕುರುಬರ ಸಂಘದ ಇತಿಹಾಸವನ್ನು ಹೇಳಿದರು. ಬಳಿಕ ಮೇಲೆ ಬರೆದ ಕೆಲವು ಪ್ರಮುಖರ ಭಾಷಣಗಳಾಗಿ ಸಾಯಂಕಾಲದ ೭ ಘಂಟೆಗೆ ಸಭೆಯ ಕಾರ್ಯವು ಅಷ್ಟಕ್ಕೆ ನಿಲ್ಲಿಸಲ್ಪಟ್ಟಿತು.

ರಾತ್ರಿ ಪಂಡಿತ ಶ್ರೀಕಂಠಶಾಸ್ತ್ರಿಯವರು ಶ್ರೀ ದೇವಿ ಅಹಲ್ಯಾಬಾಯಿ ಹೋಳಕರ ಇವರ ಸುಶ್ರಾವ್ಯ ಕೀರ್ತನವನ್ನು ಮಾಡಿದರು. ಮರು ದಿವಸ ಮುಂಜಾನೆ ಸಭೆಯ ಕಾರ್ಯವು ಸುರುವಾಗಿ ಠರಾವಗಳು ಆದವು. ಮತ್ತು ಘಂಟಿನ ಕಾರ್ಯವು ನಡೆದು ಅಷ್ಟಕ್ಕೆ ನಿಲ್ಲಿಸಲ್ಪಟ್ಟಿತು. ಮಧ್ಯಾಹ್ನದ ೧ ಗಂಟೆಗೆ ಶ್ರೀ ಲೋಕಪ್ಪಾ ಸಲಗರ ಇವರ ಅಧ್ಯಕ್ಷತೆಯ ಕೆಳಗೆ ಕರ್ನಾಟಕ ಕುರುಬರ ಕೌನ್ಸಿಲದ ೩ ನೇ ಅಧಿವೇಶನವು ಕೂಡಿ ಶ್ರೀ ದೇವನಗೌಡಾ ಪಾಟೀಲ ವಕೀಲ ಇವರಿಗೆ ಕರ್ನಾಟಕ ಕುರುಬರ ಸಂಘದಿಂದ ಮಾನಪತ್ರ ಕೊಡುವ ಸಮಾರಂಭವು ಬಹು ವಿಜೃಂಭಣೆಯಿಂದ ನೆರವೇರಿತು. ಶ್ರೀಯುತ ದೇವನಗೌಡರು ಮಾನಪತ್ರಕ್ಕೆ ಸಮಯೋಚಿತ ಉತ್ತರ ಕೊಟ್ಟ ಮೇಲೆ ಈ ಸಮಾರಂಭವು ಮುಗಿಯಿತು.

ನಾಲ್ಕು ಗಂಟೆಗೆ ಮತ್ತೆ ಸಭೆಯ ಕಾರ್ಯವು ಸುರುವಾಗಿ ಫಂಡಿಗೆ ೫೦೦೦ ರೂಪಾಯಿಗಳು ಕೂಡಿದವು. ಮತ್ತು ಬೋರ್ಡಿಂಗಿಗೆ ದಾನ್ಯದ ದೇಣಿಗೆಯಾಯಿತು. ಕಂಬಳಿ ಹಾಗು ಕೃಷಿಗಾರಿಕೆ ಸಾಮಾನುಗಳನ್ನು ತಂದವರಿಗೆ ಅಧ್ಯಕ್ಷರ ಹಸ್ತದಿಂದ ಇನಾಮು ಹಂಚಲ್ಪಟ್ಟಿತು. ಅಧ್ಯಕ್ಷರು ಉಪಸಂಹಾರದ ಭಾಷಣ ಮಾಡಿದ ಮೇಲೆ ಶ್ರೀ ಬಸಪ್ಪಾ ಫಕೀರಪ್ಪಾ ಕಲ್ಲಣ್ಣವರ ಜನರಲ ಸೆಕ್ರೆಟರಿ ಇವರು ಅಧ್ಯಕ್ಷರ ಹಾಗು ಸಭಿಕರ ಮತ್ತು ಸ್ವಯಂಸೇವಕರ ಆಭಾರ ಮನ್ನಿಸಿದ ಮೇಲೆ ಅಧ್ಯಕ್ಷರಿಗೆ ಹೂವಿನ ಹಾರ ಹಾಕಿ ಯಾವತ್ತರಿಗೂ ತಾಂಬೂಲ ಸಮರ್ಪಿಸಿ ಹಾಲು ಮತದ ಜಯಘೋಷದೊಡನೆ ಈ ಪರಿಷತ್ತಿನ ಕಾರ್ಯವು ಸಮಾಪ್ತಿಯಾಯಿತು. ಸಭೆಯಲ್ಲಿ ಕೆಲವು ಉಪಚಾರದ ಠರಾವುಗಳು ಪಾಸಾದ ನಂತರ ಸಮಾಜಕ್ಕೆ ಸಂಬಂಧಿಸಿದ ಕೆಳಗಿನ ಠರಾವುಗಳು ಪಾಸಾದವು.

(೧) ಶ್ರೀಮಂತ ಯಶವಂತರಾವ ಹೋಳಕರ ಮಹಾರಾಜ ಇಂದೂರ ಇವರ ಆಯುರಾರೋಗ್ಯ ಚಿಂತನೆ (೨) ದಾವಣಗೆರೆಯಲ್ಲಿ ಕುರುಬರ ಬೋರ್ಡಿಂಗ ಸ್ಥಾಪಿಸಿದವರು (೩) ಗದಗ ಹಾವೇರಿ ಧಾರವಾಡ ಈ ಪಟ್ಟಣಗಳಲ್ಲಿ ನಮ್ಮ ಸಮಾಜದ ವಿದ್ಯಾರ್ಥಿಗಳ ವಸತಿಗೃಹಕ್ಕೆ ಮೋಫತ್ತಾಗಿ ಜಾಗೆಯನ್ನು ಕೊಡುವದಕ್ಕಾಗಿ ಮೆಹರ್ಬಾನ ಕಲೆಕ್ಟರ ಸಾಹೇಬ ಧಾರವಾಡ ಇವರಿಗೆ ವಿನಂತಿ ಮಾಡಿಕೊಳ್ಳುವದು (೪) ಜಿಲ್ಹೆಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಸಕ್ತಿಯಿಂದ ಸುರುಮಾಡಬೇಕೆಂದು ವಿನಂತಿ (೫) ಗೋರಕ್ಷಣೆ ಮಾಡುವದು (೬) ನಮ್ಮ ಸಮಾಜದ ಜನರು ಹಿಂದುಸ್ಥಾನ ಸಂರಕ್ಷಕ ಸೈನ್ಯ ಭರ್ತಿ ಸ್ಕೂಟ ಗರ್ಲ ಗಾಯಿಡಗಳಲ್ಲಿ ಸೇರತಕ್ಕದ್ದು (೭) ಹೆಡ್ಮಾಸ್ತರ ಹುದ್ದೆಯನ್ನು ತೆಗೆದು ಸರ್ವೇ ಪರಾಂಪರಿ ಸ್ಕೀಮನ್ನು ತೀವ್ರ ಅಮಲಿನಲ್ಲಿ ತರಲಿಕ್ಕೆ ಸರಕಾರಕ್ಕೆ ಆಗ್ರಹದ ವಿನಂತಿ (೮) ನಮ್ಮ ಸಮಾಜದ ಶಿಕ್ಷಕರಿಗೆ ಹೆಡ್ಡ ಮಾಸ್ತರ ಸುಪರವಾಯಿಜರ ಮೊದಲಾದವುಗಳಿಂದ ಪ್ರೋತ್ಸಾಹಿಸಬೇಕು (೯) ಕಾಯಿದೆ ಕೌನ್ಸಿಲ ಲೋಕಲ ಬೋರ್ಡು, ಮ್ಯುನಿಸಿಪಾಲಿಟಿ ಹಾಗೂ ಸ್ಕೂಲಬೋರ್ಡುಗಳಲ್ಲಿ ಸಮಾಜದ ಜನರನ್ನು ನಾಮಿನೇಶನ ಮಾಡಲಿಕ್ಕೆ ಸರಕಾರಕ್ಕೆ ಆಗ್ರಹದ ವಿನಂತಿ (೧೦) ನಮ್ಮ ಸಮಾಜದ ಜನರಿಗೆ ಪಡ ಜಮೀನು, ಕುರಿಗಳಿಗೆ ಅಡವಿ ಮತ್ತು ಒಂದೂಕ ಲಾಯಿಸೆನ್ಸ ಕೊಡಬೇಕು. ಮತ್ತು ಲ್ಯಾಂಡ ಮೋರ್ಗೇಜ ಬ್ಯಾಂಕು ಸ್ಥಾಪಿಸಲಿಕ್ಕೆ ಸರಕಾರಕ್ಕೆ ಆಗ್ರಹದ ವಿನಂತಿ (೧೧) ನಮ್ಮ ಸಮಾಜದ ಕನ್ನಡ ಮುಲ್ಕೀ ಪರೀಕ್ಷೆ ಪಾಸಾದ ವಿದ್ಯಾರ್ಥಿಗಳಿಗೆ ಟ್ರೇನಿಂಗ ಕಾಲೇಜ ಹಾಗೂ ಅಯಾ ಖಾತೆಗಳಲ್ಲಿ ಎಲ್ಲಕ್ಕೂ ಮೊದಲು ಸೇರಿಸಬೇಕು ಮತ್ತು ಇಂಗ್ರೇಜಿ ಕಲಿಯುವವರಿಗೆ ಮಾಫೀ ಸ್ಕಾಲರ ಶಿಪ್ಪ ಕೊಡಬೇಕು (೧೨) ನಮ್ಮ ಸಮಾಜದ ಯೋಗ್ಯ ಜನರಿಗೆ ಸಹಕಾರೀ ಅಕ್ಕಲಕಣ ಖಾತೆಗಳಲ್ಲಿ ಆರ್ಗನಾಯಿಜರ ಮೊದಲಾದ ಸ್ಥಳಗಳನ್ನು ಕೊಡಬೇಕು, (೧೩) ಕರ್ನಾಟಕ ಕುರುಬರ ಸಂಘದ ಶಾಖೆಗಳು ಅಲ್ಲಲ್ಲಿ ಸ್ಥಾಪಿಸುವದು ಮತ್ತು ಪ್ರಚಾರಕರನ್ನು ನೇಮಿಸುವದು.

ರಾವಲಪಿಂಡಿಯಲ್ಲಿ

ಶೀಖ-ಮುಸಲಮಾನರ ಭಯಂಕರ ದಂಗೆ.

೧೪ ಜನರು ಸತ್ತರು, ಅನೇಕರು ಘಾಯವಾದರು.

ಕಾಳಿಕ ಮಾರ್ಕೆಟು ಸುಟ್ಟು ೧೭೦ ಅಂಗಡಿಗಳು ಬೂದಿಯಾದವು.

—o—

ಕಲಕತ್ತೆಯಂತೆ ರಾವಲಪಿಂಡಿಯಲ್ಲಿಯೂ ಹಿಂದೂ ಮುಸಲ್ಮಾನರಲ್ಲಿ ಭಯಂಕರ ದಂಗೆಯಾಯಿತು. ಶೀಖರು ಗುರು ಅರ್ಜುನಸಿಂಗನ ಧ್ವಜಪಟ ಸಹಿತವಾಗಿ ತಮ್ಮ ಪೂಜ್ಯ ಗ್ರಂಥದ ಮೆರವಣಿಗೆ ಹೊರಡಿಸಿದಾಗ ಮುಸಲಮಾನರು ವಾದ್ಯ ಬಾರಿಸಬಾರದೆಂದು ಅಡ್ಡ ಬಂದರು. ಕೂಡಲೆ ಹೊಡದಾಟಕ್ಕೆ ಪ್ರಾರಂಭವಾಯಿತು. ರಾತ್ರಿಯ ವೇಳೆ, ಪಟ್ಟಣದ ತುಂಬ ದಂಗೆಯು ಬೇಗ ಹಬ್ಬಿತು. ಪೋಲೀಸರು ದಂಡು ತಂದು, ದಂಗೆಯನ್ನು ನಿಲ್ಲಿಸಬೇಕೆನ್ನುವಷ್ಟರಲ್ಲಿ ೧೪ ಜನರು ಸತ್ತು ೪೬ ಜನರು ಘಾಯ ಹೊಂದಿದಂತೆ ಕಂಡು ಬಂತು. ಸತ್ತವರಲ್ಲಿ ೧೧ ಮುಸಲಮಾನ, ೨ ಹಿಂದೂ ಒಬ್ಬ ಶೀಖ ಈ ಪ್ರಕಾರವಿರುತ್ತದೆ. ದಂಗೆಯಲ್ಲಿ ಗುಡಿ ಅಥವಾ ಮಸೀದೆಗಳಿಗೆ ಕೇಡಾಗಿಲ್ಲ. ಮುಸಲಮಾನರು ಹಿಂದೂ ಜನರ ಕಾಳಿನ ಮಾರ್ಕೆಟಿಗೆ ಬೆಂಕಿ ಹಚ್ಚಿದರು. ಬಂಬು ತಂದು, ಬೆಂಕಿಯನ್ನು ಆರಿಸುವಷ್ಟರಲ್ಲಿ ೧೭೦ ಅಂಗಡಿಗಳು ಸುಟ್ಟು ಬೂದಿಯಾದವು. ಕೋಟಿಗಟ್ಟಲೆ ಕೋಟ್ಯವಧಿ ರೂಪಾಯಿಗಳ ಹಾನಿಯಾಗಿರುತ್ತದೆಂದರೆ ಅತಿಶಯೋಕ್ತಿಯಾಗಲಾರದು. ಹಿಂದೂ ಜನರು ಹರತಾಳ ಮಾಡಿ ಎಲ್ಲ ವ್ಯವಹಾರವನ್ನು ಬಂದು ಮಾಡಿದ್ದಾರೆ.

ಸರಕಾರದವರು ದಂಗೆಯ ಸಂಬಂಧವಾಗಿ ಕಠಿಣೋಪಾಯಗಳನ್ನು ಮಾಡಿದ್ದಾರೆ. ಹೊರಗಿನಿಂದ ಬಂದಂಥ ಜನರನ್ನು ಹೆಂಗಸರು ಹುಡುಗರನ್ನು ಸಹ ಊರೊಳಗೆ ಬಿಡುವದನ್ನು ಬಂದು ಮಾಡಿದ್ದರಿಂದ, ರೇಲ್ವೆ ಸ್ಟೇಶನದಲ್ಲಿ ಸಾವಿರಾರು ಜನರು ಕೂಡಿ ಬಿದ್ದಿರುತ್ತಾರೆ. ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರು ಎಲ್ಲ ಶಸ್ತ್ರಗಳನ್ನು ಹಿಂತಿರುಗಿಸಿ ಕೊಟ್ಟು ಮುದ್ರಿಸಬಾರದು. ಸಳ್ಳು ಸುದ್ದಿಗಳನ್ನು ಹರಿಸಬಾರದು. ಹೀಗೆ ಯಾವ ಪತ್ರಕಾರರು ಮಾಡಿದರೆ ಆಟಿಯಿಸಿ ನೋಡದೆ ಅವರ ಮೇಲ ಖಟ್ಲೆ ಮಾಡಲಾಗುವದೆಂದು ತಾಕೀದಿ ಕೊಟ್ಟಿದ್ದಾರೆ.

ರಾವಲಪಿಂಡಿಯ ಸದ್ಯಃಸ್ಥಿತಿಯನ್ನು ಪ್ರತ್ಯಕ್ಷ ನೋಡಿ, ಹಿಂದೂ ಜನರಿಗೆ ಯೋಗ್ಯ ಸಹಾಯ ಮಾಡುವ ಉದ್ದೇಶದಿಂದ ಹಿಂದೂ ಮಹಾಸಭೆಯ ಮುಖಂಡರಾದ ರಾಜಾ ನರೇಂದ್ರನಾಥ, ಡಾಕ್ಟರ ಗೋಕುಲಚಂದ ನಾರಂಗ ಮತ್ತು ಸರದಾರ ಮೆಹತಾಬ ಸಿಂಗರು ಲಾಹೋರಿನಿಂದ ಅಲ್ಲಿಗೆ ಪ್ರಯಾಣ ಬೆಳೆಸಿದ್ದಾರೆ. ಶೀಖರಿಗೆ ಸಹಾಯವಾಗಿ ಎರಡು ಜಥಾಗಳು ಅಲ್ಲಿಗೆ ಹೋಗಬೇಕೆಂದಿದ್ದವು. ಗುರುದ್ವಾರ ಕಮಿಟಿಯವರು ಅವುಗಳ ಪ್ರಯಾಣವನ್ನು ಸಧ್ಯ ನಿಲ್ಲಿಸಿದ್ದಾರೆ. ಕಲಕತ್ತೆಯಂತೆ ದಂಗೆಯು ಆಗಾಗ್ಗೆ ನಡೆಯಲಿಕ್ಕಿವೆ, ದಂಗೆಯ ಕೋಲಾಹಲವು ಅಡಗಿರುತ್ತದೆ.

ಅಭೂತಪೂರ್ವ ಗಾಳಿಯು.

ಹುಡುಗರು ಹಕ್ಕಿಯಂತೆ ಹಾರಿದವು.

ಒಂದೂ ಮನೆಯು ಗಟ್ಟಿಯುಳಿಯಲಿಲ್ಲ.

ಗುಜರಾಥ ಪ್ರಾಂತಕ್ಕೆ ಸೇರಿದ ದಂಧೂಕಾ ಪಟ್ಟಣದ ಮೇಲೆ ಪ್ರಚಂಡ ಮಾರುತನ ಪ್ರಚಂಡ ಕೋಪವಾಯಿತು. ಒಂದು ತಾಸಿನ ತನಕ ಊರ ಸುತ್ತಲು ಒಂದು ಮೈಲು ಸುತ್ತರ ಗಾಳಿಯು ಭಯಂಕರ ಪ್ರತಾಪ ಬೀಸಿತು. ಗಾಳಿಯ ಹೊಡತದಿಂದ ಆದ ಕೇಡು ವರ್ಣಿಸಲಸಾಧ್ಯವಿರುತ್ತದೆ. ಒಂದು ಗಿಡ ಅಥವಾ ಒಂದು ಮನೆಯು ಗಟ್ಟಿ ಉಳಿಯಲಿಲ್ಲ. ಬೀದಿಗಳ ತುಂಬ ಮುರಿದ ಗಿಡ, ಮಾಳಿಗೆಯಿಂದ ಬಿದ್ದ ಹಂಚು, ಕಳಚಿಕೊಂಡು ಬಿದ್ದ ಗೋಡೆಯ ಕಲ್ಲು ಹೆಂಟೆಗಳು ಹಾಸಿ, ಹರಡಿದವು. ಕಟ್ಟಾಯಿತು. ಒಂದು ಗಿರಣಿಯ ಹೊಗೆಯ ಗಕ್ಕಿನ ಬಂಬು ಮುರಿಕೊಂಡು ಬಿದ್ದು ಅಲ್ಲಿಯೇ ಇದ್ದ ಎರಡು ಎತ್ತುಗಳನ್ನು ಕೊಂದಿತು. ಶಾಲೆಯಿಂದ ಮನೆಗೆ ಬರುತಿದ್ದ ಇಬ್ಬರು ಹುಡುಗರು ಪಟದಂತೆ ಹಾರಿ, ಊರ ಹೊರಗೆ ದೂರ ಒಂದು ಹೊಲದಲ್ಲಿ ಬಿದ್ದವು. ಎಷ್ಟೋ ಮನೆಗಳ ಚಪ್ಪರಗಳು ಎಲ್ಲಿ ಬಿದ್ದಿರುತ್ತಾವೆಂಬ ಗುರ್ತು ಸಹ ಹತ್ತದಂತಾಗಿರುತ್ತದೆ. ರೇಲ್ವೆ ಸ್ಟೇಶನದಲ್ಲಿ ನಿಂತಿದ್ದ ಡಬ್ಬಿ ಮತ್ತು ವ್ಯಾಗನಗಳು ಗಾಳಿಯ ಹೊಡೆತದಿಂದ ಉರುಳಿ, ನಾಲ್ಕು ಮೈಲು ಉರುಳಿ ಹೋದವು. ಹುಲ್ಲಿನ ಹೊರೆಗಳು ಹಾರಿ ಒಂದು ಮೈಲಿನ ಮೇಲೆ ಬಿದ್ದವು.

ಜಾಹೀರಾತು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿ.

ಜನಳಿಪೇಟೆ ಧಾರವಾಡ

ಸ್ಥಾಪನಾ ೧೯೦೬

೧೯೧೨ನೇ ಇಸ್ವಿಯ ಮುಂಬಯಿ ಕೋ ಆಪರೇಟಿವ್ಹ ಆಕ್ಟಿನ ಪ್ರಕಾರ ರಜಿಸ್ಟರ ಮಾಡಿದ ಚಾಲತಿ ಠೇವು (Current Deposits) ೭ನೇ ತಾರೀಖಿನ ಒಳಗಾಗಿ ಒಂದು ತಿಂಗಳ ವರೆಗಿನ ಠೇವಿಗೆ ೧೦೦ಕ್ಕೆ ೧ ವರ್ಷಕ್ಕ ೩ ೩/೪ರಂತೆ ಬಡ್ಡಿಯು ಕೊಡಲ್ಪಡುವದು.

ಚಾಲತಿ ಲೆಖ್ಖ (Current Accounts) ದಿನದ ಶಿಲ್ಕಿನ ಮೇಲೆ ೧೦೦ಕ್ಕೆ ೧ ವರ್ಷಕ್ಕೆ ೩ಯಂತೆ ಬಡ್ಡಿ ಕೊಡಲ್ಪಡುವದು.

ನಿಶ್ಚಿತ ಠೇವು (Fixed Diposit) ಇಡುವಾಗ ನೋಟೀಸು ಕೊಡುವವರಿಗೆ ಕೆಳಗೆ ಕಾಣಿಸಿದ ಅವಧಿಯ ನಿಶ್ಚಿತ ಠೇವಿಗೆ ಬರೆದಂತೆ ಬಡ್ಡಿಯು ಕೊಡಲ್ಪಡುವದು.

೩ ತಿಂಗಳಿಗೆ	೧೦೦ಕ್ಕೆ	೧ ವರ್ಷಕ್ಕೆ	೫ ರಂತೆ
೬ ,,	,,	,,	೫ ೧/೨ ,,
೯ ,,	,,	,,	೬ ,,
೧೨ ,,	,,	,,	೬ ೧/೨ ,,
೨೪ ,,	,,	,,	೭ ,,
೩೬ ,,	,,	,,	೭ ೧/೨ ,,
೪೮ ,,	,,	,,	೭ ೩/೪ ,,
೬೦ ,,	,,	,,	೮ ,,

ಚೆಕ್ಕುಗಳನ್ನು ಹುಂಡಿಗಳನ್ನು ಹಾಗು ವಸೂಲಿಗಾಗಿ ಹಣ ತಕ್ಕೊಳ್ಳಲಿಕ್ಕಾಗಿಯೂ ಠೇವಿಯ ದಕ ದಕ ಕೊಡುವ ವ್ಯಾಗನಿ ಕಲ್ಪಿಸಲ್ಪಡುವದು.

ಮುಂಬಯಿ ಹ. ಪಿ ಆರ್ಜು ಕೊಡುವ ಸರಕಾರೀ ಕಾಗದಗಳ ಮೇಲೆ ಅಥವಾ ಯೋಗ್ಯ ಜಾಮೀನುಗಳ ಮೇಲೆ ಸಾಲಗಳನ್ನು ಕೊಡಲ್ಪಡುವದು.

ಬೇರೆ ಹೆಚ್ಚಿನ ಮಾಹಿತಿಗಾಗಿ ವ್ಯವಹಾರಗಳ ನಿಯಮ ಪತ್ರಿಕೆಗಳಿಗಾಗಿಯೂ ಆಫೀಸಿನಲ್ಲಿ ಸೆಕ್ರೆಟರಿಯವರ ಕಡಗೆ ಚೌಕಶಿ ಮಾಡಬೇಕು.

ತಾ೧೨-೬-೧೯೨೬

M. S JAKATI,
ಮ್ಯಾನೇಜಿಂಗ ಡಾಯರೆಕ್ಟರ

ಜಾತ ಇನಾಮು ಹೊಲಗಳ

ಮಾರಾಟ.

ಧಾರವಾಡ ಜಿಲ್ಹಾ ರೋಣ ತಾಲೂಕ ಹುಲ್ಲೂರ ಗ್ರಾಮದಲ್ಲಿರುವ ಕೆಳಗೆ ಬರೆದ ನಮ್ಮ ಮಾಲಕಿ ಮತ್ತು ವಹಿವಾಟಿಯಲ್ಲಿರುವ ಜಾತ ಇನಾಮು ಜಮೀನುಗಳನ್ನು ಮಾರತಕ್ಕವರಿದ್ದೇವೆ.

ಸರ್ವೆನಂಬರ	ಎಕರೆ	ಗುಂಠೆ	ಆಕಾರ
೭೩	೨೬	೫	೩೨-೬-೦
೭೪	೨೫	೯	೨೪-೧೫-೦
೭೫	೨೫	೩	೨೫-೧೩-೦
೩	೭೭	೧೭	೮೩-೨-೦

ಇವನ್ನು ತೆಗೆದುಕೊಳ್ಳಲಿಚ್ಛಿಸುವವರು ಮರಾಠಿಯಲ್ಲಿ ಸುವಾಚ್ಯ ಪತ್ರವ್ಯವಹಾರ ಮಾಡಬೇಕು ತಿಳಿಯುವದು.

ಪತ್ತೆ— ಶಂಕರ ವಿಷ್ಣು ಪಾಟೀಲ
ಕಾಸಗಾವ, ಪೋಸ್ಟ ಕಾಸಗಾವ
ಜಿಲ್ಹಾ ಸಾತಾರ.

ವಿಜಯದ ವರ್ಗಣೀ ದರ

—•—

ಕೃಷಿಪತ್ರಕ್ಕೆ

೧ ವರ್ಷಕ್ಕೆ		೧೨—೦—೦ ಆ
೬ ,,		೬—೦—೦ ಆ
೩ ,,		೪—೦—೦ ಆ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ಆ

ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ಈ ಪತ್ರವನ್ನು ಆಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ವಿಹಾರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ವಿವಿಧ ವರ್ತಮಾನಗಳು

—೦—

ಖೈರಪೂರ ಸಂಸ್ಥಾನದ ಲ್ಯಾರ ಖುಂದುಗಾರಿಕೆಯ ಬಗ್ಗೆ ನವಾಬಸಾಹೇಬರಿಗೆ ಪಶ್ಚಾತ್ತಾಪವಾಗಿ ಅವರು ಪುಣೆಗೆ ಬಂದು, ಗವ್ಹರ್ನರಸಾಹೇಬರ ಆಲೋಚನೆಯ ಪ್ರಕಾರ, ವ್ಯವಸ್ಥೆಯನ್ನು ಹರಿಪಡಿಸುವದಕ್ಕಾಗಿ, ಹಾಲಿಫಾಕ್ಸರೆಂಬ ಸಾಹೇಬರನ್ನು ನೇಮಿಸಿಕೊಂಡರು. ನವಾಬಸಾಹೇಬರು ಸದ್ಯದಲ್ಲಿ ಕೊಲ್ಹಾಪುರಕ್ಕೆ ಬೇಟಿಯಾಗಲು ಬಂದಿದ್ದಾರೆ.

———

ಬೆಂಗಳೂರಲ್ಲಿ ಒಬ್ಬನು ವಿದ್ಯುತ್ತಿನ ಕಾರಖಾನೆಯ ಸಾಮಾನಗಳನ್ನು ಕದಿಯುತ್ತಿದ್ದನು. ಒಂದು ದಿವಸ ವಿದ್ಯುತ್ತಿದ್ದ ತಂತಿಯನ್ನು ಕದಿಯ ಹೋಗಲು ಕೈಸುಟ್ಟುಕೊಂಡು ಬಿದ್ದು ಪೋಲೀಸರ ವಶನಾದನು.

———

ಮುದ್ರಾಸದಲ್ಲಿ ಕಲ್ಯಾಣರಾವು ಅಯ್ಯರನೆಂಬವನು ತನ್ನ ೧೪ ವರ್ಷದ ಹೆಂಡತಿಯ ಮೇಲೆ ಕಲ್ಲೆಣ್ಣೆಯನ್ನು ಸುರಿವಿ, ಕೊಂದನು. ಅಘೋರ ಕರ್ಮವೇ ಸರಿ.

———

ತ್ರಾವಣಕೋರ ಸಂಸ್ಥಾನದಲ್ಲಿ ಪ್ರೆಸ್ಸ ಆಕ್ಟಿನ ವಿರುದ್ಧವಾದ ಠರಾವುಗಳನ್ನು ನಿಷೇಧಿಸಲೋಸುಗ ಸತ್ಯಾಗ್ರಹ ನಡಿಯಬೇಕೆಂದು ಮುದ್ರಾಲಯದ ಸಂಘದವರು ಠರಾವು ಮಾಡಿದ್ದಾರೆ.

———

ಡಾಕ್ಟರ ಟಾಗೋರರನ್ನು ಇಟಲಿಯ ಅರಸರು ಬಹು ಗೌರವದಿಂದ ಸ್ವಾಗತ ಮಾಡಿಕೊಂಡರು. ವಿದ್ಯಾರ್ಥಿಗಳು ಸಮಾರಂಭದಿಂದ ಇವರ ಆತಿಥ್ಯ ಸತ್ಕಾರ ಮಾಡಿದರು. ಮುಖ್ಯ ಪ್ರಧಾನಿಯು ಎರಡಾವರ್ತಿ ಇವರಗೂಡ ಸಂಭಾಷಣೆಗೈದನು.

———

ಪೋರ್ತುಗಾಲದಲ್ಲಿ ಬಂಡಾಯದ ಮೇಲೆ ಬಂಡಾಯವೆದ್ದಿದೆ. ಹೋದ ವಾರದಲ್ಲಿ ಮೂರು ದಿವಸಗಳಲ್ಲಿ ಎರಡು ಬಂಡಾಯಗಳಾದವು. ರಾಜಪಕ್ಷವು ಪ್ರಬಲವಾಗಿ, ಪುನಃ ಅರಸೊತ್ತಿಗೆ ಸ್ಥಾಪಿಸಲ್ಪಡುವ ಚಿನ್ಹಗಳು ವ್ಯಕ್ತವಾಗಿವೆ.

———

ಫ್ರಾನ್ಸದಲ್ಲಿ ಮಂಗಳ ಮಂಗಲಕ್ಕೆ ಗ್ರಹಬಲ [illegible] ಬೆಲೆಯು ಹುಗಸೀ [illegible] ದುದರಿಂದ, ಅದನ್ನು ಸುಗ [illegible] ಣಾಲದೆ, ದಿನಾಲು [illegible] ಧಾನ ಮಂಗಲವೆಂಬ [illegible]

ಮಾತಾಡುವ ಔಷಧವು.

ಅಪ್ಪಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ? ಹಲ್ಲುಕಡಿಯೋ? ಮೈಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಪ್ಪನು— ಕಂದಾ— ಹೌದು ಮೈಯ್ಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಪೋಮೆಂಟ ಕ್ಯಾಯರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ ಕಿಮ್ಮತ್ತು ತೀರ ಹುಸು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ—ಇಸಲಾಮಿಕ್ಕ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ, ಸ್ಟೇಶನರೋಡ ಹುಬ್ಬಳ್ಳಿ

ಡಾಕ್ಟರ ಮಲ್ಲಯ್ಯನವರಿಂದ ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು, ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟೀಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು— ಪಿನಸಿ, ಅರತಲೆ ನೋವು, ತಲೆಯಲ್ಲಾಗುವ ಬೇರೆ ವಿಕಾರಗಳು, ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಿಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ಡಿಶಿ ಉಚಿತವಾಗಿ ದೊರೆಯುವದು.

ಡೀಸೆ ಒಂದಕ್ಕೆ ನಾಲ್ಕಾಣೆ. ಡಜನಕ್ಕೆ ೨-೪-೦ ವ್ಹಿ. ಪಿ. ಪೋಸ್ಟಚಾರ್ಜ ಬೇರೆ.

ದಯವಿಟ್ಟು ವಿಳಾಸವನ್ನು ಸ್ವಚ್ಛವಾಗಿ ಬರೆಯಿರಿ.

ತಂತಿ ವಿಳಾಸ- ನಶ್ಯಮ. } ಪಿ. ವ್ಹಿ. ರಾಜನ ಮತ್ತು ಕಂಪನಿ,
೪೪ ಗೋವಿಂದಪ್ಪ ನಾಯಕನ ಬೀದಿ, ಜಾರ್ಜಟಾವುನ, ಮದ್ರಾಸ

ದಿ ಅಂಕಲಗಿ ಬ್ಯಾಂಕ ಲಿಮಿಟೆಡ್
ಧಾರವಾಡ.

೧೯೧೬ ಇಸ್ವಿಯ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಬ್ಯಾಲನ್ಸ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟು, ಸಾಲ ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಲಿ.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ವರೆಗೆ ನಡೆಯುವದು.

K. B. Ankalgi
ಧಾರವಾಡ

ಚಂದಾದಾರರಿಗೆ ಸೂಚನೆ.

—೦—

ಬರುವ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ನಿಮ್ಮ ಮತ್ತು ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯವನ್ನು ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ಮ್ಯಾನೇಜರ ವಿಜಯ ಧಾರವಾಡ

ಈ ಪತ್ರವನ್ನು ಅನಿನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ-ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R. N. B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆ.

ಸಂಪಾದಕರು:- ಆಚಾರ್ಯ ಬಾಳಾಚಾರ್ಯ ಸೊಸಕೇರಿ.

ವರ್ಷ ೬) ಧಾರವಾಡ ಬುಧವಾರ ತಾರೀಖು ೨೩ ನೇ ಜೂನ ೧೯೨೬ (ಸಂಚಿಕೆ ೧೪೨

ಸರಕಾರದಿಂದ ಪೆಟೆಂಟ ದೊರೆತಿದ

ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಬಾಗಿಲಿಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗಲ್ಪಡುತ್ತಲೇ ಬಾಗಿಲಿಯು ಪಡದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೨೦ ರೂ.
ನಂ ೨	೫೫ ,,	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

—o—

೨೦ ನೇ ಶತಮಾನದ ಗೊಂದಲ	೧೨ ಆಣೆ
ವಿಚಿತ್ರ ಸಂಶಯ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ಟ್ಯಾ. ಹಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ನೋಟೀಸಿನ ದರಗಳು.

—o—

ಸಿಂಗಲ ಕಾಲಮಿನ ಹತ್ತು ಪಳಿಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಪಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಒಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಒಳಿಗಳಿಗೆ ಇವ್ಯಾಪಾರ್ಯ ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—o—

ನಿತ್ಯಪತ್ರಕ್ಕೆ

೧೨ ತಿಂಗಳಿಗೆ	೧೨—೮—೦ ರೂ
೬ ,,	೬—೦—೦ ರೂ
೩ ,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ	೬—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ
ಮ್ಯಾನೇಜರ ವಿಜಯ, ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಣಿ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ವತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟೆಡ
ದುರ್ಗದಬೈಲ? ಹುಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಶೇಂದಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಸಲ್ಪಡುವದು. ಕಾಯಮು ಮತ್ತು ಬೇರೆ ತರದ ಠೇವಣಿಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರಿಂದ ತಿಳಕೊಳ್ಳಬೇಕು.

ಮಲ್ಹರರಾವ ಬಿ. ಜಹಾಗಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- [illegible]

ಇಂಗ್ರೇಜಿ ಕಾಲೇಜಗಳಲ್ಲಿ ದೇಶಭಾಷೆಗಳ ಪ್ರವೇಶ.

ವಿಲಾಯತಿಯ ಪ್ರತಿಯೊಂದು ದೇಶದಲ್ಲಿ ವಿಶ್ವ ವಿದ್ಯಾಲಯದ ಉಚ್ಚ ಪ್ರತಿಯ ಶಿಕ್ಷಣವನ್ನು ದೇಶಭಾಷೆಯಲ್ಲಿ ಕೊಟ್ಟು, ಐಚ್ಛಿಕವಾಗಿ ಪರದೇಶದ ಯಾವದೊಂದು ಭಾಷೆ ಕಲಿಸುವರು. ಇದಕ್ಕೆ ತೀರ ವಿರುದ್ಧವಾಗಿ ಹಿಂದುಸ್ಥಾನದ ಕಾಲೇಜಗಳ ಬೋಗಳಿಯಾಗಿರುವದು. ಕಾಲೇಜದ ಶಿಕ್ಷಣವೆಲ್ಲ ರಾಜ್ಯಕರ್ತರಾದ ಇಂಗ್ಲಿಷರದು. ಐಚ್ಛಿಕ ಭಾಷೆಯು ಮೃತ ಭಾಷೆ ಎಂದೆನಿಸಿದ ಸಂಸ್ಕೃತವು, ಮತ್ತು ಪರದೇಶಗಳ ಫ್ರೆಂಚ, ಜರ್ಮನ, ಲ್ಯಾಟಿನ ಮೊದಲಾದವುಗಳು. ದೇಶಭಾಷೆಗಳಿಗೇ ಅವಕಾಶ ಇರಲಿಲ್ಲ. ಸ್ವರ್ಗವಾಸಿ ರಾನಡೆಯವರು ಯುನಿವ್ಹರ್ಸಿಟಿಯಲ್ಲಿ ಬಹಳವಾಗಿ ಹೊಡದಾಡಿ, ಎಮ್. ಎ, ಪರೀಕ್ಷೆಗೆ ದೇಶಭಾಷೆಯಲ್ಲಿ ಕೊಡ್ರುಬಹುದೆಂದು ಠರಾವು ಪಾಸ ಮಾಡಿಸಿಕೊಂಡರು. ಪ್ರಾಥಮಿಕ ಶಿಕ್ಷಣದ ಹಾಲ್ಕು ಇಯತ್ತೆಗಳಾದ ನಂತರ ಇಂಗ್ಲಿಷ ಶಾಲೆಗೆ ಹೋಗಿ, ಎಮ್ ಎ ಕ್ಕೆ ಹತ್ತುವ ತನಕ ಎಂದರೆ ನಡುವಿನ ಕನಿಷ್ಠ ೧೩ ವರ್ಷಗಳಲ್ಲಿ ದೇಶಭಾಷೆಯ ಸಂಸರ್ಗವಿಲ್ಲದೆ, ಒಮ್ಮೆಯಲೆ ಆ ದೊಡ್ಡ ಪರೀಕ್ಷೆಗೆ ಕೂಡ್ರುವದು ಲೋಕವಿಲಕ್ಷಣವೇ ಸರಿ. ಸಂಸ್ಕಾರಕ್ಕೆ ಈ ತಪ್ಪು ತಿಳಿದಂತೆ, ಮ್ಯಾಟ್ರಿಕದ್ದೂ ಬಿ. ಎ. ಪರೀಕ್ಷೆಗೂ ದೇಶಭಾಷೆಯನ್ನು ತಕ್ಕೊಳ್ಳಬಹುದೆಂದು ಠರಾವು ಮಾಡಿದರು. ಇವೆರಡು ಪರೀಕ್ಷೆಗಳ ನಡುವಿನ ಪ್ರೀವ್ಹಿಯಸ ಮತ್ತು ಇಂಟರ ಪರೀಕ್ಷೆಗಳಲ್ಲಿ ಪುನಃ ಸಂಸ್ಕೃತ ತಕ್ಕೊಳ್ಳುವದೇ ಅಗತ್ಯವಾಯಿತು. ಈ ಅಕ್ರಮವು ನಗದವರನ್ನು ನಗಿಸ ಮಾಧ್ಯಮವಾಗಿತ್ತು. ಅದುದರಿಂದ ಎರಡೂ ಪರೀಕ್ಷೆಗಳಲ್ಲಿಯೂ ತಾಯ್ನುಡಿಯಲ್ಲಿ [illegible]ಬಹುದೆಂದು ಕಳೆದ ವಾರದಲ್ಲಿ ಕೂಡಿದ ಯುನಿವ್ಹರ್ಸಿಟಿಯ ಸಿನೇಟ ಸಭೆಯಲ್ಲಿ ಮಂಜೂರಾಗಿರುತ್ತದೆ. [illegible] ಇದು ಇದೇ ವರ್ಷದಿಂದ ಅಮಲಿನಲ್ಲಿ ಬರದೆ, ಮುಂದಿನ ವರ್ಷದ್ದಿದ ಎಂದರೆ- ೧೯೩೭ ನೆಯದರಿಂದ ಅಮಲಿನಲಿ ಬರುವದು.

ಇದು ಇಂಗ್ರೇಜಿ ಇಲಾಖೆಯ ವಿಚಾರವು. ಇದಕ್ಕಿಂತ ದೇಶಭಾಷೆಯ ಬೆಳವಣಿಗೆ ಮತ್ತು ಏಳ್ಗೆಯ ದಿಸೆಯಿಂದ ಮೈಸೂರ ಸರಕಾರದವರು ಕೈಕೊಳ್ಳಬೇಕೆಂಬದಾಗಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಾಡಿದ ಸೂಚನೆಯು ಸ್ತುತ್ಯವಾಗಿರುತ್ತದೆ. ಮೈಸೂರ ನಾಡಿನ ಮಾತೃ ಭಾಷೆಯು ಕನ್ನಡವು. ರಾಜ ಭಾಷೆಯೂ ಕನ್ನಡವು. ಮಿಕ್ಕ ಭಾಷೆಗಳಿಗಿಂತ ಕನ್ನಡಕ್ಕೇ ಪ್ರಾಶಸ್ತ್ಯವಿರತಕ್ಕದ್ದು. ಆದುದರಿಂದ ಕನ್ನಡಕ್ಕೆ ಅಗ್ರಮಾನ ಕೊಟ್ಟು, ಇಂಗ್ಲಿಷವನ್ನು ಮಧ್ಯಮ ಭಾಷೆ ಮಾಡಬೇಕೆಂದು ಕೆಲವರು ಸೂಚಿಸಿದ್ದಾರೆ. ಸದ್ಯದಲ್ಲಿ ಇಂಗ್ಲಿಷವೇ ಮುಖ್ಯ ಭಾಷೆಯಾಗಿರುವದರಿಂದ, ಇಂಗ್ಲಿಷ ಪುಸ್ತಕಗಳನ್ನು ಕೊಳ್ಳುವದರಲ್ಲಿಯೇ ಪ್ರತಿ ವರ್ಷ ಲಕ್ಷಾವಧಿ ರೂಪಾಯಿಗಳ ವ್ಯಯವಾಗುತ್ತದೆ. ಭಾಷಾಂತರ, ಸಹಾಯ ಅಥವಾ ಆಧಾರವೆಂದು ಅಗತ್ಯದ ಮಟ್ಟಿಗೆ ಇಂಗ್ಲಿಷ ಪುಸ್ತಕಗಳನ್ನು ಕೊಂಡು ಇವುಗಳ ತರ್ಜುಮೆಯನ್ನು ಕನ್ನಡದಲ್ಲಿ ಮಾಡಿಸಿದರೆ-ಕನ್ನಡ ನುಡಿಯು ನಿಜವಾದ ಅಭಿವೃದ್ಧಿಯಾಗುವದು. ವಿಲಾಯತಿಯಲ್ಲಿ ಯಾವದೊಂದು ಪರಭಾಷೆಯಲ್ಲಾಗುವ ಉತ್ತಮವೆಂಬ ಗ್ರಂಥಗಳ ಭಾಷಾಂತರವನ್ನು ತಂತಮ್ಮ ನುಡಿಗಳಲ್ಲಿ ಮಾಡಿಕೊಳ್ಳುವರು. ಅದೇ ಪ್ರಕಾರ ಪರಭಾಷೆಯಲ್ಲಿರುವ ಪುಸ್ತಕಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಿಸಿ, ಅವುಗಳ ಉಪಯೋಗವು ಕನ್ನಡಿಗರಿಗೆ ಆಗುವಂತೆ ಮಾಡಿಕೊಡುವದು ಸ್ತುತ್ಯ ಮಾತ್ರವಲ್ಲದೆ, ಜ್ಞಾನಾರ್ಜನೆಗೆ ಉತ್ತಮವಾದ ಸಾಧನ ಮಾಡಿಕೊಟ್ಟಂತಾಗುತ್ತದೆ.

ಮೈಸೂರಲ್ಲಿ ಗೋವಧ ಪ್ರತಿಬಂಧದ ಠರಾವು.

—o—

ಮೈಸೂರಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಗೋವಧವನ್ನು ಪೂರಾ ನಿಲ್ಲಿಸಬೇಕೆಂಬ ಠರಾವು ಬಂತು. ಮುಸಲಮಾನರೆಲ್ಲರೂ ಠರಾವನ್ನು ವಿರೋಧಿಸಿದರು. ಆದಿ ದ್ರಾವಿಡರು ಮೊದಲು ಮಾಡಿಕೊಂಡು ಎಲ್ಲ ಹಿಂದೂ ಮೆಂಬರರು ಗೋವಧವನ್ನು ನಿಲ್ಲಿಸಬೇಕೆಂಬದಾಗಿ ಮತಕೊಟ್ಟದ್ದರಿಂದ, ಠರಾವು ಪ್ರಚಂಡ ಬಹುಮತದಿಂದ ಪಾಸಾಯಿತು. ಬಕರೀದ ಮುಂತಾದ ಹಬ್ಬಗಳಲ್ಲಿ ಗೋಹತ್ಯ ಮಾಡತಕ್ಕವರೇ ಎಂದು ಮುಸಲಮಾನರು ಆಗ್ರಹ ಹಿಡಿದರೆ ಅಂಥಿಸ ಮಟ್ಟಿಗೆ ಗುಪ್ತರೀತಿಯಿಂದ ಬಲಿಯನ್ನು ಕೊಡಬಹುದೆಂದು ಕೆಲ ಹಿಂದೂ ಮೆಂಬರರ ಉದ್ಗಾರ ತೆಗೆದರೂ, ಮುಸಲ್ಮಾನರು ಒಟ್ಟಾಗಿ ಠರಾವನು ವಿರೋಧಿಸಿದ್ದು, ಹಿಂದೂ ಜನರ ಮನಸ್ಸಿನ ಭಾವನೆಗಳ ದಿಸೆಯಿಂದ ಅವರಿಂದ ದಾಕ್ಷಿಣ್ಯ ತೋರಿಸಲಿಲ್ಲವೆನ್ನಬೇಕಾಗುತ್ತದೆ.

ನಿಜಾಮ ಹೈದರಾಬಾದಿನಲ್ಲಿ ಹಿಂದೂ ಜನರ ಶೋಚನೀಯ ಸ್ಥಿತಿಯು.

—o—

ಪುಣೆಯ ಮರಾಠಾ ಪತ್ರಿಕರ್ತರು ಹೈದರಾಬಾದ ಸಂಸ್ಥಾನದಲ್ಲಿ ಹಿಂದೂ ಜನರಿಗುಂಟಾದ ಶೋಚನೀಯ ಸ್ಥಿತಿಯ ವರ್ಣನೆಯನ್ನು ಕೆಳಗೆ ಕೊಟ್ಟಂತೆ ಮಾಡಿರುತ್ತಾರೆ-

" ನಿಜಾಮ ರಾಜ್ಯದಲ್ಲಿರುವ ಹಿಂದೂ ಜನರ ಶೋಚನೀಯ ಅವಸ್ಥೆಯು ದಿನ ದಿನಕ್ಕೆ ಹೆಚ್ಚೆಚ್ಚು ಶೋಚನೀಯವಾಗುತ್ತಾ ನಡೆದಿದೆ. ಹಿಂದೂ ಕುಲವನ್ನೇ ಪೂರಾ ಅಳಿಯಬೇಕೆಂದೇ ನಿಜಾಮ ಸಾಹೇಬರ ರಾಜನೀತಿಯ ಧೋರಣವಾಗಿರುತ್ತದೆ. ಮರಾಠಿ ಶಾಲೆಗಳನ್ನು ಬಂದು ಮಾಡಬೇಕೆಂಬದು ಇತ್ತಲಾಗಿನ ಒಂದು ದೃಷ್ಟಾಂತವಾಗಿರುತ್ತದೆ. ಶ್ರೀ. ವಾಮನ ನಾಯಕರನ್ನು ಅಪಮಾನಗೊಳಿಸಿ, ಅವರ ಮೇಲೆ ಸಲ್ಲದ ಆರೋಪಗಳನ್ನು ಹೊರಿಸುವದು ಎಂಥದೆಂಬ ಪುರಾವೆಯು. ಅಲ್ಲಿ ಹಿಂದೂ ಜನರಿಗಾಗಿ ಯೋಗ್ಯವಾದ ನ್ಯಾಯವೇ ಇರುವದಿಲ್ಲ. ಹಿಂದೂ ಜನರ ಜೀವ ಮತ್ತು ಆಸ್ತಿಯು ಸುರಕ್ಷಿತವಾಗಿರುವದಿಲ್ಲ. ಶ್ರೀ ವಾಮನನಾಯಕರನ್ನು ಕೊಲ್ಲಬೇಕೆಂಬದಾಗಿ ಹೋಗಿದ್ದ ಅಫಗಾಣನನ್ನು- ಅಫಗಾಣರು ಯಾವಾಗಲು ಶಸ್ತ್ರಧಾರಿಯಾಗಿರುತ್ತಾರೆಂಬ ನೆವನದಿಂದ ಬಿಟ್ಟು ಬಿಟ್ಟರು!! ಹಿಂದೂ ಜನರು ಗುರಿಯಾದ ದುರವಸ್ಥೆಗೆ ಇದೊಂದು ಉದಾಹರಣೆಯಾಗಿರುತ್ತದೆ. ಒಂದು ಛಲ ಹಿಡಿದು, ನಾಚಿಕೆ ರಹಿತವಾಗಿ ಕೆಟ್ಟ ರೀತಿಯಿಂದ ನಡೆಸಿರುವ ದೊರೆತನವನ್ನು ನೋಡಿ, ಬ್ರಿಟಿಶ ಸಂಕಾರದವರು ಅಡ್ಡ ಬರುವ ಕಾಲವು ಸಮೀಪಿಸಿದೆ. ನಿಜಾಮರ ಅನ್ಯಾಯಪೂರ್ಣವಾದ ಆಡಳಿತೆಯು ಇಂಗ್ಲಿಷ ದೊರೆತನಕ್ಕೆ ಒಂದು ಕುಂದು ಆಗಿರುತ್ತದೆ. ಇಂಗ್ಲಿಷ ಸರಕಾರವು ಈ ವಿಷಯವಾಗಿ ಕಣ್ಣು ಮುಚ್ಚಿಕೊಂಡರೆ- ಜವಾಬದಾರಿಯು ನಿಜಾಮರಷ್ಟೇ ಇಂಗ್ಲಿಷ ಸರಕಾರದ ಮೇಲೂ ಬರುತ್ತದೆ."

ಮುಂಬಯಿ ಮತ್ತು ಪುಣೆಯ ನಡುವೆ [illegible] ದ್ಯುತ್ತಿನಿಂದ ರೇಲಬಂಡಿ ಬಿಡಹತ್ತಿದರು. [illegible] ಬಂಡಿಗೆ ಒಂದೂ ಕಾಲು ತಾಸು ಹತ್ತುತ್ತಿತ್ತು, [illegible] ದ್ಯುತ್ತಿನ ಬಂಡಿಗೆ ೪೫ ಮಿನಿಟಗಳೇ ಸಾಕು.

ದಿಲ್ಲಿ ಕಲಕತ್ತೆಯಂತೆ ಕಾಶಿಯಲ್ಲಿಯೂ [illegible] ಸಿಲಿನ ತಾಪವು ಮಿತಿ ಮೀರಿ, ಜನರು ಹಾಯ [illegible] ರಾಯನನ್ನು [illegible]

ಸೈದಪೂರದಲ್ಲಿ ಭಯಂಕರ ಪುಂಡಾಟಿಕೆ.

—o—

ಹಿಂದೂ ಜನರ ಮನೆ ಮತ್ತು ಅಂಗಡಿಗಳು ಬೂದಿಯಾದವು.

—o—

ರಾವಲಪಿಂಡಿಯಿಂದ ಹತ್ತು ಮೈಲುಗಳ ದೂರದಲ್ಲಿರುವ ಸೈದಪೂರವೆಂಬ ಗ್ರಾಮಕ್ಕೆ ಗುಡ್ಡಗಾಡದಲ್ಲಿ ವಾಸವಾಗಿರುವಂಥ ೩೫೦ ಜನ ಮುಸಲಮಾನ ಪುಂಡರು ಬಂದು, ಹಿಂದೂಜನರ ಮೇರಿನ ಮುಖ್ಯವನ್ನು ಭಯಂಕರ ರೀತಿಯಿಂದ ತೀರಿಸಿಕೊಂಡರು. ಇವರು ಅಲ್ಲಿಯ ಹಿಂದೂ ಪ್ರಮುಖರಾದ ಲಕ್ಷ್ಮೀಂದಾಸ ಮತ್ತು ಅವರ ಚಿರ ಜೀವ ಶೇಕಿರಾಮ ಇವರನ್ನು ಕೊಂದ, ಬಹುಶೀಘವಾಗಿ ಆ ಊರನ್ನೇ ಸುಟ್ಟು ಬಿಟ್ಟರು. ಪೋಲೀಸ ಮತ್ತು ಮ್ಯಾಜಿಸ್ಟ್ರೇಟರಿಗೆ ಈ ವರ್ತಮಾನ ತಿಳಿದು, ಅವರು ಹೋಗಿ ನೋಡುವಾಗ ಊರು ದಣ ದಣ ಉರಿದು, ದಣಗುಟ್ಟುತ್ತಿರುವಂತೆ ಕಂಡು ಬಂತು. ಹಿಂದೂ ಜನರು ಎಲ್ಲಿಯೂ ನೆಲೆ ಇಲ್ಲದಂತಾದ್ದರಿಂದ ರಾವಲಪಿಂಡಿಯ ದಾರಿಯನ್ನು ಹಿಡಿದು ಹೋಗುತ್ತಿರುವರು. ಇವರ ಬಂಡಿ ಮತ್ತು ಜೇರಿ ವಾಹನಗಳ ರೇಜಿಟ್ಟಿರುತ್ತದೆ. ಮನೆ, ಮಾರ್ಕೆಟು ಮತ್ತು ದೇವಾಲಯಗಳು ಸುಟ್ಟು ಬೂದಿಯಾಗಿ, ಹಿಂದೂ ಜನರ ಭಯಂಕರ ಹಾನಿಯಾಗಿರುತ್ತದೆ. ಪೋಲೀಸರು ದರೋಡೆಗಾರರನ್ನು ಹಿಡಿದು ದಂಡಿಸಬಹುದು. ಆದರೆ ಜನರ ಹಾನಿಯನ್ನು ತುಂಬಿ ಕೊಡುವ ಬಗೆ ಹೇಗೆ?

———

ಶೀಖ ಶೀಖರಲ್ಲಿ ಇಬ್ಬಣ.

—o—

ಸುವರ್ಣ ಮಂದಿರದ ದೆಸೆಯಿಂದ ಸತ್ಯಾಗ್ರಹ.

—o—

ಅಕಾಲಿ ಶೀಖರಲ್ಲಿಯ ಒಗ್ಗಟ್ಟು ಮುರಿದು, ಅವರಲ್ಲಿಯೇ ಇಬ್ಬಣವಾಗಿದೆ. ಅಮೃತಸರದಲ್ಲಿರುವ ಸುವರ್ಣಮಂದಿರದ ಪಾರಪತ್ಯಗಾರಿಕೆಯು ಗುರುದ್ವಾರ ಪ್ರಬಂಧಕ ಕಮಿಟಿಯ ವಶದಲ್ಲಿತ್ತು. ಈ ದೇವಾಲಯವನ್ನು ತಮ್ಮಾಧೀನ ಮಾಡಿಕೊಳ್ಳಬೇಕೆಂದು ಅಕಾಲಿಗಳು ಬಲಾತ್ಕಾರದಿಂದ ಗುಡಿಯಲ್ಲಿ ಹೊಕ್ಕು, ಕಾವಲಗಾರರನ್ನು ಹೊಡೆದು, ತಾವೇ ಮೂರ್ಧನ್ಯರಾಗಿ ಕೂತರು. ಗುರುದ್ವಾರ ಕಮಿಟಿಯವರು ಪೋಲೀಸರಿಗೆ ಈ ವರ್ತಮಾನ ತಿಳಿಸಲು, ಅವರು ಬಂದು, ಅಕಾಲಿಗಳಿಗೆ ಸಮಾಧಾನ ಹೇಳಿದರು. ಆದರೆ ಅಕಾಲಿಗಳು ಕಿರಪಾನದಿಂದ ಕೆಲ ಪೋಲೀಸರಿಗೂ ಘಾಯ ಮಾಡಿದರು. ಆಗ ಪೋಲೀಸರು ಇವರನ್ನು ಹಿಡಿದು, ಹಿಡಿದು, ಲಾಠಿಪೆಟ್ಟುಕೈ ಸೈದಬಳಿಕ, ಅಕಾಲಿಗಳ ಹಿಂಸಾತ್ಮಕವಾದ ಸತ್ಯಾಗ್ರಹವು ಶಾಂತವಾಯಿತು.

———

ನವಲಗುಂದದಲ್ಲಿ ಮುನಸಫಕೋರ್ಟ ಸ್ಥಾಪನೆಯ ಬಗ್ಗೆ ಅರ್ಜಿಗಳು.

—o—

ನವಲಗುಂದ ಗ್ರಾಮದಲ್ಲಿ ಮುನಸಫಕೋರ್ಟನ್ನು ಸ್ಥಾಪಿಸಬೇಕೆಂದು ಆ ತಾಲೂಕಿನ ಗ್ರಾಮಗಳಿಂದ ಕೆಳಗೆ ಬರೆದಂತೆ ಅರ್ಜಿಗಳು ಮುಂಬಯಿ ಹಾಯಕೋರ್ಟಿಗೆ ಕಳಿಸಲ್ಪಟ್ಟಿರುತ್ತವೆ.

ನಮ್ಮ ನವಲಗುಂದ ತಾಲೂಕಿನ ಜನಸಂಖ್ಯೆಯು ಸುಮಾರು ಒಂದೂವರಿ ಲಕ್ಷವಿದ್ದು ಇದರ ವಿಸ್ತಾರವು ಅತಿ ದೊಡ್ಡದಿರುತ್ತದೆ. ನಮ್ಮ ತಾಲೂಕಿನಿಂದ ಸರಕಾರಕ್ಕೆ ಪ್ರತಿ ವರ್ಷ ಸುಮಾರು ಐದುವರಿ ಲಕ್ಷ ರೂಪಾಯಿ ಕಂದಾಯವು ಸಲ್ಲುತ್ತದೆ. ಈ ತಾಲೂಕಿನಲ್ಲಿ ದೊಡ್ಡ ಊರುಗಳು ಬಹಳವಿರುವದರಿಂದ ಪ್ರತಿ ವರ್ಷ ಲಕ್ಷಾಂತರ ರೂಪಾಯಿಗಳ ವ್ಯವಹಾರವು ನಡೆಯುತ್ತದೆ.

ನಮ್ಮ ತಾಲೂಕು ಧಾರವಾಡ ಕೋರ್ಟಿನ ಅಧಿಕಾರಕ್ಕೆ ಒಳಪಟ್ಟಿದ್ದು ಪ್ರತಿವರ್ಷ ಅಲ್ಲಿ ಅಜಮಾಸು ಒಂದು ಸಾವಿರ ದಾವೆಗಳು ದಾಖಲವಾಗುತ್ತವೆ. ಇವುಗಳ ಪೈಕಿ ಕೇವಲ ನಮ್ಮ ನವಲಗುಂದ ತಾಲೂಕಿನಿಂದಲೇ ಲಕ್ಷಗಟ್ಟಲೆ ಅಸ್ತಿಯಾಗುವಂಥ ಸುಮಾರು ನಾಲ್ಕುನೂರಾ ಐವತ್ತು ದಾವೆಗಳಿರುತ್ತವೆ. ಧಾರವಾಡ ಕೋರ್ಟಿನಲ್ಲಿ ಇತ್ತಿತ್ತಲಾಗಿ ಮಿತಿಮೀರಿ ಕೆಲಸ ಬೆಳೆದಿರುವದರಿಂದ ಅಲ್ಲಿ ದಾಖಲಾದ ದಾವೆಗಳು ಬಹಳ ದಿವಸಗಳ ವರೆಗೆ ನಿಕಾಲೆಯಾಗದೆ ಕೊಳೆಯುತ್ತ ಬೀಳುವವೆಂಬ ಸಂಗತಿಯೂ ಮತ್ತು ಆ ಕಾರಣ ಅಲ್ಲಿ ಯಾವಾಗಲೂ ಒಬ್ಬ ಹೆಚ್ಚಿನ ಮುನಸಫನು ಬೇಕಾಗಬೇಕಾಗುವನೆಂಬ ಮಾತೂ ನಿರ್ವಿವಾದ ವಿಷಯಗಳಾಗಿವೆ.

ಧಾರವಾಡ ಕೋರ್ಟಿಗೆ ಒಳಪಟ್ಟ ನಮ್ಮ ತಾಲೂಕಿನ ಉತ್ತರ ಮತ್ತು ಪೂರ್ವ ಮೇರೆಯ ಹಳ್ಳಿಗಳಲ್ಲಿಯ ಪಕ್ಷಕಾರರೂ ಮತ್ತು ಸಾಕ್ಷೀದಾರರೂ ಧಾರವಾಡಕ್ಕೆ ಬರಬೇಕಾದರೆ ಕನಿಷ್ಠ ೩೦-೪೦ ಮೈಲು ಪ್ರವಾಸ ಮಾಡಬೇಕಾಗುವದು. ವೇಳಾಗಿ ಪ್ರಸಂಗ, ಇಷ್ಟು ದೂರ ಪ್ರವಾಸದಿಂದಾಗುವ ದ್ರವ್ಯಹಾನಿ ಈ ಎಲ್ಲ ಅನನುಕೂಲತೆಗಳ ಮೂಲಕ ನಮ್ಮ ತಾಲೂಕಿನ ಪಕ್ಷಕಾರರಿಗೆ ಎಷ್ಟು ಕಷ್ಟ ಸೋಸಬೇಕಾಗುವದೆಂಬದನ್ನು ತಾವೇ ದಯಮಾಡಿ ವಿಚಾರಿಸಿ ನೋಡಬೇಕು.

ಆದಕಾರಣ ಧಾರವಾಡ ಕೋರ್ಟಿನ ಕೆಲಸದ ಭಾರವನ್ನು ಕಡಿಮೆ ಮಾಡಿ ನಮ್ಮ ನವಲಗುಂದ ತಾಲೂಕಿಗೆ ಒಂದು ಸ್ವತಂತ್ರ ಕೋರ್ಟನ್ನು ಸ್ಥಾಪಿಸಿ ನಮ್ಮ ಕೊರತೆಗಳನ್ನೆಲ್ಲ ಪೂರ್ಣ ಹೋಗಲಾಡಿಸುವಿರೆಂದು ನಾವೆಲ್ಲರು ನಮ್ರಪೂರ್ವಕವಾಗಿ ತಮ್ಮ ಸನ್ನಿಧಿಗೆ ಅರಿಕೆ ಮಾಡಿಕೊಳ್ಳುತ್ತೇವೆ. ಕೋರ್ಟಿನ ಹೊಸ ಇಮಾರತಿಯನ್ನು ಕಟ್ಟಿಸುವ ತನಕ ಕೋರ್ಟ ಭರಾಯಿಸುವದನ್ನು ಕೆಲವು ಕಾಲದ ವರೆಗೆ ಇಲ್ಲಿಯ ಶ್ರೀಮಂತ ಶಿರಸಂಗೀಕರ ವಾಡೇದಲ್ಲಿ ಜರುಗಿಸಬೇಕೆಂದು ನಾವು ಸರಕಾರಕ್ಕೆ ಸೂಚಿಸುತ್ತೇವೆ. ಸ್ವಲ್ಪೇ ದಿವಸಗಳ ಹಿಂದೆ ಧಾರವಾಡ ಜಿಲ್ಲೆಯ ಮುಖ್ಯ ನ್ಯಾಯಾಧೀಶರು ಇಲ್ಲಿಗೆ ಬಂದಾಗ್ಗೆ ಇಲ್ಲಿಯ ಶ್ರೀಮಂತ ಶಿರಸಂಗೀಕರ ವಾಡೆಯನ್ನು ನೋಡಿ ಇದು ಕೋರ್ಟ ಭರಾಯಿಸಲಿಕ್ಕೆ ತಕ್ಕ ಸ್ಥಳವಾಗಿದೆಂದು ಅಭಿಪ್ರಾಯಪಟ್ಟ ಸಂಗತಿಯು ನಮಗೆ ಗೊತ್ತುಂಟು. ಮೊನ್ನೆ ನವಲಗುಂದ ತಾಲೂಕ ಲೋಕಲಬೋರ್ಡಿನವರು ಸಹ ಈ ವಿಷಯದಲ್ಲಿ ತಮಗಾಗುವ ತಾಪಗಳನ್ನೆಲ್ಲ ಜನಾಗ್ರಹಿ ವಿಚಾರಿಸಿ ನಮ್ಮ ತಾಲೂಕಿಗೆ ಒಂದು ಸ್ವತಂತ್ರ ಕೋರ್ಟ ಸ್ಥಾಪಿಸುವದರ ಸಲುವಾಗಿ ಸರಕಾರಕ್ಕೆ ವಿನಂತಿ ಮಾಡಿಕೊಳ್ಳಬೇಕೆಂದು ಸರ್ವಾನುಮತದಿಂದ ಒಂದು ಠರಾವು ಮಾಡಿರುತ್ತಾರೆ.

ಕೊನೆಗೆ ನಾವೆಲ್ಲರು ನಮ್ರಪೂರ್ವಕವಾಗಿ ಬೇಡಿಕೊಳ್ಳುವದೇನಂದರೆ ಹಾಯಕೋರ್ಟಿನವರು ಈ ಸಂದರ್ಭದಲ್ಲಿ ದಯಮಾಡಿ ಶೀಘ್ರ ಚಟುವಟಿಕೆಯನ್ನು ತೋರಿಸಿ ನಮ್ಮ ತಾಲೂಕಿಗೆ ಒಂದು ಸ್ವತಂತ್ರ ಕೋರ್ಟನ್ನು ಸ್ಥಾಪಿಸುವದರ ಸಲುವಾಗಿ ಯೋಗ್ಯ ಕಂಡ ಅವಶ್ಯಕ ಉಪಾಯಗಳನ್ನು ಯೋಜಿಸಬೇಕಾಗಿ ಆಶಿಸುತ್ತೇವೆ.

———

ವಿನೋದ.

ಇಷ್ಟೇಕೆ ಗಾಬರಿಯಾಗಿ ಓಡುತ್ತೀರಿ?
ಸರ್ಕಸದೊಳಗಿನ ಸಿಂಹ ಹೊರಬಿದ್ದಿದೆ.
ಯಾವ ದಾರಿಯಿಂದ ಹೋಯಿತು?
ನಾನು ಬಂದ ದಾರಿಯಿಂದಲೇ ಹೋಯಿತು!

———

ಅಡಿಗೆಯವಳು- ಅಮ್ಮನವರೇ ಕಟ್ಟಿಗೆ ಇಲ್ಲ
ಅನ್ನ ಸುಡೀ ಹಿಡಿದಿದೆ.
ಅಮ್ಮ- ಮೊದಲೇ ಏಕೆ ಹೇಳಲಿಲ್ಲ.
ಅಡಿ- ಆಗ ಇತ್ತಲ್ಲವೇ?

———

ನೀನು ಮೊದಲಿನ ಕೆಲಸವೇಕೆ ಬಿಟ್ಟೆ. ಏನಾದರೂ ಸರ್ಟಿಫಿಕೇಟು ಉಂಟೋ?
ಉತ್ತಮ ಸರ್ಟಿಫಿಕೇಟು ಅದೆ.
ಹಾಗಾದರೇಕೆ ಬಿಟ್ಟೆ?
ಒಳ್ಳೇ ನಡತೆಯ ಬಗ್ಗೆ ಜೇಲರು ಮೂರು ತಿಂಗಳ ಶಿಕ್ಷೆ ಕಡಿಮೆ ಮಾಡಿ ಬಿಟ್ಟರು.

———

ಧಂಗವಾಡ—

ಮಳೆಯಿಲ್ಲದೆ ಬಿಸಿಲಿನ ಧಗೆಯು ಅಸಾಧಾರಣವಾಗಿ ಕಾದು, ಜನತೆಯನ್ನು ಕ್ಷೋಭೆಗೊಳಿಸಿತು.

ವಿವಿಧ ವರ್ತಮಾನಗಳು.

—೦—

ಸ್ವರಾಧಿಪತಿಗಳಾದ ಲಾರ್ಡ ಆಯರ್ವಿನ ಸಾಹೇಬರ ಕೂಡ ಕೆಲವು ಮಹತ್ವದ ಸಂಗತಿಗಳನ್ನು ಕುರಿತು ಪ್ರಸ್ತಾಪ ಮಾಡಲು- ಮದ್ರಾಸದ ಮುಖ್ಯ ಮಂತ್ರಿಯಾದ ಪಾನಗಲ್ಲಿನ ರಾಜರು ಸಿಮ್ಲಾಕ್ಕೆ ಪ್ರಯಾಣ ಬೆಳಿಸುವರು. ಅಲ್ಲಿಯ ಕೆಲಸ ತೀರಿಸಿಕೊಂಡು ಪುಣೆಗೆ ಬಂದು, ಬ್ರಾಹ್ಮಣೇತರ ಸಭೆಯ ಅಧ್ಯಕ್ಷಸ್ಥಾನವನ್ನು ಸ್ವೀಕರಿಸುವರು.

— —

ಮೈಸೂರಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಿಲರ ಕಮಿಟಿಯ ರಿಪೋರ್ಟಿನ ಪ್ರಕಾರ ಸರಕಾರೀ ಕೆಲಸಗಳನ್ನು ಕೊಡುವ ವಿಷಯವಾಗಿ ಒಬ್ಬ ಕಾಮದಾರರನ್ನು ನೇಮಿಸಬೇಕೆಂಬ ಠರಾವು ಬಂತು. ಬ್ರಾಹ್ಮಣೇತರಲ್ಲಿಯೂ ಮುಂದೋದಿದವರೂ, ಹಿಂದುಳಿದವರೂ ಇದ್ದಾರೆ. ಹಿಂದುಳಿದವರಿಗೇ ಹೆಚ್ಚಾಗಿ ಕೆಲಸ ಕೊಡಬೇಕೆಂಬ ಠರಾವನ್ನು ಶ್ರೀ, ಬಾಯನ್ನನವರು ತಂದರು. ಮೆಂಬರರಲ್ಲಿ ಹಿಂದುಳಿದವರ ಸಂಖ್ಯೆಯು ಕಡಿಮೆಯಾಗಿರುವದರಿಂದ, ಠರಾವು ಪಾಸಾಗಲಿಲ್ಲ!! ಸ್ವಾರ್ಥವು ದೇವಾಸುದೇವತೆಗಳನ್ನು ಬಿಡದ ಬಳಿಕ ಉಳಿದವರ ಪಾಡೇನು!

———

ಬೆಳಗಾವಿಯಲ್ಲಿ ಮರಾಠಾ ಜನರ ೧೫ ಸಾವಿರ ವಸತಿಯುಂಟು. ಅಲ್ಲಿ ಮ್ಯುನಸಿಪಾಲಿಟಿಯು ಸ್ಥಾಪನೆಯಾಗಿ ೬೦ ವರ್ಷವಾಯಿತು ಆದರೂ ಮರಾಠಾ ಗೃಹಸ್ಥನು ಅಧ್ಯಕ್ಷನಾಗಿದ್ದಿಲ್ಲ. ಈ ಸಾರೆಯ ಚುನಾವಣೆಯಲ್ಲಿ ಮಿ. ದಳವಿಯವರು ಅಧ್ಯಕ್ಷರಾದರು. ಮರಾಠಾ ಜನರು ಸಭೆ ಮಾಡಿ, ಈ ಬಗ್ಗೆ ಆನಂದ ಪ್ರದರ್ಶನ ಮಾಡಿ, ಮಿ. ದಳವಿಯವರಿಗೆ ಮಾನಪತ್ರ ಕೊಟ್ಟರು.

———

ತಿನ್ನವಲ್ಲಿಯ ಡಿಸ್ಟ್ರಿಕ್ಟ ಲೋಕಲಬೋರ್ಡದ ನಾಮಿನೇಶನವಾಗಬೇಕಾಗಿದ್ದು, ಬ್ರಾಹ್ಮಣೇತರರ ... ಪಕ್ಷದವರೆಂಬವರನ್ನು ನೇಮಿಸುವರೆಂದು ದಟ್ಟ ... ವಾಗಿದೆ. ಉಳಿದ ಕುಲಗಳ ಜನರು ಇದ್ದ ವಿರುದ್ಧ ಚಳವಳಿ ಎಬ್ಬಿಸಿದ್ದಾರೆ. ಕೌನ್ಸಿಲ ಚುನಾವಣೆಗಾಗಿಯೇ ನಾಮಿನೇಶನವು ಪಕ್ಷಪಾತದಿಂದ ಮಾಡಲ್ಪಡುತ್ತಿರುವದೆಂದು ಅವರು ಎಣಿಸುತ್ತಿದ್ದಾರೆ.

———

ಪುಣೆಯ ... ಸವರಂ ... ೪೦ ಸಾವಿ

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೋವೋ! ಹಲ್ಲುಕೂಲಿಯೋ! ಮಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು!

ಅಜ್ಜನು— ಕಂದಾ— ಹೌದು ಮೈಯೆಲ್ಲಾ ನೋಯುತ್ತದೆ.

ಕಂದ— ... ಒಂದೇ ಕ್ಷಣದಲ್ಲಿ ... ನೋವು ... ವಾಗಿ ಮಾತಾಡುವಿ ಮತ್ತು ಕೂಡ್ರುವಿ ... ಎಂದೇ ಅಜ.

ನಮ್ಮಲ್ಲಿ ಬೇಕಾದ ಡಾಕ್ಟರ ... ಪ್ರಕಾರ ಔಷಧವನ್ನು ತಯಾರ ಮಾಡಿಕೊಡುವೆವು.

ವಿಳಾಸ— ಜನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತು ಡ್ರಗಿಸ್ಟ,
ಸ್ಟೇಶನರೋಡ ಹುಬ್ಬಳ್ಳಿ

ಡಾಕ್ಟರ ವಾಲ್ಲಯ್ಯನವರಿಂದ ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು— ಪಿನಸಿ, ಅರತಲೆ ನೋವು, ತಲೆಯಲ್ಲಾಗುವ ಬೇರೆ ವಿಕಾರಗಳು, ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಟಿಕೆಯನ್ನು ಕೂಡಿಸಿದರೆ ಎಲ್ಲವೂ ಸುಗಂಧವಾಗುವದು. ಮಾದರಿ ಶಿಶೆ ಉಚಿತವಾಗಿ ದೊರೆಯುವದು.

ಶೀಸೆ ಒಂದಕ್ಕೆ ನಾಲ್ಕಾಣೆ. ಡಜನಕ್ಕೆ ೨-೪-೦ ವ್ಹಿ. ಪಿ ಪೋಸ್ಟಚಾರ್ಜ ಬೇರೆ.
ದಯವಿಟ್ಟು ವಿಳಾಸವನ್ನು ಸ್ವಚ್ಛವಾಗಿ ಬರೆಯಿರಿ.

ತಂತಿ ವಿಳಾಸ- ನಸ್ಯಮ. } ಪಿ. ವ್ಹಿ. ರಾಜನ ಮತ್ತು ಕಂಪನಿ,
೪೪ ಗೋವಿಂದಪ್ಪ ನಾಯಕನ ಬೀದಿ, ಜಾರ್ಜಟಾವುನ, ಮದ್ರಾಸ

ದಿ ಅಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ.

೧೯೧೩ ಇಸ್ವಿಯ
ಕಂಪನಿ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ ವತ್ತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡಿಯುವವು. ವಿಶೇಷ ಸಂಗತಿಗಳು ಕೆಳಗೆ ಸಹಿಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ ರಿಂದ ೧೦-೩೦. ಸಾಯಂಕಾಲ ೩ ರಿಂದ ೬ ವರೆಗೆ ನಡಿಯುವದು.

K. B. Ankaligi

ಚಂದಾದಾರರಿಗೆ ಸೂಚನೆ.

—೦—

ಜೂನ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ಶಿಕ್ಕ ಮುಕ್ತ್ತ ವಾರ ಪತ್ರದ ಚಂದಾದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಚಂದಾದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯುವನ್ನ ಪ್ರೋತ್ಸಾಹಿಸಬೇಕೆಂಬ ವಿನಂತಿಯು.

ವ್ಯವಸ್ಥಾಪಕರ ವಿಜಯ ಧಾರವಾಡ

ಈ ಪತ್ರವನ್ನು ಆಜ್ಞಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾರ್ತಾಹರ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧಪಡಿಸಿದರು.

R N B. 1443

ವಿಜಯ

ನಿತ್ಯ ಪತ್ರ | ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ ಧಾರವಾಡ ಗುರುವಾರ ತಾರೀಖು ೨೪ ನೇ ಜೂನ ೧೯೨೬ (ಸಂಚಿಕೆ ೧೪೩

ಸರಕಾರದಿಂದ ಪೇಟಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ಜಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗಲ್ಪಡುತ್ತಲೇ ಜಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚೆಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ ೨೦ರೂ.
ನಂ ೨	೫೫ ,,	,, ೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಹಾ, ಸಾತಾರಾ

ವಿಜಯ ಪುಸ್ತಕಾಲಯ.

—०—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಶಯ	೫ ,,
ಲೋ. ಟಿಳಕರ ಚರಿತ್ರ,	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲು ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ಜಾಹೀರಾತಿನ ದರಗಳು.

—०—

ತಿಂಗಳ ಕಾಲಮಿನ ಹತ್ತು ಒಳಗಳಿಗೆ ಒಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂಭತ್ತು ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್‌ಕಾಲಮಿನ ಓಳಿಗಳಿಗೆ ಇನ್ನೂ ಹೆಚ್ಚು. ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ರಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—०—

ನಿತ್ಯಪತ್ರಕ್ಕೆ

೧೨	ತಿಂಗಳಿಗೆ	೧೨—೮—೦ ರೂ
೬	,,	೭—೦—೦ ರೂ
೩	,,	೪—೦—೦ ರೂ
ವಾರಪತ್ರಕ್ಕೆ ೧ ವರ್ಷಕ್ಕೆ		೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

—०—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ್ಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಲ್ಪಡುವದು. ಕಾಯಂ ಮತ್ತು ಚಾಲು ಖಾತೆ ಠೇವ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ವಿಶೇಷ ಸಂಗತಿಗಳನ್ನು ಕಛೇರಿಗೆ ಖಚೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ವಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ.

ಧಾರವಾಡ ತಾ- ೨೪ ೬-೨೬ ನೇ ಇಸ್ವಿ

ಗದಗ ತಾಲೂಕ ಚಿಂಚಲಿಯಲ್ಲಾದ
ಒಕ್ಕಲತನದ ಮತ್ತು ದನಗಳ ಪ್ರದರ್ಶನವು.

ಗದಗ ತಾಲೂಕಿಗೆ ಸೇರಿದ ಚಿಂಚಲಿ ಗ್ರಾಮದಲ್ಲಿ ಕಳೆದ ತಿಂಗಳಲ್ಲಾದ ಒಕ್ಕಲತನದ ಮತ್ತು ದನಗಳ ಪ್ರದರ್ಶನದಲ್ಲಾದ ಠರಾವುಗಳನ್ನು ಸಂಪೂರ್ಣವಾಗಿ ಹೋದ ವಾರದಲ್ಲಿ ಪ್ರಸಿದ್ಧ ಮಾಡಿದ್ದೇವೆ. ಈ ಪ್ರದರ್ಶನವನ್ನು ಯಾವದೊಂದು ಸಂಘ ಮತ್ತು ಸಮಾಜದವರು ಕೂಡಿಸಿದ್ದಲ್ಲ. ಒಬ್ಬರ ಕರ್ತವ್ಯಜಾಗೃತೆಯಿಂದ ನೆರವೇರಿದಂಥಾದ್ದು. ಅಲ್ಲಿಯ ದೊಡ್ಡ ಜಮೀನದಾರರೂ, ಸಾಹುಕಾರರೂ ಆದಂಥ ಶ್ರೀ. ಮಹಾದೇವಪ್ಪಾ ಬಸಪ್ಪಾ ಕತ್ತಿಯವರು ಇದರ ಪ್ರವರ್ತಕರು, ಚಾಲಕರು ಮತ್ತು ಉತ್ತೇಜಕರಾಗಿದ್ದಾರೆ. ಇವರು ಪ್ರತಿವರ್ಷ ಶಮ್ಭೂರ ಶ್ರೀ. ಬಸವೇಶ್ವರನ ಜಾತ್ರೆ ಮಾಡಿಸುವರು ಜಾತ್ರೆಯು ತೀರ ಯಾತ್ರೆಯಾಗದೆ, ಅದರಿಂದ ಸುತ್ತಲಿನ ಗ್ರಾಮಗಳ ಜನರಿಗೆ ಹಿತವಾಗಲೆಂಬ ಉದ್ದೇಶದಿಂದ ಪ್ರದರ್ಶನದ ಭಾರವನ್ನು ಅಂಗೀಕರಿಸಿದ್ದಾರೆ ಚಿಂಚಲಿಯಲ್ಲಿ ಇಂಗ್ಲಿಷ ಶಾಲೆಯನ್ನೂ ಲಾಯಬ್ರರಿಯನ್ನೂ ಸ್ಥಾಪಿಸಿ ಶಿಕ್ಷಣ ಕಾರ್ಯವನ್ನು ಈ ಮುಂದಾಗಿ ಕೈಕೊಂಡಿದ್ದಾರೆ ಇವುಗಳ ಕರುವಾಯ ಈ ಘನವಾದ ಮತ್ತು ದೊಡ್ಡದಾದ ಜವಾಬದಾರಿಯ ಕಾರ್ಯವನ್ನು ಅಂಗೀಕರಿಸಿದ್ದಾರೆ. ಪ್ರದರ್ಶನದ ಯೋಜನೆಯನ್ನು ಕಲೆಕ್ಟರರಾದ ಮಿ. ಮಾಸ್ಟರ ಸಾಹೇಬರು ಅನುಮೋದಿಸಿ, ಪ್ರತಿಯೊಂದು ಗ್ರಾಮದವರು ಹತ್ತು ಜನ ರೈತರನ್ನಾದರೂ ಪ್ರದರ್ಶನಕ್ಕೆ ಕರಕೊಂಡು ಹೋಗಬೇಕೆಂದು ಸುತ್ತಲಿನ ಗ್ರಾಮಗಳಿಗೆ ಅಪ್ಪಣೆ ಮಾಡಿದ್ದರು. ಒಕ್ಕಲತನದ ಖಾತೆಯವರೂ ಪ್ರದರ್ಶನವು ಯಶಸ್ವಿಯಾಗುವಂತೆ ಎಲ್ಲ ರೀತಿಯಿಂದಲೂ ಉತ್ಸಾಹಪೂರ್ವಕವಾದ ಪ್ರಯತ್ನಶೀಲರಾಗಿದ್ದರು. ಈ ಪರಿಷತ್ತು ಪ್ರದರ್ಶನದಲ್ಲಾದ ಠರಾವುಗಳು ಒಕ್ಕಲತನದ ಅಭಿವೃದ್ಧಿಯ ದೃಷ್ಟಿಯಿಂದ ಬಹಳೇ ಮಹತ್ವದ್ದಾಗಿರುತ್ತವೆ ಇದೇ ವಿಷಯವಾಗಿ ಬೇರೆ ಬೇರೆ ಸ್ಥಳಗಳಲ್ಲಾಗಿನ ಪ್ರದರ್ಶನ ಮತ್ತು ಪರಿಷತ್ತಿನವರು ಇದನ್ನು ಅನುಕರಣ ಮಾಡುವಂತಿವೆ ಶ್ರೀ. ಮಹಾದೇವಪ್ಪನವರು ಕೈಕೊಂಡ ಕಾರ್ಯವು ಸ್ತುತ್ಯವದೆ. ಇಪ್ಪತ್ತು ವರ್ಷಗಳ ಹಿಂದೆ ಹೊಸರಿತ್ತಿಯಲ್ಲಿ ದನಗಳ ಪ್ರದರ್ಶನವು ಬಹು ಸಣ್ಣ ಪ್ರಮಾಣದಿಂದ ಪ್ರಾರಂಭವಾಯಿತು. ಈಗ ನಿರಂತರ ನಡೆಯುವಂಥ ಒಂದು ದೊಡ್ಡ ಜಾತ್ರೆಯಾಗಿದೆ. ಅದೇ ಪ್ರಕಾರ ಚಿಂಚಲಿಯ ಜಾತ್ರೆಯು ವರ್ಷ ವರ್ಷಕ್ಕೂ ಶ್ರೀ ಕತ್ತಿಯವರ ಉದಾರತನದಿಂದ ಬೆಳೆಯುತ್ತಾ ಹೋಗಲೆಂದು ಹಾರೈಸುತ್ತೇವೆ.

ಮದ್ಯಪಾನ ಪ್ರತಿಬಂಧದಿಂದಾದ ಹಿತವು.

ನೀಲಗಿರಿಯಲ್ಲಿ ಬಡಗ ಎಂಬ ಕುಲದವರಿದ್ದಾರೆ. ಇವರು ಬಹಳ ಸಾತ್ವಿಕರು. ಆದರೆ ಕುಡಿಯುವ ವ್ಯಸನ ಹತ್ತಿ, ತೀರ ದರಿದ್ರರಾದರು ಇವರ ಬಡತನವನ್ನು ನೋಡಿ, ಮದ್ರಾಸ ಸರಕಾರದ ಅಂತಃಕರಣ ಕರಗಿತು ಸರಿ ಕುಡಿಯುವಿಕೆಯನ್ನು ನಿಲ್ಲಿಸಿದರೆ- ಉತ್ಪನ್ನ ಕಡಿಮೆ, ರಾಜ್ಯ ಕಾರಭಾರದ ರಥವೇ ನಿಂತು ಹೋಗುವದೆಂಬದಾಗಿ ಚೀರಿಚೀರಿಗೆ ಸಾರುತ್ತಿರುವ ಸರಕಾರ ಕೂಡ ಬಡಗರಿಗೆ ಸರೆ- ಸಿಂದಿಯನ್ನು ಮಾರಬಾರದೆಂಬ ಹುಕುಮನ್ನು ಪ್ರಸಿದ್ಧ ಮಾಡಿತು. ಹುಕುಮು ಪ್ರಸಿದ್ಧವಾಗಿ ಎರಡೇ ವರ್ಷವಾಯಿತು ಈ ಎರಡು ವರ್ಷಗಳಲ್ಲಿ ಗದ್ದಲಗಳು ಇನ್ನಿದ್ದರೂ, ಊರಿಯ ಲಕ್ಷ್ಮಿ ಉಣ್ಣುವಲ್ಲದಂಥವರ ಮನೆಯಲ್ಲಿ ಬಂಗಾರದ ಹೊಗೆ ಹಾಯಲಾರಂಭಿಸಿದೆ. ನೀಲಗಿರಿಯ ಮಿಶನರಿಗಳು ಸಭೆ ಮಾಡಿ, ಈ ಸಂಗತಿಯನ್ನು ಅಭಿಮಾನಪೂರ್ವಕವಾಗಿ ಜಾಹೀರ ಮಾಡಿದ್ದಾರೆ. ಸರಕಾರವು ಒಂದು ಅಗಳು ಹಿಚಿಕಿ ನೋಡಿದಂತಾಯಿತು. ಮದ್ಯಪಾನವನ್ನು ಬಂದು ಮಾಡಿದರೆ- ಈ ವ್ಯಸನದಲ್ಲಿ ಸಿಕ್ಕಂಥ ಎಲ್ಲ ಕುಲಗಳ ಬಡತನ ಹಿಂಗುವದೆಂದು ಈ ಸಂಗತಿಯಿಂದ ಸ್ಪಷ್ಟವಾಗುತ್ತದೆ.

ಇದೇ ವಿಷಯವಾಗಿ ವಿಚಾರ-

ಮುಂಬಯಿ ಸರಕಾರದ ಅಬಕಾರಿ ಖಾತೆಯ ಮಂತ್ರಿಯಾದ ಕಾಮದಾರ ಎಂಬವರು ಗುಜರಾಥ ಪ್ರಾಂತದಲ್ಲಿ ಪ್ರವಾಸ ಮಾಡುತ್ತಿದ್ದಾನೆ. ಇವರು ಇದೇ ವಿಷಯವಾಗಿ ಒಂದು ಊರಲ್ಲಿ ಅಂದದ್ದೇನಂದರೆ-

" ಜನರು ಮದ್ಯಪಾನವನ್ನು ನಿಲ್ಲಿಸಿರೆಂದು ಹೇಳುತ್ತಾರೆ. ಸರಿ-ಹಿಂದಿಯ ಆದಾಯವು ನಾಲ್ಕು ಕೋಟಿಯುಂಟು. ಈ ಹಾನಿಯನ್ನು ಹೇಗೆ ಭರಿಸಲು ಗೂಡಿಸಬೇಕೆಂದು ಹೇಳುವದಿಲ್ಲ. ನಾವು ಏನಾದರೂ ಮಾರ್ಗ ತೋರಿಸಿರೆಂದು ಅಕೌಂಟಂಟ ಜನರಲ್ಲರನ್ನು ಕೇಳಿದ್ದೇವೆ."

ಎಂಬದು ಅಮೇರಿಕಾ ಸರಕಾರದವರ ಕೋಟಿಯಲ್ಲ; ಅಲ್ಪ ಸಂಖ್ಯೆಯಿಂದ ಹಾನಿ ಮಾಡಿಕೊಂಡು, ಮದ್ಯಪಾನವನ್ನು ನಿಲ್ಲಿಸಿದರು. ಆ ಕೌಂಟಂಟ ಜನರಲ್ಲರಿಗಿಂತ ಅಮೇರಿಕಾ ಸರಕಾರವು ಅನುಭವದ ಮತ್ತು ಯಶಸ್ಕರವಾದ ಉಪಾಯವನ್ನು ಹೇಳುವದಲ್ಲವೇ?

ಜರ್ಮನಿಯಲ್ಲಿದ್ದ ರಾಜಕೀಯ
ದಿನ್ನ ಗಾಳಿಯು

ಸಂಯುಕ್ತರು ಕೈಸರನ್ನು ಸೋಲಿಸಿದರೆಂದು ಹೇಳುವದಕ್ಕಿಂತ ಬೋಲ್ಶೆವಿಕ ಭೂತವು ಕೇಸರರನ್ನು ದೇಶಭ್ರಷ್ಟ ಮಾಡಿತೆಂದು ಹೇಳುವದೇ ವಿಹಿತವು ಈ ಭೂತವು ಇಂದಿಗೂ ಕೇಸರರ ಬೆನ್ನು ಬಿಟ್ಟಿಲ್ಲ. ಕೇಸರರ ಸ್ವಂತ ಆಸ್ತಿಯು ಬಹಳ ದೊಡ್ಡದಿದ್ದು, ಅದನ್ನು ಅವರಿಗೆ ಬಿಟ್ಟು ಕೊಡಬೇಕೆಂಬ ವಿಷಯವಾಗಿ ಇಬ್ಬರವಾದ ವರ್ತಮಾನವನ್ನು ಈ ಮೊದಲು ಬರೆದಿದ್ದೇವೆ. ಅಧ್ಯಕ್ಷರಾದ ಹಿಂಡನಬರ್ಗರು ಎರಡೂ ಪಕ್ಷಗಳನ್ನು ಸಮಾಧಾನ ಪಡಿಸುವದಕ್ಕಾಗಿ ಪಂಚರ ವಿದ್ಯಮಾನ ರಾಜೀ ಆಗಬೇಕೆಂದು ವಿಚಾರ ಮಾಡಿದರು ಅದು ಬಗೀ ಹರಿದಂತೆ ತೋರಲಿಲ್ಲ. ಪ್ರಕೃತ ವೋಟು ತಕ್ಕೊಳ್ಳುವ ಕೆಲಸ ನಡೆದಿದೆ. ಕೇಸರ ಪಕ್ಷಕ್ಕೆ ಸರಾಸರಿ ಎರಡು ಕೋಟಿ ವೋಟುಗಳು ಬೇಕಾಗುತ್ತವೆ. ಇಷ್ಟು ವೋಟುಗಳು ಸಿಗದಿದ್ದರೆ- ಜನರಲ ಹಿಂಡನಬರ್ಗರ ಪಕ್ಷಕ್ಕೆ ಸೋಲು ಬರುವದು. ಹೀಗೆ ಅಪಜಯವುಂಟಾದರೆ- ಜನರಲ ಹಿಂಡನಬರ್ಗರೂ ಅವರ ಪಕ್ಷದವರೂ ರಾಜೀನಾಮೆ ಕೊಡುವರು. ರಾಜೀನಾಮೆ ಎಂದರೆ- ಕೇಸರ ಪಕ್ಷದ ಸ್ವರಾಜವು ಮತ್ತು ಬೋಲ್ಶೆವಿಕ ಪಕ್ಷದ ಜಯವಾಗುವದು.

ಜರ್ಮನ ರಾಜ್ಯದಲ್ಲಿ ಬವೇರಿಯಾ ಎಂಬುದೊಂದು ದೊಡ್ಡ ಪ್ರಾಂತವುಂಟು ಆ ಪ್ರಾಂತವು ಕೇಸರ ಪಕ್ಷಪಾತಿಯಾಗಿದೆ. ಮಹಾ ಯುದ್ಧಕ್ಕೆ ಇದರ ರಾಜಪುತ್ರನೇ ಕೇಸರರಿಗಿಂತ ಹೆಚ್ಚು ಉಲ್ಲೇಖತನ ತೋರಿಸಿದನು. ಬವೇರಿಯಾದ ಪ್ರಜರು ಬಹು ಸಂಖ್ಯೆಯಿಂದ ರಾಜಾಹಿಯು ಪುನಃ ಪ್ರಾರಂಭವಾಗಬೇಕೆಂಬ ಮತದವರಿದ್ದಾರೆ. ಪ್ರಶಿಯಾದಲ್ಲಿ ಬೋಲ್ಶೆವಿಕರ ಬಹುಮತವಾಗಿ, ಕೇಸರರ ಚರಾಚರ ಆಸ್ತಿಯನ್ನು ಅವರಿಗೆ ಕೊಡಬಾರದೆಂದು ಠರಾವಾದರೂ, ತಾವು ಈ ಠರಾವನ್ನು ಮನ್ನಿಸತಕ್ಕವರಲ್ಲೆಂದೂ, ಒಂದು ವೇಳೆ ತಮ್ಮನ್ನು ಒತ್ತಾಯ ಪಡಿಸಿದರೆ- ಜರ್ಮನಿಯ ಸಂಬಂಧ ಬಿಡಕೊಡು ಆಸ್ಟ್ರಿಯಾ ದೇಶದಲ್ಲಿ ಸೇರುವಂತೆಯೂ ಭಯ ಹಾಕಿದ್ದಾರೆ. ಈ ಪ್ರಕಾರ ರಾಜ ಪಕ್ಷ ಮತ್ತು ಪ್ರಜಾಪಕ್ಷವೆಂಬದ್ಧವಾಗಿ ಒಡೆದು ಕಾಣಿಸುತ್ತಿರುವ ಸ್ಥ

ಕ್ಕೆ ಸಮಯುದಲ್ಲಾದ ಒಂದು ಮ್ಯುನಿಸಿಪಾಲಿಟಿಯ ಚುನಾವಣೆಯಲ್ಲಿ ಎರಡೂ ಪಕ್ಷಗಳ ನಡುವೆ ಜೊಡದಾಟವಾಗಿ ಐವರು ಸತ್ತರು.

" ನಮ್ಮ ಸ್ವಂತ ಆಸ್ತಿಯಲ್ಲಿ ನೂರಕ್ಕೆ ಅರ್ಧದಷ್ಟು ಜರ್ಮನ ರಾಜ್ಯಕ್ಕೆ ಬಿಟ್ಟುಕೊಟ್ಟಿದ್ದೇವೆ. ಉಳಿದ ಭಾಗವನ್ನು ಕೊಡುವ ವಿಷಯವಾಗಿ ಒಸರು ಕಲಹಾಗ್ನಿಯನ್ನು ಹುಟ್ಟಿಸಿದರೆ- ಜರ್ಮನ ಪ್ರಜರಂಥ ಉಪಕಾರಗೇಡಿಗಳು ಇನ್ನೊಬ್ಬರಿರುವರಿಲ್ಲೆಂದು " ಸ್ವತಃ ಕೇಸರರೇ ಈ ಸಮಯದಲ್ಲಿ ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ ಹೋಟೆನ ಪರಿಣಾಮವು ಒಂದೆರಡು ದಿವಸಗಳಲ್ಲಿ ತಿಳಿಯುವದು.

ರಾವಲ್ಪಿಂಡಿಯಲ್ಲಾದ ಅಗ್ನಿ ಪ್ರಳಯ.

—o—

ಎರಡು ಕೋಟಿಯ ಹಾನಿಯು.

—o—

ರಾವಲಪಿಂಡಿಯಲ್ಲಾದ ದಂಗೆಯಿಂದ ಆದಂಥ ಹಾನಿಯ ವಿವರವನ್ನು ಹಿಂದೂ ಮಹಾ ಸಭೆಯವರು ಮುಂದೆ ಕೊಟ್ಟಂತೆ ಹೇಳುತ್ತಾರೆ.

" ಮುಸಲಮಾನ ಪುಂಡರು ಧಾನ್ಯದ ಮಾರ್ಕೆಟಿಗೆ ಹೋಗಿ, ಬೆಂಕೆ ಹಚ್ಚಿದರು. ಕಳ್ಳತನವನ್ನು ಮನೇಚ್ಛಿತವಾಗಿ ನೂರೆ ಮಾಡಿದರು. ಬೆಂಕೆಯನ್ನು ಆರಿಸಲಿಕ್ಕೆ ಹೋದಂಥ ಅಂಗಡಿಯ ಮಾಲೀಕರಿಗೆ ಪೋಲೀಸರು ಪ್ರತಿಬಂಧ ಮಾಡಿದರು. ಉರಿಯನ್ನು ಆರಿಸಲು ಬಂಬು ತರಗೊಡಲಿಲ್ಲ. ಈ ಮೂಲಕ ಅದ್ಭುತ ಹಾನಿಯಾಯಿತು. ಇನ್ನುಗೆ ರಾಜಕೀಯ ಮತ್ತು ಧಾರ್ಮಿಕ ವಿಷಯಗಳಲ್ಲಿ ಹಿಂದೂ ಜನರಿಗಿಂತ ಹೆಚ್ಚು ಹಕ್ಕುಗಳು ಬೇಕೆಂದು ಮುಸಲಮಾನರು ಈ ತರದ ಕೇಡಿನ ಕೃತಿಗೇಡಿತನವನ್ನು ಹಿಡಿದಿದ್ದಾರೆ."

ಕೈದಿಯು ಜೇಲದ ನಾಲಿಗೆ ಕೊಯ್ದನು.

—o—

ಕಾಶಿಯ ತುರಂಗದಲ್ಲಿ ಅಬ್ದುಲಜಾನನೆಂಬ ಮುಸಲಮಾನ ಕೈದಿಯು ಚಾಕೂಯಿಂದ ಸೂರಜಬಾಲಿ ಎಂಬ ಹೆಸರಿನ ಜೇಲರನ ನಾಲಿಗೆ ಕತ್ತರಿಸಿದನು, ಭಯಂಕರ ಘಾಯಪಡಿಸಿದನು ಜೇಲರನ ಸ್ಥಿತಿಯು ಎಷ್ಟು ಹಂಚಿಕೆ ಒಳಗೆ ಹೊಕ್ಕು ನಾಲಿಗೆಯು ಕೊಯ್ದು ಹಲ್ಲಿದಂತಾಗಿದೆ, ಜೇಲರನ್ನು ಮಾತಾಡುವದೇ ಕಷ್ಟವಾಗಿದೆ.

ಮೂವರಿಗೆ ಗಲ್ಲು, ಉಳಿದವರಿಗೆ ಕರಿಯ ನೀರು.

—o—

ಕಲಕತ್ತೆಯ ಹತ್ತಿರಿರುವ ಅಲೀಪೂರದ ತುರಂಗದಲ್ಲಿ ಗುಪ್ತ ಪೋಲೀಸ ಖಾತೆಯ ಸುಪರಿಂಟೆಂಡಂಟರನ್ನು ಕೊಂದ ಆರೋಪದ ದೆಸೆಯಿಂದ ಸ್ಪೇಶಲ ಜಡ್ಜರು ಮೂವರಿಗೆ ಗಲ್ಲಿನ ಶಿಕ್ಷೆ ವಿಧಿಸಿ, ಉಳಿದವರಿಗೆ ಆಜನ್ಮ ಕರಿಯ ನೀರಿನ ಶಿಕ್ಷೆ ಅನುಭವಿಸಬೇಕೆಂದು ತೀರ್ಪು ಹೇಳಿದ್ದಾರೆ.

ಕಲಕತ್ತೆಯ ತುಂಬ ಝಡತಿಯು—

ಮೇಲಿನ ಶಿಕ್ಷೆ ಹೊಂದಿದವರಿಗೆ ಸಂಬಂಧಿಸಲ್ಪಟ್ಟವರೆಂದು ಪೋಲೀಸರು ಕಲಕತ್ತೆ ಮತ್ತು ಬೇರೆ ಪಟ್ಟಣಗಳಲ್ಲಿ ಏಕ ಕಾಲದಲ್ಲಿ ಝಡತಿಯನ್ನು ಮಾಡಿ, ಅನೇಕ ಪುಸ್ತಕಗಳನ್ನು ಜಪ್ತ ಮಾಡಿದರು ಪೋಲೀಸರ ಮುಖ್ಯ ಕಟಾಕ್ಷವು ತರುಣ ಸಮಿತಿಯ ಮೇಲಿತ್ತು.

ಕಲಿಕ್ಟರ ಪರೀಕ್ಷೆಯ ವಿದ್ಯಾರ್ಥಿಯ ದಸ್ತಗಿರಿಯು-

ಮೇಲಿನ ಝಡತಿ ಮತ್ತು ಸಂಬಂಧದಿಂದ ಸಧ್ಯ ಮೂವರನ್ನು ದಸ್ತಗಿರ ಮಾಡಿದ್ದಾರೆ. ಒಬ್ಬನು ಆಯ್ ಸಿ. ಎಸ ಪರೀಕ್ಷೆಗೆ ಕೂಡತಕ್ಕಂಥ ಪರಿಮಳ ಚಂದ್ರ ಸೇನನೆಂಬವನಿದ್ದಾನೆ. ಉಳಿದ ಇಬ್ಬರು ಬಂಗಾಲದ ಗುಪ್ತ ಪೋಲೀಸ ಖಾತೆಯಲ್ಲಿ ಇನ್ಸಪೇಕ್ಟರರಾಗಿದ್ದವರ ಸಂಬಂಧಿಕರಾಗಿದ್ದಾರೆ.

ಮ್ಯುನಿಸಿಪಾಲಿಟಿಯಲ್ಲಿ ಠರಾವುಗಳು-

ಕಲಕತ್ತೆಯ ಮ್ಯುನಿಸಿಪಾಲಿಟಿಯಲ್ಲಿ ಮೂರು ಮಹತ್ವದ ಠರಾವುಗಳು ಬಂದಿವೆ ಮುಸಲಮಾನರು ಹಿಂದೂ ಜನರ ಮೇಲೆ ಭಯಂಕರವಾಗಿ ಕೋಪಿಸಿದ್ದರೂ, ದಬ್ಬಾಳಿಕೆಯಿಂದ ದಸ್ತಗಿರ ಮಾಡಿದಂಥವರನ್ನು ಸರಕಾರವು ಒಂದೇ ಸಮನೆ ಬಿಡಬೇಕೆಂಬ ಠರಾವನ್ನು ಒಬ್ಬ ಮುಸಲಮಾನ ಮೆಂಬರರೇ ತಂದರು. ಮ್ಯುನಿಸಿಪಾಲಿಟಿಯ ಡೆಪ್ಯುಟಿ ಚೀಫ ಆಫೀಸರಾದ ಮಿ. ಶ್ರೀ ಗಂಗಾಧರರೆಂಬವರು ಮ್ಯುನಿಸಿಪಾಲಿಟಿಯ ಮೆಂಬರರ ಕೃತ್ಯಗಳನ್ನು ದೂಷಿಸಿದಂಥ ವಿಚಾರ ಕಮೀಟಿಯ ಸಭೆಯಲ್ಲಿ ಭಾಗ ತೆಗೆದುಕೊಂಡ ಬಗ್ಗೆ ಎರಡನೆಯ ಠರಾವು ಇರುವದು. ಮೂರನೆಯ ಠರಾವು ಮ್ಯುನಿಸಿಪಲ ಕಾಮದಾರರು ರಾಜಕೀಯ ಮತ್ತು ಧಾರ್ಮಿಕ ಕಲಹಗಳ ಪ್ರಕರಣಗಳಲ್ಲಿ ಭಾಗ ತಕ್ಕೊಳ್ಳಬಾರದೆಂದಿರುತ್ತದೆ.

ಮಥುರೆಯ ಮ್ಯುನಿಸಿಪಾಲಿಟಿಯಲ್ಲಿ ಗವ್ಹರ್ನರ ಸಾಹೇಬರಿಗೆ ಮಾನಪತ್ರ ಕೊಡುವ ವಿಷಯ ಹೊರಟಿತು. ಸ್ವರಾಜ್ಯ ಪಕ್ಷೀಯರು ಆವೂಟಿಗೆ ಹೋಗದ್ದರಿಂದ ಕೋರಮ ಆಗಲಿಲ್ಲ. ಆದರೂ ಮ್ಯುನಿಸಿಪಾಲಿಟಿಯವರು ಮಾನಪತ್ರ ಕೊಡಬೇಕೆಂಬ ಠರಾವು ಪಾಸ ಮಾಡಿದರು.

ಮಳೆಯ ಅಹವಾಲು.

ಹಿಂದುಸ್ಥಾನದಲ್ಲಿ ಪ್ರತಿಯೊಂದು ತಾಲೂಕಿನಲ್ಲಿ ಮಳೆ ಅಳೆಯುವ ಯಂತ್ರಗಳುಂಟು. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಅನೇಕವಾಗಿರುವವು. ಸರಕಾರದ ಮಳೆಗಾಳಿ ಖಾತೆಯವರು ಹಿಂದುಸ್ಥಾನದ ತುಂಬ ೫೦ ಮುಖ್ಯ ಸ್ಥಳಗಳನ್ನು ಮಾಡಿದ್ದಾರೆ. ಇವುಗಳಲ್ಲಾದ ಮಳೆಯ ಅಹವಾಲನ್ನು ದಿನಾಲು ತಾರಿನಿಂದ ಪ್ರಸಿದ್ಧ ಮಾಡುವರು. ಮ್ಯಾಗ ಹೋಗಿ ಆರಿದ್ರಾ ಬಂತು. ಆದರೂ ಎಲ್ಲಿಯೂ ಮಳೆಯಿಲ್ಲೆಂದು ಈ ಅಹವಾಲಿನಿಂದ ಕಂಡು ಬರುತ್ತದೆ. ವಾಚಕರಿಗಾಗಿ ಕೆಲವು ಊರುಗಳ ಹೆಸರು ಮುಂದೆ ಕೊಟ್ಟಿರುತ್ತೇವೆ ಈ ತಾರೀಖಿಗೆ ಇವತ್ತಿನ ತನಕ ಎಷ್ಟು ಮಳೆಯಾಯಿತು. ಅದು ವರ್ಷದ ಸರಾಸರಿ ಮಾನದಿಂದ ಎಷ್ಟು ಕಡಿಮೆ ಆಗಿರುತ್ತದೆಂಬುದು ಋಣಾ ಚಿನ್ಹದಿಂದ ತಿಳಿದು ಬರುವದು.

ಊರು	ಮಳೆ	ಕಡಿಮೆ
ಸುರತ-	೦	-೨
ಅಹಮದಾಬಾದ-	೦	-೬
ಮುಂಬಯಿ-	೪	-೯
ರತ್ನಾಗಿರಿ-	೧೪	-೪
ಗೋವೆ-	೧೯	-೪
ಕಾರವಾರ-	೨೫-	-೬
ಪುಣೆ-	೧-	-೬
ಸೊಲ್ಲಾಪುರ-	೬-	-೧
ವಿಜಾಪುರ-	೧-	-೬
ಬೆಳಗಾವಿ-	೬-	-೪
ಹೈದರಾಬಾದ(ನಿಜಾಮ)	೧	-೬
ಮಂಗಳೂರ-	೩೬	-೫
ಕಾಲಿಕತ್ತ	೧೯	-೭
ಕೊಚಿನ-	೩೪	-೪
ಕೊಲೊಂಬೋ	೧೦	-೬
ಬೆಂಗಳೂರ-	೦	೬

ಕೆಂಕಣಾಸ್ಥ ಮತ್ತು ಕರ್ಹಾಡೆ ಲಗ್ನ-

ಮುಂಬಯಿಯಲ್ಲಿ ಬೇವಾಳ ಸಂಸ್ಥಾನದ ದಿವಾನರಾದ ಮಿ. ಭಾವೆಕರ ಇವರ ಚಿರಂಜೀವನ ವಿವಾಹವು ನಾಗಪೂರ ಸೆಂಟ್ರಲ ಪೋಲೀಸ ಸುಪರಿಂಟೆಂಡಂಟರಾದ ಕ್ಯಾಪ್ಟನ ಬಡೆರ ಇವರ ಕುಮಾರಿಯೊಡನೆ ಬಹು ಸಡಗರದಿಂದ ಗಿ ಕೆಂಕಣಸ್ಥ ಮತ್ತು ಕರ್ಹಾಡದಲ್ಲಿ ನವೀನ ಸಂಬಂಧದ ರೂಢಿ ಹಾಕಲ್ಪಟ್ಟಿತು.

ನೋಟೀಸು

ರಾಣೇಬಿನ್ನೂರ ತಾಲ್ಕಾ ಬ್ಯಾಡಗಿಯಲ್ಲಿ ಇರುವ ಬೀಮಾಚಾರ್ಯ ನಾರಾಯಣಾಚಾರ್ಯ ವೈಜಬಾಳಕರ ಇಂಗ್ಲಿಷ ಸಾಲಿ ಹೆಡ್ಡ ಮಾಸ್ತರ ಇವರಿಗೆ—

ಕೆಳಗೆ ಸಹಿ ಮಾಡಿದವರ ಕಡಿಯಿಂದಾ ನೋಟೀಸ ಕೊಡುವದೇನಂದರೆ- ನಾಳ್ವಿಕಟ್ಟಿ ಗ್ರಾಮದ ದೇವಸ್ಥಾನ [illegible] ಸರ್ವೆ ನಂ [illegible] ಇದನ್ನು ನಾನು [illegible] ದಿವಸದಲಾಗಾಯತು ಮಧ್ವಾಚಾರ್ಯ ಇವರ ಕಡಿಯಿಂದಾ ವಹಿವಾಟ ಮಾಡುತ್ತಾ ಬಂದಿದ್ದು ಈಗ ನೀವು ಅಜಮಾಸ ಒಂದು ತಿಂಗಳ ಹಿಂದೆ ನಮ್ಮ ಗ್ರಾಮಕ್ಕೆ ಬಂದು ನನಗೆ ಲಾವಣಿ ಚೀಟಿ ಬರಕೊಡರಿ ಅಂತಾ ಕೇಳಿದರಿ ಅದಕ್ಕೆ ನಾನು ನಾಲೊ ನಾಲ ಅವರಿಗೆ ಲಾವಣಿಚೀಟಿ ಬರಕೊಡತಕ್ಕ [illegible]ವಿದ್ದೇನೆ ಈಗ ನಿಮ್ಮ ಹೆಸರಿನ ಬರಕೊಡಲಿಕ್ಕೆ [illegible]ಡಿಲ್ಲಾ ಅಂತಾ ಹೇಳಿದ್ದಕ್ಕ ಅವರೂ ನ [illegible] ನನ್ನ ಹೆಸರಿನ [illegible] [illegible]ಕಿದ್ದಾರೆ. ನೀವು ಅನವಾಹ [illegible] [illegible] ಬಹುಕಾಲ ನಮ್ಮ ಆದರೆ, ಅವರಿ [illegible] ಕ್ಕ್ಯ ಆದರೆ ಲಾವಣಿ ಚೀಟಿ ಪರ [illegible] ಅಂತಾ ವಗೈರೆ ಭಿಂತಿಪ ಕೊಟ್ಟು [illegible] ಡು ಹೋದಿರಿ ಈಗ ಮಧ್ವಾಚಾರ್ಯ[illegible] ನಮ್ಮ ಹೆಸರಿನ ಬರಕೊಡು ಅವರಿಗೆ ಬರಿತಿಕೊಂಡು ಬರಲಿಕ್ಕೆ ನಾನೇನು ಹೇಳಿಲ್ಲಾ ಅಂತಾರೆ ಕಾರಣಾ ಈ ನೋಟೀಸಿನಿಂದಾ ನಿಮಗೆ ತಿಳಿಸುವದೇನಂದರೆ- ನೋಟೀಸ ಮುಟ್ಟಿದ ಎಂಟು ದಿವಸದಲ್ಲಿ ನೀವು ಪರತ ಕೊಡತಕ್ಕದ್ದು ಅಂತಾ ಹೇಳಿದ ಪ್ರಕಾರಾ ನಾನು ಬರಕೊಟ್ಟ ಲಾವಣಿ ಚೀಟಿ ಪರತ ನನಗೆ ಕೊಡಬೇಕು ಜರ ತಪ್ಪಿದರೆ ಸದರ ಲಾವಣಿ ಚೀಟಿಯನ್ನು ರದ್ದ ಮಾಡಿರುತ್ತೇನೆ ಮುಂದೆ ಯಾವ ಪ್ರಕಾರಾ ಇಲಾಜ ಮಾಡಿಬೇಕಾಗ್ಯು ನಡಿಯಲಿಕ್ಕಿಲ್ಲಾ ತಿಳಿಯಿರಿ. ಈ ನೋಟೀಸಿನ ಖರ್ಚು ನಿಮ್ಮ ತಲಿ ಮೇಲೆ ಅದೆ ತಾ. [illegible] ಇಸ್ವಿ.

ಸಹಿ [illegible] ಸ್ವಾಮಿರಾವ [illegible]

ಸಹಿ ಹಡಲಕ್ತರು
[illegible]ಪ್ಪಿ ಪೈಕಿ ಇನ್ನಾ
[illegible]ಡಿದವರ ಕಡಿಯಿಂ[illegible]
[illegible]ವದು ಏನಂದರೆ
[illegible] ನನ್ನ ಲಗ್ನ
ಆಗಿ ಈಗ ಅಜಮಾಸು ಹದಿನೈದು ([illegible]) ವರ್ಷ
ಆಯಿತು ನನ್ನ ಲಗ್ನ ಆದ ಮ್ಯಾಲೆ ನೀನು ನನ್ನ ಕೂ[illegible]

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲೇಕೆ? ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ? ತಲೆನೊವೋ? ಹಲ್ಲುಬೇನೆಯೋ? ಮಯ್ಯಲ್ಲಿ ನೋಯುತ್ತದೆಯೋ? ಆಗಿರುವದಾದರೂ ಏನು?

ಅಜ್ಜನು— ಕಂದಾ— ಹೌದು. ಮಯ್ಯೆಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊನ್ನೆ [illegible] ತರಿಸೋಣ. ಒಂದೇ ಕ್ಷಣದಲ್ಲಿ [illegible] ಎಲ್ಲ ನೋವುಗಳ ಪರಿಹಾರವಾಗಿ ಮಾತಾಡುವಿ ಮತ್ತು ಕೂಡ್ರುವಿ [illegible] ತುಸು. ಎರಡೇ [illegible].

ನಮ್ಮಲ್ಲಿ ಬೇಕಾದ ಡಾಕ್ಟರರ [illegible] ಔಷಧವನ್ನು [illegible] ಗುವೆವು.

ವಿಳಾಸ— ಕನಕಾದಿತ್ಯ ಮೆಡಿಕಲ ಸ್ಟೋರ್ಸ, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನರೋಡ ಹುಬ್ಬಳ್ಳಿ

[illegible]ರ [illegible] ರೀತಿಯಿಂದಾ ನಾಲ್ಕೈದು ವರ್ಷ ಬಂ[illegible] ಪಾಡಿದಿ ನನ್ನ ಕೂಟ್ಟಿಲೆ ನಂದು [illegible] [illegible] ಮೇಲೆ ನೀನು ದಿಂಡಿನ [illegible] ತಿರದೆ, ಒಡಿ ಮಾತು ಕೇಳಿ ನನ್ನ [illegible] [illegible] ನು ನನಗ ಹೊಡೆಯುವದು [illegible] [illegible] ಹತ್ತಿದಿ ನಾನು ಹೋದರೆ [illegible] ಆದರೂ, ನಿನ್ನ ಕೂಡಾ ಬಾಳೆವು ಮಾಡಬೇಕು ಅಂತಾ ಇದ್ದರು ನೀನು ಕೆಟ್ಟ ಜನರ ಸಂಗ ಎಲೆ [illegible] ನ [illegible] ಆಡುವದು ಮತ್ತು ಅವರ ಕೂಡ [illegible] ಮಾಡುವದು ತರ ತಿಂದ ಕುಡದು ಮನಿಗೆ ಬಂದು ನನಗೆ ಹೊಡದು ನನ್ನ ಮೈಮೇಲೆ ಇದ್ದ ದಾಗೀನೆ ಅಂದರೆ ಬೆಳ್ಳಿ ಅಸಲಿ ಒಂದು ಜಿಕ್ಕಿ [illegible] ಎರಡು ಬೆಳ್ಳಿ ನಡವಿನಪಟ್ಟಿ ಒಂದು ಕಡೇದ [illegible] ಒಂದು ಬೆಳ್ಳಿ ಕೋಡೆದ ಜೋಡು ಒಂದು ಈ ಪ್ರಕಾರ ದಾಗೀನೆ ಕಸಕೊಂಡು ಒಂದು ಹರಕ ಸೀರಿ ಪಡಕಿಯಿಂದಾ ನನಗೆ ನನ್ನ ಕೂಸಿಗೆ ಮುಚ್ಚಿಬಿಟ್ಟು ಹೊರಗೆ ಹೊರಗೆ ಹಾಕಿದಿ ನಾನು ನಿನ್ನ ಮನಿ ಬಿಡಬಾರದು ಅಂತಾ ಸಂಭಾವಿತ ಪಂಚ ಜನರಿಗೆ ಕೂಡಿಸಿ ನಿನಗೆ ಎಷ್ಟು ಸಾರೆ ಬುದ್ಧಿ ವಗೈರೆ ಹೇಳಿಸಿದರು ನಿನಗೆ ಬುದ್ಧಿ ಬರಲಿಲ್ಲಾ ನಾನು ನನ್ನ ತವರ ಮನೀಗೆ ಬಂದೆ ನನ್ನ ತವರ ಮನಿಯವರು ಆಗದಿ ಬಡವರು ಇದ್ದು ನನಗೆ ನನ್ನ ಕೂಸಿಗೆ ಹಿಡಿಯುವದು ಆಗಲಿಲ್ಲಾ ನಾನು ಬೇರೆ ಒಬ್ಬರ ಮನಿಯಲ್ಲಿ ಇರಲಿಕ್ಕೆ ಹತ್ತಿ ಈಗ ಅಜಮಾಸು ಹತ್ತು ವರ್ಷ ಆಗುತ್ತ ಬಂತು ನನ್ನ ಮಗಳು ದೊಡ್ಡ ಆಗಿ ಸತ್ತ ಕೂಡಲೆ ನಿನಗೆ ತಿಳಿಸಿದೆ ನೀನು ನಿನ್ನ ದಂಡಿ ನಾಕು ಕೇಳಿ ನನ್ನ ಮಗಳ ವಸ್ತಿಗೆ ನೀನು ಬರಲಿಲ್ಲಾ ಓಣಿ ಜನರು ನನ್ನ ಮಗಳಿಗೆ ವಸ್ತ್ರ ಕೊಟ್ಟರು ಹೀಗೆ ಇದ್ದು ನಾನು ಗೋಳಿದವಳು ಇದ್ದದರಿಂದಾ ನಿನ್ನ ಹೆಸರಿನ ಮೇಲೆ ನಾನು ಸಾವಕಾರ ಕಡಿಗೆ ಮುನ್ನೂರು ([illegible]) ರೂಪಾಯಿ ಸಾಲಾ ಮಾಡಿ ನನ್ನ ಹೊಟ್ಟಿ ಉಪಜೀವನ ಮಾಡಿ[illegible]ಕೊಂಡಿದ್ದೇನೆ ಈಗ ಸಾಲಾ ಕೊಟ್ಟ ಸಾವಕಾರ [illegible] ನನಗೆ ಬಹಳೇ ತಗಾದಿ ಆಗಿರುತ್ತ[illegible] [illegible]ಂದೆ [illegible]ರೂ ನನಗೆ ಯಾರೂ ಸಾಲಾ ಕೊಡುವದಿಲ್ಲ [illegible] ನಿನಗೆ ನಾನು ಕಾಯದೆ ಶಿರ ನೋಟೀಸ ಕೊಡುವ ಪ್ರಸಂಗಬಿತ್ತು ಈ ನೋಟೀಸ [illegible] ಮುಟ್ಟಿದ ಏಳು ದಿವಸದಲ್ಲಿ ಬಂದು ನಾನು ಮಾಡಿದ ಸಾಲಾ ಪೇಡ ಮಾಡಿ ನನ್ನ ಜೀವಕ್ಕೆ ಯೋಗ್ಯ ಜಾಮೀನ ಕೊಟ್ಟು ನನ್ನ ಮೈಮೇಲೆ ದಾ[illegible] ಟ್ಟು ಕರಕೊಂಡು ಹೋಗಿ ಬಾಳೆವು ಮಾಡಬೇಕು ಇದಕ್ಕೆ ನೀನು ತಪ್ಪಿದರೆ ನಾನು ನಿನ್ನ ಹುಜೂರ ಇನ್ನೊಬ್ಬ ಗಂಡನ ವೃಡಕಿ ಮಾಡಿಕೊಂಡು ಹೋಗಿ ನಾನು ಮಾಡಿದ ಸಾಲಾ ಪೇಡ [illegible]ತ್ತೇನೆ ಆ ಮೇಲೆ ನಿನ್ನದು ಯಾವ ತರದ ಫಿರ್ಯಾದಿ ವ ಹಕ್ಕು ವಾಸ್ತು ನಡಿಯಲಾರದು ನನ್ನ ಮೇಲೆ ವ ಉಡ್ಡಿ ಗಂಡನ ಮೇಲೆ ಮತ್ತು ತಾಯಿ ಅಣ್ಣ ತಮ್ಮಂದರ ಮೇಲೆ ಸಹಿತಾ ನಡಿಯಲಾರದು. ನೀನು ಈ ನೋಟೀಸಿಗೆ ವಿರುದ್ಧ ನಡೆದರೆ ನಾನು ನಿನ್ನ ಮೇಲೆ ಫವಜದಾರಿ ಅಗರ ದಿವಾಣಿ ಕೋರ್ಟಿನಲ್ಲಿ ಕೆಲಸ ನಡಿಸೇನು ಇದೇ ಖಾರಿಜುಕತ್ತು ಅಂತಾ ನೀನು ತಿಳಿಬೇಕು ಈ ನೋಟೀಸಿನ ಖರ್ಚ ನಿನ್ನ ತಲೆ ಮೇಲೆ ಇರುತ್ತದೆ. ತಾ. [illegible] ಇಸ್ವಿ.

ಈ ಎಡಗೈ ಹೆಬ್ಬಟ್ಟಿನ ಗುರ್ತ ಅಜು[illegible] ಕೋಂ ಮಹಬೂಬಸಾ ಕಾಲಸವುವಾಲೆ ಸಾ. ಹುಬ್ಬಳ್ಳಿ ಈಕಿ ಕೈದು ಅದೆ.

ಈ ಪತ್ರವನ್ನು ಅನ್ನಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

R N B. 1443

ವಿಜಯ

ನಿತ್ಯ ಪತ್ರ ಬೆಲೆ ಅರ್ಧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭ ಧಾರವಾಡ ಮಂಗಳವಾರ ತಾರೀಖು ೨೫ ನೇ ಜೂನ ೧೯೨೯ (ಸಂಚಿಕೆ ೧೪೪

ಸರಕಾರದಿಂದ ಪೇಟಂಟ ದೊರಕಿದ



ಮಲ್ಹಾರ ಕಪ್ಪಲಿ.

ತೋಟಿಗರಿಗೆ ಅತಿಶಯ ಉಪಯೋಗವುಳ್ಳದ್ದಿರುತ್ತದೆ.

ಇದು ಉಕ್ಕಿನ ತಗಡಿನಿಂದ ಮಾಡಲ್ಪಟ್ಟಿರುವದು. ಕಪ್ಪಲಿಯು ನೀರನ್ನು ಮುಟ್ಟುತ್ತಲೇ ಅದರ ಕೆಳಭಾಗದಲ್ಲಿಯ ದಾಳಿಗೆಯಿಂದ ನೀರು ಒಳ ಸೇರುವದು. ಕಪ್ಪಲಿಯು ಜಗ್ಗಲ್ಪಡುತ್ತಲೇ ದಾಳಿಗೆಯ ಪರದೆಯು ನೀರಿನ ಭಾರದಿಂದ ಗಟ್ಟಿಯಾಗಿ ಮುಚ್ಚಲ್ಪಟ್ಟು ಒಂದು ಹನಿ ಸಹ ನೀರನ್ನು ಹೊರ ಚಲ್ಲ ಕೊಡುವದಿಲ್ಲ.

ಎರಡು ಪ್ರಕಾರಗಳಿದ್ದಿರುವವು.

ನಂ ೧	೩೫ ಗ್ಯಾಲನ್.	ಬೆಲೆ	೨೦ ರೂ.
ನಂ ೨	೫೫ ,,	,,	೨೪ ರೂ.

ಕಿರ್ಲೋಸ್ಕರಬಂಧು ಲಿಮಿಟೆಡ್ | ಕಿರ್ಲೋಸ್ಕರವಾಡಿ ಜಿಲ್ಲಾ, ಸಾತಾರಾ

ದಿ ಧಾರವಾಡ ಬ್ಯಾಂಕ ಲಿಮಿಟೆಡ್

ಧಾರವಾಡ.

—o—

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಠೇವಾಣಿ ಇಟ್ಟುಕೊಳ್ಳಲಾಗುವದು. ಬಡ್ಡಿಯನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಒತ್ತೀ ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಹನ್ನೆರಡು ಆಣೆಯಂತಿರುತ್ತದೆ.

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ

ಮಂಗಳವಾರ ಪೇಟ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಬಂಡಿಗೆಯು ಆರು ಲಕ್ಷದ ಮೇಲುಂಟು. ಚೆಕ ಹುಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರವು ನಡೆಯುತ್ತಿರುವದು. ಠೇವಿ ಮತ್ತು ಚಾಲು ಖಾತೆಯ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರಿಯುವದು.

ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆ ತಿಳಕೊಳ್ಳಬೇಕು.

ಮಧ್ವರಾವ ಬಿ. ದಳವಾಯಿ,
ಮ್ಯಾನೇಜಿಂಗ ಡಾಯರೆಕ್ಟರ

ವಿಜಯ ಪುಸ್ತಕಾಲಯ.

—o—

೨೦ ನೇ ಶತಮಾನದ ಗೊಂದಲ	೧೦ ಆಣೆ
ವಿಚಿತ್ರ ಸಂಕಟ	೫ ,,
ಲೋ. ಟಿಳಕರ ಚರಿತ್ರ	೪ ,,
ದೇಶಬಂಧು ದಾಸರ ಚರಿತ್ರ	೨ ,,
ದೇಶಭಕ್ತರ ಸಂದೇಶಗಳು	೧ ,,

ಈ ಪುಸ್ತಕವನ್ನು ಒಟ್ಟಾಗಿ ಕೊಳ್ಳುವವರಿಗೆ ೧ ರೂಪಾಯಿಗೆ ಕೊಡುವೆವು. ವ್ಹಿ. ಪಿ. ಮತ್ತು ಟಪಾಲ ಖರ್ಚು ಬೇರೆ.

ಮ್ಯಾನೇಜರ ವಿಜಯ ಪುಸ್ತಕಾಲಯ
ಧಾರವಾಡ.

ನೋಟೀಸಿನ ದರಗಳು.

—o—

ಸಿಂಗಲ ಕಾಲಮಿನ ಹತ್ತು ಓಳಿಗಳಿಗೆ ೧ಂದು ರೂಪಾಯಿ ಮುಂದೆ ಪ್ರತಿಯೊಂದು ಓಳಿಗೆ ಒಂದುವರೆ ಆಣೆ ಇಂಗ್ಲಿಷ ಪ್ರತಿಯೊಂದು ಓಳಿಗೆ ಐದು ಆಣೆ ಇಂಗ್ಲಿಷದಿಂದ ಅವತರಿಸಿ ಕನ್ನಡದಲ್ಲಿ ಹಾಕುವದಿದ್ದರೆ ಆರು ಆಣೆ ಡಬಲ್ ಕಾಲಮಿನ ಓಳಿಗಳಿಗೆ ಇಮ್ಮಡಿ ಚಾರ್ಜು ಕಾಯಂ ಜಾಹೀರಾತುಗಳನ್ನು ಕೊಡುವವರು ಕೆಳಗಿನ ಪತ್ತೆಕ್ಕೆ ಪತ್ರವ್ಯವಹಾರ ಮಾಡಬಹುದು.

ಮ್ಯಾನೇಜರ ವಿಜಯ ಧಾರವಾಡ

ವಿಜಯದ ವರ್ಗಣೀ ದರ

—o—

ನಿತ್ಯಪತ್ರಕ್ಕೆ

೧೨	ತಿಂಗಳಿಗೆ	೧೨—೮—೦ ರೂ
೬	,,	೭—೦—೦ ರೂ
೩	,,	೪—೦—೦ ರೂ
ವಾರಪತ್ರಕ್ಕೆ	೧ ವರ್ಷಕ್ಕೆ	೩—೧೨—೦ ರೂ

ವಿಶೇಷ ಮಾಹಿತಿ ಕೆಳಗಿನ ವಿಳಾಸಕ್ಕೆ

ಮ್ಯಾನೇಜರ ವಿಜಯ, ಧಾರವಾಡ

ವಿಜಯ.

ಧಾರವಾಡ ತಾ- ೨೫ ೬-೨೭ ನೇ ಇಸ್ವಿ

ಸಾತಾರಿಯಲ್ಲಿ ಕೂಡಿದ್ದ ಇನಾಮದಾರರ ಪರಿಷತ್ತು.

ಈ ಮೊದಲು ಪ್ರಸಿದ್ಧವಾದಂತೆ ಸಾತಾರಿಯಲ್ಲಿ ಇನಾಮದಾರರ ಪರಿಷತ್ತು ಕೂಡಿತ್ತು. ಅಸೆಂಬ್ಲಿಯ ಮೆಂಬರರಾದ ಸರದಾರ ಮುತಾಲೀಕ ದೇಸಾಯಿಯವರು ಪರಿಷತ್ತಿನ ಮುಖ್ಯ ಪ್ರವರ್ತಕರಾಗಿದ್ದರು. ಪರಿಷತ್ತಿಗಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತದ ಪ್ರಮುಖ ಇನಾಮದಾರರು ದಯಮಾಡಿಸಿದ್ದರು. ಧಾರವಾಡದಿಂದ ಹುಬ್ಬಳ್ಳಿಯ ಜಹಾಗೀರದಾರರೂ, ಶ್ರೀ. ಹನಮಂತರಾವ ದೇಸಾಯಿಯವರೂ ಹೋಗಿದ್ದರು.

ಪರಿಷತ್ತಿನಲ್ಲಿ ಇನಾಮದಾರರ ಹಿತದ ಪ್ರಶ್ನೆಗಳೇ ಮುಖ್ಯವಾಗಿ ಚರ್ಚಿಸಲ್ಪಟ್ಟವು. ಇನಾಮದಾರರು ಸರಕಾರದ ಏಕನಿಷ್ಠ ಸೇವಕರೆಂದು ತಿಳಿಸಲ್ಪಟ್ಟರೂ, ಪ್ರಸ್ತುತದ ರಾಜಕೀಯ ಪರಿಸ್ಥಿತಿಯನ್ನು ಕುರಿತು, ತಮ್ಮ ಅಭಿಪ್ರಾಯ ಹೇಳಲು ಹಿಂಜರಿಯಲಿಲ್ಲ.

ಸರಕಾರದವರು ಒಂದು ಕಂದ ಕಮೀಟಿ ಕೂಡಿಸಿದ್ದಾರಷ್ಟೇ; ಆ ಕಮೀಟಿಯು ರಿಪೋರ್ಟಿನ ಪ್ರಕಾರ ಭೂಮಿಯ ಹುಟ್ಟುವಳಿಯ ಮೇಲೂ ಕರ ಕೂಡಬೇಕೆಂಬ ವಿಚಾರ ನಡೆದಿದೆ. ಇದು ಶುದ್ಧ ಅನ್ಯಾಯವೆಂದು ಸಭೆಯಲ್ಲಿ ಹೇಳಲ್ಪಟ್ಟಿತು. ಸರಕಾರದವರು ಇನಾಮದಾರರ ಗ್ರಾಮಗಳಲ್ಲಿ ಸನದಿಯ ಕಲಮುಗಳನ್ನು ಬಿಟ್ಟು ಅನೇಕ ವರ್ತನೆಗಳಿರುವವು. ಆದರೆ ಇನಾಮದಾರರು ಇದಕ್ಕೆ ಒಪ್ಪುವದಿಲ್ಲ. ಇನಾಮದಾರರ ಗ್ರಾಮಗಳಲ್ಲಿ ಭೂಮಿಯನ್ನು ಅಳೆಯಬಾರದೆಂದು ಪರಿಷತ್ತಿನಲ್ಲಿ [illegible] ಠರಾವು ಪಾಸಾದಿದೆ.

ಮುಂಬಯಿ, ಬಂಗಾಲ ಮುಂತಾದ ಪ್ರಾಂತಗಳಲ್ಲಿ ಅವರವರು ಇನಾಮದಾರರನ್ನು ಹೆಚ್ಚು ಆದರದಿಂದ ಸರಕಾರದಿಂದ ನಡೆಸಿಕೊಳ್ಳುವರು. [illegible] ಅವರ ಬಗ್ಗೆ ಉದಾಸೀನತೆ ಇರುವದು. ಈ ಸ್ಥಿತಿಯನ್ನು ಬಿಟ್ಟು, ಇನಾಮದಾರರ ಕಡೆ ಲಕ್ಷ್ಯ ಆದರದಿಂದ ನಡೆಸು[illegible] ಚರ್ಚಿಸಲ್ಪಟ್ಟಿತು.

ರಾಜಕೀಯ ಪರಿಸ್ಥಿತ್ಯನುರೂಪವಾಗಿ ಇನಾಮದಾರರು ತಮ್ಮ ಗ್ರಾಮಗಳಲ್ಲಿ ಸುಧಾರಣೆ ಮಾಡಬೇಕು. ರೈತರ ಯೋಗಕ್ಷೇಮವನ್ನು ನೋಡಿಕೊಳ್ಳಬೇಕು. ಮತ್ತು ದುಂದುಗಾರಿಕೆಯಿಂದ ನಡೆಯದೆ, ಹಾಸಿಗೆ ಇದ್ದಷ್ಟು ಕಾಲುಚಾಚಿ, ಸುಖಜೀವಿಗಳಾಗಬೇಕೆಂದು ಸರದಾರ ಮುತಾಲಿಕ ದೇಸಾಯರು ತಮ್ಮ ಭಾಷಣದಲ್ಲಿ ಉದ್ಗಾರ ತೆಗೆದಿದ್ದಾರೆ.

ಸರದಾರ ನಾನಾಸಾಹೇಬರೆಂಬವರು ಸ್ವಾಗತ ಕಮಿಟಿಯ ಚೇರಮನ್ನರಾಗಿದ್ದರು. ಸಾತಾರಿಯ ಛತ್ರಪತಿ ಮತ್ತು ವಿಂಚೂರಿನ ಜಹಾಗೀರದಾರರಿಗೆ ದತ್ತಕ ತಕ್ಕೊಳ್ಳಲು ಅಪ್ಪಣೆ ಕೊಟ್ಟ ಬಗ್ಗೆ ಇವರು ತಮ್ಮ ಭಾಷಣದಲ್ಲಿ ಸರಕಾರದ ಆಭಾರ ಮನ್ನಿಸಿದ್ದಾರೆ. ೧೮೫೮ರ ನಂತರ ದತ್ತಕದ ಜಗಳದ ಮೂಲವೇ ಕಡಿದು, ದತ್ತಕದ ಸಂಪೂರ್ಣ ಸ್ವಾತಂತ್ರ್ಯವುಂಟು. ಅಂದಬಳಿಕ ಸರಕಾರದ ಉಪಕಾರವೇಕೆ ಸ್ಮರಿಸುವದೆಂಬದು ನಮಗೆ ತಿಳಿಯುವದಿಲ್ಲ.

ಕೇಸರರ ಕಷ್ಟಾರ್ಜಿತವು ಕೇಸರರಂತಾಯಿತು.

—೦—

ಕೇಸರರ ಆಸ್ತಿಯ ವಿಷಯವಾಗಿ ಮತಗಳನ್ನು ತಕ್ಕೊಳ್ಳುವ ಕೆಲಸ ತೀರಿತು. ಆಸ್ತಿಯು ಸರಕಾರಜಮೆಯಾಗಬೇಕೆನ್ನುವವಕ್ಕೆ ಸಾಕಷ್ಟು ಮತಗಳು ಬೀಳಲಿಲ್ಲ. ಒಂದೂವರೆ ಕೋಟಿ ಮತಗಳು ಬಿದ್ದು, ೪೦ ಲಕ್ಷ ಕಡಿಮೆಯಾದವು. ಲಕ್ಷಾವಧಿ ಜನರು ವೋಟು ಕೊಡಲಿಲ್ಲ. ನೂರಕ್ಕೆ ೩೫ ರಂತೆ ಆಸ್ತಿಯು ಜಪ್ತ ಮಾಡಬೇಕೆಂದು ವೋಟು ಕೊಟ್ಟರು. ೬೦ ರಷ್ಟು ಜನರು ವೋಟೇ ಕೊಡಲಿಲ್ಲ. ಉಳಿದ ೫ವರು ಇಲ್ಲವೆಂದರು ಅಥವಾ ವೋಟುಗಳು ರದ್ದಾದವೆಂದು ಗಣತಿಯಾಗಿದೆ. ಪ್ರಶ್ಯಾ ಪಟ್ಟಣವಾದ ಬರ್ಲಿನದಲ್ಲಿಯೂ ಜನರಲ ಹಿಂಡೆನಬರ್ಗರ ಜನ್ಮಭೂಮಿಯಾದ ಹ್ಯಾನೋವರ ಮತ್ತು ಬೇರೆ ಅನೇಕ ದೊಡ್ಡ ಪಟ್ಟಣಗಳಲ್ಲಿಯೂ ಸರಿಯರ್ಧ ಜನರು ಆಸ್ತಿಯನ್ನು ಜಪ್ತ ಮಾಡಬೇಕೆಂಬದಾಗಿ ವೋಟು ಕೊಟ್ಟರು. ವೋಟಿನ ವೇಳೆಯಲ್ಲಿ ಸರಕಾರ ಪಕ್ಷದವರು ಮತದಾರರಿಗೆ ಭಯ ಹಾಕಿ, ಪೀಡಿಸಿ ದಂಗೆಗೆ ಪ್ರವೃತ್ತವಾಗುವಂಥ ಆಭಾಟ ಮಾಡಿದ್ದರಿಂದ, ಬಹಳಜನರು ವೋಟು ಕೊಡಲಿಲ್ಲ. ಹೀಗೆ ವೋಟು ಕೊಡದಿದ್ದರಿಂದಾದ ಗಣತಿಯ ಬಗ್ಗೆ ರಾಷ್ಟ್ರೀಯ ಮತ್ತು ಬೋಲ್ಶೆವಿಕ ಪಕ್ಷದವರು ಪಾರ್ಲಮೆಂಟ ಸಭೆಯಲ್ಲಿ ಆಕ್ಷೇಪಣೆ ತಕ್ಕೊಳ್ಳುವರು. ಆದರೂ ಈ ವಿಷಯವಾದ ಬಿಲ್ಲು ಪಾಸಾಗಿ ಕೇಸರರ ಆಸ್ತಿಯು ಕೇಸರರಿಗೆ ಕೊಡಲ್ಪಡುವದೆಂದು ಬರ್ಲಿನದಿಂದ ಬಂದಂಥ ತಾರಿನ ವರ್ತಮಾನವಾಗಿರುತ್ತದೆ.

ಸಾಮ್ರಾಜ್ಯ ನಿಶಾನೆ, ರಾಷ್ಟ್ರೀಯ ನಿಶಾನೆ.

—೦—

ದಕ್ಷಿಣ ಆಫ್ರಿಕೆಯ ಸರಕಾರದವರು ಸ್ವದೇಶದ ದೆಸೆಯಿಂದ ಸ್ವಂತದ್ದೊಂದು ರಾಷ್ಟ್ರೀಯ ನಿಶಾನೆ ಇರಬೇಕೆಂದು ನಡೆಸಿದ ಚಳವಳಿಯನ್ನು ಇಂಗ್ಲಂಡದ ಇಂಗ್ರೇಜೀ ಪತ್ರಿಕಾಕಾರರು ಉಪಹಾಸ ಮಾಡಿದರು. ಆದರೆ ಅಲ್ಲಿ ಪ್ರಸ್ತುತದಲ್ಲಿ ಅಧಿಕಾರ ನಡೆಸುವ [illegible] ಕೂಲಿಕಾರರೂ ರಾಷ್ಟ್ರೀಯ ಪಕ್ಷದವರೂ ಗುಪ್ತವಾಗಿ ಸಭೆಗೂಡಿ, ಇಂಗ್ಲಿಷ ನಿಶಾನೆಯ ಯಾವದೊಂದು ಗುರುತು ಇಲ್ಲದೆ, ಸಂಪೂರ್ಣ ಸ್ವತಂತ್ರವಾದದ್ದೊಂದು ನಿಶಾನೆ ಇರಬೇಕೆಂದು ಠರಾವು ಮಾಡಿದ್ದಾರೆ. ಅಲ್ಲಿ ಡಚ್ಚರೂ, ಇಂಗ್ಲಿಷರೂ ದೊಡ್ಡ ಪ್ರಮಾಣದಿಂದ ವಾಸವಾಗಿದ್ದಾರಷ್ಟೇ; ಪ್ರಸ್ತುತದ ನಿಶಾನೆಯಲ್ಲಿ ಡಚ್ಚರ ಗುರುತೂ ಇರಬಾರದು; ಇಂಗ್ಲಿಷರ ಗುರುತೂ ಇರಬಾರದೆಂದು ಸ್ಪಷ್ಟಮಾಡಿಕೊಂಡಿದ್ದಾರೆ. ತಮ್ಮ ನಿಶಾನೆಯಾದರೂ, ಇಂಗ್ಲಿಷರ ಸಾಮ್ರಾಜ್ಯದ ನಿಶಾನೆಗೂ ಗೌರವ ಮಾಡಬೇಕೆಂದು ಅಭಿಪ್ರಾಯಪಟ್ಟಿದ್ದಾರೆ. ಪರಿಸ್ಥಾನದಲ್ಲಿ ಹೈದರಾಬಾದಿನ ನಿಜಾಮರ ನಿಶಾನೆಗೆ ಇರುವಂಥ ಗೌರವವೇ ಸರಿ. ಆಫ್ರಿಕಾ ಸರಕಾರದವರು ಮಾಡಿದ ಈ ಠರಾವಿನಿಂದ ಹಿಂದುಸ್ಥಾನಕ್ಕಾಗಿ ಕಾಂಗ್ರೆಸವು ಗೊತ್ತು ಮಾಡಿದಂಥ ನಿಶಾನೆಯು ಅವಶ್ಯವಾಗಿರಬೇಕೆಂದು ತಾನಾಗಿ ಸ್ಪಷ್ಟವಾಗಿ, ಈ ಬಗ್ಗೆ ಗೌರಕಾಯಸ್ಥರು ಅಸೂಯ ಅಥವಾ ಮತ್ಸರದಿಂದ ವಾದ ಬೆಳೆಸುವ ಕಾರಣವೇ ಉಳಿಯಲಿಲ್ಲೆಂಬದೊಂದು ಹಿಂದುಸ್ಥಾನಕ್ಕೆ ಲಾಭವು.

ಹಿಂದುಳಿದವರ ಕೌನ್ಸಿಲದೊಳಗಿನ ಪ್ರಶ್ನಗಳ ಚಮತ್ಕೃತಿಯು.

—೦—

ಗುಜರಾಥ ಸಂಚಾರವೆಂಬ ಹಾಸ್ಯರಸ ಪೂರ್ಣವಾದ ಸಾಪ್ತಾಹಿಕದ ರೌಪ್ಯ ಜುಬಿಲಿಯ ಸಂಚಿಕೆಯಲ್ಲಿ ರ್ಯಾಂಗಲರ ಪರಾಂಜಪೆಯವರು ಭವಿಷ್ಯೋತ್ತರ ಪುರಾಣದೊಳಗಿನ ಒಂದು ಅಧ್ಯಾಯವೆಂಬ ಲೇಖವನ್ನು ಪ್ರಸಿದ್ಧ ಮಾಡಿದ್ದಾರೆ. ಅದರ ಸ್ವಾರಸ್ಯದ ಭಾಗಗಳನ್ನು ಇನ್ನೊಂದು ಸಂಚಿಕೆಯಲ್ಲಿ ಕೊಡುವೆವು. ಇಂದು ಹಿಂದುಳಿದವರು ಕೌನ್ಸಿಲದಲ್ಲಿ ಕೇಳುವಂಥ ಪ್ರಶ್ನ ಮತ್ತು ಸರಕಾರದವರು ಕೊಡುವ ಉತ್ತರವನ್ನು ಕೊಡಬೇಕೆಂದಿರುತ್ತೇವೆ:—

ಮಿ. ಜನ್ನತ್ತಾ- ಈ ಸಾರೆ ಎಷ್ಟು ವಿ[illegible] ವಾರ್ಷಿಕ ಭಾಷೆಯಲ್ಲಿ ಮಾಂಗಗರುಡಿ (ಹೊಲೆಯರು) ಜನ ಪ್ರಮಾಣವು ಇಳಿದ್ದೆಂಬದು ಸರಕಾರಕ್ಕೆ ಗೊತ್ತುಂಟೋ?

ಉತ್ತರ— (ಶಿಕ್ಷಣ ಮಂತ್ರಿ ದಾದಾ ಸರಾಫ) ಮಾಂಗ ಗಾರುಡಿಗರಲ್ಲಿ ಒಬ್ಬನೂ ಪರೀಕ್ಷೆಗೆ ಕುಳಿತಿಲ್ಲ. ಅವರನ್ನು ಪಾಸ ಮಾಡುವದು ಹೇಗೆ?

ಬಿ. ಚನ್ನಪ್ಪಾ— ಈ ಜಾತಿಯ ಉಮೇದವಾರರು ಬರುವ ತನಕ ಸರಕಾರವು ಈ ಪರೀಕ್ಷೆಯನ್ನು ಮುಂದಿಡುವದೇನು? ಯುನಿವ್ಹರ್ಸಿಟಿಯು ಈ ಹುಕುಮನ್ನು ಅಮಾನ್ಯ ಮಾಡಿದರೆ ಸರಕಾರದ ಗ್ರ್ಯಾಂಟು ನಿಲ್ಲಿಸಲ್ಪಡುವದೆಂದು ಯುನಿವ್ಹರ್ಸಿಟಿಯ ಕಾಯಿದೆಯಲ್ಲಿ ದುರಸ್ತು ಮಾಡುವಿರೇನು?

ಉತ್ತರ— ಸರಕಾರವು ಈ ಸೂಚನೆಯನ್ನು ಅವಶ್ಯವಾಗಿ ಅನುಕೂಲವಾಗಿಯೇ ವಿಚಾರ ಮಾಡುವದು. (ಚಪ್ಪಾಳೆ)

ಪೋಲಂಡದಲ್ಲಿ ಸೇನಾಧಿಪತಿಯ ಕೊಲೆ.

—೦—

ಪೋಲಂಡದಲ್ಲಿ ಉಕ್ರೇನಿಯನ ಸೈನ್ಯದ ಉಗ್ರ ದಂಡನಾಯಕನಾಗಿದ್ದ ಅತಾಮನ ಆಸ್ಕಿಲಸ್ಕಿ ಎಂಬವನನ್ನು ಅವನ ಊರಲ್ಲಿ ಯಾವನೋ ಕೊಂದಿದ್ದಾನೆ. ಬೊಲ್ಸೆವಿಕ ಧೂರ್ತ ಚೇಷ್ಟೆ ಇರಬೇಕೆಂಬ ಸಂಶಯ ಬಂದಿದೆ. ಪೋಲಂಡ ಮತ್ತು ಉಕ್ರೇನ ದೇಶಗಳು ಒಂದು ಸಂಯುಕ್ತ ರಾಜ್ಯವಾಗಬೇಕೆಂದು ಈತನು ಪ್ರಯತ್ನ ಮಾಡುತ್ತಿದ್ದನು. ಇದೆಂದೂ ಬಂದಾಗದಂತೆ ಮೂಲ ಕಡಿಯಬೇಕೆಂದು ಈ ಕೊಲೆ ಆಗಿರುತ್ತದೆ.

ತುರ್ಕಸ್ಥಾನದಲ್ಲಿ ದೊಡ್ಡ ದೊಡ್ಡ ಡಿಪುಟಿಗಳ ದಸ್ತಗಿರಿಯು.

—೦—

ಕೇಮಾಲ ಪಾಶಾನನ್ನು ಕೊಲ್ಲಬೇಕೆಂದು ಮಾಡಿದ ಸಂಚು ಹೊರಬಿದ್ದ ಸಂಗತಿಯನ್ನು ಈ ಮೊದಲು ಪ್ರಸಿದ್ಧ ಮಾಡಿದ್ದೇವಷ್ಟೆ; ಈ ಸಂಚು ಬಹಳ ದೊಡ್ಡದಿದ್ದು, ಅಂಗೋರಾದ ಪಾರ್ಲಮೆಂಟಿನ ಪ್ರಮುಖರಾಗಿದ್ದಂಥವರೇ ೫೦ ಜನರಾಗಿದ್ದಾರೆ. ಇವರುಗೂಡಿ ಒಟ್ಟಿಗೆ ಈ ಪ್ರಕರಣದ ಇನ್ನೂ ಬಹುಜನರನ್ನು ದಸ್ತಗಿರ ಮಾಡಿದ್ದಾರೆ. ಕೇಮಾಲ ಪಾಶಾನವರು ಇವರಲ್ಲಿ ಕೆಲವರನ್ನು ಕಂಡು, "ನಿಜ ಸಂಗತಿ ಹೇಳಬೇಕೆಂದು ಕೇಳಿದರು. ದ್ಯುಕುರಬೆಯ್ಲ ನೆಂಬ ಡಿಪುಟಿಯು ಮೊದಲು ಒಪ್ಪದಿದ್ದರೂ, ಆ ಬಳಿಕ ಮನಸ್ಸಿಗೆ ತೃಪ್ತಿಯಾಗುವಂತೆ ನಿಜಸಂಗತಿಯನ್ನು ಒಪ್ಪಿಕೊಂಡನೆಂದು ಪ್ರಸಿದ್ಧವಾಗಿದೆ.

ವಿವಿಧ ವರ್ತಮಾನಗಳು

—೦—

ವಿದ್ಯಾಖಾತೆಯ ಮಂತ್ರಿಯಾದ ಮಿ. ಜಾಧವರಾಯರು ಇದೇ ತಿಂಗಳ ೨೮ ನೆಯ ತಾರೀಖಿನ ದಿವಸ ವಿಜಾಪುರಕ್ಕೆ ಬರುವರು.

ಮೈಸೂರಿನ ದಿವಾನರಾಗಿದ್ದ ಸರ ಬ್ಯಾನರಜಿಯವರು ಜಪಾನ ಅಮೇರಿಕೆಗಳಲ್ಲಿ ಸಂಚಾರ ಮಾಡಿಕೊಳ್ಳುತ್ತ ಪ್ರವಾಸ ಮಾಡುತ್ತಿರುವರು. ಈಗ ಸಿಂಗಾಪೂರದಲ್ಲಿದ್ದಾರೆ. ಇಂಗ್ಲಂಡದಲ್ಲಿ ಪಾರ್ಲಮೆಂಟಿನ ಚುನಾವಣೆಯಲ್ಲಿ ಮೆಂಬರರಾಗಬೇಕೆಂದು ಇವರ ಅಪೇಕ್ಷೆಯುಂಟು.

ಜಗತ್ಪ್ರಸಿದ್ಧ ಲೇಖಕರಾದ ಸೆಂಟ ನಿಹಾಲಸಿಂಗರು ಲಂಕೆಯಲ್ಲಿ ಮುದ್ರಿಸಲ್ಪಡುವ ಸಿಲೋನ ಮಾರ್ನಿಂಗ ಲೀಡರವೆಂಬ ಪತ್ರದ ಮುಖ್ಯ ಸಂಪಾದಕರಾಗಿ ನೇಮಿಸಲ್ಪಟ್ಟಿದ್ದಾರೆ.

ಆಸಾಮ ಪ್ರಾಂತದ ಸುಪ್ರಸಿದ್ಧ ಗೃಹಸ್ಥರಾದ ಶ್ರೀ ಫೋಕನರವರು ಮ್ಯುನಸಿಪಾಲಿಟಿಯ ಕಮಿಟಿಯಲ್ಲಿ ಭಾಷಣ ಮಾಡುತ್ತಿರುವಾಗ, ಒಮ್ಮಿಂದೊಮ್ಮೆ ಉಸುರು ಬಂದಾಗಿ ಪರಲೋಕವಾಸಿಯಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ.

ಆಸಾಮದ ಕಾಂಗ್ರೆಸದ ಅಧ್ಯಕ್ಷಪದದ ದೆಸೆಯಿಂದ ವರ್ಹಾಡದ ಕಾಂಗ್ರೆಸ ಕಮಿಟಿಯವರು ಮೆಸರ್ಸ ಕೇಳಕರ ಮತ್ತು ಬಾಪ್ಟಿಸ್ಟಾ ಸಾಹೇಬರ ಹೆಸರು ಸೂಚಿಸಿದ್ದಾರೆ.

ಅಮರಾವತಿಯ ಕಲೆಕ್ಟರರಾದ ಮಿ. ಆರ್ಮಿಟೇಜಸಾಹೇಬರು ಶಿಕಾರಿಗೆ ಹೋದಾಗ, ಕುದುರೆಯ ಮೇಲಿಂದ ಬಿದ್ದು, ಎಚ್ಚರದಪ್ಪಿದ್ದಾರೆ. ಡಾಕ್ಟರರ ಉಪಚಾರ ನಡೆದಿದೆ.

ರಾವಲಪಿಂಡಿಯ ದಂಗೆಯಲ್ಲಿ ಒಟ್ಟು ಹದಿನಾರು ಜನರು ಸತ್ತರು, ಇವರಲ್ಲಿ ೧೨ ಜನರು ಮುಸಲಮಾನರಾಗಿದ್ದಾರೆ. ಗಾಯ ಹೊಂದಿದ ೭೭ ಜನರಲ್ಲಿ ೪೦ ಜನರು ಮುಸಲಮಾನರಿರುವರು. ಕಲಕತ್ತೆಯಂತೆ ಇಲ್ಲಿಯೂ ದಂಗೆಯು ಮುಸಲಮಾನರ ಹಾನಿಗೇ ಮರ್ಮವಾಯಿತು.

ರಾವಲಪಿಂಡಿಯ ಹತ್ತಿರದ ಮೊಗಲ ಗ್ರಾಮದಲ್ಲಿರುವ ಹಿಂದೂ ಜನರ ಧರ್ಮಶಾಲೆಯನ್ನು ಮುಸಲಮಾನರು ಸುಟ್ಟು ಬೂದಿ ಮಾಡಿದರು.

ಮಿತ್ರಾ! ಏನು ಚಂದವು?

(ಪಂಚರತ್ನ)

ಲೇಖಕ— ಮಡಿವಾಳೇಶ್ವರ ಸುತ (ಕಲಗಂಚ.

ಭಾಮಿನಿ॥

ಮರುಳ ಜನರಿಗೆ ಡೌಲು ಚಂದವು ।
ಸರಳ ಜನರಿಗೆ ಸತ್ಯ ಚಂದವು ।
ಪರಮ ಪುಣ್ಯದ ಕಾರ್ಯ ಚಂದವು ಭಲರೆ ಬಹು ಚಂದ ॥
ಸುರಭಿ ವೃಂದದ ಪಕ್ಕೆ ಚಂದವು ।
ತರುಣಿ ತರುಣರ ಮದುವೆ ಚಂದವು ।
ಸರಸ ಗಾದೆಯ ಮಾತು ಚಂದವು ಭಲರೆ! ಬಹು ಚಂದ ॥ ೧ ॥

ಫಲವು ಇದ್ದರೆ ಹೊಲವು ಚಂದವು ।
ಒಲವು ಇದ್ದರೆ ಬಾಳ್ವೆ ಚಂದವು ।
ಉಲಿವ ಕೋಗಿಲ ದನಿಯು ಚಂದವು ಭಲರೆ! ಬಹು ಚಂದ ॥
ಎಳೆಯ ಮಕ್ಕಳ ಮಾತು ಚಂದವು ।
ಮಳೆಯು ಬಿದ್ದರೆ ಇಳೆಯು ಚಂದವು ।
ಬಿಳಿಯ ಖಾದಿಯ ಬಟ್ಟೆ ಚಂದವು ಭಲರೆ! ಬಹು ಚಂದ ॥ ೨ ॥

ನಾದವಿದ್ದರೆ ಗಾನ ಚಂದವು ।
ವೇದ ಶಾಸ್ತ್ರದ ವಚನ ಚಂದವು ।
ಸಾಧು ಸಂತರ ಸಂಗ ಚಂದವು ಭಲರೆ! ಬಹು ಚಂದ ॥
ವ್ಯಾಧಿ ಇಲ್ಲದ ದೇಹ ಚಂದವು ।
ಭೇದವಿಲ್ಲದ ಬುದ್ಧಿ ಚಂದವು ।
ಓದು ಬರೆಯುವ ಸಾತಿ ಚಂದವು ಭಲರೆ! ಬಹು ಚಂದ (ಕರಿಯ.ಲಿ ಚಂದ) ॥ ೩

ಗೊಕ್ಕವಿದ್ದರೆ ಸಂಕೆ ಚಂದವು ।
ಚಿಕ್ಕತನದಲಿ ವಿದ್ಯೆ ಚಂದವು ।
ಮಕ್ಕಳಿದ್ದರೆ ಮನೆಯು ಚಂದವು ಭಲರೆ! ಬಹು ಚಂದ ॥
ಹೊಕ್ಕ ಚಿನ್ನದ ಬಣ್ಣ ಚಂದವು ।
ಲಕ್ಷವಿಟ್ಟರೆ ಕೆಲಸ ಚಂದವು ।
ಸಕ್ಕ ಕೇಳುವ ಕಥೆಯು ಚಂದವು . ಭಲರೆ! ...

ನೀರು ...
ಹೂರಿದ್ದರೆ ದೇಶ
ಸಾರಿ ಹೇಳುವೆ ಗೆ...

ಚಾರು ಮಿತ್ರಾ ! ಏನು
ಭಾರತಾಂಬೆಯ ...
ವೀರ ಶಂಕರ ...

R N B 1443

ಸಾಪ್ತಾಹಿಕ **ವಿಜಯ** ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭। ಧಾರವಾಡ ಮಂಗಳವಾರ ತಾರೀಖು ೨೯ನೇ ಜೂನ ೧೯೩೭ (ಸಂಚಿಕೆ ೨೪

ವಿಜಯ.

ಧಾರವಾಡ ತಾ- ೨೯-೬-೩೭ ನೇ ಇಸ್ವಿ

ಧಾರವಾಡ ಮ್ಯುನಿಸಿಪಾಲಿಟಿಯ ಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರ.

ಕಳೆದೈದಾರು ವರ್ಷಗಳಲ್ಲಿ ಧಾರವಾಡ ಮುನಿಸಿಪಾಲಿಟಿಯಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರವು ಹೇಗಿತ್ತೆಂಬುದು ಹೋದ ವಾರದಲ್ಲಿ ಬೈಲಿಗೆ ಬಂತು ಮ್ಯುನಿಸಿಪಾಲಿಟಿಯ ಪಕಿಯಿಂದ ಯಾವದೊಂದು ಸಾರ್ವಜನಿಕ ಸಮಾರಂಭವಾದರೆ- ಯಾರಾರಿಗೆ ಆಮಂತ್ರಣ ಕಳಿಸಬೇಕೆಂಬುದೊಂದು ಯಾದಿಯುಂಟು. ಅದನ್ನು ಕಾಲಕಾಲಕ್ಕೆ ಆಗುವ ಹೆಚ್ಚು ಕಡಿಮೆಯಿಂದ ಗತಾನುಗತಿಕವಾಗಿ ಉಪಯೋಗಿಸುವರು. ಯಾದಿಯಲ್ಲಿ ಸರಕಾರೀ ಗ್ಯಾಝೆಟೆಡ್ ಆಫೀಸರರೂ ಸರಕಾರದಿಂದ ಪದವಿ ಹೊಂದಿದವರೂ ಮ್ಯುನಿಸಿಪಾಲಿಟಿಯ ಮೆಂಬರರೂ ಪ್ರಾಮುಖ್ಯವಾಗಿರುವಂತೆ ವರ್ತಮಾನ ಪತ್ರಕಾರರೂ ಒದ್ದೇತರ ವರು. ಆದರೆ ನಾನ- ಕೋ. ಆಪರೇಶನ ಕಾಲದಿಂದ ಅಥವಾ ಆದೇವೇಳೆಯಲ್ಲಿ ಮ್ಯುನಿಸಿಪಾಲಿಟಿಯಲ್ಲಿ ಬ್ರಾಹ್ಮಣ- ಬ್ರಾಹ್ಮಣೇತರವೆಂಬ ವಾದ ಹುಟ್ಟಿದಂದಿನಿಂದ ಅಸಹಕಾರ ಮತ್ತು ಬ್ರಾಹ್ಮಣ ಪತ್ರಕಾರರ ಹೆಸರು ತೆಗೆದು ಹಾಕಲ್ಪಟ್ಟಿತು. ಏಕೆಂದರೆ- ಈ ಮೊದಲು ಎಲ್ಲರಿಗೂ ಆಮಂತ್ರಣವಿರುತ್ತಿತ್ತು. ಈ ಊರಲ್ಲಿ ಆರು ವರ್ತಮಾನಪತ್ರಗಳಿದ್ದರೂ ಕರ್ನಾಟಕ ಟೈಮ್ಸದ ಹೊರತು ಯಾವ ಪತ್ರಕಾರರ ಹಸರೇ ಇರುವದಿಲ್ಲ. ಪರ್ವತಗಾತ್ರವಂಥ ತಪ್ಪು ಕಳೆದ ವಾರದಲ್ಲಿ ಹೊರಬಿತ್ತು. ಚಂದ್ರೋದಯದ ಸಂಪಾದಕರೂ ಮ್ಯುನಿಸಿಪಲ್ ಮೆಂಬರ ಇದ್ದ ಆದಿಂಥ ಮಿ. ಹೆಸರು ಪೂರಣರ ಇವರಿಗೆ ಈ ಧೋರಣೆಯು ತೀರ ಅಸಮಂಜಸವೆಂದು ತೋರಿ, ಅವರು ಎಲ್ಲ ಪತ್ರಕಾರರಿಗೂ ಆಮಂತ್ರಣ ಕಳಿಸುವಂತೆ ಕಾರ್ಪೊರೇಶನರಿಗೆ ಹೇಳುವದಾಗಿ ತಿಳಿಸಿದರೆಂದು ನಮಗೆ ವಿಶ್ವಸನೀಯವಾಗಿ ತಿಳಿದದೆ. ಶ್ರೀ ದೊಡ್ಡಮನಿ ಪೂರಣರವರು ಇಷ್ಟರಿಂದಲೇ ಸಮಾಧಾನ ಪಡದೆ, ಯಾದಿಯನ್ನು ಮೊದಲಿನಿಂದ ಕಡೆಯವರೆಗೆ ಅವಲೋಕನ ಮಾಡಬೇಕು. ಏಕೆಂದರೆ- ಅದರಲ್ಲಿ ಈ ಊರವರಾಗದಂಥ ಸುತ್ತಲಿನ ಹಳ್ಳಿಗಳಲ್ಲಿರುವ ಎಷ್ಟೋ ಯೋಗ್ಯತೆಹೀನ ಜನರ ಹೆಸರುಗಳುಂಟೆಂದು ದಟ್ಟ ವರ್ತಮಾನವುಂಟು. ಯಾದಿಯು ನಿಷ್ಕಲಂಕವಾಗಿ, ಆಮಂತ್ರಣವು ಸರ್ವಸಾಮಾನ್ಯವಾಗಿ ದರಬಾರಕ್ಕೆ ಬರುವ ಯೋಗ್ಯತೆಯುಳ್ಳಂಥ ಎಲ್ಲ ಗೃಹಸ್ಥರಿಗೂ ಮುಟ್ಟುವಂತೆ ದರ್ರ್ತು ಆಗಬೇಕೆಂದು ಸೂಚಿಸುತ್ತೇವೆ

ಸ್ಪೇನದಲ್ಲಿ ಬಂಡಾಯದ ಒಳಸಂಚು.

—೦—

ಸ್ಪೇನದೇಶದಲ್ಲಿರುವ ರ್ಯಾಡಿಕೆಲ ಮತ್ತು ಲಿಬರಲ ಜನವರು ಕಂದನ್ನು ಒಳಗೆ ಮಾಡಿಕೊಂಡು ದೊಡ್ಡ ಬಂಡಾಯ ನಾಡಿ, ಈಗಿನ ಮಂತ್ರಿಗಳನ್ನು ತೆಗೆದು ಹಾಕಿ, ಅಧಿಕಾರವನ್ನು ತಾವು ನೋಡಬೇಕೆಂದು ಬಂಡಾಯದ ದೊಡ್ಡ ಸಂಚು ಮಾಡಿದ್ದರು ಆದರೆ ಮೊದಲನೇ ಗುಂಡು ಹಾರುವ ಸಂಧಿಯಲ್ಲಿ ಸಂಚು ಹೊರಬಿದ್ದು, ಅವರ ಪ್ರಯತ್ನ ಭಂಗವಾಯಿತು. ಸಂಚಿನಲ್ಲಿ ವರ್ತಮಾನ ಪತ್ರಗಳ ಸಂಪಾದಕರೂ ಇದ್ದಂತೆ ಸೂಚಿಸಿದ್ದದೆ.

ಅಂತ್ಯಜರಿಗೆ ಕವಿತಕನರಾಗಿದ್ದ ಮಿ ಮಾಂಟಪರ್ಡಸಾಹೇಬರ ಸದುಪದೇಶ

ಮಿ ಮಾಂಟಫರ್ಡ ಸಾಹೇಬರು ಬೆಳಗಾವಿ ಜಿಲ್ಲೆಯಿಂದು ಹೋದ ವಾರದಲ್ಲಿ ಸ್ವದೇಶದ ದಾರಿ ಹಿಡಿದು ಹೋಗುವ ಕಾಲದಲ್ಲಿ ಅಂತ್ಯಜರು ಇವರಿಗೊಂದು ಮಾನಪತ್ರ ಕೊಟ್ಟರು ಅದಕ್ಕೆ ಉತ್ತರವಾಗಿ ಸಾಹೇಬರು ಕೆಳಗೆ ಕೊಟ್ಟಂತೆ ಸದುಪದೇಶ ಮಾಡಿದ್ದಾರೆ:—

"ನಾನು ವಿಲಾಯತಿಗೆ ಹೋಗುವಾಗ ನೀವು ನನಗೆ ಮಾನಪತ್ರ ಕೊಟ್ಟು ನನ್ನನ್ನು ಗೌರವಿಸಿದ್ದಕ್ಕಾಗಿ ನಿಮಗೆ ಕೃತಜ್ಞನಾಗಿದ್ದೇನೆ. ನಿಮ್ಮ ಸಮಾಜದ ಬಗ್ಗೆ ನನಗ ಕಳಕಳಿಯುಂಟು ನೀವು ಅಂತ್ಯಜರು ನಾವು ಜರ್ಮನಿಯ ಕೂಡ ಮಾಡಿದ ಯುದ್ಧದಲ್ಲಿ ನಮಗೆ ಬಹಳ ಸಹಾಯ ಮಾಡಿದಿರಿ ಕೆಲವು ವರ್ಷಗಳಿಂದ ನಿಮ್ಮನ್ನು ದಂಡಿನಲ್ಲಿ ತಕ್ಕೊಳ್ಳುತ್ತಿದ್ದಿಲ್ಲ. ಆದರ ಮಹಾ ಯುದ್ಧದಲ್ಲಿ ನಿಮ್ಮ ದಂಡು ಬಂಡು ಕಟ್ಟಿತು. ನೀವು ಶೂರರಿದ್ದಿರಿ, ಕಾಟಕರಿದ್ದೀರಿ. ನೀವು ಮರಿ ದುಡಿಯುವದಕ್ಕೆ ಗಟ್ಟಿಗರಿದ್ದೀರಿ ಇತ್ತಲಾಗಿ ನಿಮ್ಮೊಳಗೆ ಶಿಕ್ಷಣ ಪ್ರಸಾರವಾಗುತ್ತಿರುವದು. ಆದರೆ ಶಾರೀರಿಕ ಹಂಬಲತೊಟ್ಟು ಓದ ಹೋಗುತ್ತಾ ಕಾರ್ಖಾನೆ ನಿಮ್ಮ ಬುದ್ಧಿಯು ಕಾರಕೂನ ವ್ಯವಸಾಯಕ್ಕೆ ಅನುಗವ ಗಿರುವದಿಲ್ಲ. ಸರಕಾರೀ ಕೆಲಸದಲ್ಲಿ ನುರಿತಂಥ ಬ್ರಾಹ್ಮಣ ಬುದ್ಧಿಯೇ ಬೇಕು. ನಿಮ್ಮ ಶಾರೀರಕ ನರಕಾರೀ ಕೆಲಸಕ್ಕೆ ಉಪಯೋಗವಾಗ ಲಾರದು. ಅಂತ್ಯಜರು ಅಡವಿಯಲ್ಲಿಯೇ ಇರುತ್ತಾರೆ ಇದು ನಿಜವಲ್ಲ ಒಕ್ಕಲತನ ಮಾಡಿರಿ ಉದ್ಯೋಗಿಕ ಕಲಿಯಿರಿ ಒಡೆತನಕ್ಕೆ ದುಡ್ಡು ಬೇಕಾಗುತ್ತದೆ ಉದ್ಯೋಗಿಕಗೆ ಬೇಕಾಗುವದಿಲ್ಲ ಸಾಧಿಸಿದರೆ ಒಡೆಗನವನ್ನೂ ಕಲಿಯಿರಿ ಪ್ರತಿಯೊಂದು ತಾಲೂಕಿನಲ್ಲಿ ಬೇರೆ ಬೇರೆ ಕಸಬಿನ ಶಾಲೆ ಮಾಡಬೇಕೆಂದು ನಾವು ಪ್ರಯತ್ನಿಸಿದ್ದೆವು. ಕಲ್ಪನೆ ಇಲ್ಲಿ ನಾನು ಸ್ವತಃ ಒಂದು ವರ್ಗವನ್ನು ಪ್ರಾರಂಭ ಮಾಡಿದ್ದೇನೆ. ನೀವು ಶಿಕ್ಷಣ ಪಡೆದು ಉದ್ಯೋಗಿಗಳಾಗಿರಿ. ಮತ್ತು ಅಸ್ಪೃಶ್ಯತೆಯನ್ನು ಕಳೆಯಿರಿ. ದೇಶಸೇವೆ ಕಾರ್ಯದಲ್ಲಿ ಭಾಗ ತಕ್ಕೊಳ್ಳಿರಿ. ಕಾಂಗ್ರೆಸ್ಸಿನವರ ಸಹಾಯ ತೊಗಬೇಕು ನಿಮ್ಮ ಉನ್ನತಿಗಾಗಿ ಇತರ ವರ್ಗಗಳ ಸಹಕಾರವುಂಟು. ಸ್ವಾವಲಂಬನದಿಂದ ನಿಮ್ಮ ಉದ್ಧಾರವನ್ನು ನೀವೇ ಮಾಡಿಕೊಳ್ಳಬೇಕು."

ಗದಗ ತಾಲೂಕಿನ ಬೆಂಚಲಿಯಲ್ಲಾದ ಒಕ್ಕಲತನದ ಮತ್ತು ದನಗಳ ಪ್ರದರ್ಶನ

ಗದಗ ತಾಲೂಕಿಗ ಸೇರಿದ ಬೆಂಚಲಿ ಗ್ರಾಮದಲ್ಲಿ ಕಳೆದ ತಿಂಗಳಲ್ಲಾದ ಒಕ್ಕಲತನದ ಮತ್ತು ದನಗಳ ಪ್ರದರ್ಶನದಲ್ಲಾದ ರಿಪೋರ್ಟುಗಳನ್ನು ಸಂಪೂರ್ಣವಾಗಿ ಹೋದ ವಾರದಲ್ಲಿ ಪ್ರಸಿದ್ಧ ಮಾಡಿದ್ದೇವೆ ಈ ಪ್ರದರ್ಶನವನ್ನು ಯಾವದೊಂದು ಸಂಸ್ಥೆ ಮತ್ತು ಸಮಾಜದವರು ಕೂಡಿಸಿದ್ದಲ್ಲ ಬಿಟ್ಟರೆ ಕರ್ತವ್ಯಜಾಗೃತಿಯಿಂದ ನೆರವೇರಿದ್ದಾಂದು ಬೆಂಚಲಿಯ ದೊಡ್ಡ ಜಮೀನದಾರರೂ, ಸಾಹುಕಾರರೂ ಆದಂಥ ಶ್ರೀ. ಮಹಾದೇವಪ್ಪಾ ಬಸಪ್ಪಾ ಕತ್ತಿಯವರು ಇದರ ಪ್ರವರ್ತಕರು, ಚಾಲಕರು ಮತ್ತು ಉತ್ತೇಜಕರಾಗಿದ್ದಾರೆ. ಇವರು ಪ್ರತಿವರ್ಷ ತಮ್ಮೂರ ಶ್ರೀ. ಬಸವೇಶ್ವರನ ಜಾತ್ರೆ ಮಾಡಿಸುವರು ಜಾತ್ರೆಯು ತೀರ ಯಾತ್ರೆಯಾಗದೆ, ಆದರಿಂದ ಸುತ್ತಲಿನ ಗ್ರಾಮಗಳ ಜನರಿಗೆ ಹಿತವಾಗಲೆಂಬ ಉದ್ದೇಶದಿಂದ ಪ್ರದರ್ಶನದ ಭಾವನೆಯನ್ನು ಅಂಗೀಕರಿಸಿದ್ದಾರೆ. ಬೆಂಚಲಿಯಲ್ಲಿ ಇಂಗ್ಲಿಷ ಶಾಲೆಯನ್ನೂ ಲಾಯಬ್ರರಿಯನ್ನೂ ಸ್ಥಾಪಿಸಿ ಶಿಕ್ಷಣ ಕಾರ್ಯವನ್ನು ಈ ಮುಂದಾಗಿ ಕೈಕೊಂಡಿದ್ದಾರೆ. ಇವರುಗಳ ತರುವಾಯಾ ಈ ಪಾವನವಾದ ಮತ್ತು ದೊಡ್ಡದಾದ ಒಕ್ಕಲತನದ ಕಾರ್ಯವನ್ನು ಅಂಗೀಕರಿಸಿದ್ದಾರೆ ಪ್ರದರ್ಶನದ ಯೋಜನೆಯನ್ನು ಕಲೆಕ್ಟರರಾದ ಮಿ. ಮಾಸ್ತರ ಸಾಹೇಬರು ಅನುಮೋದಿಸಿ, ಪ್ರತಿಯೊಂದು ಗ್ರಾಮದವರು ಹತ್ತು ಜನ ರೈತರನ್ನಾದರೂ ಪ್ರದರ್ಶನಕ್ಕೆ ಕರಕೊಂಡು ಹೋಗಬೇಕೆಂದು ಸುತ್ತಲಿನ ಗ್ರಾಮಗಳಿಗೆ ಅಪ್ಪಣೆ ಮಾಡಿದ್ದರು. ಒಕ್ಕಲತನದ ಹಿತೈಷಿಗಳೂ ಪ್ರದರ್ಶನವು ಯಶಸ್ವಿಯಾಗುವಂತೆ ಎಲ್ಲ ರೀತಿಯಿಂದಲೂ ಉತ್ಸಾಹಪೂರ್ಣವಾದ ಪ್ರಯತ್ನಶೀಲರಾಗಿದ್ದರು. ಈ ಪರಿಷತ್ತು ಪ್ರದರ್ಶನದಲ್ಲಾದ ರಿಪೋರ್ಟುಗಳು ಒಕ್ಕಲತನದ ಅಭಿವೃದ್ಧಿಯ ದೃಷ್ಟಿಯಿಂದ ಬಹಳೇ ಮಹತ್ವದ್ದಾಗಿರುತ್ತವೆ ಇದೇ ವಿಷಯವಾಗಿ ಬೇರೆ ಬೇರೆ ಸ್ಥಳಗಳಲ್ಲಾಗುವ ಪ್ರದರ್ಶನ ಮತ್ತು ಪರಿಷತ್ತಿನವರು ಇವನ್ನು ಅನುಕರಣೀಯಮಾಡುವಂತಿವೆ. ಶ್ರೀ. ಮಹಾದೇವಪ್ಪನವರು ಕೈಕೊಂಡ ಕಾರ್ಯವು ಸ್ತುತ್ಯವದೆ. ಇಪ್ಪತ್ತು ವರ್ಷಗಳ ಹಿಂದೆ ಹೊಸರಿತ್ತಿಯಲ್ಲಿ ದನಗಳ ಪ್ರದರ್ಶನವು ಬಹು ಸಣ್ಣ ಪ್ರಮಾಣದಿಂದ ಪ್ರಾರಂಭವಾಯಿತು. ಈಗ ನಿರಂತರ ನಡೆಯುವಂಥ ಒಂದು ದೊಡ್ಡ ಜಾತ್ರೆ ಯಾಗಿದೆ ಅದೇ ಪ್ರಕಾರ ಬೆಂಚಲಿಯ ಜಾತ್ರೆಯು ವರ್ಷ ವರ್ಷಕ್ಕೂ ಶ್ರೀ ಕತ್ತಿಯವರ ಆಶ್ರಯದಿಂದ ಬೆಳೆಯುತ್ತಾ ಹೋಗಲೆಂದು ಹಾರೈಸುತ್ತೇವೆ.

ಮುಂಬಯಿ ಇಲಾಖೆಯಲ್ಲಿ ವೆಚ್ಚ ಕಡಿಮೆ ಮಾಡುವ ವಿಚಾರವು.

ಮಹಾಯುದ್ಧದ ಹಿರಿಯಲ್ಲಿ ಸರಕಾರದವರು ಕಾಮದಾರ- ಕಾರಕೂನರನ್ನು ಸಂತುಷ್ಟ ಪಡಿಸುವದಕ್ಕಾಗಿ ಪುಷ್ಕಳವಾಗಿ ಕೈ ಬಿಡಿಲು ಬಿಟ್ಟು ಪಗಾರ ಹೆಚ್ಚು ಮಾಡಿದರು ಇದರಲ್ಲಿಯೇ ಲೀ ಕಮಿಶನರು ಸಿವ್ಹಿಲ ಸರ್ವೀಸ ಅಧಿಕಾರಿಗಳ ಪಗಾರ ಹೆಚ್ಚಿಸಿದರು. ಈ ಪ್ರಕಾರ ಊಟಾನ ಹೊಸ ಖರ್ಚವು ಅಪೇಕ್ಷೆಗಿಂತ ತಪ್ಪಿ ಹೆಚ್ಚಿದಂತಾಯಿತು ಕೋರ್ಟ ಫೀ ಸ್ಟ್ಯಾಂಪುಗಳ ದಾಸಿಲು ಹೆಚ್ಚು ಮಾಡಿದರು ಸಿನೇಮಾ- ನಾಟಕ ಕಂಪನಿಗಳ ಮೇಲೆ ಕರ ಕೂಡಿಸಿದರು ಆದರೂ ಲೆಕ್ಕ ಬಾಕಿ ಗೂಡಲಿಲ್ಲ. ಇದನ್ನು ಸರಿ ಹೊಂದಿಸುವದಕ್ಕಾಗಿ ಒಂದು ಕಮಿಟಿ ನೇಮಿಸಿದರು ಆ ಕಮಿಟಿಯವರು ಲಕ್ಷ ದ ರಕಮ ತೋರಿಸಿದರು ಆದರೂ ವರ್ಷ ... ಬಜೆಟ್ ... ಪ್ರತಿ ವರ್ಷದ ಬಿಟ್ಟು ... ಆದದರಿಂದ ಸರಕಾರದವರು ನಾನಾ ಸಾಹೇಬರನ್ನು ... ಲಕ್ಷ ರೂಪಾಯಿ ವೆಚ್ಚ ಕಡಿಮೆ ಮಾಡಬೇಕೆಂಬುದನ್ನು ಶೋಧಿಸಬೇಕೆಂದು ನೇಮಿಸಿದ್ದಾರೆ ಈ ಸಾಹೇಬರು ಕನಿಷ್ಠ ... ಲಕ್ಷದ ಉಳಿತಾಯ ತೋರಿಸಬೇಕಾಗಿರುತ್ತದೆ

ಮುಂಬಯಿ ಸರಕಾರದ ಎಗ್ಝಿಕ್ಯೂಟಿವ್ಹ ಕೌನ್ಸಿಲದಲ್ಲಿ ಒಬ್ಬರನ್ನೂ ಮಂತ್ರಿಗಳಲ್ಲಿ ಒಬ್ಬರನ್ನು ಕಡಿಮೆ ಮಾಡಬೇಕೆಂದು ಕೆಲವರು ಸೂಚಿಸಿದ್ದಾರೆ. ಮಂತ್ರಿಯು ಕಾಯಂ ಸ್ಥಳಗಳನ್ನು ಏರ ಹಾಗುವವು ಎಗ್ಝಿಕ್ಯೂಟಿವ್ಹದಲ್ಲಿ ಒಬ್ಬರು ಏತದ್ದೇಶೀಯರಿದ್ದಾರೆ ಒಂದು ಸ್ಥಳ ಕಡಿಮೆ ಮಾಡುವದರಿಂದ, ಆ ಲಿವಿಸಾಹೇಬರ ರಬ್ಬಾಗುವದು ಏತದ್ದೇಶೀಯರ ಮೇಲೆ ಬೀಳ ಬಿದ್ದರಾಯಿತ ... ಬೇಕಿಸಿದ್ದರು ಉಳಿಸು, ಹಿಂದೂ ಜನರ ಪಕ್ಷಕ್ಕೆ ಹಾನಿಯಾದರೆ- ಅದು ನಿಷ್ಪಕ್ಷಪಾತದ ಏರ್ಪಾಡು ಆಗಲಾರದು. ಮಂತ್ರಿಗಳು ಏತದ್ದೇಶೀಯರೇ ಆಗುವದರಿಂದ, ಇವರಲ್ಲಿ ಒಂದು ಸ್ಥಳವು ಕಡಿಮೆಯಾದರೆ- ಹಿಂದೂ ಜನರ ಪಕ್ಕಕ್ಕೆ ಮಣ್ಣುಗಿಸಿದಂತಾಗಲಾರದು

ಕತ್ತರಿಯು ಮುಖ್ಯವಾಗಿ ಸೇಕ್ರೆಟರಿಯಟ ಮತ್ತು ಪೋಲೀಸ ಖಾತೆಯ ಮೇಲೆ ಬೀಳುವದೆಂದು ದಟ್ಟ ವರ್ತಮಾನವಾಗಿದೆ. ಸೇಕ್ರೆಟರಿಯಟದ ಗ್ಯಾಝೆಟೆಡ ಮತ್ತು ನಾನ- ಗ್ಯಾಝೆಟೆಡ ಕಾಮದಾರರು ತಮಗೆ ಮನೆಗೆ ಅಪ್ಪಣೆಯಾಗುವದೆಂದು ಭಯಗ್ರಸ್ತರಾಗಿದ್ದಾರೆ. ಪೋಲೀಸ ಖಾತೆಯ ವೆಚ್ಚವನ್ನು ಕಡಿಮೆ ಮಾಡಬೇಕೆಂದು ಕೌನ್ಸಿಲದಲ್ಲಿ ಎರಡು- ಮೂರು ವರ್ಷಗಳಿಂದ ಸೂಚನೆಗಳಾಗಿರುತ್ತವೆ. ಮಿ ತಾಲಿಡಿ ಸಾಹೇಬರು ಈ ಸೂಚನೆಯ ಪೂರ್ಣ ಉಪಯೋಗ ಮಾಡಿಕೊಳ್ಳುವಂತೆ ತೋರುತ್ತದೆ.

ರೇಲ್ವೆ ಮತ್ತು ತಾರ ಖಾತೆಗಳ ಅನುಕೂಲತೆಯಾಗಿರುವದರಿಂದ, ಪೋಸ್ಟ ಆಫೀಸಿನಂತಿರುವ ರಿವ್ಹಿನ್ಯೂ ಕಮಿಶನರರ ಕಚೇರಿಗಳನ್ನು ತೆಗೆದು ಹಾಕಬೇಕೆಂದು, ಕೌನ್ಸಿಲ ಮತ್ತು ಅಸೆಂಬ್ಲಿಗಳಲ್ಲಿ ಠರಾವು ಬಂದಿರುತ್ತವೆ. ಸರಕಾರದವರು ಯಾವದೊಂದು ಕಚೇರಿಯಲ್ಲಿ, ಹೆಚ್ಚಿಗೆಯಾಗಿರುವ ಕಾರಕೂನ- ಸಿಪಾಯರನ್ನು ತೆಗೆದು ಹಾಕುವದು ವಾಸ್ತವಿಕವೇ ಇವರಿಂದ ಲಕ್ಷಾಂತರ ರೂಪಾಯಿಗಳ ಉಳಿತಾಯವಾಗಲಾರದು. ಹುಲ್ಲು ಕೂಡಿದರೆ- ಹೊಟ್ಟೆ ಬೀಳಲಾರದು. ರಿವ್ಹಿನ್ಯೂ ಕಮಿಶನರರ ಸ್ಥಳಗಳನ್ನು ಕಡಿಮೆ ಮಾಡಿದರೆ- ಹತ್ತೆಂಟು ಲಕ್ಷಗಳ ಉಳಿತಾಯವು ಏಕ ಕಾಲಕ್ಕೆ ಆಗುವದು. ಕೌನ್ಸಿಲದ ಮೆಂಬರರು ಈ ವಿಷಯವನ್ನು ಠರಾವ ರೂಪದಿಂದ ಸರಕಾರದ ಮುಂದೆ ಒತ್ತಾಯಪಡಿಸಬೇಕೆಂದು ಸೂಚಿಸುತ್ತೇವೆ.

ಶ್ರೀ ಶಿವಾಜಿ ಮಹಾರಾಜನು ಪ್ರತಿಯೋಗಿ ಸಹಕಾರಿಯಾಗಿದ್ದಂತೆ!!

---೦---

ನಾಗಪೂರದಲ್ಲಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯುತ್ಸವದ ದಿವಸ ಪುಣೆಯ ಕೇ ಳ ಕ ರ ರ ವ್ಯಾ ಖ್ಯಾ ನ ವಾ ... ಡಾಕ್ಟರ ಮುಂಜೆಯವರು ಅಧ್ಯಕ್ಷರಾಗಿದ್ದರು. ಶ್ರೀ ಶಿವಾಜಿ ಮಹಾರಾಜನು ಮುಸಲಮಾನರ ವಿರುದ್ಧ ರಾಜ್ಯಕ್ರಾಂತಿ ಮಾಡಿ, ಹಿಂದೂ ರಾಜ್ಯ ಸ್ಥಾಪನೆ ಮಾಡಿದರೂ, ಮೊಗಲರಿಂದ ಚೌಥಯಿ ಮತ್ತು ಸರದೇಶಮುಖಿಯನ್ನು ಅಂಗೀಕರಿಸಿದನು. ವರ್ತಮಾನ ವಿಚಾರದಿಂದ ಬಾದಶಹರ ಒಪ್ಪಿಸಲ್ಪಟ್ಟ ಖಾತೆಗಳ ಮಂತ್ರಿಯಾದರೆಂದು ಹೇಳುವಂತಾಗುತ್ತದೆ ಶ್ರೀ ಶಿವಾಜಿ ಮಹಾರಾಜನು ಚೌಥಾಯಿ, ಸರದೇಶಮುಖಿಯನ್ನು ಅಂಗೀಕರಿಸಿದನೆಂಬ ಕಾರಣದಿಂದ ಬಾದಶಹನ ಭೃತ್ಯನಾಗಿರಲಿಲ್ಲೆಂಬುದನ್ನು ಧ್ಯಾನದಲ್ಲಿಡತಕ್ಕದ್ದು. ಚಿಕ್ಕವನಿದ್ದಾಗಲೇ ತಂದೆಯ ಕೂಡ ವಿಜಾಪೂರದಲ್ಲಿ ಬಾದಶಹರ ದರಬಾರಕ್ಕೆ ಹೋದಾಗ್ಗೆ ಬಾದಶಹರಿಗೆ ಸಲಾಮು ಕೂಡ ಮಾಡದೆ, ಸ್ವಪ್ರತಿಷ್ಠೆ ಮತ್ತು ಸ್ವಾಭಿಮಾನವನ್ನು ಕಾಯ್ದುಕೊಂಡನೆಂದು ಮರಾಠೆ ಇತಿಹಾಸಕಾರರೇ ಬರೆದಿರುತ್ತಾರೆ ಶ್ರೀ ಶಿವಾಜಿ ಮಹಾರಾಜನು ಸುಧಾರಣೆಯನ್ನು ಯಶಸ್ವಿಯಾಗಿ ಮಾಡಿ ತೋರಿಸುತ್ತೇನೆಂದು ಬಾದಶಹರಿಗೆ ಒಂದೂ ವಚನ ಕೊಡಲಿಲ್ಲ. ಆವಶ್ಯಕತೆಯಂತೆ ಸ್ವರಾಜ್ಯ ತಕ್ಕೊಳ್ಳುವ ಧ್ಯೇಯವುಳ್ಳವನೇ ಆಗಿದ್ದನು ಮಹಾತ್ಮರಂತೆ ಈ ರಂಗದಲ್ಲಿ ಹೋಗಿ, ಕಾಂಗ್ರೆಸ್ಸಿನಿಂದ ಬೇರಾಗಿ ಬಂದ ನು ... ವ್ಯಾಖ್ಯಾನ ಕಾರರಾದ ಮಿ ಕೇಳಕರ ಮತ್ತು ಅಧ್ಯಕ್ಷ ... ಮುಂಜೆಯವರು ಮಹಾರಾಜರ ಸ್ವರಾಜ್ಯ ಸ್ಥಾಪನೆಯ ಧೋರಣವನ್ನು ಅದ್ದ ಮಾರ್ಗವಾಗಿ ತೋರಿಸುವದರಿಂದ, ಯಾರೂ ಮೋಸ ಹೋಗಲಾರರು.

ಇಂಗ್ರೇಜಿ ಶಾಲೇಜುಗಳಲ್ಲಿ ದೇಶಭಾಷೆಗಳ ಪ್ರವೇಶ.

ವಿಲಾಯತಿಯ ಪ್ರತಿಯೊಂದು ದೇಶದಲ್ಲಿ ವಿಶ್ವ ವಿದ್ಯಾಲಯದ ಉಚ್ಚ ಸ್ರತಿಯ ಶಿಕ್ಷಣವನ್ನು ದೇಶಭಾಷೆಯಲ್ಲಿ ಕೊಟ್ಟು, ಐಚ್ಛಿಕವಾಗಿ ಪರದೇಶದ ಯಾವದೊಂದು ಭಾಷೆ ಕಲಿಸುವರು. ಇದಕ್ಕೆ ತೀರ ವಿರುದ್ಧವಾಗಿ ಹಿಂದುಸ್ಥಾನದ ಕಾಲೇಜುಗಳ ಬೋಧನೆಯಾಗಿರುವದು. ಕಾಲೇಜದ ಶಿಕ್ಷಣವೆಲ್ಲ ರಾಜ್ಯಕರ್ತರಾದ ಇಂಗ್ಲಿಷರದು. ಐಚ್ಛಿಕ ಭಾಷೆಯು ಮೃತ ಭಾಷೆ ಎಂದೆನಿಸಿದ ಸಂಸ್ಕೃತವು, ಮತ್ತು ಪರದೇಶಗಳ ಫ್ರೆಂಚ, ಜರ್ಮನ, ಲ್ಯಾಟಿನ ಮೊದಲಾದವುಗಳು. ದೇಶಭಾಷೆಗಳಿಗೇ ಆಸ್ಪದ ಇಲ್ಲ. ಸ್ವರ್ಗವಾಸಿ ರಾನಡೆಯವರು ಯುನಿವ್ಹರ್ಸಿಟಿಯಲ್ಲಿ ಬಹಳವಾಗಿ ಹೋರಾಡಿ, ಎಮ್. ಎ. ಪರೀಕ್ಷೆಗೆ ದೇಶಭಾಷೆಯಲ್ಲಿ ಕೂಡ್ರಬಹುದೆಂದು ಠರಾವು ಪಾಸ ಮಾಡಿಸಿಕೊಂಡರು. ಪ್ರಾಥಮಿಕ ಶಿಕ್ಷಣದ ನಾಲ್ಕು ಇಯತ್ತೆಗಳಾದ ನಂತರ ಇಂಗ್ಲಿಷ ಶಾಲೆಗೆ ಹೋಗಿ, ಎಮ್ ಎ ಕ್ಕೆ ಹತ್ತುವ ತನಕ ಎಂದರೆ ಸು. ಏಳೆಂಟು ೧೨ ವರ್ಷಗಳಲ್ಲಿ ದೇಶಭಾಷೆಯ ಸಂಸರ್ಗವಿಲ್ಲದೆ, ಒಮ್ಮೆಲೆ ಆ ದೊಡ್ಡ ಪರೀಕ್ಷೆಗೆ ಕೂಡ್ರುವದು ಲೋಕವಿಲಕ್ಷಣವೇ ಸರಿ. ಸಂಕಾರಕ್ಕೆ ಈ ತಪ್ಪು ತಿಳಿದಂತೆ, ಮ್ಯಾಟ್ರಿಕ್ಯುಲೇಶನ ಬಿ. ಎ ಪರೀಕ್ಷೆಗೂ ದೇಶಭಾಷೆಯನ್ನು ತಕ್ಕೊಳ್ಳಬಹುದೆಂದು ಠರಾವು ಮಾಡಿದರು. ಇವೆರಡು ಪರೀಕ್ಷೆಗಳ ನಡುವಿನ ಪ್ರೀವ್ಹಿಯಸ ಮತ್ತು ಇಂಟರ ಪರೀಕ್ಷೆಗಳಲ್ಲಿ ಪುನಃ ಸಂಸ್ಕೃತ ತಕ್ಕೊಳ್ಳುವದೇ ಅಗತ್ಯವಾಯಿತು, ಈ ಅಕ್ರಮವು ನಗದ ವರನ್ನು ನಗಿಸುವಂಥದ್ದಾಗಿತ್ತು. ಆದುದರಿಂದ ಇವೆರಡೂ ಪರೀಕ್ಷೆಗಳಲ್ಲಿಯೂ ಪ್ರಾಯ್ಸದಿಯಲ್ಲಿ ಕೂಡಬಹುದೆಂದು ಕಳೆದ ವಾರದಲ್ಲಿ ಕೂಡಿದ ಯುನಿವ್ಹರ್ಸಿಟಿಯ ಸಿನೇಟ ಸಭೆಯಲ್ಲಿ ಪಾಸಾಗಿರುತ್ತದೆ. ಆದರೆ ಇದು ಇದೇ ವರ್ಷದಿಂದ ಅಮಲಿನಲ್ಲಿ ಬರದೆ, ಮುಂದಿನ ವರ್ಷದ ಅಂದರೆ ೧೯೨೭ ನೆಯದರಿಂದ ಅಮಲಿನಲ್ಲಿ ಬರುವದು.

ಇದು ಇಂಗ್ರೇಜಿ ಕಾಲೇಜಿಯ ವಿಚಾರವು. ಇದಕ್ಕಿಂತ ದೇಶಭಾಷೆಯ ಬೆಳವಣಿಗೆ ಮತ್ತು ಎಲ್ಲೆಯ ದೆಸೆಯಿಂದ ಮೈಸೂರ ಸರಕಾರದವರು ಕೈಕೊಳ್ಳಬೇಕೆಂಬದಾಗಿ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಮಾಡಿದ ಸೂಚನೆಯು ಸ್ತುತ್ಯವಾಗಿರುತ್ತದೆ ಮೈಸೂರ ನಾಡಿನ ಮಾತೃ ಭಾಷೆಯು ಕನ್ನಡವು. ರಾಜ ಭಾಷೆಯು ಕನ್ನಡವು ಮಿಕ್ಕ ಭಾಷೆಗಳಿಗಿಂತ ಕನ್ನಡಕ್ಕೇ ಪ್ರಾಶಸ್ತ್ಯವಿರತಕ್ಕದ್ದು. ಆದುದರಿಂದ ಕನ್ನಡಕ್ಕೆ ಅಗ್ರಪೂಜೆ ಕೊಟ್ಟು, ಇಂಗ್ಲಿಷವನ್ನು ಮಾಧ್ಯಮ ಭಾಷೆ ಮಾಡಬೇಕೆಂದು ಕೆಲವರು ಸೂಚಿಸಿದ್ದಾರೆ ಸದ್ಯದಲ್ಲಿ ಇಂಗ್ಲಿಷವೇ ಮುಖ್ಯ ಭಾಷೆಯಾಗಿರುವದರಿಂದ, ಇಂಗ್ಲಿಷ ಪುಸ್ತಕಗಳನ್ನು ಕೊಳ್ಳುವದರ ಸಲುವೇ ಪ್ರತಿ ವರ್ಷ ಲಕ್ಷಾವಧಿ ರೂಪಾಯಿಗಳ ವ್ಯಯವಾಗುತ್ತದೆ. ಭಾಷಾಂತರ, ಸಹಾಯ ಅಥವಾ ಆಧಾರವೆಂದು ಅಗತ್ಯದ ಮಟ್ಟಿಗೆ ಇಂಗ್ಲಿಷ ಪುಸ್ತಕಗಳನ್ನು ಕೊಂಡು ಅವುಗಳ ತರ್ಜುಮೆಯನ್ನು ಕನ್ನಡದಲ್ಲಿ ಮಾಡಿಸಿದರೆ ಕನ್ನಡ ನುಡಿಯು ನಿಜವಾದ ಅಭಿವೃದ್ಧಿಯಾಗುವದು. ವಿಲಾಯತಿಯಲ್ಲಿ ಯಾವದೊಂದು ಪರಭಾಷೆಯಲ್ಲಾಗುವ ಉತ್ತಮವೆಂಬ ಗ್ರಂಥಗಳ ಭಾಷಾಂತರವನ್ನು ತಂತಮ್ಮ ನುಡಿಗಳಲ್ಲಿ ಮಾಡಿಕೊಳ್ಳುವರು. ಅದೇ ಪ್ರಕಾರ ಪರಭಾಷೆಯಲ್ಲಿರುವ ಪುಸ್ತಕಗಳನ್ನು ಕನ್ನಡದಲ್ಲಿ ತರ್ಜುಮೆ ಮಾಡಿಸಿ, ಅವುಗಳ ಉಪಯೋಗವು ಕನ್ನಡಿಗರಿಗೆ ಆಗ ಮಾಡಿಕೊಡುವದು ಸ್ತುತ್ಯ ಮಾತ್ರವಲ್ಲದೆ, ಜ್ಞಾನಾರ್ಜನೆಗೆ ಉತ್ತಮವಾದ ಸಾಧನ ಮಾಡಿಕೊಟ್ಟಂತಾಗುತ್ತದೆ.

ಮದ್ರಾಸ ಗವ್ಹರ್ನರಸಾಹೇಬರು ಸಪ್ಟಂಬರ ತಿಂಗಳಲ್ಲಿ ವಿಜಯವಾಡಕ್ಕೆ ಆಂಧ್ರವಿಶ್ವವಿದ್ಯಾಲಯವನ್ನು ತೆರೆಯುವ ಸಮಾರಂಭಕ್ಕೆ ಬರುವರು. ಸಾಹೇಬರಿಗೆ ಮಾನಪತ್ರ ಕೊಡುವ ವಿಷಯವಾಗಿ ದೊಡ್ಡ ವಾದವೆದ್ದಿದೆ. ಸರಕಾರೀ ಇನಾಮದಾರರು ಒಹುಮಾನವಾಡಿಕೊಳ್ಳಲು ಅತ್ಯಾಸ ಪಡೆಸಿದ್ದಾರೆ.

ಕಾನಪೂರದಲ್ಲಿ ಒಂದು ದೇವಾಲಯದಲ್ಲಿ ಮೂರ್ತಿ ಒಡೆದದ್ದಕ್ಕಾಗಿ ಎಂಟು ಜನ ಮುಸಲಮಾನರನ್ನು ಹಿಡಿದಿದ್ದಾರೆ.

ನಿಜಾಮ ಹೈದರಾಬಾದನಲ್ಲಿ ಹಿಂದೂ ಜನರ ಬೇದಜನ್ಯ ಸ್ಥಿತಿಯು.

ಪುಣೆಯ ಮರಾಠಾ ಪತ್ರಕರ್ತರು ಹೈದರಾಬಾದ ಸಂಸ್ಥಾನದಲ್ಲಿ ಹಿಂದೂ ಜನರಿಗುಂಟಾದ ಬೇದಜನ್ಯ ಸ್ಥಿತಿಯ ವರ್ಣನೆಯನ್ನು ಕೆಳಗೆ ಕೊಟ್ಟಂತೆ ಮಾಡಿರುತ್ತಾರೆ.

"ನಿಜಾಮ ರಾಜ್ಯದಲ್ಲಿರುವ ಹಿಂದೂ ಜನರ ಶೋಚನೀಯ ಅವಸ್ಥೆಯು ದಿನ ದಿನಕ್ಕೆ ಹೆಚ್ಚೆಚ್ಚು ಶೋಚನೀಯವಾಗುತ್ತಾ ನಡೆದಿದೆ ಹಿಂದೂ ಕುಲವನ್ನೇ ಪೂರಾ ಅಳಿಯಬೇಕೆಂದೇ ನಿಜಾಮ ಸಾಹೇಬರ ರಾಜನೀತಿಯ ಧೋರಣವಾಗಿದ್ದಂತಿದೆ. ಮರಾಠಿ ಶಾಲೆಗಳನ್ನು ಬಂದು ಮಾಡಬೇಕೆಂಬದು ಇತ್ತೀಚಿಗಿನ ಒಂದು ದೃಷ್ಟಾಂತವಾಗಿರುತ್ತದೆ. ಶ್ರೀ. ವಾಮನ ನಾಯಕರನ್ನು ಅಪಮಾನಗೊಳಿಸಿ, ಅವರ ಮೇಲೆ ಸಲ್ಲದ ಆರೋಪಗಳನ್ನು ಹೊರಿಸುವದು ಎಂಥನೆಯು ಪುರಾವೆಯು ಅಲ್ಲಿ ಹಿಂದೂ ಜನರಿಗಾಗಿ ಯೋಗ್ಯವಾದ ನ್ಯಾಯವೇ ಇರುವದಿಲ್ಲ. ಹಿಂದೂ ಜನರ ಜೀವ ಮತ್ತು ಆಸ್ತಿಯು ಸುರಕ್ಷಿತವಾಗಿರುವದಿಲ್ಲ ಶ್ರೀ ವಾಮನನಾಯಕರನ್ನು ಕೊಲ್ಲಬೇಕೆಂಬದಾಗಿ ಹೋಗಿದ್ದ ಅಫಗಾಣನನ್ನು - ಅಫಗಾಣರು ಯಾವಾಗಲೂ ಶಸ್ತ್ರಧಾರಿಯಾಗಿರುತ್ತಾರೆಂಬ ನೆವನದಿಂದ ಬಿಟ್ಟು ಬಿಟ್ಟರು!! ಹಿಂದೂ ಜನರು ಗುರಿಯಾದ ದುರವಸ್ಥೆಗೆ ಇದೊಂದು ಉದಾಹರಣೆಯಾಗಿರುತ್ತದೆ. ಒಂದು ಬಲ ಹಿಡಿದು, ನಾಚಿಕೆ ರಹಿತವಾಗಿ ಕಟ್ಟ ರೀತಿಯಿಂದ ನಡೆಸಿರುವ ದೊರೆತನವನ್ನು ನೋಡಿ, ಬ್ರಿಟಿಶ ಸರಕಾರದವರು ಅಡ್ಡ ಬರುವ ಕಾಲವು ಸಮೀಪಿಸಿದೆ. ನಿಜಾಮರ ಅನ್ಯಾಯಪೂರ್ಣವಾದ ಆಡಳಿತೆಯು ಇಂಗ್ಲಿಷ ದೊರೆತನಕ್ಕೆ ಒಂದು ಗುಂದು ಆಗಿರುತ್ತದೆ. ಇಂಗ್ಲಿಷ ಸರಕಾರವು ಈ ವಿಷಯವಾಗಿ ಕಣ್ಣು ಮುಚ್ಚಿಕೊಂಡರೆ- ಜವಾಬದಾರಿಯು ನಿಜಾಮರಷ್ಟೇ ಇಂಗ್ಲಿಷ ಸರಕಾರದ ಮೇಲೂ ಬರುತ್ತದೆ."

ಸಾತಾರಿಯಲ್ಲಿ ಕೂಡಿದ್ದ ಇನಾಮದಾರರ ಪರಿಷತ್ತು.

ಈ ಮೊದಲು ಪ್ರಸಿದ್ಧವಾದಂತೆ ಸಾತಾರಿಯಲ್ಲಿ ಇನಾಮದಾರರ ಪರಿಷತ್ತು ಕೂಡಿತ್ತು. ಅಸಂಬ್ಲಿಯ ಮೆಂಬರರಾದ ಸರದಾರ ಮುತಾಲೀಕ ದೇಸಾಯರು ಪರಿಷತ್ತಿನ ಮುಖ್ಯ ಪ್ರವರ್ತಕರಾಗಿದ್ದರು ಪರಿಷತ್ತಿಗಾಗಿ ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತದ ಪ್ರಮುಖ ಇನಾಮದಾರರು ದಯಮಾಡಿಸಿದ್ದರು. ಧಾರವಾಡದಿಂದ ಬೆಟ್ಟಗೇರಿಯ ಇನಾಮದಾರರೂ, ಶ್ರೀ ಹನಮಂತರಾವ ದೇಸಾಯಿಯವರೂ ಹೋಗಿದ್ದರು.

ಪರಿಷತ್ತಿನಲ್ಲಿ ಇನಾಮದಾರರ ಹಿತದ ಪ್ರಶ್ನೆಗಳೇ ಮುಖ್ಯವಾಗಿ ಚರ್ಚಿಸಲ್ಪಟ್ಟವು. ಇನಾಮದಾರರು ಸರಕಾರದ ಏಕನಿಷ್ಠ ಸೇವಕರೆಂದು ತಿಳಿಯಲ್ಪಟ್ಟರೂ, ಪ್ರಸ್ತುತದ ರಾಜಕೀಯ ಪರಿಸ್ಥಿತಿಯನ್ನು ಕುರಿತು, ತಮ್ಮ ಅಭಿಪ್ರಾಯ ಹೇಳಲು ಹಿಂಜರಿಯಲಿಲ್ಲ.

ಕರ್ನಾಟಕ ಟಾಯಿಮ್ಸಕರ್ತರಿಗೆ ಸ್ವಕುಲ ದ ಮತ್ತು ಒಬ್ಬ ವ್ಯವಸಾಯ ಬಂಧುಗಳೇ ಕಿ ವಿ ಚುಚ್ಚಿ ಹೇಳಿದಂತಾಯಿತು. ಮ್ಯುನಸಿಪಾಲಿಟಿ ಯಲ್ಲಿ ಕಾರಸ್ಥಾನದ ಎಷ್ಟೋ ಕೃತ್ಯಗಳು ಬೈಲಿ ಗೆ ಬರತಕ್ಕವಿದ್ದು, ಅವನ್ನು ಸಮಯಾನುಸಾರ ಬರೆಯುವೆವು.

ಕುಮಾರಿ ಶಕುಂತಲೆಗೆ ಸ್ಕಾಲರಶಿಪ್ಪ-

ಬ್ಯಾಂಗಲರ ಪರಾಂಜಪೆಯವರ ಕುಮಾರಿ ಯು ಗಣಿತಶಾಸ್ತ್ರದಲ್ಲಿ ಉಚ್ಚ ಪ್ರತಿಯ ಶಿಕ್ಷಣ ಹೊಂದುವದಕ್ಕಾಗಿ ಇಂಗ್ಲಂಡಕ್ಕೆ ಹೋಗುವಳು.ಹಿಂ ದುಸ್ಥಾನ ಸರಕಾರದವರು ಇವಳಿಗೆ ವರ್ಷಕ್ಕೆ ೨೫೦ ಪೌಂಡುಗಳ ಶಿಷ್ಯವೇತನ ಕೊಡುವರು ಅಲ್ಲಿ ಮೂ ರು ವರ್ಷ ಅಭ್ಯಾಸ ಮಾಡಬೇಕಾಗುತ್ತದೆ. ತಂ ದೆಯಂತೆ ಮಗಳೂ ರ್‍ಯಾಂಗೆಲರಳಾಗಿ ಬರುವಳು.

ಮಹಾತ್ಮರು ಬಾದಶಹರಾಗಿದ್ದರೆ- ಹೇಗೆ ರಾಜ್ಯವಾಳುತ್ತಿದ್ದರು?

ದಕ್ಷಿಣ ಆಫ್ರಿಕೆಯಲ್ಲಿರುವ ಹಿಂದೀ ಜನರನ್ನು ಅನ್ಯಾಯ ಮತ್ತು ಅಪಮಾನಕಾರಕವಾಗಿ ನಡಿಸಿ ಕೊಳ್ಳುವ ಒಗ್ಗೆ ನಡೆದ ಲೋಕಚರ್ಚೆಯಲ್ಲಿ, ಹಿಂ ದೀ ಜನರು ರಾಜಾಧಿರಾಜರಾಗಿದ್ದರೆ- ಪಂಕೀಯರ ನ್ನು ಹೇಗೆ ನಡಿಸಿಕೊಳ್ಳುತ್ತಿದ್ದರೆಂದಾಗಿ ಮಿ. ಸ್ಪೊ ಡರರೆಂಬ ಸಾಹೇಬರು ಮಹಾತ್ಮರಿಗೆ ಪ್ರಶ್ನ ಮಾಡಿ ದ್ದಾರೆ. ತಾವು ಸಮ್ರಾಟರಾಗಿದ್ದರೆ- ಧರ್ಮರಾಜ ನಂತೆ ರಾಜ್ಯವಾಳುತ್ತಿದ್ದೆವೆಂದು ಮಹಾತ್ಮರು ಇವರಿ ಗೆ ಉತ್ತರ ಕೊಟ್ಟಿದ್ದಾರೆ. ಆ ಉತ್ತರದಲ್ಲಿ ಕಂಡು ಬಂದ ಮಹತ್ವದ ಸಂಗತಿಗಳನ್ನು ಇದರಡಿ ಕೊಡು ತ್ತೇವೆ:—

೧ ನಾನು ರಾಜಾಧಿರಾಜನಾದರೆ- ಬ್ರಿಟಿಶರಲ್ಲಿ ರುವ ಎಲ್ಲ ಜನರನ್ನು ಬಂಧುಭಾವದಿಂದ ಆದರಿಸು ವೆನು. ಅದರಲ್ಲಿ ಜಾತಿ, ಉಪಜಾತಿ, ಪಂಥ ಅಥ ವಾ ಕಪ್ಪಗೆ, ಬೆಳ್ಳಗೆ, ಕೆಂಪು ಎಂಬ ಭೇದ ಮಾಡುವದಿ ಲ್ಲ. ಎಲ್ಲರನ್ನೂ ದೇವರ ಮಕ್ಕಳೆಂದು ತಿಳಿಯುತ್ತೇನೆ

೨ ಹಿಂದುಸ್ಥಾನದಲ್ಲಿರುವ ಸೈನ್ಯವನ್ನು ತೆಗೆದು ಹಾಕುವೆನು. ಕಳ್ಳರು ತುಡುಗರಿಂದ ಪ್ರಜಾರಕ್ಷ ಣೆಯಾಗುವ ಮಟ್ಟಿಗೆ ಪೋಲೀಸರನ್ನು ಇಡುವೆನು

೩ ಆಳರಸರು ವಾಯವ್ಯ ಸರಹದ್ದಿನ ಕುಲಗಳಿಗೆ ಲಂಚಕೊಟ್ಟು ಅವರನ್ನು ಸಮಾಧಾನ ಪಡಿಸುವರು. ಈ ಪ್ರಕಾರ ನಾನು ಲಂಚಕೊಡತಕ್ಕವನಲ್ಲ. ಇ ವರ ಕೂಡ ಸ್ನೇಹ ಬೆಳೆಸಿ, ಇವರು ಸುಖವಾಗಿ ಜೀ ವಿಸುವಂತೆ, ಇವರಲ್ಲಿ ಸುಧಾರಣೆಯನ್ನು ತಜ್ಞರ ಜೇ ರೂರುವೆನು.

೪ ಹಿಂದುಸ್ಥಾನದಲ್ಲಿ ವಾಸವಾಗಿರುವಂಥ ಪ್ರತಿ ಯೊಬ್ಬ ಯುರೋಪಿಯನ್ನನ ಆಸ್ತಿ ಮತ್ತು ಜೀವಿತದ ಸಂಪೂರ್ಣ ಸಂರಕ್ಷಣೆಯ ಬಗ್ಗೆ ಜವಾಬದಾರಿ ಹೊರುವೆನು. ಮತ್ತು ಅವರು ಪ್ರಾಮಾಣಿಕತನ ದಿಂದ ಮಾಡಿಕೊಂಡಿರುವ ಎಲ್ಲ ವ್ಯಾಪಾರ ಉದ್ದಿ ಮೆಗಳ ಸಂರಕ್ಷಣೆ ಮಾಡುವೆನು.

೫ ಪರದೇಶದ ಬಟ್ಟೆಯು ಈ ದೇಶದಲ್ಲಿ ಮಾರಾ ಟವಾಗಲಿಕ್ಕೆ ಅಶಕ್ಯವೆನಿಸುವಷ್ಟು ಜಕಾತಿ ಕೂಡಿಸಿ, ಪ್ರತಿಯೊಬ್ಬನು ಸ್ವತಃ ನೂತು, ಸ್ವಂತಕ್ಕಾಗಿ ಬಟ್ಟೆ ಯನ್ನು ಮಾಡಿಕೊಳ್ಳುವಂತೆ ಪ್ರೋತ್ಸಾಹಿಸುವೆನು.

೬ ಪರದೇಶದಿಂದ ಬ್ರಾಂಡಿಯು ಬರದಂತೆ ಮಾ ಡುವೆನು. ಮತ್ತು ದೇಶದಲ್ಲಿರುವ ಎಲ್ಲ ಗಡಂಗಗ ಳನ್ನು ಬಂದು ಮಾಡಿಸುವೆನು. ವೈದ್ಯಕೀಯ ಉಪ ಯೋಗದ ಮಟ್ಟಿಗೇ ಸರೆ ಮತ್ತು ಅಫುಣಿನ ಉತ್ಪತ್ತಿ ಮಾಡಲು- ಅವಕಾಶವಿಡುವೆನು

೭ ಶಾಸನದ ಕುಲದ ನೈತಿಕ ವಿಚಾರಕ್ಕೆ ಅಸಹ್ಯ ಮತ್ತು ಅಪಮಾನಕರವಾದಂಥ ಎಲ್ಲ ಪ್ರಕಾರದ ದ ಮಾರ್ಗಚರಣೆಗಳಿಗೆ ಅವಕಾಶ ಕೊಡುವೆನು

೮ ಅಂತ್ಯಜರಿಗೆ ಸಾರ್ವಜನಿಕವಾದ ಎಲ್ಲ ದೇ ವಾಲಯ, ವಾಪೀ ಕೂಪ ಮತ್ತು ಕೆರೆಗಳಲ್ಲಿ ಹೋ ಗಲು ಅನುವು ಕೊಡುವೆನು

೯ ಹಿಂದೂ ಮುಸಲಮಾನ ಮುಖಂಡರನ್ನು ಕರಸಿ, ಅವರ ಕಿಸೆಯೊಳಗಿನ ತಿಂಡಿಯ ಮತ್ತು ಜ ಗಳದ ಎಲ್ಲ ಸಾಮಾನುಗಳನ್ನು ಇಸಗೊಂಡು, ಒಂದು ಕೋಣೆಯಲ್ಲಿ ಹಾಕಿ, ನಿಮ್ಮ ಜಗಳ ತೀರಿಸಿಕೊಳ್ಳಿ ರೆಂದು ಹೇಳುವೆನು. ರಾಜಿಯಾಯಿತೆಂದು ಹೇಳು ವ ತನಕ ಬಾಗಿಲವನ್ನೇ ತೆರೆಯುವದಿಲ್ಲ.

ಇಂಥ ಅನೇಕ ಸತ್ಕೃತ್ಯಗಳನ್ನು ಮಾಡಬ ಹುದು. ಆದರೆ ನಾನು ಬಾದಶಹನಾಗಿರುವದಿಲ್ಲ ವಲ್ಲ! ನಾನು ಕಲ್ಪನಾ ಸೃಷ್ಟಿಯಲ್ಲಿ ಬಾದಶಹನಾ ದರೂ, ಮೊದಲು ಬಡವರ ಕಷ್ಟನಷ್ಟಗಳು ದೂರಾ ಗುವಂತೆ ಮಾಡುವೆನು.

ಪಂಜಾಬದಲ್ಲಿ ಸಾಹುಕಾರರ ಮೇಲೆ ಸಂಕ್ರಾಂತಿಯು.

—೦—

ಸಾಲಕೊಟ್ಟ ಬಡ್ಡಿ ಮತ್ತು ದುಡ್ಡು ಮುಣುಗುವ ಕಾಯಿದೆ.

ಪಂಜಾಬದ ಕೌನ್ಸಿಲ ಸಭೆಯಲ್ಲಿ ಸಾಹುಕಾರ ರ ಬಡ್ಡೀ ವ್ಯವಹಾರದ ಮೇಲೆ ದಾಳಿ ತಂದ ಒಂದು ಕಾಯಿದೆ ಒಂದಿದೆ. ಈ ಕಾಯಿದೆಯನ್ನು ಸರಕಾರ ತಂದಿಲ್ಲ. ಒಬ್ಬ ಮುಸಲಮಾನ ಮೆಂಬರರು ತಂ ದಿದ್ದಾರೆ. ಮುಸಲಮಾನರಲ್ಲಿ ಸಾಲದ ಮೇಲೆ ಬ ಡ್ಡೀ ತಕೆಳ್ಳುವ ಪದ್ಧತಿಯಿಲ್ಲ. ಧರ್ಮವು ಹಾ ಗೆ ನಿರ್ಬಂಧನೆ ಮಾಡಿರುತ್ತದೆ. ಧರ್ಮವೊಂದು ತರಹ ಹೇಳಿದರೂ, ಪಠಾಣ ಬಡ್ಡೀ ತಕ್ಕೊಳ್ಳುವಂಥ ಮುಸಲಮಾನರು ಇದ್ದೇ ಇದ್ದಾರೆ. ಆದರೆ ಇವ ರು ಸ್ವಲ್ಪರು. ಮುಖ್ಯ ವ್ಯವಹಾರ ಮಾಡತಕ್ಕವರು ಹಿಂದೂ ಜನರು. ಹಿಂದೂ ಸಾಹುಕಾರರು ಸುಳ್ಳು ಲೆಖ್ಖ ಬರೆದು, ದುಬಾರಿ ಬಡ್ಡೀ ತಕ್ಕೊಂಡು, ಸಾಲ ಗಾರರನ್ನು ಮುಣುಗಿಸುತ್ತಾರೆಂದು ನೆವನ ಮಾಡಿ ಕೊಂಡು, ಈ ಬಡ್ಡೀ ವ್ಯವಹಾರಕ್ಕೆ ಬಾರ ಹಾಕ ಬೇಕೆಂಬ ದುರುದ್ದೇಶದಿಂದ ಬಿಲ್ಲು ತಂದಿದ್ದಾರೆ. ಸಾಹುಕಾರರೆಂದರೆ- ಕಾಂಬಲಿಕರು. ಸಾಲಗಾರ ರ ರಕ್ತ ಹೀರತಕ್ಕವರು. ಆದ್ದರಿಂದ ಇವರ ಪಾರ ಪತ್ಯವಾಗಬೇಕೆಂದು ಸರಕಾರದ ಹೊರಗಿನ ಉದ್ದೇಶ. ಮತ್ತು ತಮ್ಮ ಪ್ರೀತಿಯ ವಿಷಯವಾದ ಸಹಕಾರ ಸಂಘಗಳು ಬೆಳೆಯ ಬೇಕೆಂದು ಎರಡನೆಯ ಉದ್ದೇಶ ಇವೆರಡೂ ಉದ್ದೇಶಗಳಿಂದ ಸರಕಾರವು ಬಿಲ್ಲಿಗೆ ಆ ಶ್ರಯ ಕೊಟ್ಟಿರುತ್ತದೆ.

ಬಿಲ್ಲಿನ ಕಲಮುಗಳು ಸಾಹುಕಾರನ ಕುತ್ತಿಗೆ ಗೆ ಕತ್ತಿ ಹಾಕುವಂತಿರುತ್ತವೆ. ಸಾಹುಕಾರನು ಸಾಲಗಾರನಿಗೆ ಪ್ರತಿಯೊಂದು ಸಾರೆ ಮುಟ್ಟಿದ ರಕ ಮಿನ ಬಗ್ಗೆ ಪಾವತಿ ಕೊಡಬೇಕು. ಆರಾರು ತಿಂ ಗಳಿಗೊಮ್ಮೆ ಲೆಖ್ಖದ ಉತಾರ ಕೊಡಬೇಕು. ಮ ತ್ತು ಒಳ್ಳೇ ನಡತೆಯವನಿರುತ್ತಾನೆಂದು ಕೋರ್ಟಿನ ವಿಶ್ವಾಸವನ್ನು ಪಡೆಯುತ್ತಾ ಹೋಗಬೇಕು. ಒ ಮ್ಮೆ ಕೆಟ್ಟವನೆಂದು ಕೋರ್ಟಿಗೆ ಕಂಡು ಬಂದರೆ- ಕೋರ್ಟಿನ ಬಾಗಿಲಕ್ಕೆ ಹೋಗುವ ಈತನ ವ್ಯವಹಾ ರವೆಲ್ಲ ಸಂಶಯವುಳ್ಳದ್ದಾಗಿ, ಮುಣುಗಿ ಹೋಗುವ ದು. ಇದೂ ಅಲ್ಲದೆ ಸಾಲಗಾರನಿಗೆ ಸರಿಯಾಗಿ ಲೆಖ್ಖ ಕೊಡದಿದ್ದರೆ- ಕೋರ್ಟು ನನಮ ಮೊದಲನೆಯ ತಪ್ಪೆಂದು ಈತನ ಬಡ್ಡಿಯನ್ನು ಮೂಲ ರಕಮಿನ ೧/೫ ರಕಮನ್ನು ರದ್ದು ಮಾಡುವರು. ಎರಡು ಮೂರು ಸಾರೆ ತಪ್ಪಿದಸ್ಥನಾದರೆ- ಅಸಲು ಮತ್ತು ಬಡ್ಡಿ ಕೂಡ ಹೋಗುವದು. ಪಂಜಾಬದ ರಾಜ ಕೀಯ ಪರಿಸ್ಥಿತಿಯು ಯಾವಾಗಲು ಗಂಡಾಂತರದ್ದಾ ಗಿರುತ್ತದೆ ಪುಂಡ ಮುಸಲಮಾನರು ಹಿಂದೂ ಸಾ ಹುಕಾರನ ಮನೆಗೆ ಬೆಂಕಿ ಹಚ್ಚಿ, ಆತನ ಲೆಖ್ಖಪತ್ರ ದ ಪುಸ್ತಕಗಳನ್ನು ಸುಟ್ಟಿರಬಹುದು. ಕೋರ್ಟಿನ ಲ್ಲಿ ಆರಾರು ತಿಂಗಳಿಗೊಮ್ಮೆ ಕೊಡುವ ಲೆಖ್ಖದ ಕಾ ಗದಗಳು ಇಲ್ಲದಂತಾಗಿ, ದುಡ್ಡೇ ಮುಣುಗುವದು.

ಮುಸಲಮಾನ ಮೆಂಬರರು ಈ ಪ್ರಕಾರ ತಂ ದ ಕಾಯಿದೆಯನ್ನು ಹಿಂದೂ ಮೆಂಬರರು ಮಾತ್ರ ರಲ್ಲ, ಯುರೋಪಿಯನ್ನ ಮೆಂಬರರು ಕೂಡ ನಿಷೇ ಧಿಸಿ ತೀವ್ರವಾದ ಟೀಕೆ ಮಾಡಿದ್ದಾರೆ. ಈ ಕಾಯಿದೆಯು ಹಿಂದೂ ಮುಸಲಮಾನರಲ್ಲಿ ವೈಮನ ಸ್ಯ ಹೆಚ್ಚಿಸುವ ಹಿಡಿಯ ಮತ್ತಿಷ್ಟು ಪರಸ್ಪರ ಹುಟ್ಟಿಸಲು ಕಾರಣವಾಗಿರುತ್ತದೆ. ಪಾಸ- ಆಪಿತಿ ಯುಲ ಯುರೋಪಿಯನ್ನರು ಹಿಂದೂ ಜನರಿಗೆ ಅನು ಕೂಲರಾಗಿದ್ದರೂ, ಸರಕಾರವು ಪ್ರತಿಕೂಲವಾಗಿರು ವ್ಯದರಿಂದ, ಕಾಯಿದೆಯು ಪಾಸಾಗುವ ಭೀತಿಯೇ ಹೆಚ್ಚಾಗಿರುತ್ತದೆ.

ನೋಡಿಯು ಸಾಲಕ್ಕಲ್ಲ ಪತ್ರಿಕೆ

ಇದೇನು ರಾಜಕಾರಣವೋ! ಬುದ್ಧಿಗೇಡಿ ಕೋ ಎಂಬದಾಗಿ ವಿಚಾರಪೂರ್ವಕ ಮುಂದಾಳುವಿನಲ್ಲಿ ಪ್ರಕಟವಾದ ಲೇಖದ ಅವತರಣವನ್ನು ಬೇರೆ ಕಡೆಯಲ್ಲಿ ಅವತರಿಸಿಕೊಂಡಿದ್ದೇವೆ. ಈ ಅವತರಣವು ಬಹು ದೊಡ್ಡದಾದರೂ, ವಿಚಾರಪೂರ್ವದಲ್ಲಿ ಶ್ರೀ ಶ್ರೀನಿವಾಸರಾಯರು ಕೌನ್ಸಿಲ ಚುನಾವಣೆಗಾಗಿ ಉಮೇದವಾರರಾದ ಕೂಡಲೆ, ಅವರಿಗೆ ವಿರುದ್ಧವಿರುವ ಜನರ ಹೊಟ್ಟೆಯಲ್ಲಿ ಹೇಗೆ ಸಾಕೆ ಕಳವಳ ಹಾಕಿದಂತಾಗಿರುತ್ತದೆಂಬುದು ಸ್ಪಷ್ಟ ಕಂಡು ಬರುವದು. ಬ್ರಾಹ್ಮಣೇತರ ಸಮಾಜದಲ್ಲಿ ಯೋಗ್ಯರಾದ ಉಮೇದವಾರರು ದೊರೆತ... ವರ ಪಕ್ಷದಿಂದ ತಾವು ಹಿಂದೆ ಸರಿಯುವಂತೆ ಶ್ರೀ. ಶ್ರೀನಿವಾಸರಾಯರು ವಚನ ಕೊಟ್ಟಿದ್ದು ನಿಜ. ಈ ವಚನ ಭಂಗದ ಪಾಪವನ್ನು ಅವರು ಎಷ್ಟು ಮಾತ್ರ ಕಟ್ಟಿಕೊಂಡಿಲ್ಲೆಂದು ನಾವು ಎದೆ ತಟ್ಟಿ ಹೇಳುತ್ತೇವೆ.

ಯೋಗ್ಯ ಜನರೆಂದರೆ ಯಾರೆಂಬ ಪ್ರಶ್ನವು ಮುಖ್ಯವಾಗಿರುತ್ತದೆ. ಮುಂದಾಳು ಅಥವಾ ಕೆಲವೊಂದು ವರ್ಗದವರು ಬೆನ್ನು ಬಡಿಯುವ ಜನರೋ! ಕಾಂಗ್ರೆಸದಂಥ ರಾಷ್ಟ್ರೀಯ ಸಂಸ್ಥೆಯು ಯೋಗ್ಯರೆಂದು ಹೇಳುವ ಗೃಹಸ್ಥರೋ? ಎಂಬವರ ಸಾರಾಸಾರ ವಿಚಾರ ಮಾಡಬೇಕು. ಮುಂದಾಳುವಿನ ಮಂತ್ರವು ಅದಕ್ಕೆ ತಿಳಿಯುತ್ತದೆ. ಕಳೆದ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷದ ... ಈ ದಿನ ... ಕಾಂಗ್ರೆಸಂಗಳಿಂದ ಸ್ವರಾಜ್ಯ ಪಕ್ಷದ ಧ್ಯೇಯಧೋರಣೆಗಳು ಲೋಕಸಾಮಾನ್ಯರು ಉದಾಸೀನರಾಗಿರುವರು. ಕರ್ನಾಟಕದವರಾಗಲಿ, ಇನ್ನಾವ ಪ್ರಾಂತದವರಾಗಲಿ, ಕಾಂಗ್ರೆಸ ಪಕ್ಷದವರನ್ನೇ ಉಮೇದವಾರರನ್ನು ನಿಲ್ಲಿಸುವದು ... ನಂಬಿಕೆ ... ಕಾಂಗ್ರೆಸದ ಬೆಂಬಲ ... ಚುನಾವಣೆಯಲ್ಲಿ ... ಸ್ಪಷ್ಟವಾಗಿರುತ್ತದೆ. ...

ಮುಖ್ಯ ವಾದದ ಪ್ರಶ್ನವು ಸ್ವರಾಜ್ಯ ಪಕ್ಷದ ಉಮೇದವಾರರಿಗೇ ಮತ ಕೊಡಬೇಕೆಂಬುದಿರುತ್ತದೆ. ರಾಜವಾಡೆಯು ಹಳೆಯವರು. ವಿದ್ಯಾಸಾಗರ ಶ್ರೀ. ಕಂಡಸ್ವಾಮಿ ಚೆಟ್ಟಿಯವರಂತೆ ರಾಜಕಾರಣದ ಗತವಿಯ ಧೋರಣೆಗಳಲ್ಲಿ ಸರಕಾರಕ್ಕೆ ಕಳೆದು, ಸ್ವರಾಜ್ಯ ಪಕ್ಷದ ದೀಕ್ಷೆ ತೆಗೆದುಕೊಂಡು, ಉಮೇದವಾರರಾಗಿ ನಿಲ್ಲುತ್ತ, ಆಗ ಶ್ರೀ. ಶ್ರೀನಿವಾಸರಾಯರು ತಾವೇ ಅಗ್ರಹ ದುರಾಗ್ರಹ ಅಥವಾ ಹಟಮಾರಿತನದಿಂದ ಉಮೇದವಾರರಾಗಿ ನಿಂತರೆ. ಮುಂದಾಳುಕಾರರಂತೆ ನಾವು ಸಹ ಅವರಿಗೆ ಇದು ರಾಜಕಾರಣವಲ್ಲ; ಬುದ್ಧಿಗೇಡಿ ಮತ್ತು ಲಬ್ಧ ಪ್ರತಿಷ್ಠಿತ ಎಂದು ಅನ್ನುತ್ತೇವೆ. ಶ್ರೀ. ಶ್ರೀನಿವಾಸರಾವ ಕೌಜಲಗಿಯವರು ಬ್ರಾಹ್ಮಣರೆಂದು ನಾವು ಅವರನ್ನು ವಹಿಸುವದಿಲ್ಲ. ಸ್ವರಾಜ್ಯ ಪಕ್ಷದ ಧುರೀಣರೆಂದು ಬೆಂಬಲ ಕೊಡುತ್ತೇವೆ. ಮುಂದಾಳುಕಾರರ ... ತನ್ನ ... ವಿಚಾರ ... ಅವಿವೇಕ ಮತ್ತು ತಿಳಿಗೇಡಿತನದ್ದಾಗುತ್ತದೆ.

—

ಇನ್ನೇನು ರಾಜಕಾರಣವೋ!
ಬುದ್ಧಿಗೇಡಿತನ!

ಮಹಾನ ಶ್ರೀ. ಶ್ರೀನಿವಾಸರಾಯರು ಮೂರು ಸಾರೆ ಹಿಂದೆ ಕೌನ್ಸಿಲದಿಂದ ನಿಲ್ಲುವದು ... ಈ ಸಾರೆ ... ಜಿಲ್ಹೆಯ ಪ್ರತಿನಿಧಿತ್ವ ... ಇದೇ ... ನಾನು ಕೌನ್ಸಿಲಕ್ಕೆ ಉಮೇದವಾರನಾಗಿ ನಿಲ್ಲುವೆನು. ... ಹಾಕುತ್ತಿರುವರು ... ನಾನೇನು ಮಾಡಲಿ ... ಕೌನ್ಸಿಲದ ... ಉತ್ತರಕೊಟ್ಟು ... ಕಾಂಗ್ರೆಸ ... ಕಾಂಗ್ರೆಸದ ಮೊದಲೇ ... ಪ್ರಕಟಿಸಿ ... ಕೌಜಲಗಿಯವರಿಗೆ ... ಮುಂದಿನ ಸಂಗತಿಯು ... ಬ್ರಾಹ್ಮಣೇತರರಲ್ಲಿ ಯೋಗ್ಯ ಉಮೇದವಾರರು ಮುಂದೆ ಬಂದರೆ ತಾವು ತಮ್ಮ ಕೌನ್ಸಿಲ ಉಮೇದವಾರಿಯನ್ನು ಬಿಟ್ಟುಕೊಡುವೆನೆಂದು ... ಕೌಜಲಗಿಯವರಿಂದ ... ಇದರಂತೆ ಬ್ರಾಹ್ಮಣೇತರರು ಯೋಗ್ಯ ಉಮೇದವಾರರನ್ನು ... ಕೌಜಲಗಿಯವರು ... ನಿಲ್ಲಲು ... ಕೌನ್ಸಿಲಕ್ಕೆ ಉಮೇದವಾರರೆಂದು ... ಯೋಗ್ಯ ಉಮೇದವಾರರ ... ಕಾಂಗ್ರೆಸ ... ಯೋಗ್ಯ ಉಮೇದವಾರರೆಂದು ... ಬೇರೆ ... ಕೌನ್ಸಿಲ ... ವಿಶ್ವಾಸ ... ಕೌಜಲಗಿಯವರು ಇದೇ ಪಕ್ಷಕ್ಕೆ ... ತಿಳಿದರೆ ... ಹೋಗುವದು ಅನ್ಯಾಯದ ಕೆಲಸವಾಗಿದೆ.

ಎಚ್ಚರಿಕೆ! ಎಚ್ಚರ!

—

ಮೈಸೂರಿನ ಪ್ರಜೆಗಳಲ್ಲಿ ಅಸಂತೋಷ.

ಮೈ ಮಿರಜಾಸಾಹೇಬರು ದಿವಾನರಾಗುವ ಪೂರ್ವದಲ್ಲಿ ಮಹಾರಾಜರ ಪ್ರಾಯವ್ಹೇಟ ಸೇಕ್ರೆಟರಿಯಾಗಿದ್ದರು. ಇವರ ಸ್ಥಳದಲ್ಲಿ ಸರ ಟಾಡ ಹಂಟರರೆಂಬ ಸಾಹೇಬರು ಬರುವರೆಂದು ವರ್ತಮಾನವಾಯಿತು. ಮುಂದೆ ಮಹಾರಾಜರು ಯಾರನ್ನೂ ಈ ಕೆಲಸದಲ್ಲಿ ನೇಮಿಸಿಕೊಳ್ಳುವದಿಲ್ಲ; ತಾವೇ ಎಲ್ಲ ಕೆಲಸಗಳನ್ನು ನಿರ್ವಹಿಸುವರೆಂದು ಹೇಳಲ್ಪಟ್ಟಿತು. ಇದು ಯಾವಾಗಲು ನಂಬಲರ್ಹ ಸುದ್ದಿಯಾಗಿರಲಿಲ್ಲ. ಆದರೀಗ ಕೊನೆಯಲ್ಲಿ ನಿಜವಾಯಿತು. ಈ ಹೊದಲು ಪ್ರಸಿದ್ಧವಾದಂತೆ ಸರ ಟಾಡ ಹಂಟರ ಸಾಹೇಬರೇ ಮಾಸಿಗೇ ಕಾರಭಾರಿಯಾಗಿ ಬರುವರೆಂದು ದರಬಾರದಿಂದಲೇ ಪ್ರಸಿದ್ಧವಾಗಿರುತ್ತದೆ.

ಸರ ಟಾಡ ಹಂಟರಸಾಹೇಬರು ಮದ್ರಾಸ ಇಲಾಖೆಯಲ್ಲಿ ಕೌನ್ಸಿಲರ ಕೆಲಸ ಮಾಡಿದಂಥವರು. ಸರ ಸದಸಿಯಿಂದಲೇ ಇವರು ದೊಡ್ಡ ಕಾಯದಾರರಾಗಿರಬೇಕೆಂದು ಧ್ವನಿತವಾಗುತ್ತದೆ. ಸರ ಸಾಹೇಬರು ರಾಜ್ಯಕಾರಭಾರದಲ್ಲಿ ಎಷ್ಟೇ ನುರಿತವರಿದ್ದರೂ, ಅವರ ಆಗಮನವು ಮೈಸೂರ ಜನರಿಗೆ ಬೇಕಾಗಿರಲಿಲ್ಲ. ದಿವಾನರಿಗೆ ಜೊತೆಗೆ ಜನರನ್ನು ತರದೆ ಸ್ಥಳೀಯರನ್ನೇ ನೇಮಿಸಿಕೊಂಡಂತೆ, ಪ್ರಾಯವ್ಹೇಟ ಸೇಕ್ರೆಟರಿಯು ಕೆಲಸದಲ್ಲಿಯೂ ಸ್ಥಳೀಯರನ್ನೇ ನೇಮಿಸಿಕೊಳ್ಳಬೇಕಾಗಿತ್ತು ... ಇರುವದಿಲ್ಲ. ... ಸ್ಥಾನದಲ್ಲಿದ್ದ ಬಳಿಕ, ಪ್ರಾಯವ್ಹೇಟ ಸೇಕ್ರೆಟರಿಯಾಗಲಿಕ್ಕೆ ಇರುವದಿಲ್ಲೆಂದು ... ಹಿಂದಕ್ಕೆ ... ಈ ಕೆಲಸ ... ಆಗಿನ ಮತ್ತು ಈಗಿನ ಕಾಲಕ್ಕೆ ಬಹಳ ವ್ಯತ್ಯಾಸವುಂಟು. ರಾಜ್ಯಕಾರಭಾರದಲ್ಲಿ ಹಿಂದೀ ಜನರ ಸಾಗಿವಂತೆ ... ಇಂಗ್ಲಿಷ ಸರಕಾರದವರೇ ಒಪ್ಪಿದ್ದಾರೆ. ಯುರೋಪಿಯನ್ನರ ... ನೆಮಿಸುತ್ತಿದ್ದಾರೆ. ಸಾಮ್ರಾಜ್ಯ ಸರಕಾರವು ವಿಚಾರದಲ್ಲಿ ಪ್ರತ್ಯಕ್ಷವಾಗಿ ಕಂಡುಬರುವ ಸ್ಥಿತ್ಯಂತರವನ್ನು ಕಂಡು, ಮೈಸೂರ ಮಾತ್ರವಲ್ಲ; ಪ್ರತಿಯೊಂದು ಸಂಸ್ಥಾನವೂ ಸ್ವದೇಶಿಯರನ್ನು ಆದಷ್ಟು ಮುಂದೆ ತರುವದೂ ಸ್ವತಂತ್ರವಾಗಿ ... ಈ ದೃಷ್ಟಿಯಿಂದ ಶ್ರೀಮನ್ಮಹಾರಾಜರು ಸರ ಟಾಡ ಹಂಟರಸಾಹೇಬರನ್ನು ತಂದದ್ದು ಬೇರೇನು ಕ್ಕೆ ಗೌರವ ... ಆಗಿಲ್ಲೆಂದು ... ಹೇಳಬೇಕಾಗುತ್ತದೆ.

ಸ್ವಾತಂತ್ರ್ಯದ ಮಹಾರಾಜರವರು ವಿ... ಕಾಲದಲ್ಲಿ ಯುರೋಪಿಯನ್ನರನ್ನು ... ತಂದರು. ಆದರೆ ಈ ಸಾಹೇಬರು ಒಂದು ವರ್ಷ ... ಮಾಡದೆ, ... ಸಂಗತಿಯಿಂದಲೂ ಸಂಸ್ಥಾನಿಕರು ... ತೆಕ್ಕೆ ... ಸರ ಟಾಡ ಹಂಟರಸಾಹೇಬರು ... ಯೋಗ್ಯತೆ ಹೀನರಾಗಿಲ್ಲ. ... ಸಂಸ್ಥಾನದಲ್ಲಿ ಯುರೋಪಿಯನ್ನರ ... ಯಿಂದ ವಿಶ್ವಾಸ ... ಇಲ್ಲೆಂದೂ, ಸಮರ್ಥರೆಂಬ ... ಯೂ ಆಗಿದ್ದರೆ ... ಪ್ರಸಾದವಾಗಲಾರದೆಂದು ...

—

ಮೈಸೂರಿನ ಅಸೆಂಬ್ಲಿಯಲ್ಲಿ
ಮದ್ಯಪಾನದ ನಿರೋಧ.

ಬೇರೆ ಇಲಾಖೆಗಳಂತೆ ಮೈಸೂರ ಲೆಜಿಸ್ಲೆಟಿವ್ಹ ಅಸೆಂಬ್ಲಿಯಲ್ಲಿಯೂ ಪರಿಶೀಲನ ಮಾಡಲಾಯಿತು. ... ಕೊಡುತ್ತಿರುವ ಶ್ರೀ. ಡಿ. ... ಸರು ... ತಂದರು. ... ಕಡಿತವನ್ನು ಪೂರಾ ನಿಲ್ಲಿಸಬೇಕೆಂದು ಇವರ ಧ್ಯೇಯವಾಗಿದ್ದರೂ, ಅದನ್ನು ವರ್ಷ ವರ್ಷಕ್ಕೂ ಕಡಿಮೆ ಮಾಡುತ್ತಾ, ಕೊನೆಯಲ್ಲಿ ಅದನ್ನು ಕೆಲವು ವರ್ಷಗಳಲ್ಲಿ ಪೂರಾ ಒಂದು ಮಾಡಬೇಕೆಂದು ಇವರು ಸೂಚಿಸಿದ್ದಾರೆ. ಲೋಕಲ ಅಪ್ಷನ ಬಿಲ್ಲು ಪಾಸ ಮಾಡಿದರೆ ಈ ಉದ್ದೇಶವು ಸಿದ್ಧಿಗೆ ಹೋಗುವದೆಂದು ಇವರು ಮಾಡಿದ ಸೂಚನೆಯು ಒಪ್ಪುತಕ್ಕದಾಗಿದೆ. ವಿಲಾಯತಿಯಲ್ಲಿ ಅನೇಕ ಪಟ್ಟಣಗಳಲ್ಲಿ ಲೋಕಲ ಅಪ್ಷನದ ಕಾಯದೆಯುಂಟು. ಇದರಿಂದ ಇಷ್ಟು ಪರಿಣಾಮವೂ ಆಗಿರುತ್ತದೆ. ಇದರ ಜೊತೆಗೆ

೧ ಕುಡುಕರಿಗೆ ದಿನಕ್ಕೆ ಪ್ರಮಾಣದಿಂದ ಕೆರೆದು ಮಾರಬೇಕು.

೨ ಸಂತೆ ಮತ್ತು ಜಾತ್ರೆಯ ದಿವಸಗಳಲ್ಲಿ ಗಡಂಗುಗಳನ್ನು ಬಂದಿಡಬೇಕು.

೩ ದಿನಾಲು ಬರುವ ತಾಸುಗಳಿಗಿಂತ ಹೆಚ್ಚು ವೇಳೆ ವಹಾರ ಮಾಡಬಾರದು.

ಎಂಬ ಶ್ರೀ. ಚಂದ್ರಶೇಖರಯ್ಯನವರ ಮೇಲಿನ ಸೂಚನೆಗಳನ್ನು ಮೈಸೂರ ಸಾಹಿತಿಗಳು ಮಾತ್ರವಲ್ಲ; ಬೇರೆ ಇಲಾಖೆಗಳ ಮದ್ಯಪಾನ ಪ್ರತಿಬಂಧದ ಪ್ರಶ್ನೆಯೆಂದು ಅವಲೋಕಿಸುವಂತೆ ಇರುತ್ತವೆ.

ಸರಕಾರ ಪಕ್ಷದಿಂದ ಅಬಕಾರಿ ಖಾತೆಯ ಅಧಿಕಾರಿಗಳಾದ ಮಿ. ಬೆಳವಡಿ ರಾಮಸ್ವಾಮಯ್ಯನವರು ಈ ಸೂಚನೆಗಳನ್ನು ಅಂಗೀಕರಿಸದೆ, ಸರಕಾರದವರು ಸ್ವತಃ ನ ಪ್ರತಿಬಂಧ ಮತ್ತು ವರ್ಗ ವರ್ಗಗಳಲ್ಲಿಯೂ ಪ್ರಯತ್ನ ಮಾಡುವದರಿಂದ ಉತ್ಪಾದನ ಕಡಿಮೆ, ಸರಕಾರದ ಆದಾಯವು ಈ ಜಾತಿಯ ಪಟ್ಟಿಗೆ ಕಡಿಮೆಯಾಗುತ್ತಿರುವದರಿಂದ ಹೇಳಿದ್ದಾರೆ. ಸಂಸ್ಥಾನಕ್ಕೆ ಕುಡುಕರಿಂದ ವರ್ಷಕ್ಕೆ ೭೧ ಲಕ್ಷದ ಆದಾಯವಿತ್ತು. ಕಳೆದ ಮೂರು ವರ್ಷಗಳಲ್ಲಿ ೭ ಲಕ್ಷ ೭೩ ಸಾವಿರ ಆದಾಯ ಕಡಿಮೆಯಾಗಿದೆ. ನಡೆಯುವ ವರ್ಷದಲ್ಲಿ ಪುನಃ ಒಂದೂವರೆ ಲಕ್ಷ ಕಡಿಮೆಯಾಗುವದು ಇದೇ ರೀತಿಯಿಂದ ಕಡಿಮೆಯಾಗುತ್ತಾ ಹೋಗುವದೆಂದು ಇವರ ಭಾಷಣದ ತಾತ್ಪರ್ಯವಾಗಿರುತ್ತದೆ. ಇವರ ಭಾಷೆಯಂತೆ ಪ್ರತಿ ವರ್ಷ ಒಂದೂವರೆ ಲಕ್ಷದ ಆದಾಯ ಕಡಿಮೆಯಾಗುತ್ತಾ ಹೋದರೆ ಮದ್ಯಪಾನವು ಪೂರಾ ಬಂದಾಗಲಿಕ್ಕೆ ೪೦ ವರ್ಷಗಳು ಬೇಕಾಗುವವು.

ಇಂಗ್ಲೀಷ ಅಧಿಕಾರಿಗಳಾಗಲಿ, ಸಂಸ್ಥಾನದವರಾಗಲಿ, ಜನರನ್ನು ಕುಡಿತವನ್ನು ನಿಲ್ಲಿಸಿದರೆ ಜನರು ಕಳ್ಳ ಸರೆ ಮಾಡುವರೆಂದು ದೊಡ್ಡ ಆಕ್ಷೇಪಣೆ ಹೇಳುತ್ತಾರೆ. ಕಳವು ಸುಡುಗು ಮಾಡಿದವರಿಗೆ ಶಿಕ್ಷೆ ಕೊಡಬೇಕೆಂದು ಪಿನಲ ಕೋಡಿನಲ್ಲಿ ಹೇಳಿದ್ದರೂ, ಕಳವು ಸುಡುಗುಗಳು ನಡೆಯದೆ ... ಆದಕೆ ... ಮದ್ಯಪಾನದ ಸಾಧನಗಳು ... ಮಾಡದೆ ಹಕ್ಕೇ ವರ್ಗಗಳಲ್ಲಿ ಕರಡು ಹೇಗಿತ್ತೋ ... ಕಳ್ಳರಿಗೆ ಶಿಕ್ಷೆ ಮಾಡುವಂತೆ ಕದ್ದು ಮಾರುವವರಿಗೂ ಶಿಕ್ಷೆ ಮಾಡಕ್ಕೆ ಹೋದರೆ ಅದರ ನಿವಾರಣೆಯಾಗುವದು. ಇದರಿಂದ ಇದ್ದು ಮಾಡುವದೆಂಬ ವ್ಯರ್ಥ ಸನದ ಹೇಳಬಾರದೆಂದು ಶ್ರೀ ಚಂದ್ರಶೇಖರಯ್ಯನವರಿಗೆ ನಾವು ಅಗತ್ಯವೂ ... ಸೂಚಿಸುತ್ತೇವೆ.

—

ಮೈಸೂರಲ್ಲಿ ವಿಚಿತ್ರ ಸುಕುಮು.

—೦—

ಸ್ತ್ರೀಯ ಜೀವಿ ಮೇಲೆ ಸಂಕ್ರಾಂತಿ.

ಇತ್ತೀಚಿನ ಮೈಸೂರ ಸ್ತ್ರೀ ... ಎಂದೇ ... ಮೊರದು ... ಸಾಹಿತ್ಯ ... ವಿಕ ... ಆದರೂ, ... ಗುತ್ತದೆ ... ದೇಶದ ಸಾಮಾಜಿಕ ಸ್ಥಿತಿಯು ಬಹುಮಟ್ಟಿಗೆ ದುರವಸ್ಥೆಗೆ ಒಂದಿರುತ್ತದೆ. ಈ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಒಂದು ಕಾಯದೆ ನಡೆಸುವರು. ಕಾಯದೆಯು ಲೋಕವಿಚಿತ್ರವಾಗಿರುತ್ತದೆ. ಇತರಿಂದ-

೧ ಸಾರ್ವಜನಿಕ ಹಿತಸಂಬಂಧವಿದ್ದ ಯೊಕ್ತು ಯಾರೂ ಒಂದು ವರ್ಷದ ಕನಕ ಪನಿಗೆ ಕನ್ನ ಕಟ್ಟಿಕೊಳ್ಳಲಾಗದು.

೨ ಹೊಸದಾಗಿ ಸಾಂಘಿಕಯು ಅಂಗಡಿ, ಊಟದ ಮನೆ ಮತ್ತು ಲೇವಡಿಗಾರರ ಅಂಗಡಿ ಮತ್ತು ಸ್ವಕ್ಷಣಾಲೆ ಹಾಕಬಾರದು.

೩ ನಿತ್ಯದ ವರ್ತಮಾನ ಪತ್ರಗಳ ಪುಟಗಳು ಆರಕ್ಕಿಂತ ಹೆಚ್ಚಿರಬಾರದು. ಮತ್ತು ಅಗಿದ್ದ ಅಕ್ಷರಗಳನ್ನು ಹೆಚ್ಚಿಸಬಾರದು.

೪ ಅಲ್ಕೋಹಾಲವೆಂಬ ಸಾರಾಯ ಕೂಡಿಸಿದ ಹೊಸ ಪೆಟ್ರೋಲ ನೂರಕ್ಕೆ ದೊರೆಯಲಾರದು.

೫ ಸಾಹುಕಾರರು ಉಗುರಿಂದ ದುಡಿಸಿಕೊಳ್ಳುವ ಶಾಸುಗಳನ್ನು ಹೆಚ್ಚಿಸಬೇಕು.

—

ಗೋವೆಯ ಗವ್ಹರ್ನರರ ರಾಜೀನಾಮೆ.

ಗೋವೆಯ ಗವ್ಹರ್ನರರಾಗಿದ್ದ ಜಾನಮಾರ ವಾರಿಯಾಸೋ ವಾರ್ಟಿನ್ಸ ಸಾಹೇಬರು ಲಿಸಬನ ದರಬಾರದ ಕೂಡ ಭಿನ್ನಾಭಿಪ್ರಾಯವಾದ್ದರಿಂದ ರಾಜೀನಾಮೆ ಕೊಟ್ಟು, ಸ್ವದೇಶದ ದಾರಿ ಹಿಡಿದಿದ್ದಾರೆ. ಹಿಂದುಸ್ಥಾನಕ್ಕೆ ಬರುವ ಇಂಗ್ಲೀಷರ ಗವ್ಹರ್ನರ, ಗವ್ಹರ್ನರ ಜನರಲರು ಸ್ವದೇಶದಲ್ಲಿ ಯಾವದೇ ಮತದವರಾಗಿದ್ದರೂ, ಈ ದೇಶಕ್ಕೆ ಬಂದ ಕೂಡಲೆ, ವಿಲಾಯತಿಯ ಮುತ್ಸದ್ದಿಗಳಿಗೆ ಹೌದು, "ರಾಜಾ ಬೋಲೆ, ದಳ ಹಾಲೆ" ಎಂಬಂತಾಗುತ್ತಾರೆ!!

ಲಗ್ನದ ಸಾಹಿತ್ಯ.

ಲಗ್ನಕ್ಕೆಂದು ಸೋಸಿನ ಸ್ತ್ರೀಯರು ಊಟ ಪಾಟಗಳ ಸಾಹಿತ್ಯವನ್ನು ಮಾಡುವರು. ನಾಲ್ಕು ಜನರನ್ನು ನೆರೆಯಿಸಿ ಆ ಸಾಹಿತ್ಯದ ಸೊಗಸು ಮಾಡುವರು. ಆದರೆ ನನಗೆ ಬೇಕಾದ ಸಾಹಿತ್ಯವು ಅದಲ್ಲ. ಹಾಗೆಂದರೆ ಅದು ಬಾಯಿಗೆ ಸವಿದೋರುವ ಸಾಹಿತ್ಯವಲ್ಲ; ಕುಳಿತು ತಿನ್ನುವ ಸಾಹಿತ್ಯವು ಅದು ಆದರೆ ನನಗೆ ಮೆಚ್ಚುವ ಸಾಹಿತ್ಯವೆಂದರೆ ಹುಡುಮಕ್ಕಳ ಒಗಟುಗಳು, ಭೂಮದ ಹಾಡುಗಳು ಇತ್ಯಾದಿ, ಹೆಣ್ಣು ಮಕ್ಕಳ ಹಾಡುಗಳೇ ಸೊದಲು ಸಂಸಾರವಾಗಿರುತ್ತವೆ. ಅಂದರೆ ಸಂಳವಾಗಿ ಸರಸವಿರುತ್ತವೆ. ಅಪ್ಪೊಂದು ದಾಂಪತ್ಯದಲ್ಲಿ ತಮ್ಮ ವ್ಯಕ್ತಿತ್ವವನ್ನೇ ಹೊಂದಿ ಸ್ತ್ರೀಹೃದಯಕ್ಕೆ ಸಲ್ಲುವ ಸೌಭಾಗ್ಯ ಮಣಿಗಳಾಗಿ ಬಾಳುತ್ತವೆ. ಅವುಗಳಲ್ಲಿ ಭೂಮದ ಹಾಡುಗಳು ಜಸೆಕರೆಯುವ ಹಾಡುಗಳು ಆರತಿಯ ಹಾಡುಗಳು ಮುಖ್ಯದ ಹಾಡುಗಳು ಇವೇ ಅನೇಕ ಕಾಲದಿಂದ ನಮ್ಮ ಕನ್ನಡದಲ್ಲಿ ಹಳಸದೆ ಇರುತ್ತಿದ್ದ ವಿಷಯವು ಮಾನಾರ್ಹವೇನೋ ನಿಜ. ಆದರೆ ಆ ದ್ವಿಕಪ್ಪಿ ಕುರೀಮರಿಗಳ ಹಿಂಡಿನಲ್ಲಿ ಸೇರಿದ ತೋಳ ನಂತೆ ಈ ಊಟ್ಟಿಯ ಒಗಟುಗಳು ಮಾತ್ರ ಮರಾಠಿ ಸ್ವರೂಪದಲ್ಲಿ ನಮ್ಮ ಹೆಣ್ಣು ಮಕ್ಕಳ ಬಾಯರುಚಿಯನ್ನು ಕಡಿಸುತ್ತ ಆ ಭಾಷೆಯನ್ನು ಸಹ ದೂಷಿಸುತ್ತ ಇದ್ದು ಬಿಟ್ಟಿವೆ. ಈ ಶೋಚ್ಯವಾದ ಸ್ಥಿತಿಯನ್ನು ಹೊಂದಿರಬೇಕೆಂದರೆ ನಾವು ಪರ್ಮದಿಂದ [illegible] ಮಾಡುವೆವೆಂದು ಮರಾಟಿಗರು ಬಗೆಯುತ್ತಾರೆ. ಯಾಕಂದರೆ ಕನ್ನಡ ಶಾಲೆಗೆ [illegible] ಬಾಳಾ ಎಂದರೆ ಮರಾಠಿಯ ಶಾಲೆಯ ದ್ವೇಷವಾದಂತಾ ಯಿತು ಎಂದು ಇವರ ಭಾವನೆ. ಆದರೆ ಇದರ ಮೂಲದಲ್ಲಿ ದ್ವೇಷವು ಯಾರಲ್ಲಿದೆ ತಿಳಿದುಕೊಳ್ಳಬೇಕು. ಇಷ್ಟೊಂದು ಮಾತೇಂದರೆ ಆ ಭಾಷೆಯ ಸವಿಯನ್ನೇ ಕಾಣದೆ ಒಗಟುಗಳ ಪ್ರಾತಿಯಾಗಿ ಅದನ್ನು ಓದುವ ನಮ್ಮ ಹುಡುಮಕ್ಕಳು ಎಷ್ಟು ಅಶುದ್ಧವಾಗಿ ಚ್ಯಾಚ್ಯಾ ಮಾಡುವರೆಂಬುದನ್ನು ಹೇಳಲಾಸವಲ್ಲ. ಆದುದರಿಂದ ಕನ್ನಡ ಒಗಟುಗಳು ಪ್ರಚಾರದಲ್ಲಿ ಬರಲಿ ಎಂಬ ಸದ್ವಿಚಾರದಿಂದ ಕೆಲವು ಒಗಟುಗಳನ್ನು ಕೆಳಗೆ ಮೇಲ್ ಪಂಕ್ತಿಗಾಗಿ ಕೊಡುತ್ತೇವೆ.

ಇನ್ನು ಒಗಟುಗಳ ಪದ್ಧತಿಯೋ ನಮ್ಮದಲ್ಲ ಅದು ಮಹಾರಾಷ್ಟ್ರದ ಪರಿಪಾಠವಿದ್ದು ಅದನ್ನು [illegible] ಪ್ಪವರು ಅದರ ಭಾಷೆಯನ್ನಾದರೂ ಯಾಕೆ ಒಪ್ಪಿಕೊಳ್ಳಬಾರದು ಎಂದು ಕೆಲವರ ಆಕ್ಷೇಪಣೆ, ಆದರೆ ಹೀಗೆ ಒಪ್ಪುತ್ತ ಕುಳಿತರೆ ಈ ಒಪ್ಪಂದದ ಪರಿಣಾಮವು ಮೆಲ್ಲನೆ ಕನ್ನಡಿಗನ ವ್ಯಕ್ತಿಂಗತವಾಗುವ ವ್ಯಕ್ತಿ ವಿನಾಶಕ್ಕೇ ಒಯ್ದು ಮುಟ್ಟಿಸುವದಿಲ್ಲವೇ? ಅಂತೇ ನಮ್ಮ ಅಭಿಪ್ರಾಯವೇಂದರೆ ಮರಾಠಿಯ ಸ್ವರೂಪದಲ್ಲಿ ಈಗ ಇದ್ದ ತಪ್ಪಿಗೆ ಈ ಪದ್ಧತಿಯು ಪರಿಣಾಮವಲ್ಲ- ಅದು ಹಿಂದಿನಿಂದ ನಮ್ಮಲ್ಲೇ ಇದ್ದು ಅದನ್ನು ಒಂಟಿಗಾಲಿನ ಮೇಲೆ ನಿಂತು ಕಾಯುವದು ನಮ್ಮ ಕರ್ತವ್ಯ.

ಎಷ್ಟರ ಮಟ್ಟಿಗೆ ಈ ಹೊಸ ಒಗಟುಗಳನ್ನು ಹೆಣ್ಣು ಮಕ್ಕಳು ಪ್ರೀತಿಸಿ ಮದುವೆಯಲ್ಲಿ ರೂಢಿಸುವರೆಂಬುದು ಕಾಲನ ಹೊಣೆಯು ಅದಕ್ಕೆ ನಾವು ಹೆದರಿ ಹಿಂಜರಿಯ ಕೂಡದು. ಒಂದು ರೀತಿಯಿಂದ ಸ್ವಾರಸ್ಯವನ್ನು ಹುಟ್ಟಿಸುವಂತ ಒಗಟುಗಳ ಸ್ವತಂತ್ರ ಪುಸ್ತಕಗಳನ್ನು ರಸಿಕರು ಬರೆದು ತೊಟ್ಟಿಲದಲ್ಲಿ ಹಾಕಿದರೆ ಅವು ತಾವೇ ಹೆಸರುಗೊಳ್ಳುವವು. ಆದರೆ ಇದೆಲ್ಲ ರಸಕಾರ್ಯಕ್ಕೆ ಮುನ್ನುಡಿಯೆಂದು ಎಲೆಯ ಒಗಟುಗಳನ್ನು ಕನ್ನಡವೆಂದು ಮೊದಲು ಓದಲಿ ಎಂದು ಅರ್ಪಿಸುತ್ತೇವೆ.

೧ ಕಂಗಾಲ ಕಾಲಕ ಕಗ್ಗವಿದೆಯೋ ಮೆಟ್ಟು .... ರಾಯರಿಗೆ ಹಾಕಿರುವೆ ಕುಂಕುಮದ ಬಟ್ಟು

೨ ಮನೆಗೆದ್ದು ನೂರು ಗೆದೆಯುವದೇ ಸೆಷ್ಟು .... ರಾಯರಿಗೆ ನಾ ಹಚ್ಚುವೆ ಅರಿಷಣದ ಅಚ್ಚು

೩ ದೇಶಸೇವೆಗೆ ಸಿದ್ಧರು ದಾಸರಂಥ ವೀರರು .... ರಾಯರಿಗೆ ನಾ ಸಿಡಿಸುವೆ ಗುಲಾಬಿ ಪನ್ನೀರು

೪ ಭಾರತದಲ್ಲಿ ಕರ್ನಾಟಕವೇ ಅತಿ ಉದಾರ.... ರಾಯರಿಗೆ ನಾ ಹಚ್ಚುವೆ ಅತ್ತರದ ದಿಲ್‌ಬಹಾರ

೫ ದೇಶ ದೇಶ್ಗೆಗೆ ಧರ್ಮವೇ ಮೂಲ .... ರಾಯರಿಗೆ ಹಾಕಿಸುವೆ ಕರಿಕ ತಾಂಬೂಲ

೬ ವಿದ್ಯೆಗೆ ವಿನಯವೇ ಆಧಾರ .... ರಾಯರಿಗೆ ನಾ ಹಾಕುವೆ ಸುಪುಷ್ಪಹಾರ

೭ ಪತಿವ್ರತೆಯಾಗುವದೇ ಸತಿಯ ಧರ್ಮಸಾರ

.... ರಾಯರಿಗೆ ನಾ ಮಾಡುವೆ ನಮ್ರೇಮ ನಮಸ್ಕಾರ

ಇವೆಲ್ಲ ಊಟ್ಟಿಯ ವಿಧಾನವನ್ನನುಸರಿಸಿ ಇವೆ. ಈ ವಗಟುಗಳಲ್ಲಿ ಮೊದಲಿನ ವಚನಕ್ಕೂ ಮುಂದಿನ ವಿಧಾನಕ್ಕೂ ಇರುವ ಪೂರ್ವಾಪರ ಸಮ್ಬಂಧವೇ ಒಂದು ವಿನೋದ. ಇನ್ನು ಬೇರೆ ಮಾಡಬೇಕು. ಆದರೆ ಅವಕ್ಕಿಲ್ಲಿ ಎಡೆ ಇಲ್ಲ. ಒಂದು ಪುಸ್ತಕವನ್ನು ಮಾಡಬೇಕಾದರೆ ಮೈಸೂರಿನಿಂದ ಒಗಟುಗಳನ್ನು ತರಿಸಿಕೊಳ್ಳುವದು ಒಂದು ದೊಡ್ಡ ಕೆಲಸವಿದೆ. ಹಾಗಾದಲ್ಲಿ ಕನ್ನಡ ಸಾಂಪ್ರದಾಯದ ಶಬ್ದ ಬಗೆಯು ನಮಗೆ ತಿಳಿಯದೆ ಹೋಗಲಿಕ್ಕಿಲ್ಲ.

ರಸಿಕ ರಂಗ, ಕನ್ನಡಿಗ

ಸಾತಾರಿಯ ವತನದಾರರ ಪರಿಷತ್ತಿನಲ್ಲಾದ ಠರಾವುಗಳು.

ಈ ಸಭೆಯಲ್ಲಿ ೪೦ ಠರಾವುಗಳು ಪಾಸಾದವು. ಕೆಲವನ್ನು ಇದರದಿ ಕೊಡುತ್ತೇವೆ.

೧ ಹೊಲದ ಮುಟ್ಟುವಳಿಯ ಮೇಲೆ ಪ್ರಾಸ್ತಿಮುಕರ ಕೂಡಿಸಬೇಕೆಂದು ಕರ ಕಮಿಟಿಯವರು ಮಾಡಿದ ರಿಪೋರ್ಟಿನ ನಿಷೇಧ.

೨ ಮುಂಬಯಿ ಇಲಾಖೆಯ ಸರಿಯಿಂದ ಮೆ [illegible]

[illegible]

೩ [illegible] ಹೊಸ ಕಾಯಿದೆ [illegible] ಪ್ರಕಾರ ಇನಾಮದಾರರು ತಮ್ಮ ವತನದಿಂದ ಹೊಂದುವ [illegible] ಹಕ್ಕು ಹೋಗಿದೆ. ಅದು [illegible]

[illegible] ಇನಾಮದಾರರಿಗೆ ಎಲ್ಲ [illegible] ಮತ್ತು ಧರ್ಮ [illegible] ಪ್ರತಿಯ ಕೆಲಸ ಕೊಡ [illegible] ಯೋಗ್ಯ ಶಿಕ್ಷಣ ಕೊಡಬೇಕು

[illegible] ಸರಕಾರದವರು ಇನಾಮದಾರರಿಗೆ [illegible] ಪ್ರಕಾರ [illegible] ಅವರ [illegible] ಜಪ್ತ ಮಾಡದೆ, [illegible] ಜಪ್ತ ಮಾಡಬೇಕು ಸರಕಾರಕ್ಕೆ [illegible] ಅಧಿಕಾರವಿರಕೂಡದು

೬ ಇನಾಮದಾರ ಜಹಾಗೀರದಾರರಿಂದ ಲೋಕಲ ಫಂಡನ್ನು ವಸೂಲ ಮಾಡುವದಕ್ಕಾಗಿ ಕಾನಿ [illegible] ಮಹಸೂಲಿಯು ಕೊಡಲ್ಪಡುತ್ತದೆ. ಇದು ಅನ್ಯಾಯವಾಗಿದ್ದು, ಇದನ್ನು ಒಂದು ಮಾಡಬೇಕು

೭ ಇನಾಮದಾರರು ಮಾಡುವ ಮುದ್ದತಿ ದಾವೆಯ ಪ್ರಕರಣಗಳ ನಿಕಾಲೆಯನ್ನು ವಸೂಲ ಸಹಿತವಾಗಿ ಎರಡು ತಿಂಗಳಲ್ಲಿ ಮಾಡಬೇಕು. ಮತ್ತು [illegible] ವೇಳೆಗೆ ವಸೂಲಿ ಕೊಡದಂಥ ರೈತನಿಗೆ ಯೋಗ್ಯ ದಂಡ ಮಾಡಬೇಕು.

೮ ರೈತನು ಎರಡು ಅಥವಾ ಮೂರು ಸಾರೆ ವಸ್ತ್ರ ಕೊಡದಿದ್ದರೆ ಆತನ ಭೂಮಿಯನ್ನು ಖಾಲಸಾ ಮಾಡಬೇಕು.

೯ ಗ್ರಾಮಸ್ಥರು ವಸೂಲಿ ತಾರೀಖಿನಿಂದ ೧೫ ದಿವಸಗಳಲ್ಲಿ ಇನಾಮದಾರರ ಹಪ್ತೆಯನ್ನು ವಸೂಲ ಮಾಡಿ ಕೊಡದಿದ್ದರೆ- ಇವರ ಸಂಬಳವನ್ನು ಒಂದು ಮಾಡಬೇಕು.

೧೦ ದಕ್ಷಿಣದ ಸರದಾರರ [illegible] ೧/೬ [illegible] [illegible] ಅದುದರಿಂದ [illegible] ಮಾಡಿ, [illegible]

೧೧ [illegible] ಇನಾಮದಾರರಿಗೆ ಇ [illegible] ತೆಗೆದು [illegible] ದ್ದಾರೆ. ಈ ಕೃತ್ಯವು ಇನಾಮದಾರರ ಗೌರವ ಪ್ರತಿಷ್ಠೆಗೆ [illegible] ಅದ್ದರಿಂದ ಸರಕಾರವು ಮೊದಲಿನಂತೆ ಅನುಲಿಸಬೇಕು.

ಸ್ವೀಡನ ಅರಸನು ಬಾಳಕನ ಪ್ರದೇಶದ ವರದಿಗಳನ್ನು ಕೇಳುವದಕ್ಕಾಗಿ ಲಂಡನಕ್ಕೆ ಧಯಮಾಡಿಸಿದ್ದಾರೆ.

ಜಾಹೀರಾತು

[illegible] ದಿನದ ಸಭೆಯನ್ನು ೧೧ ನೆಯ ತಾರೀಖಿನ [illegible] ಕೆಂದು ಗೊತ್ತಾಗಿರುತ್ತದೆ. [illegible] ನಡುವೆ ಉಂಟಾಗಿರುವ [illegible] ಬಗ್ಗೆ ವಿ

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ

ಜವಳಿ ಪೇಟ ಧಾರವಾಡ

ಸ್ಥಾಪನಾ ೧೯೦೬

೧೯೦೫ನೇ ಇಸ್ವಿಯ ಮುಂಬಯಿ ಕೋ. ಆಪರೇಟಿವ್ಹ ಆಕ್ಟಿನ ಪ್ರಕಾರಾ ರಜಿಸ್ಟರ ಮಾಡಲ್ಪಟ್ಟದೆ

ಚಾಲತಿ ಠೇವು (Current Deposits) ೭ನೇ ತಾರೀಖಿನ ಒಳಗಾಗಿ ಒಂದು ತಿಂಗಳ ವರೆಗಿನ ಠೇವಿಗೆ ೧೦೦ಕ್ಕೆ ೧ ವರ್ಷಕ್ಕೆ ೩ ೩/೪ರಂತೆ ಬಡ್ಡಿಯು ಕೊಡಲ್ಪಡುವದು.

ಚಾಲತಿ ಲೆಖ್ಖದ (Current Accounts) ದಿನದ ಶಿಲ್ಕಿನ ಮೇಲೆ ೧೦೦ಕ್ಕೆ ೧ ವರ್ಷಕ್ಕೆ ೨॥ ಯಂತೆ ಬಡ್ಡಿಯು ಕೊಡಲ್ಪಡುವದು.

ನಿಶ್ಚಿತ ಠೇವು (Fixed Diposit) ಇನ್ನೊಂದು ನೋಟೀಸು ಕೊಡುವವರಿಗೆ ಕೆಳಗೆ ಕಾಣಿಸಿದ ಅವಧಿಯ ನಿಶ್ಚಿತ ಠೇವಿಗೆ ಅವರ ಮುಂದೆ ತೋರಿಸಿದ ಬಡ್ಡಿಯು ಕೊಡಲ್ಪಡುವದು,

೩ ತಿಂಗಳಿಗೆ	೧೦೦ಕ್ಕೆ	೧ ವರ್ಷಕ್ಕೆ	೫ ೦ ರಂತೆ
೬ ,,	,,	,,	೪ ೧/೨ ,,
೯ ,,	,,	,,	,,
೧೨ ,,	,,	,,	೬ ೧/೨ ,,
೨೪ ,,	,,	,,	೭ ,,
೩೬ ,,	,,	,,	೭ ೧/೨ ,,
೪೮ ,,	,,	,,	೭ ೩/೪ ,,
೬೦ ,,	,,	,,	[illegible] ,,

ಚಿಕ್ಕಾಗನನ್ನೂ ಹುಂಡಿಗಳನ್ನೂ ಹಣ ವಸೂಲಿಗಾಗಲೀ ಹಣ ತಕೊಳ್ಳಲಿಕ್ಕಾಗಲೀ ಪೇಟಿಯ ದರದಂತೆ ಕೊಡುವೆವು. ಹಾಗೂ ತಕೊಳ್ಳುವೆವು.

ಮುಂಬಯಿ ಹುಂಡಿಗಳನ್ನು ಕೊಡುವೆವು ಸರಕಾರೀ ಕಾಗದಗಳ ಮೇಲೆ ಅಥವಾ ಯೋಗ್ಯ ತಾರಣಗಳ ಮೇಲೆ ಸಾಲಗಳನ್ನು ಕೊಡುವೆವು.

ಬೇರೆ ರೀತಿಯ ಮಾಹಿತಿಗಾಗಲೀ ವ್ಯವಹಾರಗಳ [illegible] ಪತ್ರಿಕೆಗಳಿಗಾಗಲೀ ಆಫೀಸಿನಲ್ಲಿ ಸೆಕ್ರೆಟರಿಯವರ ಕಡೆಗೆ ಚೌಕಸಿ ಮಾಡಬೇಕು.

ತಾ॥ ೧೨-೬-೧೯೩೬

M. B. JAKATI,
ಮಾನೇಜಿಂಗ ಡಾಯರೆಕ್ಟರ

ಮಾತಾಡುವ ಔಷಧವು.

ಅಜ್ಜಾ! ಮಾತಾಡುವದಿಲ್ಲ(ಕ! ತಲೆಗೆ ಕೈ ಹಚ್ಚಿಕೊಂಡು ಏಕೆ ಕುಳಿತಿರುವಿ! ತಲೆನೋವೋ! ಜ್ವರವಿದೆಯೋ! ಮಯ್ಯಲ್ಲಿ ನೋಯುತ್ತದೆಯೋ! ಆಗುವದಾದರೂ ಏನು!

ಅಜ್ಜನ— ಕಂದಾ— ಹೌದು ಮಯ್ಯಲ್ಲಾ ನೋಯುತ್ತದೆ.

ಕಂದ— ಹಾಗಾದರೆ ಮೊಮೆಂಟ ಕ್ಯೂಯರ ತಕೊಳ್ಳು ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಹತಾಶೆಯು ಮತ್ತು [illegible] ತೀರುವದು. ಎರಡೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ವಿಳಾಸ— [illegible] ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ,
ಸ್ಟೇಶನರೋಡ ಹುಬ್ಬಳ್ಳಿ

ಡಾಕ್ಟರ ಮಲ್ಲಯ ನವರಿಂದ ಪರಿಶೋಧಿಸಲ್ಪಟ್ಟ
ಮೆಸರ್ಸ್ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು [illegible] ದರ ಉಪಯೋಗ ಮಾಡಿದ್ದಾರೆ [illegible] ಗುಣದ ಬಗ್ಗೆ [illegible] ಕೊಟ್ಟಿದ್ದಾರೆ. ಈ ಪುಡಿಯು [illegible] ನೆಗಡಿ, ತಲೆ ಸೋಸು, ತಲೆಯೊಳಗಿನ [illegible] ಸ್ಮರಣ ಶಕ್ತಿಯು [illegible] ಸುಗಂಧವಾಗುವದು. [illegible]

[illegible] ಪೋಸ್ಟೇಜ ಬೇರೆ.

[illegible] ವಿಳಾಸವನ್ನು ಸ್ಪಷ್ಟವಾಗಿ ಬರೆಯಿರಿ.

ತಂತಿ ವಿಳಾಸ- ನಶ್ಯದು } ಪಿ. ವ್ಹಿ. ರಾಜನ ಮತ್ತು ಕಂಪನಿ,
[illegible], ಮದ್ರಾಸ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟೆಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ೬ ೩ ತಿಂಗಳು, ವರ್ಷ ಮತ್ತು ಅದಕ್ಕಿಂತ ಹೆಚ್ಚು ಕಾಲವರೆಗಿನ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಐದು ರೂಪಾಯಿ ಮತ್ತು ವರ್ಷಕ್ಕೆ ಆರುವರೆ ರೂಪಾಯಿ ಬಡ್ಡಿ ಕೊಡಲಾಗುವದು ಹೆಚ್ಚು ಕಾಲದ ಠೇವಿನಿಂದ ಕಮಿಷನ ಗೊತ್ತು ಮಾಡಿಕೊಳ್ಳಬಹುದು ಬಾಂಗಿನಗಳು ಮತ್ತೆ ಇಟ್ಟುಕೊಳ್ಳಲ್ಪಡುವವು ಸಕ್ಕ ಮ ಹುಂಡಿಯ ವ್ಯವಹಾರ ಮಾಡಲ್ಪಡುವದು

ಮೆಸರ್ಸ್ ದೇಶಪಾಂಡೆ ಮತ್ತು ಆಚ್ಚಾಚಾರ್ಯ ಕಂಪನಿ ಮ್ಯಾನೇಜಿಂಗ ಏಜಂಟ್ಸ

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲ ವಿಧವಾದ ಊದುಬತ್ತಿಗಳು ನೇರು ೧-೦-೦ ಲಂಗಾಯತ [illegible] ಬಿಸ್ಕಿ, [illegible] ದರ್ಬಾರ, [illegible] ಸುಗಂಧ ದ್ರವ್ಯ [illegible] ಸುಗಂಧ ಪ್ರೇಮಿಗಳು [illegible] ಆರ್ಡರ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಬ್ರಾಂಡ ಸನ
ಸುಗಂಧದ್ರವ್ಯ ವ್ಯಾಪಾರ

ಅತ್ಯಾಶ್ಚರ್ಯ!! ಅನುಭವಸಿದ್ಧವಾದ ಅತ್ಯಾಶ್ಚರ್ಯ!!

ಪ್ರಸಿದ್ಧ ಡಾಕ್ಟರರೊಬ್ಬರು ಕಂಡು ಹಿಡಿದ ಸಿದ್ಧೌಷಧ

ಸರ್ವರೋಗ ನಿವಾರಕವಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾ ಖಂಡದ ಪ್ರಖ್ಯಾತ ಡಾಕ್ಟರರೊಬ್ಬರು ಅನೇಕ ವರ್ಷಗಳಿಂದ ಬಹು ಧನ ವಿನಿಯೋಗಿಸಿ ಪರಿಶೋಧನೆಗಳನ್ನು ಮಾಡಿ ಕಂಡಿದ್ದಾರೆ.

ಎಲಿಕ್ಸಿರ್ ಆಫ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವರು. ಅನುಪಾನ ಭೇದದಿಂದ ಅನೇಕ ರೋಗಗಳಿಗೆ ಎಂದರೆ ಅಗ್ನಿಮಾಂದ್ಯ, ಅಜೀರ್ಣ, ಹೊಟ್ಟೆ ಅಥವಾ ತಲೆ ಭಾರವಾಗಿರುವದು, ಅತಿಸಾರ, ವಾಂತಿ ಭೇದಿ ಅಥವಾ ಕಾಲರಾ, ತಲೆನೋವು, ಶೀತ, ಮಲೇರಿಯಾ, ಜ್ವರ, ಇತರ ವಿವಿಧವಾದ ಜ್ವರಗಳು, ನರಗಳ ದೌರ್ಬಲ್ಯ, ಕಣ್ಣು ಮತ್ತು ಕಿವಿ ನೋವು, ಮಲಬದ್ಧತೆ ವಾಯು ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ (ಇನ್‌ಫ್ಲೂಯೆಂಜಾ, ಪ್ಲೇಗ,) ಹಾವು, ಚೇಳು ಮುಂತಾದ ವಿಷ ಜಂತುಗಳ ಕಡಿತಕ್ಕೆ ಪ್ರಾತಃಕಾಲ ಇವೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಬಹುದು. ಊರಲ್ಲಿ ಸಾಂಕ್ರಾಮಿಕ ರೋಗ ಬಂದಾಗ ಇದನ್ನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನು ಹತ್ತರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ ಜೀವನಾಧಾರ ವೆಂಬ ಡಾಕ್ಟರರಿಗೆ ಕೊಡಬೇಕಾಗಿಲ್ಲ. ಸೀಸೆ ಒಂದಕ್ಕೆ ೧-೮-೦ ಟಪಾಲು ಖರ್ಚು ಪ್ರತ್ಯೇಕ ಅಲ್ಲದೇ ಬೇಳುವದು.

ಜೀವನಾಧಾರ ಡಿಪೋ,
ಮೈಸೂರ

ಬ್ರಾಂಚ— **ಜೀವನಾಧಾರ ಡಿಪೋ,**
ಹುಬ್ಬಳ್ಳಿ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ— ಮುಂಜಾನೆ ೧೦ ರಿಂದ ಮಧ್ಯಾಹ್ನದ ೪-೩೦ ರವರೆಗೆ ಶನಿವಾರ ೧೦ ರಿಂದ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯುವ ವ್ಯವಹಾರಗಳು.

ಚಾಲೂ ಖಾತೆಗಳು— ಪುಸ್ತಕದಿಂದ ತೆಗೆಯಲಡುವವು.
ಮುದ್ದತಿ ಠೇವುಗಳು— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು.
ಸೇವಿಂಗ ಬ್ಯಾಂಕ— ವುಗಳ್ಳ ತೆಗೆದುಕೊಳಲ್ಪಡುವವು ಬಡ್ಡೀದರ ೪ ರೂ.
ಸರಕಾರೀ ಹಾಗೂ ಇತರ ಕಾಗದಗಳು.

ಸುರಕ್ಷಿತೆಯು ಸಲುವಾಗಿ ತೆಗೆದುಕೊಳ್ಳಲ್ಪಡುವವು. ಕೊಡಕೊಳ್ಳುವವನ್ನು ಒಪ್ಪಿಸಿಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ನಫೆ ವಸೂಲುಮಾಡಿ ಆಯಾ ಖಾತೆಗಳಿಗೆ ಜಮೆ ಹಿಡಿಯುವದರಲ್ಲಿ ಬರುವದು. ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ಸಾಲ ಹಾಗೂ ರೋಖಡಾ ಉದರಿ ಕೊಡಲ್ಪಡುವದು. ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಕುಳಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ, ಮೊಖತ್ಯಾರ ಪತ್ರಗಳೂ ಸಹ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ — ಆರ್, ಎ, ಒಡ್ರಿಸ.
ತಾ|| ೨೨-೮-೨೨ — ಏಜಂಟ

ಆಯುರೌಷಧಿ ಕಾರಖಾನಾ ಕಿತ್ತೂರ.

ಮನ್ಮಥವಿಲಾಸ— ಈ ಗುಳಿಗೆಯ ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು ವೀರ್ಯವರ್ಧಕ ಮನೋಲ್ಲಾಸವಾಗಿ ಶಕ್ತಿ ಬರುತ್ತದೆ. ೨೦ ಗುಳಿಗೆಗಳಿಗೆ ೧ ರೂ. ೧೦ ಕ್ಕೆ ೪ ರೂ.
ಕುರುಕಿನ ಔಷಧ— ಚೀಟು ೧ ಕ್ಕೆ ೧ ಆಣೆ ೧೦೦ ಕ್ಕೆ ೩ ರೂ ೮ ಆಣೆ.
ಇಸಬಿನ ಔಷಧ— ಚೀಟು ೧ ಕ್ಕೆ ೩ ಪೈ ೧೦೦ ೧ ರೂ.
ಜೇನಿನ ಔಷಧ— ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೨ ರೂ.
ಜ್ವರದ ಗುಳಿಗೆ— ಈ ಗುಳಿಗೆಗಳು ಮಾಸಿಕ ಜ್ವರ ಮಲೇರಿಯಾ, ಇನ್‌ಫ್ಲೂಯೆಂಝಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿರುವ ಮತ್ತು ಪ್ರವಾಸಿಕರಿಗೆ ಉಪಯುಕ್ತವಾದಂಥವಿರುತ್ತವೆ. ೪೦ ಕ್ಕೆ ೧ ರೂ. ೧೦೦ ಕ್ಕೆ ೨ ರೂ.
ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಸುಖಸಂಜೀವಿನಿಯೆಂಬ ಪುಸ್ತಕವನ್ನು ಫುಕ್ಕಟೆಯಾಗಿ ಕಳಿಸುವೆವು.

ಆಯುರೌಷಧಿ ಕಾರಖಾನಾ, ಮು. ಕಿತ್ತೂರ ಜಿಲ್ಹಾ ಬೆಳಗಾವ

ಅಪೂರ್ವ ಗ್ರಂಥವು!!! — ಶ್ರೀ. ವಿದ್ಯಾರಣ್ಯ ಪುಸ್ತಕಮಾಲೆ ೪ — ಚಂದಾದಾರರಾಗಿರಿ!

ಕರ್ನಾಟಕ ಸಾಮ್ರಾಜ್ಯ ಸಂಪುಟ ೧

[ಪ್ರಾಚೀನ ಕಾಲದಿಂದ ೭೫೭ ರ ವರೆಗೆ]
ಆಕಾರ ಕ್ರೌನ ಸೋಳಪತ್ರಿ. ಪುಟ ಸಂಖ್ಯೆ ಸುಮಾರು ೨೭೫.
ಸುಂದರವಾದ ಮುದ್ರಣ ೧೭ ಅಪೂರ್ವವಾದ ಚಿತ್ರಗಳು.
ಬರೆದವರು— ರಾಮಚಂದ್ರ ಹಣಮಂತ ದೇಶಪಾಂಡೆ ಎಮ್. ಎ.

ಈ ಅತ್ಯಂತ ಉಪಯುಕ್ತವಾದ ಮಹತ್ವದ ಗ್ರಂಥವನ್ನು ಪ್ರಾಚ್ಯ ವಿಮರ್ಶಕ ವಿಚಕ್ಷಣ ರಾ. ನರಸಿಂಹಾಚಾರ್ಯರೂ ಮಾ. ಕೃಷ್ಣ ಶಾಸ್ತ್ರಿಗಳೂ ನೋಡಿ ಪಸಂದ ಮಾಡಿದ್ದಾರೆ. ಇದು ಈಗ ಅಚ್ಚಾಗುತ್ತಲಿದ್ದು ಮುಂದಿನ ಜೇಷ (ಜೂನ) ಮಾಸದಲ್ಲಿ ಮಾರಾಟಕ್ಕೆ ಸಿದ್ಧವಾಗುವದು. ಬೆಲೆಯ ವಿವರ—

	ರೂ. ಆ. ಪೈ
೧ ಶ್ರೀ. ವಿದ್ಯಾರಣ್ಯ ಪುಸ್ತಕ ಮಾಲೆಯ ಚಂದಾದಾರರಿಗೆ	೧—೪—೦
೨ ಮುಂಗಡವಾಗಿ ಹಣ ಕಳಿಸುವವರಿಗೆ	೧—೬—೦
೩ ಪೋಸ್ಟಿಂದ ಅವಧಿಯಲ್ಲಿ ವ್ಹಿ. ಪಿ. ದಿಂದ ಬೇಡುವವರಿಗೆ	೧—೭—೦

ಅಂಚೆವೆಚ್ಚ ೬ ಆಣೆ ಪ್ರತ್ಯೇಕ. ಸ್ವಲ್ಪೇ ಪ್ರತಿಗಳನ್ನು ಮುದ್ರಿಸುವದರಿಂದ ಗ್ರಾಹಕರು ತ್ವರೆ ಮಾಡಬೇಕು. ಇಲ್ಲವಾದರೆ ನಿರಾಶೆಗೆ ಒಳಗಾಗುವ ಸಂಭವವಿದೆ. ಹೊಸದಾಗಿ ಚಂದಾದಾರರಾಗಬಯಸುವವರು ೨ ಆಣೆ ಪ್ರವೇಶ ಫೀಯನ್ನು ಅಂಚೆ ಟಿಕೀಟು ರೂಪದಿಂದ ಕಳಿಸಿ ಬರೆಯತಕ್ಕದ್ದು.

ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ (ಶಾಲೋಪಯೋಗಿ ಕಾಪಿಗಳು ಸಹ) ನಕಾಶ ಚಿತ್ರಗಳೂ ಬರವಣಿಗೆಗಳೂ ದೊರೆಯುವವು.

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ — ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್. ಸಿ.
ಮಾಳಮಡ್ಡಿ ಧಾರವಾಡ. — ಅಧಿಕಾರಿಗಳು

ದಿ ಅಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ

೧೯೧೩ ಇಸ್ವಿಯ ಕಂಪನಿ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವಿಂಗ್ಸದ ಡಿಪಾಜಿಟ, ಸಾಲ, ಪತ್ತಿ, ಹುಂಡಿ ಮುಂತಾದ ಬ್ಯಾಂಕಿನ ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕೆಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ರಿಂದ ೧೧-೩೦ ಸಾಯಂಕಾಲ ೩ರಿಂದ ೬ ರವರೆಗೆ ನಡೆಯುವದು

K. B. ANKALIGI.

೧೬ ಚಿತ್ರ ಪಟಗಳು ಸ್ಪಷ್ಟ

ಸಚಿತ್ರ ಶುಕ ಸಪ್ತತಿ ಕಥೆ.

೭೦ ಕಥೆಗಳು ೫೭೦ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀ ಪಾತಿವ್ರತ್ಯ, ಬ್ರಾಹ್ಮಣ, ವೈಶ್ಯ, ಶೂದ್ರವೆಂಬ ಎಲ್ಲಾ ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವದು.

೧ ಕಥಾ ರೂಪದಲ್ಲಿ ಚಿತ್ರಕಥಾ ಚಮತ್ಕಾರ ರೋಚಕವಾಗಿಯೂ, ಸದ್ಬೋಧಕವಾಗಿಯೂ ಇರುವದರಿಂದ ಸ್ತ್ರೀಯರೂ ಪುರುಷರೂ ಬಾಲಕರೂ ಎಂಬ ಬೇಧವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ವಿಷಯಗಳು ಇದರಿಂದ ತಿಳಿದು ಬರುವವು. ೩. ಈ ಕಥೆಯನ್ನು ಓದುವದರಿಂದ ಮಾತೃತ್ವನ್ನು ದುರಾಚಾರದಲ್ಲಿ ಬಿದ್ದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವದು. ೪. ವಿವೇಕಾವಿವೇಕವನ್ನು ಉಂಟು ಮಾಡುವದು. ಬೇಕಾದವರು ವ್ಹಿ. ಪಿ. ಪೋಸ್ಟ ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಕ್ರಯ ಪ್ರತಿಯೊಂದಕ್ಕೆ ರೂಪಾಯಿ ಎರಡು, ಟಪಾಲ ಹಾಸಿಲು ಎಂಟಾಣೆ.

೧ ಸಚಿತ್ರ ಭಟ್ಟಿ ವಿಕ ಮಾದಿತ್ಯರಾಯನ ಕಥೆ. ಮೂರು ಭಾಗ ಸೇರಿದ್ದು ೬೧೨ ಪುಟಗಳು ಕ್ರಯ ೨-೪-೦ ೨. ಸಚಿತ್ರ ರಾಜಕಂಠೀರವ ಕಥೆ ೪೮೦ ಪುಟಗಳು ಕ್ರಯ ೨ ೦-೦

೩ ಸಚಿತ್ರ ಶ್ರೀರಾಮಾಶ್ವಮೇಧಕನೆಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೬-೦ ಇವುಗಳಿಗೆ ಟಪಾಲ ಖರ್ಚ ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ) ಗೆ ಬರದರೆ ಕಳಿಸಾವೆವು.

ನಮ್ಮ ವಿಳಾಸ— ಎಮ್. ಆರ್. ಕೃಷ್ಣಸ್ವಾಮಿ ಶೆಟ್ಟಿ, ಬುಕ್ಕಡಿಪೋ,
ಚಿಕ್ಕಪೇಟೆ ಬೆಂಗಳೂರ ಸಿಟಿ.

ಬಾಣಂತೀ ಗುಳಿಗೆಗಳು.

ವಯೋವೃದ್ಧರೂ ಅನುಭವಶಾಲಿಗಳೂ ಆದ ಸುಪ್ರಸಿದ್ಧ ವಿದ್ವಾನ್ ವೈದ್ಯ ವೈ. ವಾ. ವೇ. ಮೂ. ಕೃಷ್ಣಾಚಾರ್ಯ ಹಾಸನೂರ ಇವರು ನಮಗೆ ಅತೀ ಕರುಣದಿಂದ ಈ ಔಷಧ ಮಾಡುವ ಕ್ರಮವನ್ನು ಕಲಿಸಿರುವರು. ವೈದ್ಯ ವಿಷಯದಲ್ಲಿ ಮುಖ್ಯವಾಗಿ ಈ ಬಾಣಂತಿ ಗುಳಿಗೆಗಳ ಬಗ್ಗೆ ಆಚಾರ್ಯರ ಕೀರ್ತಿಯು ೨೫ ೩೦ ವರ್ಷಗಳಿಂದ ಸಮೀಪದಲ್ಲಿ ಎಲ್ಲಾ ಕಡೆಗೂ ಹಬ್ಬಿರುವದು ಸಮೀಪದಲ್ಲಿರುವವರಿಗೆ ಈ ಔಷಧದ ಉಪಯೋಗವಾಗುವಂತೆ ದೂರದಲ್ಲಿರುವ ನಮ್ಮ ಬಾಂಧವರಿಗೂ ಇದರ ಪ್ರಯೋಜನವಾಗಬೇಕೆಂದು ನಾವು ಇದನ್ನು ಪ್ರಸಿದ್ಧ ಪಡಿಸುತ್ತೇವೆ. ಈ ಗುಳಿಗೆಗಳ ಸೇವನದಿಂದ ಜ್ವರ, ಆಯಾಸ, ಕೆಮ್ಮು ಕತ್ತಲಿಗೆ ಬರುವದು, ವಾಯುವಿಕಾರ, ಅಗ್ನಿಮಾಂದ್ಯ ಹೊಟ್ಟೆಯುಬ್ಬೋಣ, ಅತಿಸಾರ, ಕಫ, ಮಸ್ತಕ ಶೂಲೆ ಮುಂತಾದ ಬಾಣಂತಿಯರ ಎಲ್ಲಾ ರೋಗಗಳು ಪ್ರತಿಬಂಧಿಸುವ ಕಾರ್ಯ ಸಿದ್ಧವಾಗುವವು ಕ್ಷಯದ ಲಕ್ಷಣವಿದ್ದರೂ ತಪ್ಪದೇ ಗುಣವಾಗುವದು. ಸ್ತ್ರೀಯರು ಹಡೆದ ಕೂಡಲೆ ಇವುಗಳನ್ನು ಸೇವಿಸಿದರೆ ಮುಂದೆ ಬಾಣಂತಿ ರೋಗದ ಭಯವೇ ಇಲ್ಲ. ಅಪ್ಪಿಂದ ಬಾಣಂತಿಯರು ಯಾರೇ ಆಗಲಿ ಈ ಔಷಧವನ್ನು ನಿರ್ಭಯದಿಂದ ಸೇವಿಸಬಹುದು. ಗರ್ಭಿಣಿಯರು ಅವಶ್ಯವಾದ ಈ ಔಷಧವನ್ನು ಸಂಗ್ರಹಿಸಲಿಡಲು ತಕ್ಕದ್ದಾಗಿದೆ. ಅನುಪಾನ ಪತ್ರಿಕೆಯು ಔಷಧದೊಂದಿಗೆ ದೊರೆಯುವದು. ೪೦ ಗುಳಿಗೆಗಳುಳ್ಳ ಡಬ್ಬಿ ೧ಕ್ಕೆ ಬೆಲೆ ೬-೦-೦ ಟಪಾಲ ಖರ್ಚ ಬೇರೆ ಒಬ್ಬರಿಗೆ ಒಂದು ಡಬ್ಬಿಯು ಸಾಕು.

ತಂತೀ ವಿಳಾಸ
"ಶಾಂತವೀರ" ಧಾರವಾಡ

ಡಾ. ಎಸ್. ಆರ್. ಕಿತ್ತೂರ
"ಮೃತಸಂಜೀವಿನೀ" ಶೋಧಕ ಧಾರವಾಡ

ಸಪ್ಪನೋದ ಜರೂರ!!
(ಗುಣವಾಗದೆ ಇದ್ದರೆ ಹಣ ಪರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋತ್ಸವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಗಳ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀ[illegible]ರ್ಧಕ, ರಕ್ತಶೋಧಕ, ಕಾಮೋತ್ತೇಜಕ, ಮನೋಲ್ಹಾಸಕ, ಇಂದ್ರಿಯಸ್ತಂಭಕ, ಗರ್ಮಿ, [illegible] ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಕ್ಕೆಗಳು, ಹುಣ್ಣುಗಳು, ಪಿತ್ತದ ಗಂಧೆಗಳು, ಚರ್ಮರೋಗ ವಾತರೋಗ, ಮುಂತಾದವು ಅತಿಶ್ಚರ್ಯ ಗುಣವಾಗಿ (ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಇವನ್ನು ಸೇವಿಸುವಾಗ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦

ನಪುಂಸಕತ್ವಾರಿ ತೈಲವು

ಪುರುಷರ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿರ್ಬಲತೆ ಮೊದಲಾದವು ಇಷ್ಟು ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಎಲ್ಲಾ ವಿಕಾರಗಳು ಗುಣಹೊಂದಿ ಇಂದ್ರಿಯ ದೃಢತ್ವವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇದನ್ನು ಉಪಯೋಗಿಸುವಾಗ ಮದನೋತ್ಸವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦

ಇಂದ್ರಿಯಸ್ತಂಭನ ಗುಳಿಗೆ.

ಚಿಕ್ಕ ಪ್ರಾಯದಲ್ಲಿ ಅತ್ಯಾಚಾರದಿಂದ ಹಸ್ತಮೈಥುನ ಮಾಡಿ ಇಂದ್ರಿಯ ಘರ್ಷಣ ಮಾಡಿದ್ದರಿಂದ ಉಂಟಾದ ನಪುಂಸಕತ್ವ ಕ್ಷೀಣತೆ ಮತ್ತು ಧಾತು ತೆಳ್ಳಗಾಗಿಯೂ ಶೀಘ್ರಸ್ಖಲನ ಮಾಡುವುದಕ್ಕೆ ಅತಿ ಅಲ್ಪವೇಳೆಯಾಗಿಯೂ ಆಗುವರು. ಅಂಥವರು ಈ ಗುಳಿಗೆಗಳನ್ನು ಸೇವಿಸುವುದರಿಂದ ಶಕ್ತರೂಪಿಯೂ, ಅಂಗಕಾಂತಿಯುಳ್ಳವರಾಗಿಯೂ ಮದನವಿಲಾಸಕ್ಕೆ ಸಂಪೂರ್ಣ ಶಕ್ತಿಯುಳ್ಳವರಾಗಿಯೂ ಆಗುವರು. ಒಬ್ಬನಿಗೆ ೬೪ ಗುಳಿಗೆಗಳು ಬೇಕಾಗುವವು. ಇದನ್ನು ಉಪಯೋಗಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಬೇಕು. ಕಿಮ್ಮತ್ತು ೬೪ ಗುಳಿಗೆಗಳಿಗೆ ೨-೮-೦ ಅನುಪಾನ ಪತ್ರಿಕೆ ಔಷಧ ಸಂಗಡ ಟಪಾಲ ಖರ್ಚ ಬೇರೆ.

ಔಷಧಗಳು ಸಿಗುವ ವಿಳಾಸ— **ವೈದ್ಯ ಜಿ. ಎಲ್. ಜೋಶಿ ಮತ್ತು ಕಂಪನಿ,**
ಪೋಸ್ಟ ಬನವಾಸಿ. (ಉತ್ತರ ಕಾನಡಾ,)

ವಿವಿಧ ವಿಷಯಗಳು.

—೦—

ಬೆಳಗಾವಿಯ ಉಮೇದವಾರ-

ಸ್ವರಾಜ್ಯ ಪಕ್ಷದ ಪರಿಯಿಂದ ಶ್ರೀ ವಾ ತರಫೆಕರರೆಂಬ ಮರಾಠಾ ಗೃಹಸ್ಥರು ಸಾವಗಾವಿಯಲ್ಲಿ ಉಮೇದವಾರರಾಗುವರೆಂದೂ ಶ್ರೀಯುತ ಜಂ' ಜಿ. ಶ್ರೀ. ಮಜಲಿಯವರು ಉಮೇದವಾರರಾಗುವರೆಂದು ಸುದ್ದಿಯಿತ್ತು. ಇವರಾಗಲಿಲ್ಲ. ಮಿ. ಘಾತರ ಫೆಕರರನ್ನು ಕಾಡಿಸಿ, ಆ ಜಿಲ್ಲೆಯಲ್ಲಿ ಮೂವರು ಉಮೇದವಾರರಾದರು. ಶ್ರೀ ಚಿಕ್ಕೋಡಿಯವರು ಬ್ರಾಹ್ಮಣೇತರರು; ಕಾಂಗ್ರೆಸ ಪಕ್ಷಕ್ಕೆ ವಿಶೇಷವಾಗಿ ಒಲಿಯುವರು. ಉಳಿದವರಾದ ಮಿ. ಅಂಗಡಿಯವರು ರಾಜನಿಷ್ಠ ಮತ್ತು ಬ್ರಾಹ್ಮಣೇತರ ಪಕ್ಷದ ಉಮೇದವಾರರಾದರು.

ಸುರಂಗದಿಂದ ಕರಂಗ ಒಡೆಯುವ ಪ್ರಯತ್ನ-

ಬೆಳಗಾವಿಯ ಹತ್ತಿರದ ಹಿಂಡಲಗಿಯ ಕಾರಾಗೃಹದಲ್ಲಿದ್ದ ಇಬ್ಬರು ಪಾರ್ಶಿಯರು ಬ್ಲಾಸ್ಟಿಂಗ ಸ್ಫೋಟಕ ಪದಾರ್ಥಗಳನ್ನು ಕಾಯಿದಾಕಿದ್ದ ವರ್ತಮಾನವನ್ನು ಈ ಮೊದಲೇ ಬರೆದಿರುತ್ತೇವೆ. ಇವರು ಬ್ಲಾಸ್ಟಿಂಗ ಮದ್ದು, ಕಾಜಿನ ಚೂರು ಕೂಡಿ ಹಾಕಿ, ಸುರಂಗ ಹಾರಿಸುವದಕ್ಕಾಗಿ ತಗ್ಗು ಕಸಿದ ತೋಡಿದ್ದರು. ಇವರೊಳಗಿನವನೊಬ್ಬನು ಒಡೆದದ್ದರಿಂದ ಹಂಚಿಕೆಯು ನಿಷ್ಫಲವಾಯಿತು. ಸರಕಾರದ ಮುಂಜೂರಿ ಪಡಕೊಂಡು, ಸೆಶನದಲ್ಲಿ ಇವರ ವಿಚಾರಣೆಯು ನಡಯುವದೆಂದು ಹಾಯಕೋರ್ಟಿನ ಜಡ್ಜರು ತೀರ್ಪು ಹೇಳಿದ್ದಾರೆ.

ಜಬರೀ ದುರಭಿಮಾನ-

ವಿಜಾಪೂರದ ಡಿಸ್ಟ್ರಿಕ್ಟ ಲೋಕಲಬೋರ್ಡಿನ ಜನರಲ ಕಮಿಟಿಯಲ್ಲಿ ರಾವಬಹಾದ್ದೂರ ಕೆಂಭಾವಿ ರಾಘವೇಂದ್ರರಾಯರ ಒಂದು ಫೈಲ ಚಿತ್ರವನ್ನು ಸಭಾ ಮಂದಿರದಲ್ಲಿಡಬೇಕೆಂಬ ಠರಾವು ಪಾಸಾಯಿತು. ಈ ಬಗ್ಗೆ ಬರೆಯುವಾಗ ಮುಂದಾಳು ಕರ್ತರು-

"ಇದರಂತೆಯೇ ಇನ್ನೂ ಎಷ್ಟೆಷ್ಟು ಜಾವಚಿತ್ರಗಳು ಸಭಾಗೃಹದಲ್ಲಿ ಮೆರೆಯ ವನ್ನು ನೋಡಬೇಕಾಗಿದೆ. ಜನರಿಗೆ ಈ ಬಗ್ಗೆ ತಿಳಿಗೆ ಬೇಕರದಿದ್ದರೆ ಸಾಕು"

ಎಂಬದಾಗಿ ಕುಚೇಷ್ಟಿಸಿದ್ದಾರೆ. ಇದಕ್ಕೆ ಉತ್ತರವಾಗಿ ಬಾಗಲಕೋಟೆಯ ಕನ್ನಡಿಗದ ಸಂಪಾದಕರು ಮುಂದಾಳು ಕರ್ತರಿಗೆ ಉಪದೇಶ ಮಾಡಹೆತ್ತಿದ್ದಾರೆ. ಗತನ ಕರ್ತೃಗಳನ್ನು ಹೇಳುವದಕ್ಕಿಂತ, ರಾವಬಹಾದ್ದೂರ ಅಂಬಾಳರ ಭಾವಚಿತ್ರವನ್ನಿಡಬೇಕೆಂದು ಠರಾವ ಮಾಡಿದ್ದರೆ- ಮುಂದಾಳುಕರ್ತರೇ ಮೇಲಿನಂಥ ಅನವಶ್ಯಕ ಮತ್ತು ಕುತ್ಸಿತ ಟೀಕೆ ಮಾಡುತ್ತಿದ್ದಿರಾ? ಎಂದು ಪ್ರಶ್ನೆ ಮಾಡಿದ್ದರೆ ಸಾಕಾಗುತ್ತಿತ್ತೆಂದು ನಮಗೆ ತೋರುತ್ತದೆ.

ಸ್ವರಾಜ್ಯ ಮತ್ತು ಪದವಿ-

ಮದ್ರಾಸದಲ್ಲಿ ತಮಿಳ ನಾಡಿನ ಕಾಂಗ್ರೆಸ ಕಮಿಟಿ ಕೂಡಿತ್ತು. ಪದವಿಧರರಾದವರು ಇವಕ್ಕೆ ಕರಣಾ ಹೊಡೆದು, ಉಮೇದವಾರರಾಗಬೇಕೆಂಬ ವಿಷಯ ಹೊರಟಿತು. ಸದ್ಯದ ಕಾಂಗ್ರೆಸದ ಕಾರ್ಯಕ್ರಮದಲ್ಲಿ ಪದವಿಗಳ ಮೇಲೆ ಮೊದಲಿನಷ್ಟು ಬಹಿಷ್ಕಾರವಿರುವದಿಲ್ಲ. ಅದ್ದರಿಂದ ಪದವಿಗಳನ್ನು ಬಿಡಲೇ ಬೇಕೆಂದು ಒತ್ತಾಯ ಮಾಡಲಿಕ್ಕೆ ಬರಲಾರದು. ಆದರೂ, ಇವರು ಅವನ್ನು ತ್ಯಜಿಸುವಂತೆ ಪ್ರೋತ್ಸಾಹಿಸಬೇಕೆಂದು ಸಭೆಯಲ್ಲಿ ಗೊತ್ತಾಯಿತು. ಸ್ವತಂತ್ರ ವೃತ್ತಿಯಿಂದ ನಡೆಯುವಂಥ ಸದ್ಯದ ಪರಿಸ್ಥಿತಿಯಲ್ಲಿ ಸಹ ಪದವಿಗಳನ್ನು ಅಂಗೀಕರಿಸುವದಿಲ್ಲ. ಆ ಉದಾತ್ತ ವಿಚಾರ ಪ್ರಕಾರ, ಸ್ವರಾಜ್ಯ ಪಕ್ಷದ ಉಮೇದವಾರರು ಪದವಿಗಳನ್ನು ಬಿಡುವದೇ ಲೇಸು.

ಆಂಧ್ರ ಕಗ್ಗೊಲೆಗಳ ಠರಾವು-

ಆಂಧ್ರ ಶಾಖೆಗೆ ಸೇರಿದ ಪೂರ್ವ ಗೋದಾವರಿ ಜಿಲ್ಲೆಯ ಪರಿಷತ್ತು ಕೂಡಿತ್ತು. ಇದರಲ್ಲಿ ಸಾರ್ವತ್ರಿಕವಿಲ್ಲದಿದ್ದರೂ, ವ್ಯಕ್ತಿ ಮಾತ್ರವಾಗಿ ಕಾಯಿದೆಭಂಗ ಮಾಡುವುದಕ್ಕೂ, ಸ್ವರಾಜ್ಯವೆಂದರೆ ಸಂಪೂರ್ಣ ಸ್ವಾತಂತ್ರ್ಯವೆಂದೇ ಕಾಂಗ್ರೆಸದ ಸೂತ್ರವಾಗಬೇಕೆಂದೂ ಠರಾವು ಮಾಡಿದ್ದಾರೆ. ಮಹಾತ್ಮರ ಪರವಿಂದ ಸ್ವರಾಜ್ಯದ ವ್ಯಾಖ್ಯೆಯನ್ನು ಸಂಕೋಚ ಮಾಡಿತು. ಇವರು ಕಾಂಗ್ರೆಸದಲ್ಲಿ ಸೇರದಿದ್ದರೆ, ನೋಡಲಿನಂತೆ ಸ್ವರಾಜ್ಯವೆಂದರೆ ಸಂಪೂರ್ಣ ಸ್ವಾತಂತ್ರ್ಯವೆಂದೇ ಇರಬೇಕೆಂದು ಇವರು ಅನ್ನುತ್ತಾರೆ.

ಗುಜರಾಥದಲ್ಲಿ ಬರದ ಭಯ-

ಗುಜರಾಥದಲ್ಲಿ ಕಳೆದೆರಡು ವರ್ಷಗಳಿಂದ ಮಳೆಯಾಗಿಲ್ಲ. ಆನಿಗಳು ಬರಗಿ ಕೆರೆ ಕುಂಟೆಗಳು ನಿರ್ಜಲವಾಗಿರುತ್ತವೆ. ಈ ವರ್ಷ ಜೂನ ತಿಂಗಳು ಕಳೆದು ಹೋದರೂ, ಒಂದು ಹನಿಯು ದರಿಲ್ಲ. ಬಿಸಿಲು ಹೊರಗೆ ಮೋರೆ ಹಾಕದಷ್ಟು ಕಾಯುತ್ತಿರುವದು. ದನಗಳಿಗೆ ಒಂದ ಹುಲ್ಲು ಕಟ್ಟುವದನ್ನು ಒದಗಿಸಲು ಶಕ್ಯವಿಲ್ಲ. ಹಳ್ಳಿಗಳ ಸ್ಥಿತಿಯು ದನಗಳ ಒಂದು ಕಟ್ಟೆಗೊಂಡು ಅವನು ದಾವಣ ಮೊದಲಾದ ಸೊಪ್ಪಿನಿಂದ ಪಟ್ಟಣಗಳಿಗೆ ಬರುತ್ತಿದ್ದಾರೆ. ಅಹಮದಾಬಾದಿನ ವರ್ತಕರು ಇವುಗಳಿಗೆ ಮೇವು ಮಿಗಿಲಿನ ಸಹಾಯ ಮಾಡುತ್ತಿದ್ದಾರೆ. ಮುಲ್ತಾನಿ ವರ್ತಕರೇ ಹತ್ತು ಸಾವಿರ ರೂಪಾಯಿಗಳನ್ನು ದನಗಳಿಗೆ ಮೇವು ಕೊಡುವದಕ್ಕಾಗಿ ಚಂದಾ ಮಾಡಿದ್ದಾರೆ.

ಸ್ವಾಮಿಗಳ ಶಿಷ್ಯನಾದ ಮಹಾತ್ಮಾರಾಕ್ಷ-

ಶ್ರವಣಬೆಳಗೊಳ ಸಂಸ್ಥಾನದಲ್ಲಿ ಪರಕಲಯ ಮಠದ ಗುರುಗಳಾದ ಶ್ರೀ. ನಾರಾಯಣಸ್ವಾಮಿಯವರಿಗೆ ೬೦ ವರ್ಷ ತುಂಬಿದವು. ಈ ಆನಂದದ ದೆಸೆಯಿಂದ ಶ್ರೀಗಳವರು ಒಂದು ಲಕ್ಷ ರೂಪಾಯಿ ವೆಚ್ಚ ಮಾಡಿ, ಪರಕಲಯದಲ್ಲಿ ಇಂಗ್ಲಿಷ ಹಾಯಸ್ಕೂಲನ್ನು ಸ್ಥಾಪಿಸುವರು. ಮತ್ತು ಪುಣೆಯ ಸರ್ವಂಟ ಆಫ ಇಂಡಿಯಾ ಸೊಸಾಯಿಟಿಯಂತೆ ಒಂದು ದೇಶ ಸೇವಕರ ಸಂಘವನ್ನೂ ಏರ್ಪಡಿಸುವರು. ಈ ಬಗ್ಗೆ ಒಂದು ಯೋಜನೆ ಬರೆಯಲು ಇಬ್ಬರು ವಿದ್ವಾಂಸರಿಗೆ ಅಪ್ಪಣೆ ಮಾಡಿದ್ದಾರೆ.

ಪ್ರೌಢವಿವಾಹವೊಂದೇ ಉಪಾಯ-

ಸಿಂದಾ ಸದಲ್ಲಿ ಒಬ್ಬ ದ್ವಿತೀಯ ಸಂಬಂಧದ ಗಂಡನ ಕಾಮವಾಸನೆಯನ್ನು ತಡೆಯದಂಥ ಚಿಕ್ಕ ಹುಡುಗಿಯು ಕಲ್ಲೆಣ್ಣೆಯನ್ನು ಸುರುವಿಕೊಂಡು ಆತ್ಮಹತ್ಯ ಮಾಡಿಕೊಂಡಳು. ಈ ಬಗ್ಗೆ ಮದ್ರಾಸ ಪಟ್ಟಣದ ತುಂಬ ಚರ್ಚೆ ನಡೆದಿದೆ. ಇದಕ್ಕೆ ಪ್ರೌಢ ವಿವಾಹದ ಹೊರ್ತು ಬೇರೊಂದು ಉಪಾಯವೇ ಇರುವದಿಲ್ಲ. ಸರಕಾರದವರು ಕಾಯದೆ ಮಾಡಿದರೆ- ಸರಕಾರವು ಧರ್ಮದಲ್ಲಿ ಕೈ ಹಾಕುತ್ತವೆನ್ನುತ್ತಾರೆ. ಸಾಮಾಜಿಕ ವಿಚಾರದಿಂದ ವಿವಾಹದ ವಯಸ್ಸು ಬೆಳಿಸಿದ್ದರೂ, ಧರ್ಮಾಭಿಮಾನಿಗಳೆಂಬವರು ತೀರ ಚಿಕ್ಕ ವಯಸ್ಸಿನಲ್ಲಿ ವಿವಾಹ ಮಾಡಿ, ಹೆಣ್ಣು ಮಕ್ಕಳ ಗೋಳು ಹುಯ್ಕೊಳ್ಳುವರು. ಅದರಿಂದ ಕಾಯದೆಯಾಗುವದೇ ಶ್ರೇಯಸ್ಕರವು.

ಭಾರತೀಯ ರಾಷ್ಟ್ರೀಯ ನಿಶಾನಿ-

ದಕ್ಷಿಣ ಆಫ್ರಿಕೆಯ ಸರಕಾರದ ಠರಾವಿನ ನ್ವಯ ಹಿಂದುಸ್ಥಾನದಲ್ಲಿಯೂ ಭಾರತೀಯ ರಾಷ್ಟ್ರೀಯ ನಿಶಾನೆ ಇಂಬೇಕಾಗಿರುತ್ತದಷ್ಟೇ; ಸರಕಾರದವರು ರಾಷ್ಟ್ರೀಯ ಮುಂದಾಳುಗಳ ವಿಚಾರದಿಂದ ಇಂಥದೊಂದು ನಿಶಾನೆಯನ್ನು ಗೊತ್ತು ಮಾಡಿ, ಅದು ಹಿಂದುಸ್ಥಾನದ ಹಡಗಪಡೆಯ ಮೇಲೆ ಸಹ ಹಚ್ಚುವ ನಿರ್ಣಯ ಮಾಡಬೇಕೆಂಬದು ಮಿ. ಬಿ. ದಾಸರು ಅಸೆಂಬ್ಲಿಯಲ್ಲಿ ಠರಾವು ತರುವಂತೆ ನೋಟೀಸು ಕೊಟ್ಟಿದ್ದಾರೆ.

ರಾಜ್ಯಕಾರಭಾರ ಮತ್ತು ಜಸ್ಟೀಸ ಪಕ್ಷ-

ಮದ್ರಾಸದ ಬ್ರಾಹ್ಮಣೇತರರು ರಾಜ್ಯಕಾರಭಾರದಲ್ಲಿ ಬ್ರಾಹ್ಮಣೇತರರೆಂಬ ಗೊಂದಲವೆಬ್ಬಿಸಿದ್ದು ಡಾಕ್ಟರ ವರದರಾಜ ನಾಯುಡುಯವರಿಗೆ ಎಷ್ಟೂ ಇಷ್ಟವೆನಿಸಿಲ್ಲ. ಇವರು ಅನ್ನುವದೇನಂದರೆ-

"ಬ್ರಾಹ್ಮಣೇತರರು ಬ್ರಾಹ್ಮಣೇತರರೆಂಬ ಹುಡುಗಾಟಿಕೆ ಹೂಡಿದ್ದು ಕೇವಲ ಹಂಭಾರವಾಗಿರುತ್ತದೆ. ಈ ರೀತಿಯಿಂದ ಯಾವೆಂದೂ ಸ್ವರಾಜ್ಯ ಗಳಿಸಲಾರೆವು. ಯಾವದೊಂದು ಕುಲದವರು ಬರಿ ಸಂಖ್ಯೆಯಿಂದ ರಾಜ್ಯಕಾರಭಾರದಲ್ಲಿರಬಾರದೆಂದು ಪರಸ್ಪರ ಗೊತ್ತು ಮಾಡಿಕೊಳ್ಳುವದು ಹಿತವು. ಆದರೆ ರಾಜ್ಯಕಾರಭಾರ ನಡಿಸಲು ಜಾತಿಯ ವಿಚಾರವನ್ನು ಲಕ್ಷ್ಯಕ್ಕೆ ತರದೆ, ಉತ್ತಮರೆಂಬವರನ್ನೇ ನೇಮಿಸಿಕೊಳ್ಳತಕ್ಕದ್ದು. ಮತ್ತು ಸ್ವರಾಜ್ಯದ ಹೋರಾಟವನ್ನು ಜಾತಿಯ ವಿಚಾರ ಮಾಡದೆ, ಎಲ್ಲರೂ ಒಗ್ಗಟ್ಟಿನಿಂದ ನಡೆಯಿಸತಕ್ಕದ್ದು"

ಡಾಕ್ಟರರ ವಿಚಾರಗಳು ಪ್ರತಿಯೊಬ್ಬರು ಮನನ ಮಾಡುವಂತಿರುತ್ತವೆಂದು ನಿಃಪಕ್ಷಪಾತಬುದ್ಧಿಯಿಂದ ಒಪ್ಪಬೇಕಾಗುತ್ತದೆ.

ವಿವಿಧ ವರ್ತಮಾನಗಳು.

—೦—

ಬೆಳಗಾವಿಯ ಪ್ರಸಿದ್ಧ ವಕೀಲರಾದ ಶ್ರೀಯುತ ಅನಂತರಾವ ಮುದಗಿರಿಯವರು ವೈಕುಂಠವಾಸಿಗಳಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ. ಇವರು ಹಳೇ ವಕೀಲರು. ೧೮೮೫ ರಿಂದ ವಕೀಲಿಯನ್ನು ಪ್ರಾರಂಭಿಸಿದರು. ಹಿಂದೂಲಾದ ಮೇಲೆ ಒಂದು ಪುಸ್ತಕ ಬರೆದಿರುವರು. ಮುಸಲಮಾನರ ಕಾಯದೆಯಲ್ಲಿಯೂ ನಿಷ್ಣಾತರೆಂದು ಪ್ರಖ್ಯಾತಿ ಹೊಂದಿದ್ದರು. ಇವರ ಸ್ಮಶಾನ ಯಾತ್ರೆಗೆ ಅನೇಕ ಜನರು ಹೋಗಿದ್ದರು.

ಪುಣೆಯಲ್ಲಿ ಸ್ಥಾನಿಕ ಸ್ವರಾಜ್ಯವೆಂಬ ನಾಟಕವಾಡುತ್ತಿದ್ದಾರೆ. ಪೆಂಬರಲ್ಲಿ ಒಬ್ಬಳಜನರು ಧರ್ಮದರಾಯರು; ಮತದಾರರ ಮತಕೊಡುವ ಹಕ್ಕನ್ನು ತೀರ ಕನಿಷ್ಠ ಮಾಡಿದ್ದರಿಂದ, ಅನೇಕ ಅಶಿಕ್ಷಿತರು ಮೆಂಬರರಾಗುತ್ತಾರೆ. ಮ್ಯುನಿಸಿಪಾಲಿಟಿಯ ಕಾರಭಾರವು ಮಂದ ಮತ್ತು ಅಯೋಗ್ಯತೆಯಿಂದ ದೋಷ ಪೂರ್ಣವಾಗಿರುತ್ತದೆಂದು ನಾಟಕದಲ್ಲಿ ತೋರಿಸುವರು.

ಬಾಬೋರಿನ ಬ್ಯಾರಿಸ್ಟರರಾದ ಡಾಕ್ಟರ ಮಹಮೂದರೆಂಬವರು ಅಲ್ಲಿಯ ಸಿಯಾಸತವೆಂಬ ಉರ್ದು ಪತ್ರದ ಮೇಲೆ ೧೫೦೦೦ದ ಮಾನಹಾನಿಯ ದಾವೆ ಮಾಡಿದ್ದಾರೆ.

ರಾವಲಪಿಂಡಿಯಲ್ಲಿ ಪೇಟೆಗೆ ಬಂದ ಪತ್ತೆದಾರಗ ಒಬ್ಬ ಹಿಂದೂಸ್ತ್ರೀಯು ತನ್ನ ಕೂಸನ್ನು ಕಟ್ಟಿಕೊಂಡು ಜೀವರಕ್ಷಣೆಗಾಗಿ ಹತ್ತರದೇ ಇದ್ದ ಉದ್ಯಾನದಲ್ಲಿ ಹೋದಳು. ಇಬ್ಬರು ಮುಸಲಮಾನರು ಇವಳನ್ನು ಮುಂದೆ ಕರಕೊಂಡು ಹೋಗಿ, ಕೂಸನ್ನು ಬಾವಿಯಿಂದ ಸಳೆದು, ಒಂದು ಹಗ್ಗದಲ್ಲಿ ಇಳಿ, ಈಕೆಯನ್ನು ಒಂದು ಮನೆಯಲ್ಲಿ ಅಡಗಿಸಿದ್ದರು. ಈ ಅಪರಾಧಕ್ಕಾಗಿ ಇಬ್ಬರನ್ನೂ ಹಿಡಿದಿದ್ದಾರೆ.

ಹಂಗೇರಿಯ ರಾಜಧಾನಿಯಾದ ಬುಡಾಪೆಸ್ಟದಲ್ಲಿ ಅದ್ಭುತ ವೃಷ್ಟಿಯಿಂದಾಗಿ ಒಂದು ಸಾವಿರ ಮನೆಗಳು ಜಲಸಮಾಧಿ ಹೊಂದಿ, ಸಾವಿರಾರು ಜನರು ನಿರಾಶ್ರಿತರಾಗಿದ್ದಾರೆ.

ಆಸಾಮದ ಕಾಂಗ್ರೆಸದ ಅಧ್ಯಕ್ಷ ಪದದ ದೆಸೆಯಿಂದ ಮುಂಬಯಿಯ ಕಾಂಗ್ರೆಸ ಕಮಿಟಿಯವರು ಶ್ರೀ ಶ್ರೀನಿವಾಸ ಅಯ್ಯಂಗಾರ ಮತ್ತು ಮಿ. ಮಟಕರ ಹಕ್ಕ ಇವರ ಹೆಸರುಗಳನ್ನ ಸೂಚಿಸಿದ್ದಾರೆ.

ರಂಗೂನದಲ್ಲಿ ಒಂದು ಅಕ್ಕಿಯ ಗಿರಣಿಗೆ ಬೆಂಕಿ ಹತ್ತಿ, ಒಂದೂವರಿ ಲಕ್ಷದ ಹಾನಿಯಾಯಿತು.

ಸಪ್ಟೆಂಬರ ತಿಂಗಳ ೩ನೇ ತಾರೀಖಿನ ದಿವಸ ಎಲ್ಲ ಇಲಾಖೆಗಳ ಕೌನ್ಸಿಲಗಳ ಅಧ್ಯಕ್ಷರ ಒಂದು ಸಭೆಯನ್ನು ಅಸೆಂಬ್ಲಿಯ ಅಧ್ಯಕ್ಷರಾದ ನಾಮದಾರ ಪಟೇಲರು ಕರೆದಿದ್ದಾರೆ. ಸಭೆಯು ಸಿಮ್ಲಾದಲ್ಲಿ ಕೂಡುವದು.

ಗಿಡಗಳಿಗೆ ಹೇಗೆ ಕಲಿಸು ಮಾಡಬೇಕೆಂಬ ಶಿಕ್ಷಣ ಹೊಂದುವದಕ್ಕಾಗಿ ಮದ್ರಾಸ ಸರಕಾರದವರು ಕೊಯಮತ್ತೂರಿನ ಒಕ್ಕಲಿಕೆಯ ಕಾಲೇಜದಲ್ಲಿ ಅಧ್ಯಾಪಕರಾಗಿರುವ ಮಿ. ರಾಮಯ್ಯರೆಂಬವರನ್ನು ವಿಲಾಯತಿಗೆ ಕಳಿಸುವರು. ಅಲ್ಲಿ ಇವರು ಎರಡು ವರ್ಷ ಶಿಕ್ಷಣ ಪಡೆಯತಕ್ಕದ್ದಾಗಿದೆ.

ಲಖನೌದ ಹತ್ತರದ ಕೀಲಿಯೊಳಗಿ ಎಂಬಲ್ಲಿ ಹಿಂದೂ ಮುಸಲಮಾನ ದಂಗೆಯಾಯಿತಷ್ಟೇ; ಅಲ್ಲಿಯ ಅಧಿಕಾರಿಗಳು ಮುಸಲಮಾನರಿದ್ದದಲ್ಲದೆ, ಒಬ್ಬರಿಗೊಬ್ಬರು ಆಪ್ತ ಬಾಂಧವರಾಗಿದ್ದಾರೆ. ಆದ್ದರಿಂದ ವಿಚಾರಣೆಗಾಗಿ ಯುರೋಪಿಯನ್ನರನ್ನು ನೇಮಿಸಬೇಕೆಂದು ಹಿಂದೂ ಒಬರು ಗೌವ್ಹರ್ನರ ಸಾಹೇಬರ ಕಡೆಗೆ ಅರ್ಜಿ ಮಾಡಿಕೊಂಡಿದ್ದಾರೆ.

ದೇಶಬಂಧುವಿನ ಮಗನು ಪರಲೋಕವಾಸಿಯಾದ್ದರಿಂದ, ದೇಶಬಂಧುವಿನ ವಾರ್ಷಿಕ ಶ್ರಾದ್ಧದ ಸ್ಮಾರಕ ದಿನದ ಸಭೆಯನ್ನು ೧೧ ನೇಯ ತಾರೀಖಿನ ದಿವಸ ಮಾಡಬೇಕೆಂದು ಗೊತ್ತಾಗಿರುತ್ತದೆ.

ಜಾತಿ ಜಾತಿಗಳ ನಡುವೆ ಉಂಟಾಗಿರುವ ಮನಸ್ತಾಪ, ಕಲಹ ಮತ್ತು ದಂಗೆಗಳ ಬಗ್ಗೆ ವಿಚಾರ ಮಾಡಬೇಕೆಂದು ಅಸೆಂಬ್ಲಿಯ ಕೆಲ ಮೆಂಬರರು ಠರಾವು ತರುವ ನೋಟೀಸು ಕೊಟ್ಟಿದ್ದಾರೆ.

ಪಂಜಾಬದ ಕೌನ್ಸಿಲ ಚುನಾವಣೆಯಲ್ಲಿ ಹಿಂದೂ ಮಹಾಸಭೆಯವರು ತಮ್ಮ ಪರಿಯಿಂದ ಉಮೇದವಾರರನ್ನು ನೇಮಿಸಿದ್ದಾರೆ. ಇವರಲ್ಲಿ ಇಬ್ಬರೇ ಸ್ವರಾಜ್ಯ ಪಕ್ಷೀಯರಾಗಿದ್ದಾರೆ.

ಮುಂಬಯಿಯ ಗುಪ್ತ ಪೋಲೀಸ ಖಾತೆಯಲ್ಲಿ ಇನ್ಸಪೆಕ್ಟರರಾಗಿದ್ದ ಮಿ. ಕಾಮೋತ್ತರರೆಂಬವರನ್ನು ಲಂಚದ ಆರೋಪದಿಂದ ಬರಖರ್ತ ಮಾಡಿದರು.

ಬರ್ಲಿನದಲ್ಲಿ ದಂಡಿನ ಕವಾಯತು ನಡೆದಾಗ ಸ್ಫೋಟಕ ಒಂದು ಗುಂಡು ಹಾರಿ, ೩೭ ಜನರು ಸತ್ತರು. ೯೧ ಜನರು ಗಾಯಪಟ್ಟರು.

ಬಗದಾದದ ಅರಸರಾದ ಫೈಸುಲಸಾಹೇಬರು ಬಾದಶಹ ಪಂಚಮ ಜಾರ್ಜರನ್ನು ಕಾಣುವದಕ್ಕಾಗಿ ವಿಲಾಯತಿಗೆ ಪ್ರಯಾಣ ಬೆಳೆಸಿದ್ದಾರೆ.

ಪಂಡಿತ ಕೇಶವರಾವ, ಮಿ. ವೆಂಕಟರಮಣರೆಡ್ಡಿ ಮತ್ತು ರಾಜಾಬಸ್ಸಿರಾಲಿ ಈ ಮೂವರು ಹಿಂದೂ ಗೃಹಸ್ಥರೂ ನವಾಬ ಯಾರಜಂಗ ಎಂಬ ಪದವಿಯ ಬಂದ ಮುಸಲಮಾನ ಗೃಹಸ್ಥರೂ ನಿಜಾಮ ರಾಜ್ಯದ ಕಾಯದೆ ಕೌನ್ಸಿಲದ ಮೆಂಬರರಾಗಿ ನೇಮಿಸಲ್ಪಟ್ಟಿದ್ದಾರೆ.

ಪಾಯಿಯ ಮ್ಯುನಸಿಪಾಲಿಟಿಯಲ್ಲಿ ಕಮಲಾಕರ ಮಹಾದೇವ ನವಾಥ್ಪಲೆ ಎಂಬ ಹೆಸರಿನ ಹೋರ ಗೃಹಸ್ಥರು ಅಧ್ಯಕ್ಷ ಪದಕ್ಕೆ ಉಮೇದವಾರರಾಗಿದ್ದರು. ಬ್ರಾಹ್ಮಣೇತರರು ಇವರಿಗೆ ಹೋಟು ಕೊಡದೆ, ಸರಕಾರ ಮತ್ತು ಮವಾಳರ ಗುಂಪಿನಲ್ಲಿ ಸೇರಿ, ಬ್ರಾಹ್ಮಣರಿಗೇ ಹೋಟು ಕೊಟ್ಟರು. ಇದೆಂಥ ಬ್ರಾಹ್ಮಣೇತರ?

ಆಸಾಮದ ಕಾಂಗ್ರೆಸದ ಅಧ್ಯಕ್ಷ ಪದಕ್ಕಾಗಿ ಬಂಗಾಲ ಕಾಂಗ್ರೆಸ ಕಮಿಟಿಯವರು ಶ್ರೀ. ಶ್ರೀನಿವಾಸ ಅಯ್ಯಂಗಾರ ಮತ್ತು ಡಾಕ್ಟರ ಅನಸಾರಿಯವರ ಹೆಸರುಗಳನ್ನು ಸೂಚಿಸಿದ್ದಾರೆ.

ಕಾಬೂಲ ಸರಕಾರದವರು ತಮ್ಮಲ್ಲಿಯ ಪ್ರದರ್ಶನವನ್ನು ತೆರೆಯುವದಕ್ಕಾಗಿ ಸರ ವಿಜಯರಾಘವಾಚಾರ್ಯರಿಗೆ ಆಮಂತ್ರಣ ಕಳಿಸಿದ್ದು, ಆಚಾರ್ಯರು ಆಮಂತ್ರಣ ಸ್ವೀಕಾರ ಮಾಡಿದ್ದಾರೆ.

ಸ್ಟೇಟ ಸೆಕ್ರೆಟರಿಯವರಾದ ಲಾರ್ಡ ಬರ್ಕನಹೆಡ್ ಸಾಹೇಬರು ಅಂದರೆ ಅಯರ್ವಿನಸಾಹೇಬರ ಕೂಡ ರಾಜಕೀಯ ವಿಷಯವಾಗಿ ಆಲೋಚನೆ ಮಾಡಲು ಹಿಂದುಸ್ಥಾನಕ್ಕೆ ಪಯಣ ಮಾಡಿಸುವರು.

ಮೈಸೂರ ಇಲಾಖೆಯಲ್ಲಿ ಕಳೆದ ಹತ್ತು ವರ್ಷಗಳಲ್ಲಿ ಸೆರೆಯವರ ಸಂಖ್ಯೆಯು ಇಮ್ಮಡಿಸಿದೆ. ಆದುದರಿಂದ ಕೆಲಸ ಮಾಡತಕ್ಕಂಥವರ ವಯಸ್ಸನ್ನು ೬೦ ಇಲ್ಲವಾದರೆ ೫೫ ರವರೆಗೆ ಬೆಳೆಯಿಸಬೇಕೆಂದು ಮಿ ನರಸಿಂಗರಾಯರು ಅಸೆಂಬ್ಲಿಯಲ್ಲಿ ಸೂಚಿಸಿದ್ದಾರೆ.

ಸ್ವರ್ಗವಾಸಿ ದೇಶಬಂಧು ದಾಸರ ಒಬ್ಬನೇ ಮಗನಾದ ಬಾಬೂ ಚಿತ್ತರಂಜನ ದಾಸನು ಸ್ವರ್ಗಸ್ಥನಾದನೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ. ಇವನ ದೇಹಕ್ಕೆ ಅಗ್ನಿ ಸಂಸ್ಕಾರವನ್ನು, ತಂದೆಗೆ ಅಗ್ನಿ ಕೊಟ್ಟ ಸ್ಥಳದಲ್ಲಿಯೇ, ಮಾಡಿದರು.

.. ಬ್ಯಾರಿಸ್ಟರ ಜಯಕರರಿಗೆ ನೀವು ಹಾಯಕೋರ್ಟಿನ ಜಡ್ಜರಾಗುವಿರಾ ಎಂಬದಾಗಿ ಸರಕಾರದವರು ಕೇಳಿದರು. ರಾಜಕೀಯ ಪಕ್ಷಭೇದವುಳ್ಳವರು ಜಡ್ಜರಾಗಲಿಕ್ಕೆ ಬರುವದಿಲ್ಲೆಂದು ಇವರು ಉತ್ತರ ಕೊಟ್ಟಿದ್ದಾರೆ. ಜಡ್ಜಿಯಾಗುವದಕ್ಕಿಂತ ದಿವಾಣರಾಗುವ ಅಭಿಲಾಷೆ ಇರಬಹುದಲ್ಲವೇ?

ಪ್ರೊಫೇಸರ ದಿನಾಟಿಯಾಯವರ ಜಕ್ಕು ಮುಣಗಿಸಿ ಪ್ರೊಫೇಸರ ಶಿರಾಸರೆಂಬ ಸಾಹೇಬರನ್ನು ಅಹಮದಾಬಾದ ಕಾಲೇಜದ ಪ್ರಿನ್ಸಿಪಾಲರನ್ನಾಗಿ ನೇಮಿಸುವರೆಂಬ ವರ್ತಮಾನ ಕೇಳಿ ಅಹಮದಾಬಾದಿನ ಜನರಲ್ಲಿ ಅಸಂತೋಷ ಹಬ್ಬುತ್ತದೆ.

ಈ ತಿಂಗಳ ೩ನೇ ವಾರದಲ್ಲಿ ಸರ್ವಾಧಿಪತಿಗಳಾದ ಲಾರ್ಡ ಆಯರ್ವಿನಸಾಹೇಬರು ಪುಣೆಗೆ ಬರುವರು. ಮುನಿಸಿಪಾಲಿಟಿಯವರೂ ಮುಸಲಮಾನರೂ ಇವರಿಗೆ ಪ್ರತ್ಯೇಕವಾಗಿ ಮಾನಪತ್ರಗಳನ್ನು ಕೊಡುವರು.

ಪದವಿಗಳು

ಬಾದಶಹರ ವರ್ಧಂತ್ಯುತ್ಸವದ ಸ್ಮರಣೆಗಾಗಿ ಕೆಳಗಿನ ಗೃಹಸ್ಥರು ಪದವಿಗಳನ್ನು ಹೊಂದಿದ್ದಾರೆ.

ಸರ-

೧ ಅಲ್ಲಾಭಾಯಿ ಕರೀಮಭಾಯಿ ಮುಂಬಯಿ [illegible].
೨ ನಾಮದಾರ ಸಿ. ಪಿ. ಸೇತಲವಾಡ.
೩ ಮಾನವಿಕ್ರಮವರ್ಮಾ [illegible] ಕೊಚ್ಚಿನ ರಾಜರು.
೪ ಜೆ. ಸಿ. ರಾಯ, ಡಾಯರೆಕ್ಟರ ಜನರಲ ಅಫ ಪೋಸ್ಟ್ ಮತ್ತು ಟೆಲಿಗ್ರಾಫ
೫ ಡಾಕ್ಟರ ಬ್ರಜೇಂದ್ರನಾಥ ಸೀಲ, ಮಾಯಿಸೂರ ಯುನಿವ್ಹರ್ಸಿಟಿ.

ಮಹಾರಾಜಾ ಪಂಚಪರಂಪರ-
೧ ಮೈಸೂರು ರಾಜಕುಮಾರ ಸಾಹೇಬರು.
೨ ಗೋಂಡಾಲದ ರಾಜಕುಮಾರ ಸಾಹೇಬರು.

ಮಹಾಮಹೋಪಾಧ್ಯಾಯ-
೧ ಪಂಡಿತ ನರಸಿಂಹಾಚಾರ್ಯ ತಿರುಪತಿ [illegible] ಮದ್ರಾಸ.
೨ ಪಂಡಿತ ಕಮಲಾಕೃಷ್ಣ ಸ್ಮೃತಿತೀರ್ಥ ಬಂಗಾಲ.

ಶ್ಯಾಮಸುಲ ಉಲೇಮಾ
ಮೌಲಾನಾ ಮಹೇದಲಿ ಕಲಕತ್ತಾ.

ಕೆ. ಸಿ. ಆಯ. ಇ.-
ಪಾಲನಪುರದ ರಾಜರು.

ಸಿ. ಆಯ. ಇ.
೧ ವೆಂಕಟರಮಣಶಾಸ್ತ್ರಿ, ಲ್ಯಾಂಡಲಾರ್ಡ ಒಡೆಯರ [illegible] ಮದ್ರಾಸ.
೨ ಕರ್ನಲ ಕೇತಕರ- ಇನ್ಸ್‌ಪೆಕ್ಟರ ಜನರಲ ಅಫ ಹಾಸ್ಪಿಟಲ್ಸ- ನಾಗಪೂರ
ಛಾಭಾ- ರಿಟಾ ಬುಕ್ಕ ಇನ್ಸ್‌ಪೆಕ್ಟರ ಜನರಲ ಅಫ ಎಜ್ಯುಕೇಶನ ಮೈಸೂರ
ಎ. ಎಲ್ ಕಾವ್ಹರೆಂಟಿನ ಪ್ರಿನ್ಸಿಪಾಲ ಎಲ್ಫಿನ್‌ಸ್ಟನ ಕಾಲೇಜ ಮುಂಬಯಿ

ಕೇಸರ ಈ ಹಿಂದ (ಬೆಳ್ಳಿ ಪದಕ)
ಆಕಂಟಾ ಬಾಳಕೃಷ್ಣಶೆಟ್ಟಿ ಎಡಿಟರ ನವಯುಗ, ಮಂಗಳೂರ

ರಾವಬಹಾದ್ದೂರ-
೧ ನಟೇಶನ- ಎಡಿಟರ ಇಂಡಿಯನ್ನ ರಿವ್ಯೂ ಮದ್ರಾಸ
೨ ವಿನಾಯಕ ವಾಮನ ಮಾಳೆ, ಪ್ರೆಸಿಡೆಂಟ ಮ್ಯುನಿಸಿಪಾಲಿಟಿ ಸೊಲ್ಲಾಪೂರ
೩ ಪಶುಪತೆಪ್ಪಾ ಶಿಂಗಪ್ಪಾ ಅಂಗಡಿ, ಬೆಳಗಾವಿ
೪ ವೆಂಕಟಕೃಷ್ಣಯ್ಯಾ ಸಿಕಂದರಾಬಾದ

ಖಾನಸಾಹೇಬ-
೧ ಅಬ್ದುಲಮಾಜಿದಸಾಹೇಬ ಬಹಾದ್ದೂರ ಹುಜೂರ ಸಿರಸ್ತೇದಾರ ವಿಜಾಪುರ.

ರಾವಸಾಹೇಬ-
೧ ಹೀರಾಲಾಲ- ಅಸಿಸ್ಟಂಟ ಸೆಕ್ರೆಟರಿ ಗೀರ್ವಾಣ ಮಂಡಳಿ ಮುಂಬಯಿ.
೨ ಮಂಜುನಾಥ ವಿಠ್ಠಲ ಶೈಣೈ- ಜಮೀನದಾರ, ಕಾರವಾರ

ಭೂಕಂಪದಿಂದ ಹಲವು ಜನರು ಸತ್ತರು.
ಎಲ್ಲ ಮನೆಗಳು ಬಿದ್ದವು.

ಭೂಮಧ್ಯ ಸಮುದ್ರದಲ್ಲಿ ಭೂಕಂಪವಾದಂತೆ ಸುಮಾತ್ರಾ ಸಮುದ್ರದಲ್ಲಿಯೂ ಭೂಕಂಪವಾಯಿತು. ಅದರ ಹೆಚ್ಚು ಪಟ್ಟಣವಾದ ಪೆಡಾಂಗ ಪಟ್ಟಣದಲ್ಲಂತೂ ಒಂದೂ ಮನೆಯು ಉಳಿಯಲಿಲ್ಲ. ಎಲ್ಲ ಮನೆಗಳು ಧರೆಗೆ ಉರುಳಿದವು. ಆ ಭಾಗದಲ್ಲಿ ಹಲವು ಜನರು [illegible] ಬಿದ್ದರು.

ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ಹೊಸ ವ್ಯವಸ್ಥೆಯು

ಮುಂಬಯಿ ಇಲಾಖೆಯ ಮೇಜರ ಮ್ಯುನಿಸಿಪಾಲಿಟಿಗಳ ಕಾಯಿದೆಯನ್ನವು ಇಲ್ಲಿಯ ಮ್ಯುನಿಸಿಪಾಲಿಟಿಯ ಆಡಳಿತೆಯಲ್ಲಿ ಹೊಸ ವ್ಯವಸ್ಥೆಯಾಗತಕ್ಕದ್ದುಂಟು. ಚೀಫ ಆಫೀಸರರು ಗ್ರ್ಯಾಜ್ಯುಯೇಟರೇ ಇರಬೇಕೆಂಬ ನಿರ್ಬಂಧನೆಯುಂಟು. ಆದರೆ ಇಲ್ಲಿನ ಚೀಫ ಆಫೀಸರರು ಗ್ರ್ಯಾಜ್ಯುಯೇಟರಾಗಿರುವದಿಲ್ಲ. ಆದುದರಿಂದ ಚೀಫ ಆಫೀಸರರೆಂದು ಈ ವರೆಗೆ ಉಪಯೋಗ ಮಾಡುತ್ತಿದ್ದಂಥ ಅಧಿಕಾರಗಳನ್ನು ಎರಡನೆಯ ಹುಕುಮು ಬಂದ ತನಕ ಉಪಯೋಗ ಮಾಡಬಾರದೆಂದು ಇವರಿಗೆ ಈ ಬಗ್ಗೆ ತಿಳಿಸಿದ್ದಾರೆ. ಇವರಂತೆ ಹಾಗೆಯೇ ಮ್ಯಾನೇಜಿಂಗ ಮತ್ತು ಸ್ಟ್ಯಾಂಡಿಂಗ ಕಮೀಟಿಗಳೂ ರದ್ದಾಗುವವು. ಸ್ಟ್ಯಾಂಡಿಂಗ ಕಮೀಟಿಗಳನ್ನು ನೇಮಿಸಿಕೊಳ್ಳಬೇಕಾಗುತ್ತದೆ. ಚೀಫ ಆಫೀಸರರ ಬಗ್ಗೆ ವಿಚಾರ ಮಾಡುವದಕ್ಕೂ, ಹೊಸದಾಗಿ ಸ್ಟ್ಯಾಂಡಿಂಗ ಕಮಿಟಿಯನ್ನು ಏರ್ಪಡಿಸಲಿಕ್ಕೂ ಇದೇ ತಿಂಗಳ ಎಂಟನೇ ತಾರೀಖಿನ ದಿವಸ ಮ್ಯುನಿಸಿಪಾಲಿಟಿಯ ಜನರಲ ಕಮಿಟಿಯು ಕೂಡಲಿಕ್ಕಿದೆ.

ಇಜಿಪ್ತ ಮತ್ತು ಪಾಲೆಸ್ಟೈನದಲ್ಲಿ ಭೂಕಂಪ!
ಅನೇಕ ಮನೆಗಳು ಬಿದ್ದವು, ಅನೇಕರು ಸತ್ತರು.

ಕಳೆದ ರವಿವಾರದ ದಿವಸ ಇಜಿಪ್ತ, ಪಾಲೆಸ್ಟೈನ ಮತ್ತು ಸಿರಿಯದಲ್ಲಿ ಮೂರು ನಿಮಿಷಗಳ ಪರ್ಯಂತರ ಭೂಮಿಯು ನಡುಗಿತು. ಮನೆಗಳು ಕಡಕೊಂಡು ಬೀಳುತ್ತವೆನ್ನುವಂತೆ ಭಾಸವಾದ್ದರಿಂದ, ಜನರು ಹೌಹಾರಿ, ಪೈಕಿಗಳಲ್ಲಿ ಒಂದು ಸಿಂಹವು ದೊಡ್ಡ ದೊಡ್ಡ ಕಟ್ಟಡಗಳಿಗೆ ಬಿರುಕು ಬಿಟ್ಟಿರುತ್ತವೆ. ಕ್ಯಾಂಡಿಯಾ ಎಂಬಲ್ಲಿ ಭಯಂಕರವಾಗಿ ಅರ್ಥಹಾನಿ, ಪ್ರಾಣಹಾನಿಯಾಯಿತು. ಅನೇಕ ಮನೆಗಳು ಬಿದ್ದಿರುವವು. ಅನೇಕ ಜನರು ವ್ಯಕ್ತಿಗಳು [illegible]

ಪಾರ್ಲಮೆಂಟ ಸಭೆಯಲ್ಲಿ ಬಾದಶಹರ
ಅಭಿನಂದನ.

ಇಂಗ್ಲಂಡದಲ್ಲಿ ಕಳೆದ ಬುಧವಾರ ಕಾಮನ್ಸ ಸಭೆಯ ಮತ್ತು ಅದರ ಕೂಡ ಎರಡೂ ಸಭೆಗಳ ಸಭಾಸದರು ಬಾದಶಹರ ಮೇಲಿಂದ ತಮ್ಮ ನಿಷ್ಠೆ ವ್ಯಕ್ತಪಡಿಸಿದರು. ಸ್ಪೀಕರ ಜೂಬಿಲೀ ಅಭಿನಂದನವನ್ನು ತೆಗೆದುಕೊಂಡರು. ಅದರ ಪುನರುಚ್ಚಾರಣೆಯು ಕಳೆದ ಬುಧವಾರ ದಿವಸ ಪಾರ್ಲಮೆಂಟ ಸಭೆಯಲ್ಲಿ ಹೊರಟಿತು. ಆಗ ಕಾರ್ಮಿಕರ ಪಕ್ಷದ ಸಭಾಸದರಾದ ಮೆ. ಲ್ಯಾನ್ಸಬರಿಯವರು ಬಾದಶಹರಿಗೆ ಅಂಥ ಅಭಿನಂದನ ಪತ್ರಿಕೆಯನ್ನು ಕಳಿಸುವ ಕಾರಣವೇ ಇಲ್ಲೆಂದು ಪ್ರತಿಭಟಿಸಿದರು. ಆಗ ಸಭಾಧ್ಯಕ್ಷರು ಭಾಷಣದಲ್ಲಿ ಬಾದಶಹರ ಹೆಸರು ತರಕೂಡದೆಂದು ಬುದ್ಧಿವಾದ ಹೇಳಿದರು. ಇವರು ಅಧ್ಯಕ್ಷರ ಅಪ್ಪಣೆ ಕೇಳುತ್ತ ಎನ್ನುವಾಗ ಬಾದಶಹರ ದೆಸೆಯಿಂದ ಪಾರ್ಲಮೆಂಟಿನ ಸನ್ಮಾನ ಬುದ್ಧಿ ಇರುವದಿಲ್ಲವೇ ಅಲ್ಲ. ತಿರಸ್ಕಾರವೇ ಇರುತ್ತದೆಂದು ವಾದಿಸಿದರು. ಆಗ ದೊಡ್ಡ ಗೊಂದಲವೆದ್ದಿತು. ಸರಕಾರ ಪಕ್ಷ ಮತ್ತು ವಿರುದ್ಧ ಪಕ್ಷದವರು ಭಾಷಣ ಮಾಡತೊಡಗಿದರು. ಅಧ್ಯಕ್ಷರು ಆ ವಾದವನ್ನು ಅಷ್ಟಕ್ಕೆ ಮುಗಿಸಿ, ರಾಜಾಯ ಸ್ವಸ್ತಿ. ರಾಜ್ಞಾಯ ಸ್ವಸ್ತಿ ಎಂದರು.

ಕುಲಕರ್ಣಿ ಬ್ರದ್ಸ ಕಂಪನಿ ಇವರದ
೨, ೪, ೬, ೮, ಇಂಚಿನ ೪ ಪ್ರಕಾರದ
ವತನದಾರ ರೆಂಟೆಗಳು



ಬ್ಲಾಕ ಮಾಡುವ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ
ಕುಲಕರ್ಣಿ ಬ್ರದ್ಸ ಕಂಪನಿ
ಶಿರಿ, ಧಾರವಾಡ

ನೋಟೀಸ ನಂ. ೬೪

ಚೇರಮನ್ನ ಸ್ಕೂಲಬೋರ್ಡ ಡಿಸ್ಟ್ರಿಕ್ಟ ಲೋಕಲಬೋರ್ಡ ಧಾರವಾಡ ಇವರ ಕಡೆಯಿಂದ ತಿಳಿಸುವದೇನಂದರೆ:—

ಧಾರವಾಡ ಡಿಸ್ಟ್ರಿಕ್ಟ ಲೋಕಲಬೋರ್ಡ ಸ್ಕೂಲಬೋರ್ಡಿನ ಕಚೇರಿಯಲ್ಲಿ ಕೆಳಗೆ ತೋರಿಸಿದಂತೆ ಜಾಗೆಗಳನ್ನು ಮಂಜೂರ ಮಾಡಿದ್ದು ಅವುಗಳನ್ನು ತುಂಬತಕ್ಕದ್ದಿರುತ್ತದೆ. ಸದರ ಜಾಗೆಗಳಿಗೆ ಬಯಸ್ಸುವ ಉಮೇದವಾರರು ತಮ್ಮ ಅರ್ಜಿಗಳನ್ನು ಶಿಫಾರಸ ಪತ್ರಗಳಿದ್ದಲ್ಲಿ ಅವುಗಳೊಂದಿಗೆ ಈ ನೋಟೀಸಿನ ತಾರೀಖಿನಿಂದ ಎರಡು ತಿಂಗಳೊಳಗಾಗಿ ತಮಗೆ ಮುಟ್ಟುವಂತೆ ಕಳಿಸಬೇಕು. ಸದರ ಜಾಗೆಗಳಿಗೆ ಬಯಸ್ಸುವ ಉಮೇದವಾರರು ಯಾವ ತರದ ಯೋಗ್ಯತೆಯುಳ್ಳವರಿರಬೇಕೆಂಬುದನ್ನು ಎದುರು ಪ್ರತಿ ಜಾಗೆಯ ಮುಂದೆ ತೋರಿಸಿರುತ್ತದೆ. ತಾ|| ೩೧ ಜುಲೈ ೧೯೩೬ರ ನಂತರ ಬಂದ ಅರ್ಜಿಗಳ ವಿಚಾರವಾಗಲಿಕ್ಕಿಲ್ಲ.

ಹುದ್ದೆಯ ಹೆಸರು	ತಿಂಗಳೊಂದಕ್ಕೆ ಪಗಾರ	ಉಮೇದವಾರರಿಗೆ ಅವಶ್ಯವಾಗಿ ಬೇಕಾಗುವ ಯೋಗ್ಯತೆ
೧ ಅಡಮಿನಿಸ್ಟ್ರೇಟಿವ್ಹ ಆಫೀಸರ	೩೦೦ ೧೦-೫೦೦	
೧೦ ಜನ ಸುಪರವಾಯಿಜರರು	೬೦- ೪-೧೨೦	೨ನೇ ಅಥವಾ ಮೂರನೇ ವರ್ಗದ ಟ್ರೇಂಡಸಿದ್ದು ಕನಿಷ್ಠ ೧೫ ವರ್ಷ ಮಾಸ್ತರ ಕೆಲಸ ಮಾಡಿದವರಿರಬೇಕು
೩ ಸದರ	೮೦- ೫-೧೫೦-೧೦-೨೫೦	ಎಸ್. ಟಿ. ಸಿ ಅಥವಾ ಎಲ್. ಸಿ. ಟಿ ಡಿ. ಅಥವಾ ಬಿ. ಟಿ ಪರೀಕ್ಷೆ ಪಾಸಾದ ವಿಶ್ವವಿದ್ಯಾಲಯದ ಪದವೀಧರರಿದ್ದು ಇಂಗ್ಲಿಷ ಶಾಲೆಯಲ್ಲಿ ಕನಿಷ್ಠ ೧೦ ವರ್ಷ ಮಾಸ್ತರ ಕೆಲಸ ಮಾಡಿದವರಿರಬೇಕು
೨ ಸದರ	೬೦-೪-೧೧೦-೫-೧೫೦	ಮ್ಯಾಟ್ರಿಕ್ ಅಥವಾ ಸ್ಕೂಲ ಫಾಯನಲ್ ಪಾಸಾದ ಎಸ್. ಟಿ. ಅಥವಾ ಎಸ್. ಟಿ ಸಿ. ಡಿ. ಪಾಸಾದ ಹಾಗೂ ಇಂಗ್ಲಿಷ ಶಾಲೆಯಲ್ಲಿ ಕನಿಷ್ಠ ೧೦ ವರ್ಷಗಳ ವರೆಗೆ ಮಾಸ್ತರ ಕೆಲಸ ಮಾಡಿದವರಿರಬೇಕು.
೧ ಹೆಡ್ಡಕ್ಲಾರ್ಕ	೪೦-೫/೨-೧೦೦	ಪರೀಕ್ಷೆ ಪಾಸಾದವರಿರಬೇಕು
೧ ಅಕೌಂಟಂಟ	೧೦೫- ೫-೧೫೦	ಸರಕಾರದಿಂದ ಮಾನ್ಯ ಮಾಡಿದ ಅಕೌಂಟಂಟ ಪರೀಕ್ಷೆಯನ್ನು ಪಾಸಾದವರಿರಬೇಕು
೬ ಜನ ಕ್ಲಾರ್ಕರು	೬೦- ೫ ೨- ೪೦	ಪರೀಕ್ಷೆ ಪಾಸಾದವರಿರಬೇಕು.
೫ ಜನ ಕ್ಲಾರ್ಕರು	೪೦- ೫/೨- ೬೦	ಪರೀಕ್ಷೆ ಪಾಸಾದವರಿರಬೇಕು.

N B ಮೇಲೆ ತೋರಿಸಿದ ೧೫ ಸುಪರವಾಯಿಜರ ಜಾಗೆಗಳಲ್ಲಿ ಒಂದು ಜಾಗೆಯನ್ನು ಉರ್ದು ಶಾಲೆಗಳನ್ನು ತಪಾಸಿಸುವ ಬಗ್ಗೆ ಉರ್ದು ಸುಪರವಾಯಿಜರಿಗೆ ಮತ್ತು ಮುಸ್ಲಿಮರಿಗೆ ಶಾಲೆಯ ಬಗ್ಗೆ ಒಂದು ಜಾಗೆಯನ್ನು ಲೇಡಿ ಸುಪರವಾಯಿಜರಿಗೆ ಕೊಡುವದರಲ್ಲಿ ಬರುವದು. ಸದರ ಜಾಗೆಗಳಲ್ಲಿ ಕೆಲಸ ಮಾಡಲಿಚ್ಛಿಸುವ ಉಮೇದವಾರರು ಅರ್ಜಿಗಳನ್ನು ಕಳಿಸಬೇಕು

ಸ್ಕೂಲ ಬೋರ್ಡ ಆಫೀಸ ಧಾರವಾಡ ೧-೬-೧೯೩೬	**S K. HOSMANI.** ಚೇರಮನ್ನ ಸ್ಕೂ. ಬೋ. ಡಿ. ಲೋ. ಬೋ. ಧಾರವಾಡ

ಧಾರವಾಡ—

ಧಾರವಾಡ ಪಟ್ಟಣದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸುವದಕ್ಕಾಗಿ ೧೮ ವರ್ಷದೊಳಗಿನ ಎಷ್ಟು ಗಂಡು ಮತ್ತು ಹೆಣ್ಣು ಹುಡುಗರಿದ್ದಾರೆಂಬ ಗಣತಿಯನ್ನು ನಡೆಸಿದ್ದಾರೆ

ಸವಣೂರಿನಲ್ಲಿ ದಿವಾನರಾಗಿದ್ದ ಶ್ರೀ. ರಾಜೇರಾವ ಮಂಗಳವೇಡೇಕರರು ಹುಬ್ಬಳ್ಳಿಯಲ್ಲಿ ದೈವಾಧೀನರಾದರೆಂದು ಬರೆಯುವದಕ್ಕೆ ವಿಷಾದಿಸುತ್ತೇವೆ

ಕಿತ್ತೂರು ಹುಟ್ಟುವಳಿಯನ್ನು ಶಾಸ್ತ್ರೀಯ ರೀತಿಯಿಂದ ಅಭ್ಯಾಸ ಮಾಡಲಿಕ್ಕೆ ಅಮೇರಿಕೆಗೆ ಹೋಗಿದ್ದ ಶ್ರೀ. ಅಣ್ಣಾರಾವ ಧಾರವಾಡಕರರು ಮರಳಿ ಇಲ್ಲಿಗೆ ಬಂದರು.

ಎರಡು ದಿವಸಗಳಿಂದ ಮಳೆಯ ಚಿನ್ಹವುಂಟು ಆಗಾಗ್ಗೆ ಚಿಕ್ಕ ದೊಡ್ಡ ಸರವುಗಳು ಬರುತ್ತಿರುವವು. ಮಳೆಯಾಗುವದಿಲ್ಲೆಂಬ ಭಯ ಹಿಂದಾಯಿತು

ಖಂಡದಾರರಿಗೆ ಸೂಚನೆ.

ಬರುವ ತಿಂಗಳಲ್ಲಿ ಹೊಸ ವರ್ಷ ಪ್ರಾರಂಭವಾಗುವ ಶಿಕ್ಷಣ ಮತ್ತು ಬಾಕಿ ಪತ್ರದ ಖಂಡದಾರರ ಹೆಸರಿನಿಂದ ವ್ಹಿ. ಪಿ. ಯನ್ನು ಕಳಿಸುವೆವು. ಖಂಡದಾರರು ವ್ಹಿ. ಪಿ. ಸ್ವೀಕಾರ ಮಾಡಿ ವಿಜಯದ ಪ್ರೋತ್ಸಾಹಿಸಬೇಕೆಂದು ವಿನಂತಿಯು.

ವ್ಯವಸ್ಥಾಪಕ ವಿಜಯ, ಧಾರವಾಡ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ.

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು, ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ವಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ನಮ್ಮಲ್ಲಿ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟು ಸಾಲ ತೆಗೆದುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ [illegible] ಆಣೆಯಷ್ಟು ಇರುತ್ತದೆ

ಎ. ಕೆ. ಶೆಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಅರ್ಬನ ಕೋ. ಆಪರೆಟಿವ್ಹ ಬ್ಯಾಂಕ ಲಿಮಿಟೆಡ
ಮಂಗಳವಾರ ಪೇಟೆ ಧಾರವಾಡ.

ಕೋ ಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.
ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.
ಬಂಡವಲು ಎರಡು ಲಕ್ಷದ ಮೇಲುಂಟು. ಈ ಬ್ಯಾಂಕು ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಶಾಲೆಗಳ ಮತ್ತು ಕೋ ಆಪರೇಟಿವ್ಹ ಸಂಸ್ಥೆಗಳಿಗೆ ಹೆಚ್ಚಾಗಿ ಬಡ್ಡಿ ಕೊಡಲಾಗುವದು.
ಬೇರೆ ಸಂಗತಿಗಳನ್ನು ಬಂದು ಕಂಡು ಮಾತಾಡಿ ತಿಳಕೊಳ್ಳಬೇಕು.

ಮುಕ್ತಲರಾವ ಬಿ. ಜಹಗೀ,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅನ್ನಾಜೀಬುವಾ ಗೋಲಸರ್ಗ ಹೊಸಕೋಟೆ ಇವರು ಧಾರವಾಡದಲ್ಲಿರುವ ತಮ್ಮ ವಾಕರ್ಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.

ಸಾಪ್ತಾಹಿಕ **ವಿಜಯ** ಬೆಲೆ ೧ ಆಣೆ

ಸಂಪಾದಕರು:- ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ.

ವರ್ಷ ೭) ಧಾರವಾಡ ಮಂಗಳವಾರ ತಾರೀಖು ೧೩ನೇ ಜುಲೈ ೧೯೨೬ (ಸಂಚಿಕೆ ೨೬

ವಿಜಯ.

ಧಾರವಾಡ ತಾ- ೧೩-೭-೨೬ ನೇ ಇಸ್ವಿ

ಧಾರವಾಡ ಮ್ಯುನಸಿಪಾಲಿಟಿಯ ಜನರಲ ಕಮೀಟಿಯು.

ಈಗಿನ ಚೀಫ ಆಫೀಸರರ ಬದಲಾಗಿ ಗ್ರ್ಯಾಜ್ಯುಯೇಟ ಚೀಫ ಆಫೀಸರರನ್ನು ನೇಮಿಸುವ ಠರಾವು.

ಗುರುವಾರ ದಿವಸ ಇಲ್ಲಿಯ ಮ್ಯುನಿಸಿಪಾಲಿಟಿಯ ಜನರಲ ಕಮಿಟಿ ಕೂಡಿತ್ತು. ಸ್ವರ್ಗವಾಸಿ ಶೇಳಕೆಯವರ ಮೃತ್ಯುವಿನ ದೆಸೆಯಿಂದ ದುಃಖ ಪ್ರದರ್ಶನ ಮಾಡಿ, ಇವತ್ತು ನಡೆಯುವ ಕೆಲಸವನ್ನು ತಹಕೂಬ ಮಾಡಬೇಕೆಂದು ರಾವಬಹಾದ್ದೂರ ಬಿ. ಎಲ್. ಪಾಟೀಲರು ಸೂಚನೆ ತಂದರು. ದುಃಖಪ್ರದರ್ಶನದ ಠರಾವು ಪಾಸ ಮಾಡಬೇಕು; ಆದರೆ ಕಮಿಟಿ ತಹಕೂಬ ಮಾಡಕೂಡದೆಂದು ಶ್ರೀ. ವಿನಾಯಕರಾವ ಜೋಶಿಯವರು ಪ್ರತಿಸೂಚನೆ ತಂದರು. ಮತ್ತು ಶ್ರೀ. ಹೊಸ್ಮನಿಪೂರಮಠ ವಕೀಲರು ಅದನ್ನು ಅನುಮೋದಿಸಿದರು. ರಾ. ಬ. ಪಾಟೀಲರ ತಹಕೂಬ ಠರಾವಿಗೆ ಬಹುಮತದೊರೆಯದ್ದರಿಂದ, ಮೊದಲನೇ ಠರಾವು ಪಾಸಾಗಿ, ಕಮಿಟಿಯ ಕೆಲಸ ಪ್ರಾರಂಭವಾಯಿತು.

ಮೇಜರ ಮ್ಯುನಿಸಿಪಾಲಿಟಿಯ ಆಕ್ಟಿನ ಪ್ರಕಾರ ಈಗಿನ ಚೀಫ ಆಫೀಸರರು ಗ್ರ್ಯಾಜ್ಯುಯೇಟರು ಇರುವದಿಲ್ಲ. ಆದ್ದರಿಂದ ಇವರ ಅಧಿಕಾರವನ್ನು ಸಧ್ಯದಲ್ಲಿ ತಹಕೂಬಿಟ್ಟಿಟ್ಟು, ಮುಂದೆ ಹೇಗೆ ಮಾಡಬೇಕೆಂಬದು ಮುಖ್ಯ ಪ್ರಶ್ನವಾಗಿತ್ತು. ಅದರ ವಿಚಾರಣೆಗೇ ಪ್ರಾರಂಭವಾಯಿತು. ರಾ. ಬ. ಬಿ. ಎಲ್. ಪಾಟೀಲರು ಕಮಿಟಿಯ ಮುಂದೆ ಕೆಳಗಿನ ಅಭಿಪ್ರಾಯದ ಠರಾವು ತಂದರು.

"೧ ಈ ಕಾಯದೆಯ ಅರ್ಥವು ಸ್ಪಷ್ಟ ಮತ್ತು ಸಮಾಧಾನಕಾರಕವಾಗಿರದೆ, ಅಸ್ಪಷ್ಟ ಮತ್ತು ಸಂದಿಗ್ಧವಿರುವದರಿಂದ ಕಲಮು ೩೩ ಇದರ ಕೂಡ ಕಲಮು ೫೫ ಕೂಡಿಸಿ ಓದಿದರೆ- ಗ್ರ್ಯಾಜ್ಯುಯೇಟ ಇಲ್ಲದಂಥವನು ಕಾಯಮ ಚೀಫ ಆಫೀಸರನಾಗಿ ದ್ದರೆ ಅವನನ್ನು ತೆಗೆಯಬೇಕೆಂದು ಸ್ಪಷ್ಟವಾಗಿ ಹೇಳದಂತಾಗುವದಿಲ್ಲ. ಅದ್ದರಿಂದ ಇದರ ಸ್ಪಷ್ಟ ಅರ್ಥ ತಿಳಕೊಳ್ಳುವದಕ್ಕಾಗಿ ಲೀಗಲ ರಿಮೆಂಬ್ರೆನ್ಸರರಿಗೆ ಬರೆಯಬೇಕು. ಅವರ ಅಭಿಪ್ರಾಯ ಬರೆದು ಬರುವ ತನಕ, ಸಧ್ಯದ ಚೀಫ ಆಫೀಸರರಾದ ಮಿ. ಜವನಗೌಡರೇ ಕೆಲಸ ಮಾಡಬೇಕು"

ಈ ಪ್ರಕಾರ ಇವರು ಠರಾವಿನ ಕೂಡದ ಭಾಷಣ ಮಾಡಿದರೂ, ಅದಕ್ಕೆ ಅನುಮೋದನ ಕೊಡುವ ಮೊದಲೇ ಕಾಯದೆಯ ಕಲಮುಗಳ ಚರ್ಚೆಗೆ ಪ್ರಾರಂಭವಾಯಿತು. ಆಗ ಅಧ್ಯಕ್ಷರಾದ ಮೆ. ಪಿಶಾಣಿ ಸಾಹೇಬರು ಅಂದದ್ದೇನೆಂದರೆ-

[illegible] ಉ ಒಪ್ಪಿರೀ ಅದ್ದರೂ, ಇಲ್ಲಿ ಮ್ಯುನಸಿಪಾಲಿಟಿಯ [illegible] ಕಾಯದೆ [illegible] [illegible] ಇದ್ದಾರೆ. ನನ್ನಲ್ಲಿಯೇ [illegible] ಅಭಿಪ್ರಾಯ [illegible] [illegible] [illegible] ಈ ವಿಷಯವಾಗಿ ನನ್ನ ಅಭಿ

ಪ್ರಾಯದ ಪ್ರಕಾರ ಕೇಳುವರೆಂದು ಅಪೇಕ್ಷಿಸುತ್ತೇನೆ."

ವಕೀಲ ಶ್ರೀ. ಜೋಗಳೆ ಅಂದದ್ದು:- ಈಗಿದ್ದ ಚೀಫ ಆಫೀಸರರು ನಾನ ಗ್ರ್ಯಾಜ್ಯುಯೇಟರಿದ್ದಾರೆ. ಕಾಯದೆಯ ಅರ್ಥವು ಸ್ಪಷ್ಟವಾಗಿರುತ್ತದೆ. ಇವರಿಗೆ ಇನ್ನು ಮೇಲೆ ಚೀಫ ಆಫೀಸರ ಕೆಲಸ ಮಾಡಲಿಕ್ಕೆ ಬರುವದಿಲ್ಲ. ಕಾರಣ ಕಲಮು ೩೩ರಲ್ಲಿ ಹೇಳಿದಂಥ ಚೀಫ ಆಫೀಸರರನ್ನೇ ನೇಮಿಸಬೇಕೆಂದು ಕಾಯದೆಯ ಅರ್ಥವು ಸ್ಪಷ್ಟವಾಗುತ್ತದೆ.

ಮಿ. ಪ್ಯಾರ್ಶಿಯವರು ಅಂದದ್ದು- ಕಾಯದೆಯ ಅರ್ಥವು ಸೂರ್ಯ ಪ್ರಕಾಶದಷ್ಟು ಸ್ಪಷ್ಟವಿರುತ್ತದೆ. ಬೇಕಾದರೆ ಸರಕಾರೀ ಕಾಯದೆ ಪಂಡಿತರನ್ನು ಕೇಳಿಕೊಳ್ಳಬಹುದು. ಅದಕ್ಕೇನೂ ಅಡ್ಡಿಯಿಲ್ಲ. ಹೀಗೆ ಕೇಳುವದರಿಂದ ಅಧ್ಯಕ್ಷರಿಗೆ ಮತ್ತಿಷ್ಟು ಬಲ ಬರುವದು.

ಶ್ರೀ. ಹುಲಕೋಟಿಯವರು- ಕಾಯದೆಯು ತೀರ ಸ್ಪಷ್ಟವದೆ. ಈಗಿದ್ದ ಚೀಫ ಆಫೀಸರರನ್ನು ನೇಮಿಸಿಕೊಳ್ಳಲಿಕ್ಕೆ ಬರುವದೇ ಇಲ್ಲ. ರಾ. ಬ. ಬಿ. ಎಲ್. ಪಾಟೀಲರಂಥವರ ಸಮಾಧಾನದ ದೆಸೆಯಿಂದ ಬೇಕಾದರೆ ಕೇಳಬಹುದು. ಆದರೆ ರಾ. ಬ ಪಾಟೀಲರು ಹೇಳುವಂತೆ ಅವರಿಂದ ೧೫ ದಿವಸಗಳಲ್ಲಿ ಮಾತ್ರ ಉತ್ತರ ಬರಲಾರದು. ಮತ್ತು ಅವರಿಂದ ಬರುವ ಉತ್ತರವು ನಮಗೆ ಬಂಧನಕಾರಕವಾಗಲಾರದು. ಕಾರಣ ಹೊಸ ಚೀಫ ಆಫೀಸರರನ್ನು ನೇಮಿಸಿಕೊಳ್ಳಬೇಕು.

ಶ್ರೀ. ಹೊಸ್ಮನಿಪೂರಮಠರವರು- ಸರಕಾರೀ ಕಾಯದೆಪಂಡಿತರ ಅಭಿಪ್ರಾಯವು ಮ್ಯುನಿಸಿಪಾಲಿಟಿಗೆ ಬಂಧನಕಾರಕವಿರದ ಬಳಿಕ, ವ್ಯರ್ಥ ಶ್ರಮವೇಕೆ? ಎಂದೆನೆಯವರ ಸಮಾಧಾನಕ್ಕಾಗಿ ಇಷ್ಟೇಕೆ ಪ್ರಾವಿಡ ಪ್ರಾಣಾಯಾಮವು. ಎಷ್ಟೋ ದಿವಸಗಳಲ್ಲಿ ಕೆಲಸದ ಸ್ಥಗಿತವಾಯಿತಾಗಿದೆ. ಇವರನ್ನೇ ಇಟ್ಟುಕೊಳ್ಳಬೇಕೆಂದು ಅರ್ಥವಾದರೆ- ಹಾಗೆ ಮಾಡಿರಿ. ವಾಕ್ಸ್ಟಂಟ್ಸನನ್ನು ನೇಮಿಸಿಕೊಂಡು, ಅವರಿಗೆ ತಿರುಗಿ ಹೋಗಲಿಕ್ಕೆ ಹೇಳಿ, ಮ್ಯುನಿಸಿಪಾಲಿಟಿಯ ದ್ರವ್ಯ ನಷ್ಟ ಮಾಡುವದಕ್ಕಿಂತ, ಅಗ್ಗೀ ಯಾವದೊಂದು ನಿಷ್ಕರ್ಷ ಮಾಡುವದು ಉತ್ತಮ.

ಇವರಿಗೆ ಉತ್ತರವಾಗಿ ರಾ. ಬ. ಬಿ. ಎಲ್. ಪಾಟೀಲರು ಅಕಾಂತತಾಂಡವ ಮಾಡಿದರು. ಈ ಪ್ರಕಾರ ಚೀಫ ಆಫೀಸರರನ್ನು ತೆಗೆಯುವದು ಅನ್ಯಾಯ; ನಮ್ಮಲ್ಲಿ ನ್ಯಾಯಬುದ್ಧಿ ಇಲ್ಲದಂತಾಗುತ್ತದೆ. ಕಾಯಮ ಕೆಲಸವೆಂದು ಜನರು ಬರುತ್ತಾರೆ. ಅಂಥವರಿಗೆ ಹೀಗೆ ಮಾಡುವದು ಬಹಳೇ ಅನ್ಯಾಯವಾಗುತ್ತದೆಂದು ಅರ್ಭಾಟ ಮಾಡಿದರು. ಆದರೆ ಅವರ ಭಾಷಣದಿಂದ ಕಾಯದೆಯಲ್ಲಿ ಕಜ್ಜಾರಾದಂಥ ಮತ್ತು ಎಂಥಾ ಪಕ್ಷಗಳ ವಾಗ್ವಾದ ಕೇಳದಂಥ ಸೂಜ್ಞ ಮೆಂಬರರ ಸಮಾಧಾನವಷ್ಟೂ ಆಗಲಿಲ್ಲ. ಕೊನೆಯಲ್ಲಿ ಮಿ. ಮಿಣಜಿಗಿಯವರು ಕೆಳಗೆ ಹೇಳಿದ ಪ್ರಕಾರ ಠರಾವು ತಂದರು:—

(ಅ) ಮೆ. ಪ್ರೆಸಿಡೆಂಟ ಸಾಹೇಬರು ತಾ| ೧೫ ಜುಲೈದ ದಿವಸ ಈಗಿನ ನಾನ ಗ್ರ್ಯಾಜ್ಯುಯೇಟ ಚೀಫ ಆಫೀಸರರಾದ ಮಿ. ಲಿಂಗನಗೌಡಾ ಶಿವನಗೌಡಾ ಪಾಟೀಲ ಇವರು ಹೊಸ ಕಾಯದೆಯ ಪ್ರಕಾರ ಚೀಫ ಆಫೀಸರ ಕೆಲಸ ಮಾಡಲಿಕ್ಕೆ ಬರುವದಿಲ್ಲ. ಕಾರಣ ಕೆಲಸ ಮಾಡಬಾರದೆಂದು ಕೊಟ್ಟ ಹುಕುಮನ್ನು ಮಂಜೂರ ಮಾಡಬೇಕು

(ಬ) ಮೇಜರ ಮ್ಯುನಿಸಿಪಾಲಿಟಿ ಆಕ್ಟಿನ ೩೩ನೇ ಕಲಮಿನ ಪ್ರಕಾರ ಚೀಫ ಆಫೀಸರರನ್ನು ನೇಮಿಸುವ ಬಗ್ಗೆ ಪ್ರೆಸಿಡೆಂಟರು ತೀವ್ರವೇ ವ್ಯವಸ್ಥೆ ಮಾಡಬೇಕು.

(ಕ) ಈಮುವರ್ಧಯೊಳಗಾಗಿ ಮುಂಬಯಿ ಸರಕಾರದ ಕಾಯದೆ ಪಂಡಿತರ ಕಡೆಗೆ ಬರೆದು ಕಲಮು ೩೩ ಮತ್ತು ೫೫ ಇವುಗಳ ಸ್ಪಷ್ಟ ಅರ್ಥವನ್ನು ಕೇಳಿಕೊಳ್ಳಬೇಕು.

ಮಿ. ಮಿಣಜಿಗಿಯವರ ಮೂರನೇ (ಕ) ಭಾಗವನ್ನು ಠರಾವಿನೊಳಗಿಂದ ತೆಗೆದು ಹಾಕಬೇಕೆಂದು ಶ್ರೀ. ಹೊಸ್ಮನಿಪೂರಮಠ ವಕೀಲರು ಸೂಚನೆ ತಂದರು. ಶ್ರೀ. ವಿನಾಯಕರಾಯರು ಇದನ್ನು ಅನುಮೋದಿಸಿದರು. ವೋಟು ತೆಕ್ಕೊಳ್ಳಲಾಗಿ ೧೬ ಅನುಕೂಲ ಮತ್ತು ೧೧ ಪ್ರತಿಕೂಲವಾಗಿ ಮೂರನೇ ಭಾಗವು ಠರಾವಿನಿಂದ ತೆಗೆದು ಹಾಕಲ್ಪಟ್ಟಿತು ಅನಂತರ ಅ ಮತ್ತು ಬ ಭಾಗಗಳನ್ನು ವೋಟಿಗೆ ಹಾಕಲು- ರಾ. ಬ. ಪಾಟೀಲರೊಬ್ಬರೇ ಪ್ರತಿಕೂಲರಾದರು, ಉಳಿದ ಎಲ್ಲ ಮೆಂಬರರೂ ಅನುಕೂಲ ವೋಟು ಕೊಟ್ಟರು.

ಸ್ಟ್ಯಾಂಡಿಂಗ ಕಮಿಟಿ.

ಈ ಪ್ರಕಾರ ಚೀಫ ಆಫೀಸರರ ವಿಷಯ ಮುಗಿದ ಬಳಿಕ ಸ್ಟ್ಯಾಂಡಿಂಗ ಕಮಿಟಿ ನೇಮಿಸುವ ಕೆಲಸ ನಡೆಯಿತು ಕೆಳಗಿನ ೧೩ ಜನ ಮೆಂಬರರು ಸ್ಟ್ಯಾಂಡಿಂಗ ಕಮಿಟಿಯು ಮೆಂಬರರಾಗಿ ಆರಿಸಲ್ಪಟ್ಟರು ಹೊಸ ಕಾಯದೆಯ ಪ್ರಕಾರ ಮ್ಯಾನೇಜಿಂಗ ಕಮಿಟಿಗೆ ಸ್ಟ್ಯಾಂಡಿಂಗ ಕಮಿಟಿ ಎಂಬ ಹೆಸರು. ಮೊದಲಿನ ಕಮಿಟಿಯಲ್ಲಿ ೯ ಜನ ಮೆಂಬರರಿದ್ದರು ಈಗ ೧೩ ಜನರಾಗುತ್ತಾರೆ

೧ ಮೆಸರ್ಸ ಹೊಸ್ಮನಿಪೂರಮಠ ೨ ವಿನಾಯಕರಾವ ಜೋಶಿ. ೩ ರಾಘವೇಂದ್ರ ಶಿರಹಟ್ಟಿ ೪ ಗದಿಗೆಪ್ಪಾ ಹಿರೇಮಠ ೫ ಮಲ್ಲಪ್ಪಗೌಡಾ ಪಾಟೀಲ ೬ ಗದಿಗೆಪ್ಪಾ ಕತ್ತಿ ೭ ಜಮಾಲ ೮ ದಂಡಿನ ೯ ಕೋಟೂರ ೧೦ ರಾಮೇಶಾಸ್ತ್ರೀ ೧೧ ಘೋರ್ಪಡೆ(?) ೧೨ ಮಾದನಭಾವಿ.

ಹೊಸ್ಮನಿಪೂರಮಠರವರು ಚೇರಮನ್ನರಾಗಬೇಕೆಂದು ಶ್ರೀ ವಿನಾಯಕರಾಯರು ಸೂಚಿಸಿದ್ದಕ್ಕೆ ಮಿ. ಮಾಳಾಪೂರ ಇವರು ಅನುಮೋದಿಸಿದರು. ಆಗ ಮಿ. ಮೆಣಸಿಗಿ ಬಸಪ್ಪನವರು ಶ್ರೀ ಹಿರೇಮಠರ ಗದಿಗೆಪ್ಪನವರು ಚೇರಮನ್ನರಾಗಬೇಕೆಂದು ಉಪಸೂಚನೆ ತಂದರು. ರಾ. ಬ. ಪಾಟೀಲರು ಅವನ್ನು ಸಮರ್ಥಿಸಿದರು. ಆಗ ಮಿ. ಹಿರೇಮಠರವರು- " ಮಿ. ಹೊಸ್ಮನಿಪೂರಮಠರವರು ಅನುಭವಿಕರೂ, ಕಾರ್ಯದಕ್ಷತೆಯುಳ್ಳವರೂ ಇರುವ ಮೂಲಕ ನಾನು ಚೇರಮನ್ನನಾಗಲಿಚ್ಛಿಸುವದಿಲ್ಲೆಂದು" ಹಾದಿಗಿ ಸಂತೋಷದಿಂದ ಉಮೇದವಾರಿಯನ್ನು ಹಿಂದಕ್ಕೆ ತಕ್ಕೊಂಡದ್ದರಿಂದ, ಶ್ರೀ ಹೊಸ್ಮನಿಪೂರಮಠರು ಸರ್ವಾನುಮತದಿಂದ ಚೇರಮನ್ನರಾಗಿ ಆರಿಸಲ್ಪಟ್ಟರು.

ಹೊಸ ಚೀಫ ಆಫೀಸರರ ನೇಮಣೂಕಿಯಾಗುವ ತನಕ ಶ್ರೀ ಹೊಸ್ಮನಿಪೂರಮಠರವರೇ ಚೀಫ ಆಫೀಸರರು ಮಾಡತಕ್ಕಂಥ ಕೆಲಸ ಮಾಡಬೇಕೆಂದು ಸರ್ವಾನುಮತದಿಂದ ಗೊತ್ತು ಮಾಡಲ್ಪಟ್ಟಿತು.

ಲೆಕ್ಕ ತಪಾಸಣೆಗಾಗಿ ಸ್ಪೇಶಲ ಆಡಿಟರರ ನೇಮಣೂಕು.

ಶುಕ್ರವಾರದ ದಿವಸ ಪುನಃ ಜನರಲ ಕಮಿಟಿಯು ಕೂಡಿತು ವಾಟರ ಟ್ಯಾಕ್ಸ ಸಂಬಂಧದಲ್ಲಿ ದೊಡ್ಡ ಅವ್ಯವಸ್ಥೆಯಾಗಿರುವದರಿಂದ, ಲೆಕ್ಕ ತಪಾಸಣೆಗಾಗಿ ಒಬ್ಬ ಸ್ಪೇಶಲ ಆಡಿಟರರನ್ನು ನೇಮಿಸಬೇಕೆಂಬ ಪ್ರಶ್ನ ಬಂತು. ಮಿ. ಜವಳಿಯವರು ಈ ಠರಾವನ್ನು ತಂದರು. ಆದರೆ ಇಷ್ಟೇಕೆ ಅವಸರ; ಏ ಮಾತ ನೋಡೋಣ; ಲೆಕ್ಕ ನೋಡೋಣ; ವಿಚಾರ ಮಾಡೋಣವೆಂದು ರಾ. ಬ. ಪಾಟೀಲ, ಮಿ. ಗಿರಿಯಪ್ಪನವರ, ಮಿಣಜಗಿ, ಚಂದ್ರಗೌಡಾ ಮೊದಲಾದವರು ಠರಾವಿಗೆ ಪ್ರತಿಕೂಲವಿರುವಂಥ ಅಭಿಪ್ರಾಯ ತಕ್ಕೊಂಡರು. ಶ್ರೀ ಹುಲಕೋಟಿಯವರು ಇವರ ಕಣ್ಣೊಳಗೆ ಅಂಜನ ಹಾಕುವಂಥ ಭಾಷಣ ಮಾಡಿದರು. ಇವರು ಅಂದದ್ದೇನಂದರೆ-

" ಊರ ತುಂಬ ಮ್ಯುನಸಿಪಾಲಿಟಿಯ ಲೆಕ್ಕ ಪತ್ರದಲ್ಲಿ ಅಂದಾದುಂದಿಯಾಗಿರುತ್ತದೆಂದು ಬೊಬ್ಬಾಟವಾಗಿದೆ. ಮೂರು ದಿವಸಗಳ ಹಿಂದೆ ಆರುನೂರು ರೂಪಾಯಿಗಳ ಅಫರಾತಫರವಾಗಿರುತ್ತದೆಂದು ತಿಳಿದು ಬಂದಿತ್ತು. ಅದು ಈಗ ೧೬೦೦ಕ್ಕೆ ಬಂದಿದೆ. ಇದು ಸಾರ್ವಜನಿಕ ಹಣವುಂಟು. ಇದರಲ್ಲಿ ನಾವು ನಿಃಪಕ್ಷಪಾತಿಯಾಗಿರುತ್ತೇವೆಂದು ತೋರಿಸುವದಕ್ಕೆ ಸ್ಪೇಶಲ ಆಡಿಟರನ್ನು ನೇಮಿಸಲಿಕ್ಕೆ ಹಿಂಜರಿಯಬಾರದು. ಇಲ್ಲವಾದರೆ ನಮ್ಮಲ್ಲಿ ದೋಷವುಂಟೆಂಬದು ಜಾಹೀರಾಗುವದು. ಕಾಗದ ಪತ್ರ ಜಾಕೆದ್ದಾರೆ. ಮುನ್ಸಿಪಾಲ ಪಾವತಿಗಳು ಜನರಿಗೆ ಮುಟ್ಟಿದೆ, ಕಚೇರಿಯಲ್ಲಿಯೇ ಇವೆ. ಹಣಾ ಮುಟ್ಟಿದ್ದಕ್ಕೆ ಜನರ ಕಡೆಯಿಂದ ಸಹೀ ಇಲ್ಲ. ನಮಗೆಲ್ಲರಿಗೂ ಇದನ್ನೆಲ್ಲ ನೋಡಲಿಕ್ಕಾಗುವದಿಲ್ಲ. ಸ್ಪೇಶಲ ಆಡಿಟರನ್ನು ನೇಮಿಸಿದರೆ- ಅವರು ತುಸು ದಿವಸಗಳಲ್ಲಿ ಲೆಕ್ಕ ನೋಡಿಕೊಡುವರು."

ಮುಂಬಯಿ ಮ್ಯುನಿಸಿಪಾಲಟಿಯಲ್ಲಿ ವೆಚ್ಚ ಕಡಿಮೆ ಮಾಡುವ ರಿಪೋರ್ಟಿನ ಬಗ್ಗೆ ಚರ್ಚೆ ನಡೆದಾಗ, ರಾಷ್ಟ್ರೀಯ ಪಕ್ಷದ ಮುಖಂಡರಾದ ಮಿ ನರಿಮನ್ನ (ಪಾರ್ಸಿ) ಸಾಹೇಬರು ಈ ಬಗ್ಗೆ ನಾಲ್ವರದೊಂದು ಸ್ವತಂತ್ರ ಕಮೀಟಿ ಇರಬೇಕೆಂದೂ, ಪ್ರತಿಯೊಂದು ಖಾತೆಯ ಮೇಲ್ವಿಚಾರಣೆ ಮಾಡಲೋಸುಗ ಒಬ್ಬ ಸ್ವತಂತ್ರ ಕಾಮದಾರನಿರಬೇಕೆಂದೂ ಒಂದು ಉಪಸೂಚನೆ ತಂದರು. ಆಗಿನ ಮೀಟಿಂಗಿಗೆ ಅಧ್ಯಕ್ಷರಾಗಿದ್ದ ಮಿ. ದಾದಾಭಾಂಜಿಯವರು ಈ ಉಪಸೂಚನೆಯನ್ನು ಕಮೀಟಿ ಮುಂದೆ ತರಗೊಡಲಿಲ್ಲ. ಕಾರಣ ಕೇಳಲೆಂದು ಮೇಲಿಂದ ಮೇಲೆ ಕೇಳಿದರೂ, ಅಧ್ಯಕ್ಷ ಸಾಹೇಬರು ನಡಿಸಿನ ಉತ್ತರವನ್ನೇ ಕೊಡಲಾರಂಭಿಸಿದರು. ಆಗ ಮಿ. ನರಿಮನ್ನರ ಸೂಚನೆಯ ಮೇರೆಗೆ ರಾಷ್ಟ್ರೀಯ ಪಕ್ಷದ ಎಲ್ಲ ಮೆಂಬರರು ಕಮೀಟಿ ಬಿಟ್ಟು ಹೊರಗೆ ಬಂದರು. ಶ್ರೀ. ಜಮನಾದಾಸ ಮೇಥಾ ಇವರೊಬ್ಬರೇ ಮಾತ್ರ ಹೊರಗೆ ಬರಲಿಲ್ಲ. ಇವರು ಹೀಗೆ ಬಿಟ್ಟು ಹಿಂದೆ ಉಳಿದಂಥ ಕಾರಣವೇನಾಗಿರಬಹುದೋ! ತಿಳಿಯುವದಿಲ್ಲ.

ಧಾರವಾಡ ಮ್ಯುನಿಸಿಪಾಲಿಟಿಗೆ ಅಗತ್ಯದ ಸೂಚನೆ.

ಮುಂಬಯಿ ಮ್ಯುನಿಸಿಪಾಲಿಟಿಯಲ್ಲಿ ನಡೆದ ಲಂಚ ರುಷವತ್ತಿನ ಪ್ರಕರಣದಲ್ಲಿ ಪ್ರಾಮಾಣಿಕತನದಿಂದ ಸಾಕ್ಷೀ ನುಡಿದಂಥವರಿಗೆ, ಸಭೆ ಮಾಡಿ, ಬಂಗಾರದ ಪದಕಗಳನ್ನೂ ಬೇರೆ ಇನಾಮುಗಳನ್ನೂ ಕೊಟ್ಟರು. ಅದೇ ಪ್ರಕಾರ ಧಾರವಾಡ ಮ್ಯುನಿಸಿಪಾಲಿಟಿಯಲ್ಲಿ ನಡೆಯಬಹುದಾದ ವಿಚಾರಣೆಗೆ ಅಥವಾ ಈ ಮುಂದಾಗಿ ತಾವಾಗಿ ನಡೆದ ಸಂಗತಿಯನ್ನು ಹೇಳುವಂಥವರಿಗೆ ಇನಾಮು ದೊರೆಯುವದಲ್ಲದೆ, ಅವರ ಕೆಲಸದ ಬಗ್ಗೆ ಯಾವ ಪ್ರಕಾರದ ಆಕ್ಷೇಪಣೆ ತಕ್ಕೊಳ್ಳಲಿಕ್ಕಿಲ್ಲೆಂದು ಕೆಲಸಗಾರರಿಗೆ ನಂಬಿಗೆಯುನ್ನಿತ್ತು, ನಿಜ ಸಂಗತಿಗಳನ್ನು ತಿಳಕೊಳ್ಳಬೇಕೆಂದು ನಾವು ಮ್ಯುನಿಸಿಪಾಲಿಟಿಯ ಅಧ್ಯಕ್ಷರಿಗೆ ಅಗತ್ಯಪೂರ್ವಕವಾಗಿ ಸೂಚಿಸುತ್ತೇವೆ.

ಲಾರ್ಡ ಆಯರ್ವಿನಸಾಹೇಬರ ಪ್ರವಾಸ.

ಸರ್ವಾಧಿಪತಿಗಳಾದ ಲಾರ್ಡ ಆಯರ್ವಿನ ಸಾಹೇಬರು ನಾಗಪೂರ ಮತ್ತು ಅಹಮದನಗರದ ಪ್ರವಾಸವನ್ನು ತೀರಿಸಿಕೊಂಡು ನಾಳಿನ ದಿವಸ ಪುಣೆಗೆ ದಯಮಾಡಿಸುವರು. ನಾಗಪೂರದಲ್ಲಿ ಇವರಿಗೆ ಒಕ್ಕಲಿಗರ ಸಂಘದವರು ಮಾನಪತ್ರ ಕೊಟ್ಟರು. ಒಕ್ಕಲಿಗರ ಮಾನಪತ್ರಕ್ಕೆ ಒಕ್ಕಲಿಗನೆಂದೇ ಉತ್ತರ ಕೊಡುವನೆಂದು ಸಾಹೇಬರು ನುಡಿದು, ಒಕ್ಕಲುತನದ ಅಭಿವೃದ್ಧಿಗಾಗಿ ಮಾಡಬೇಕಾಗಿರುವ ಯೋಜನೆಗಳನ್ನು ಕುರಿತು ಕೆಲವು ವಿಚಾರಗಳನ್ನು ಹೇಳಿದರು. ಅಲ್ಲಿ ಅನೇಕ ಪ್ರಮುಖ ಗೃಹಸ್ಥರಿಗೆ ಭೆಟ್ಟಿ ಕೊಟ್ಟರು. ಸಾಯನ್ಸ ಕಾಲೇಜಸ್ಥಾಪನೆಯ ತಳಗಲ್ಲು ಕೂಡಿಸಿದರು. ಮತ್ತು ಹಾಯಸ್ಕೂಲಿಗೆ ಅಕಸ್ಮಾತಾಗಿ ಹೋಗಿ, ವಿದ್ಯಾರ್ಥಿಗಳಿಗೆ ನೂರು ರೂಪಾಯಿ ಮೆಚ್ಚು ಕೊಟ್ಟರು.

ಜಪಾನದಲ್ಲಿ ಭಯಂಕರ ದಂಗೆ.

ಗವ್ಹರ್ನರ ಮತ್ತು ಪೋಲೀಸ ಕಮಿಶನರರಿಗೆ ವೈಮುರಿ ಹೊಡತ.

ಜಪಾನ ರಾಜ್ಯಕ್ಕೆ ಸೇರಿದ ನಾಗಾಸೋ ಎಂಬ ಪಟ್ಟಣದಲ್ಲಿರುವ ಗವ್ಹರ್ನರನಾದ ಉಮೇಟಾನಿ ಎಂಬವನ ಆಡಳಿತೆಯನ್ನು ನಿಷೇಧಿಸುವದಕ್ಕಾಗಿ ೧೫ ಸಾವಿರ ಪಟ್ಟಣಿಗರು ದೊಡ್ಡ ಮೆರವಣಿಗೆ ತೆಗೆದು, ಗವ್ಹರ್ನರ ಸಾಹೇಬನ ವಾಸಸ್ಥಾನಕ್ಕೆ ಬಂದು, ದಾಳಿಯಿಟ್ಟು, ಗವ್ಹರ್ನರನನ್ನು ಹಿಡಿದು, ಜಡ್ಡು, ನೆಲಕ್ಕೆ ಕೆಡವಿ ಎಚ್ಚರದಪ್ಪುವ ತನಕ ಹೊಡೆದು, ಹೇಳಲಾರದಷ್ಟು ಮೋಸ ಹಾಕಿ, ಮನೆಯಲ್ಲಿದ್ದ ಸಾಮಾನುಗಳನ್ನು ನಾಶ ಮಾಡಿದರು ಇದೇ ಪ್ರಕಾರ ಪೋಲಿಸ ಕಮಿಶನರಸಾಹೇಬರನೂ ವೈಮುರಿ ಥಳಿಸಿದರು ಒಂದು ವರ್ತಮಾನಪತ್ರವು ದಂಗೆಯ ವರ್ತಮಾನವನ್ನು ಬಣ್ಣಿಸಿ ಮುದ್ರಿಸಿತು. ಈ ಮುದ್ರಾಲಯಕ್ಕೆ ಹೋಗಿ, ಮುದ್ರಾಲಯದಲ್ಲಿಯೂ ಪುಷ್ಕಳವಾಗಿ ಕೇಡು ಮಾಡಿದರು. ಬಂದೋಬಸ್ತಿಗಾಗಿ ದಂಡು ಹೋಗಿದೆ.

ತ್ರಾವಣಕೋರ ಸಂಸ್ಥಾನಕ್ಕೆ ಸೇರಿದ ಪೆರೂರವೆಂಬ ಗ್ರಾಮದಲ್ಲಿ ಅಂತ್ಯಜರು ಬ್ರಾಹ್ಮಣರ ಬೀದಿಗಳಲ್ಲಿ ತಿರುಗಾಡಬಹುದೆಂದು ಡಿಸ್ಟ್ರಿಕ್ಟ ಜಡ್ಜರು ತೀರ್ಪು ಹೇಳಿದ್ದರಿಂದ, ಬ್ರಾಹ್ಮಣ ವೈಶ್ಯ ಮೊದಲಾದ ಉಚ್ಚವರ್ಣದವರಲ್ಲಿ ತಳಮಳಿಯಾಗಿದೆ.

ಬಂಕಾಪುರದಲ್ಲಿ ಮುನಸೀಫ ಕೋರ್ಟಿನ ಸ್ಥಾಪನೆಯ ವಿಚಾರ

ಈ ಜಿಲ್ಲೆಯ ಬದ್ಧಸಾಹೇಬರು ನವಲಗುಂದ ಮತ್ತು ಬಂಕಾಪುರದಲ್ಲಿ ಸೇಕಂಡಕ್ಲಾಸ ಸಬ್ಬಜಡ್ಜ ಕಚೇರಿಗಳನ್ನು ಹೊಸದಾಗಿ ತೆರೆಯಬೇಕೆಂದು ಹಾಯಕೋರ್ಟಿಗೆ ಸಿಫಾರಸ್ಸು ಮಾಡಿದ್ದಾರೆಂಬ ಸಂಗತಿಯನ್ನು ಈ ಮೊದಲು ತಿಳಿದುಕ್ಕೊಳ್ಳಲಿದೆ. ನವಲಗುಂದವು ನವಲಗುಂದ ತಾಲೂಕ ಮತ್ತು ನರಗುಂದ ಪೇಟೆಗೆ ಮಧ್ಯಸ್ಥಳವಾದುದರಿಂದ, ಅಲ್ಲಿ ಕೋರ್ಟು ಆಗಲಿಕ್ಕೆ ಎಲ್ಲರೂ ಸಮ್ಮತಿಸುವರು. ಬಂಕಾಪುರದ ವಿಚಾರ ಮಾತ್ರ ಹಾಗಿರುವದಿಲ್ಲ. ಬಂಕಾಪುರದಲ್ಲಿ ಕೋರ್ಟು ಆಗಬೇಕೆಂಬ ಮಾತ್ರದಿಂದ ಬಂಕಾಪುರ ಗ್ರಾಮದಲ್ಲಿಯೇ ಕೋರ್ಟು ಆಗುವಂತಿಲ್ಲ. ಏಕೆಂದರೆ ತಾಲೂಕಿನ ಹೆಸರು ಬಂಕಾಪುರವಾದರೂ, ಕಚೇರಿಯು ಶಿಗ್ಗಾವಿಯಲ್ಲಿರುತ್ತದೆ. ಸಾಮಾನ್ಯ ನಿಯಮದ ಪ್ರಕಾರ ಕೋರ್ಟು ಶಿಗ್ಗಾವಿಯಲ್ಲಿಯೇ ಆಗುವದು. ಆದರೆ ಇದಕ್ಕೆ ಬಂಕಾಪುರದ ಪ್ರಜರದೊಡ್ಡ ಆಕ್ಷೇಪಣೆಯುಂಟು. ತಾಲೂಕಿನ ಹೆಸರು ಬಂಕಾಪುರವಾಗಿರುವಂತೆ, ಮುಖ್ಯ ಸ್ಥಳವು ಅದೇ ಗ್ರಾಮವಾಗಬೇಕೆಂದು ಇವರೆನ್ನುತ್ತಾರೆ. ಐದಾರು ವರ್ಷಗಳ ಹಿಂದೆ ಸರಕಾರಕ್ಕೆ ಒಂದು ಅರ್ಜಿಯನ್ನೂ ಮಾಡಿಕೊಂಡಿದ್ದರು, ಆದರೆ ಅದು ಫಲಿಸಲಿಲ್ಲ. ಶಿಗ್ಗಾವಿಯ ಹವೆಯು ನೆಟ್ಟಗಿಲ್ಲ. ಮಲ್ಲಾಡವಾಗಿದೆ. ಬಂಕಾಪುರದಂತೆ ಇತಿಹಾಸ ಪ್ರಸಿದ್ಧ ಗ್ರಾಮವಲ್ಲ. ಈ ಗ್ರಾಮವು ರೈಲ್ವೆ ಮಾರ್ಗಗಳಿಗೆ ಹತ್ತಿ ಮಧ್ಯಸ್ಥಳವಾಗಿದ್ದ, ಎಂದರೆ ಇವರು ಸರಕಾರಕ್ಕೆ ಬರಕೊಂಡಿದ್ದರು. ಹವೆಯು ನೆಟ್ಟಗಿಲ್ಲೆಂದು ಮುಂತೇ ಅವಿಚಾರದಿಂದ ರಿಪೋರ್ಟ ಅಥವಾ ತಕರಾರ ಬಂದಿದ್ದಾದ್ದರಿಂದ, ತಾಲೂಕಿನ ಸ್ಥಳವನ್ನು ಸ್ಥಳಾಂತರ ಮಾಡುವ ಅವಶ್ಯಕತೆ ತೋರುವದಿಲ್ಲೆಂದು ಆಗ ಸರಕಾರದವರು ಇವರಿಗೆ ಕೊಟ್ಟ ಉತ್ತರವಾಗಿರುತ್ತದೆ. ಸದ್ಯದಲ್ಲಿ ಕೋರ್ಟ ಸ್ಥಾಪನೆಯ ವಿಷಯ ಹೊರಟದ್ದರಿಂದ, ಆ ಊರವರು ಕೋರ್ಟು ಮತ್ತು ಕಚೇರಿಯು ತಮ್ಮ ಗ್ರಾಮದಲ್ಲಿಯೇ ಆಗಬೇಕೆಂದು ಪುನಃ ಸರಕಾರಕ್ಕೆ ಅರ್ಜಿ ಮಾಡಿಕೊಂಡಿದ್ದಾರೆ. ಅರ್ಜಿಯ ಒಂದು ನಕಲು ನಮ್ಮ ಕಡೆಗೆ ಬಂದಿದೆ. ಬಂಕಾಪುರದ ಹವೆಗೆ ಇವರು ಪುನಃ ಪತ್ರ ಕೊಟ್ಟು ಶಿಗ್ಗಾವಿಯ ನೀರು ಮತ್ತು ಹವೆಯು ಆರೋಗ್ಯವೇ, ಅನಾರೋಗ್ಯವೇ? ಎಂಬುದಾಗಿ ಸಿವಿಲ ಸರ್ಜನರಿಂದ ರಿಪೋರ್ಟು ತರಿಸಿಕೊಳ್ಳಬೇಕೆಂದು ಸ್ಪಷ್ಟವಾಗಿ ಅಂದಿರುತ್ತಾರೆ.

ಬಂಕಾಪುರವು ಇತಿಹಾಸ ಪ್ರಸಿದ್ಧ ಗ್ರಾಮವೆಂದೂ, ವಿಜಯನಗರ ಮತ್ತು ವಿಜಾಪುರದ ಬಾದಶಹರ ಕಾಲದಿಂದ ವ್ಯಾಪಾರ ಉದ್ದಿಮೆಯಲ್ಲಿ ದೊಡ್ಡ ಪಡೆಯುಳ್ಳದ್ದಾಗಿತ್ತೆಂದೂ, ಆಗ ದೊಡ್ಡ ಪಟ್ಟಣವಾಗಿತ್ತೆನ್ನುವಂತೆ ಈಗಲೂ ಆ ಊರಲ್ಲಿ ಪ್ರಾಚೀನ ಕಟ್ಟಡಗಳು ಸುತ್ತಲು ಎದ್ದು ಕಾಣುತ್ತಿರುವವು. ಇದರ ಹೊರತು ಕೋರ್ಟು ಮತ್ತು ಕಚೇರಿಗಳು ಅಲ್ಲಿಯೇ ಆಗಲಿಕ್ಕೆ ಏನಾದರೂ ಕಾರಣಗಳುಂಟೇ ಹೇಗೆಂದು ಬೇರೆ ರೀತಿಯಿಂದ ನೋಡಬೇಕಾಗುತ್ತದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಹೇಳುತ್ತೇವೆ

೧ ಬಂಕಾಪುರದಲ್ಲಿ ಬೇಕಾದಷ್ಟು ಸ್ಥಳವುಂಟು. ಕೋರ್ಟು ಕಚೇರಿಯನ್ನು ಕಟ್ಟುವದರಿಂದ ಸುತ್ತಿನ ಮತ್ತು ಊರಿನ ಜನಸಂಖ್ಯೆ ಬೆಳೆಯುವದು. ಇವರೆಲ್ಲರ ವಾಸಸ್ಥಾನಕ್ಕಾಗಿ ವಿಪುಲವಾದ ಸ್ಥಳವುಂಟು. ಹವೆಯು ಉತ್ತಮವಾಗಿರುವಂತೆ ನೀರಿನ ಪೂರೈಕೆಯೂ ಉಂಟು.

೨ ಇಲ್ಲಿ ಒಕ್ಕಲತನದ ಬೆಳೆಯವರು ದನಗಳ ಸಂಗೋಪನದ ಫಾರ್ಮು ಕಟ್ಟಿದ್ದಾರೆ. ಇದರಿಂದ ಹಸಿ, ನೀರು, ಎಮ್ಮೆ ಹಾಲಿನ ಪೂರೈಕೆಯುಂಟೆಂದು ಸ್ಪಷ್ಟವಾಗುತ್ತದೆ.

೩ ಬಂಕಾಪುರದ ಕೋರ್ಟಿಗೆ ಹಾನಗಲ್ಲನ್ನು ಕೂಡಿಸುವದರಿಂದ ಎರಡೂ ತಾಲೂಕಗಳಿಗೆ ಬಂಕಾಪುರವೇ ಮಧ್ಯಸ್ಥಳವಾಗುತ್ತದೆ.

೪ ಒರವ ಥ ಸ

ಕ್ಕ ಕಾರರಿಗೆ ಲೈನ ಮಾರ್ಗಗಳ ಅನುಕೂಲವಿರುತ್ತದೆ.

ಶಿಗ್ಗಾವಿಯೋ? ಬಂಕಾಪುರವೋ? ಎಂದು ಸರಕಾರದವರು ವಿಚಾರ ಮಾಡುವಾಗ ಮೇಲಿನ ನಾಲ್ಕು ಸಂಗತಿಗಳು ಅವಶ್ಯವಾಗಿ ವಿಚಾರ ಮಾಡುವಂಥವಾಗಿರುತ್ತವೆ.

ಮುಂಬಯಿಯ ಕೌನ್ಸಿಲದಲ್ಲಿ ನಡೆಯುವ ಕೆಲಸಗಳು.

ಸೋಮವಾರದಿಂದ ಪುಣೆಯಲ್ಲಿ ಮುಂಬಯಿ ಇಲಾಖೆಯ ಶಾಸಕ ಕೌನ್ಸಿಲ ಸಭೆಯು ಕೂಡುವದು. ಇದು ಕೊನೆಯ ಕೌನ್ಸಿಲವಾಗಿ, ಚುನಾವಣೆಯ ಕಳೆ ಹಿಡಿಯಲ್ಪಡುವದು. ಆದ್ದರಿಂದ ಈ ಸರ್ವಸಭೆಯಲ್ಲಿ ಸರಕಾರ ಮತ್ತು ಮೆಂಬರರು ಆದಷ್ಟು ಅವಸರದಿಂದ ತಂತಮ್ಮ ಉದ್ದೇಶಗಳನ್ನು ಪೂರ್ಣ ಮಾಡಿಕೊಳ್ಳಬೇಕೆನಿಸಿದ್ದಾರೆ. ಸ್ವರಾಜ್ಯ ಪಕ್ಷೀಯರು ಕೌನ್ಸಿಲಕ್ಕೆ ಬಹಿಷ್ಕಾರ ಹಾಕಿಂತೆ ತಮ್ಮ ಮುಖಂಡರೊಳಗಿನಂಥ ಶ್ರೀ ಭೋಪಟಕರರಿಗೆ ಈ ಮುಂದಾಗಿ ತಿಳಿಸಿದ್ದಾರೆ. ಮಿ. ಜೋಳಿಯವರ ವತನದಾರ ಜೋಯಿಸರ ಬಿಲ್ಲಿನ ಚರ್ಚೆಯು ಮಹತ್ವದ್ದಾಗಿರುವದರಿಂದ, ಇವರು ಕೌನ್ಸಿಲಕ್ಕೆ ಬರುವರೆಂದೂ ಕೆಲವರು ತರ್ಕ ಮಾಡಿದ್ದಾರೆ. ಕೌನ್ಸಿಲವು ಮೂರೇ ವಾರ ಕೂಡುವದು ರಾತ್ರಿ ಹಗಲು, ಸೋಗು ಬಹಳವಾಗಿರುವದರಿಂದ, ಯಾವ ಬಿಲ್ಲು ಪಾಸಾಗುವದು; ಯಾವದು ಮುಂದೆ ಬೀಳುವದೆಂದು ಹೇಳಲಿಕ್ಕಾಗುವದಿಲ್ಲ. ಸರಕಾರ ಪಕ್ಷದವೇ ಆರು ಬಿಲ್ಲುಗಳುಂಟು. ಇವುಗಳಲ್ಲಿ ಸೂಳೆತನ ನಿಲ್ಲಿಸುವಂಥ ಮತ್ತು ಹೆದ್ದಾರಿಗಳನ್ನು ಚಂದ ಮಾಡಿಸುವಂಥ ಎರಡು ಸಾರ್ವಜನಿಕ ಹಿತ ಸಂಬಂಧದ ಕಾಯದೆಗಳುಂಟು. ನಾನ ಅಫೀಶಿಯಲ್ಲರಲ್ಲಿ ಮಿ. ಸುರ್ವೆಯವರ ಮ್ಯುನಿಸಿಪಾಲಿಟಿಯ ಬಿಲ್ಲು ಮಹತ್ವದ್ದಾಗಿರುತ್ತದೆ. ಸಂಗಳಿಗೆ ಒಂದು ನಿಯಮದ ಮತ್ತೆ ಮಾಡಿಗೆ ಅನುಕೂಲವಾಗಲಿ, ಇನ್ನೂ ರಿವಾಜು ಆಸ್ತಿ ಇದ್ದವರಿಗೂ ಸೋಟು ಕೊಡುವ ಅಧಿಕಾರ ಕೊಡಬೇಕೆಂದೂ ಬಿಲ್ಲಿನ ಮುಖ್ಯ ಅಭಿಪ್ರಾಯವಾಗಿರುತ್ತದೆ.

ನಾನ್‌ಅಫೀಶಿಯಲ್ಲರು ಸರಕಾರಕ್ಕೆ ಕಳಿಸಿದ ಠರಾವುಗಳ ಸಂಖ್ಯೆಯು ಒಂದು ನೂರ ಆಗಿದೆ. ಇವನ್ನೆಲ್ಲ ಒದಿಯಲು ಸ್ಥಳವಿಲ್ಲ. ಕೃಷಿ ಮತ್ತು ಮುದ್ರಣಾಲಯಗಳ ಧಮುಸ್ಥಾನದಿಂದಾಗಿ ಬೆಳೆದ ಸೂಳೆತನವನ್ನು ನಿಲ್ಲಿಸಬೇಕೆಂದೂ, ಈ ವರ್ಷದೊಳಗಾಗಿ ಸರ್ವ ನ್ಯಾಯ ಮತ್ತು ಸರ್ಕಾರಿ ಸಂಸ್ಥೆಯ ಅಂಗಡಿಗಳನ್ನು ಪೂರಾ ಬಂದು ಮಾಡಬೇಕೆಂದೂ, ಅಸ್ಪೃಶ್ಯರಿಗೆ ಕೆರೆ, ಭಾವಿ, ಧರ್ಮಶಾಲೆಯನ್ನು ಮುಟ್ಟಗೊಡದಂಥ ಮ್ಯುನಿಸಿಪಾಲಿಟಿ ಮತ್ತು ಲೋಕಲಬೋರ್ಡುಗಳಿಗೆ ಸರಕಾರದಿಂದ ಗ್ರಾಂಟು ಕೊಡಬಾರದೆಂದೂ, ಸ್ತ್ರೀಯರಿಗೆ ಕೌನ್ಸಿಲದಲ್ಲಿ ಮತ ಕೊಡುವ ಅಧಿಕಾರವಿರುವಂತೆ, ಮೆಂಬರರಾಗುವ ಹಕ್ಕೂ ಇರಬೇಕೆಂದೂ ಹೇಳುವಂಥ ಠರಾವುಗಳಿರುತ್ತವೆ.

ಒಂದು ಠರಾವು ಮಾತ್ರ ತೀರ ಹೊಸದೂ ನವೀನ ಕಲ್ಪನೆಯದೂ ಇರುತ್ತದೆ. ಸರಕಾರದವರು ಶಿಕ್ಷ ವೇತನಗಳನ್ನು ಕೊಟ್ಟು ಶಿಕ್ಷಣಕ್ಕಾಗಿ ಅನೇಕರನ್ನು ವಿಲಾಯತಿ ಅಮೇರಿಕೆಗೆ ಕಳಿಸುತ್ತಿರುವಂತೆ, ಅದೇ ಪ್ರಕಾರ ವರ್ತಮಾನ ಪತ್ರಗಳ ಲೇಖನ ವ್ಯವಸಾಯ ಕಲಿಯುವದಕ್ಕಾಗಿ ಸ್ಕಾಲರಶಿಪ್ಪು ಕೊಟ್ಟು, ಕೆಲವರನ್ನು ವಿಲಾಯತಿಗೆ ಕಳಿಸಬೇಕೆಂದು ಒಂದು ಠರಾವು ಒಂದಿದೆ. ಇದನ್ನು ವಿಜಾಪುರದ ಶ್ರೀ ಸರದೇಸಾಯಿಯವರು ತಂದಿರುವರು. ಸರಕಾರ ಪಕ್ಷೀಯವಾದಂಥ ವರ್ತಮಾನ ಪತ್ರಗಳು ಆದಷ್ಟು ಬಿಟ್ಟರೆನ್ನಲ್ಲ ಸರಕಾರವನ್ನು ಕುಣಿಸುವವು. ಸರಕಾರವು ವಿದ್ಯಾವೃತ್ತಿ ಕೊಟ್ಟು, ತನ್ನ ಮೇಲೆ ಟೀಕೆ ಮಾಡಿಸಿಕೊಂಡು, ಜನಾಪವಾದ್ಯ ಮಾಡಿಸಿಕೊಳ್ಳುವದಕ್ಕೆ ಸಿದ್ಧವಾಗುವದೇ? ಇದೊಂದು ಶಿಕ್ಷಣದಿಂದ ಪತ್ರಗಳ ಯೋಗ್ಯತೆ ಮತ್ತು ಪ್ರತಿಷ್ಠೆ ಬೆಳೆಸುವದೇ ಹೇಗೆಂಬದನ್ನು ನೋಡಬೇಕಾಗಿದೆ.

ಲಾರ್ಡ ಆಯರ್ವಿನ ಸಾಹೇಬರು ಪುಣೆಗೆ ಒಂದಾಗ, ಗುಪ್ತ ವೇಷದಿಂದ ಸುತ್ತಮುತ್ತಲಿನ ಹಳ್ಳಿಗಳನ್ನು ನೋಡಲಿಕ್ಕೆ ಹೋಗುವರು.

ಕಾಂಗ್ರೆಸ ಪಕ್ಷೀಯರಿಗೆ ಸಕಾಲ ಸೂಚನೆ.

—o—

ಮದ್ರಾಸದ ಸ್ವರಾಜ್ಯ ಪಕ್ಷದ ಧುರೀಣರಾದ ಶ್ರೀ. ಶ್ರೀನಿವಾಸ ಅಯ್ಯಂಗಾರರು ಕಾಂಗ್ರೆಸ ಪಕ್ಷದ ಉಮೇದವಾರರನ್ನು, ಚುನಾವಣೆಯಲ್ಲಿ ಲೋಕಮತವನ್ನು ಆಕರ್ಷಣ ಮಾಡಿಕೊಳ್ಳುವ ಬೇರೆ ಪ್ರಚಾರಕರನ್ನು ಉದ್ದೇಶಿಸಿ ಒಂದು ಸಂದೇಶವನ್ನು ಪ್ರಸಿದ್ಧ ಮಾಡಿದ್ದಾರೆ. ಅವರು ಅನ್ನುವದೇನೆಂದರೆ-

೧ ಎಲ್ಲ ಜಾತಿಗಳಲ್ಲಿ ಐಕ್ಯ ಭಾವವನ್ನು ಹುಟ್ಟಿಸುವಂಥ ನುಡಿಗಳನ್ನೇ ಉಪನ್ಯಾಸ ಮತ್ತು ಸಂಭಾಷಣೆಗಳಲ್ಲಿ ಉಪಯೋಗಿಸಬೇಕು.

೨ ಎದುರಿನ ಪಕ್ಷದವರು ತಮಗೆ ಕೋಪ ಬರುವಂಥ ಕೃತಿಗಳನ್ನು ಮಾಡಿದರೂ, ತಾವು ಕೋಪವಶರಾಗದೆ, ಯಾವಾಗಲು ಸೈರಣೆಯುಳ್ಳವರಾಗಬೇಕು.

೩ ಬಿಟ್ಟರು ತಮಗೆ ದುಷ್ಟ ಭಾಷಣ ಮಾಡಿದರೆ, ಅಣಗಿಸಿದರೆ, ಬೇರೆ ರೀತಿಯಿಂದ ಕುಚೇಷ್ಟೆ ಮಾಡಿದರೆ, ತಾವು ಅವನ್ನು ಶಾಂತವೃತ್ತಿಯಿಂದ ಸಹಿಸಿಕೊಂಡು ತಮ್ಮ ಕರ್ತವ್ಯವನ್ನೇ ಮಾಡಬೇಕು.

ಹಿಂದೂ ಮುಸಲಮಾನರಿಬ್ಬರೂ ವಿಚಾರ ಮಾಡುವಂಥ ಪ್ರಶ್ನೆ.

ಅಸಹಕಾರದ ಆಂದೋಲನದಲ್ಲಿ, ಹಿಂದೂ ಮುಸಲಮಾನರು ಒಗ್ಗಟ್ಟಿನಿಂದ ನಡೆದದ್ದರಿಂದ, ಲಾರ್ಡ ರೀಡಿಂಗಸಾಹೇಬರು ಕಕ್ಕಸಿ, ಮ ಗಾಂಧಿಯವರ ಕೂಡ ಸಂಧಾನ ಮಾಡಿಕೊಂಡು ಹಿಂದುಸ್ಥಾನಕ್ಕೆ ವಿಶೇಷ ರಾಜಕೀಯ ಹಕ್ಕುಗಳನ್ನು ಕೊಡಲು ತಯಾರಾದರು. ಆ ಸ್ಥಿತಿಗೊಂದು ಕಾಲವಾಯಿತು ೫.೧ ವರುಷದ ಅಸಹಕಾರ ಚಳವಳಿಯ ಬಳಿಕ ಬೇರೆ ಕಾರಣಗಳಿಂದ, ಹಿಂದೂ ಮುಸಲಮಾನರು ಹೊಡೆದಾಡತೊಡಗಿದರು. ಹಿಂದೂ ಮುಸಲಮಾನರ ಐಕ್ಯವು ಬಿಟ್ಟರೆ ಸ್ವರಾಜ್ಯದ ಮಾತು ಸಾಧ್ಯವಿಲ್ಲವಾದ್ದರಿಂದ ಸರ್ವರಿಗೂ ಹಿಂದುಸ್ಥಾನಕ್ಕೆ ಹೆಚ್ಚಿನ ಹಕ್ಕುಗಳನ್ನು ಕೊಡುವ ಕುರಿತು ಸ್ವೀಕಾರ ಮಾಡುವ ಕಳವಳದ ಕೂಡ ಕಾಲವಾಗಿದೆ. ಕಲಹಗಳು, ದಂಗೆ ಮತ್ತು ಕಲಹಗಳನ್ನು ಕಡಿಮೆ ಮಾಡುವ ವಿಷಯದಲ್ಲಿ ಏನೂ ಪ್ರಯತ್ನ ನಡೆಯುತ್ತಿಲ್ಲ. ಕಲಕತ್ತೆಯಲ್ಲಿ ನಡೆದ ದಂಗೆಗಳ ವಿಷಯವಾಗಿ ಲಾರ್ಡ ಆಯರ್ವಿನ ಸಾಹೇಬರು, ಈ ವರದಲ್ಲಿ ಸಿಮ್ಲದಲ್ಲಿ ಶಾಸಕ ಸಭೆಯಲ್ಲಿ ಅಂದರ ನೀಡಿದ ಉಪದೇಶವು ಅರ್ಥವಿಟ್ಟಿನ ಹಾಗೆ ಹಿಂದೂ ಮುಸಲಮಾನ ದಂಗೆ ಮತ್ತು ಅದರಿಂದ ಪ್ರಜಾಕೀಯ ವಾತಾವರಣದ ಮೇಲೆ ಉಂಟಾಗಿರುವ ಅನಿಷ್ಟ ಪರಿಣಾಮವನ್ನು ಕುರಿತು ಭಾಷಣ ಮಾಡಿದ್ದಾರೆ. ಈ ಭಾಷಣಗಳಲ್ಲಿ ಹಿಂದೂ ಮುಸಲಮಾನರಿಬ್ಬರೂ ತಲೆ ಕೆಳಗೆ ಮಾಡುವಂಥ ಕೆಲವು ಮಾತುಗಳಿರುತ್ತವೆ. "ಸಿವಿಲ ಸರ್ವಂಟರ ಹೊರತು ಗತಿಯಿಲ್ಲ ಬ್ರಿಟಿಶ ದಂಡಿನ್ನ ಹೊರತು ಹಿಂದುಸ್ಥಾನದಲ್ಲಿ ಶಾಂತತೆಯು ಇರಲಾರದು. ಹಿಂದೂ ಮುಸಲಮಾನರು ಬಾಯಿಗಳಿಗೆಳಂತೆ ರಕ್ತಪಾತ ಮಾಡುತ್ತಿರುವ ತನಕ ಸುಧಾರಣೆಯು ಶಕ್ಯವಾಗಲಾರದು." ಎಂಬ ಮಾತುಗಳು ಸ್ವರಾಜ್ಯ, ಸಂಪೂರ್ಣ ಸ್ವಾತಂತ್ರ್ಯವೆಂದು ಧ್ಯೇಯ ಮಾಡಿಕೊಂಡಿದ್ದಂಥ ರಾಷ್ಟ್ರ ಭಕ್ತರ ಅಂತಃಕರಣದಲ್ಲಿ ಬರೀ ಕೊರೆಯುತ್ತಾಗದಿರವು. ಈ ದಂಗೆಯನ್ನು ಶಾಂತ ಮಾಡಬೇಕಾದರೆ ಸರಕಾರದ ಹುಕುಮು ಕಾರಣವಾಗುವದಲ್ಲದೆ, ಪರಸ್ಪರ ಕಾಗದದಲ್ಲಿ ಮಾಡಿಕೊಳ್ಳುವ ಒಪ್ಪಂದವು ಉಪಯೋಗವಾಗಲಾರದೆಂದು ಲಾರ್ಡ ಆಯರ್ವಿನಸಾಹೇಬರು ಹೇಳಿದ್ದಾರೆ. ಕಲಕತ್ತೆಯಲ್ಲಿ ದಿಕ್ಕಿನಲ್ಲಿ ಮಹಾತ್ಮರು ಇದೇ ವಿಷಯವಾಗಿ ಉಪವಾಸ ಮಾಡಿದರು. ಹಿಂದೂ ಮುಸಲಮಾನರು ಕಮಿಟಿ ಕೂಡಿ, ಅನೇಕ ಠರಾವುಗಳನ್ನು ಒರೆದರು. ಅವು ಅವುಗಳಿಂದೇನೂ ಪ್ರಯೋಜನವಾಗಲಿಲ್ಲೆಂದು ಲಾರ್ಡ ಆಯರ್ವಿನಸಾಹೇಬರು ಸ್ಪಷ್ಟವಾಗಿ ನುಡಿದಿದ್ದಾರೆ. ದಂಗೆಗೆ ಸಂಶಾರೀ ಕಾಮದಾರರ ಪಕ್ಷಪಾತವು ಕಾರಣವಾಗುತ್ತದೆಯೇ? ಇಲ್ಲವೋ? ಎಂಬದನ್ನು ಬದಿಗಿಟ್ಟು, ಒಟ್ಟಿನ ಮೇಲೆ ವಿಚಾರ ಮಾಡಿದರೆ ಈ ಅನರ್ಥಕ್ಕೆ ಹಿಂದೂ ಮುಸಲಮಾನ ಮುಖಂಡರೇ ಕಾರಣರಾಗುತ್ತಾರೆ. ಇವರು ಆರಂಭದಲ್ಲಿ ಕಂಡು ಬಂದಂಥ ಅಲ್ಪವಿಷಯ ತೋರಿಸಲು ಸಿದ್ಧರಾದರೆ, ಸರಕಾರದ ಸಹಾಯದ ಅಗತ್ಯವೇ ಉಂಟಾಗಲಾರದು. ಹಿಂದೂ ಮುಸಲಮಾನರಲ್ಲಿ ಸ್ಪರ್ಧೆ ಅಥವಾ ಈರ್ಷ್ಯೆಯುಂಟಾಗಲಿಕ್ಕೆ ಸ್ವತಂತ್ರ ಚುನಾವಣೆಯ ಅಧಿಕಾರವೇ ಒಂದು ಪ್ರಬಲವಾದ ರೋಗವಾಗಿರುತ್ತದೆಂದು ಎಲ್ಲರಿಗೂ ತಿಳಿದ ಸಂಗತಿಯಾಗಿದೆ. ಇದಕ್ಕೆ ಮುಸಲಮಾನರು ಒಪ್ಪುವದಿಲ್ಲ. ತಮಗೆ ಸ್ವತಂತ್ರ ಚುನಾವಣೆಯೇ ಇರಬೇಕೆಂದು ಹಟ ಹಿಡಿದಿದ್ದಾರೆ. ಅದರ ಪರಿಣಾಮದಿಂದ ಅದನ್ನು ನಿರ್ಣಯಕ್ಕೆ ಹಚ್ಚದೆ, ಬರುವ ರಾಯಲ ಕಮಿಶನಕ್ಕೆ ಹವಾಲಿ ಕೊಟ್ಟಿದ್ದಾರೆ. ಹೊಸ ಚುನಾವಣೆಯೊಳಗಾಗಿ ಹಿಂದೂ ಮುಸಲಮಾನರು ಒಗ್ಗಟ್ಟಾಗಿ, ಸರಕಾರವನ್ನು ಪ್ರಬಲವಾದ ಶಕ್ತಿಯಿಂದ ವಿರೋಧಿಸ ನಿಂತರಂದರೇ ರಾಯಲ ಕಮಿಶನದಿಂದ ಏನಾದರೂ ಲಾಭವಾದೀತು. ಇಲ್ಲವಾದರೆ ರಾಜ್ಯಕರ್ತರಿಗೆ "ನಿನ್ನೆ ಒಂದವರಿಗೆ ಹಾಸಿಗೆ ಹಾಸಿ ಕಟ್ಟಲಂತಾಗುವದೇ" ನಿಜ.

ಹುಲಿಯಾಗುವದು ಅಧರ್ಮ ಮತ್ತು ಅನಾಚಾರ.

—o—

ಮದ್ರಾಸ ಇಲಾಖೆಗೆ ಸೇರಿದ ಕಾಲೀಕತ್ತದ ಮುಸಲಮಾನ ಪ್ಯೂಲಿ ಮತ್ತು ಇತರ ಸ್ಥಳೀಯ ಜನರು ಮೊಹರಮ ಹಬ್ಬದಲ್ಲಿ ಮುಸಲಮಾನರಾಗಲಿ, ಹಿಂದೂ ಜನರಾಗಲಿ ಹುಲಿವೇಷ ಮಾಡುವದು, ಅಶ್ಲೀಲ ಆಗುವದು, ಅಥವಾ ಇನ್ನಾವ ವೇಷ ಹಾಕುವದು ಅಧರ್ಮ ಮತ್ತು ಅನಾಚಾರವಾಗುವ ಕಾರಣ, ಈ ಪದ್ಧತಿಯನ್ನು ನಿಲ್ಲಿಸಬೇಕೆಂದು ಡಿಸ್ಟ್ರಿಕ್ಟ ಮ್ಯಾಜಿಸ್ಟ್ರೇಟರ ಕಡೆಗೆ ಅರ್ಜಿ ಮಾಡಿಕೊಂಡರು. ಅವರು ನಾಗರಿಕರ ಮತ ತಿಳಿದುಕೊಂಡು ಯಾವರೂ ಹುಲಿ ಮುಂತಾದ ವೇಷ ಹಾಕಬಾರದೆಂದು ಹುಕುಮು ಮಾಡಿದರು.

ಹೈದರಾಬಾದಿನ ನಿಜಾಮ ಸಾಹೇಬರೂ ಇದೇ ಪ್ರಕಾರ ಹುಕುಮು ಮಾಡಿದ್ದಾರೆ. ಅದರಲ್ಲಿ ಒಂದು ಸಂಗತಿಯು ವಿಶೇಷವಾಗಿರುತ್ತದೆ. ಎಷ್ಟೋ ಜನ ದೇವರು ದೇವತೆಗಳಂತೆ, ಸಾಧುಗಳ ಸಂತಗೌಡರ ತಾಬೂತಗಳಿಗೆ ಹರಕೆ ಕೊಡುವ ಸಾಂಪ್ರದಾಯವುಂಟು. ಹಿಂದೂ ಜನರು ಇಂಥ ಹರಕೆ ಕೊಡಬಾರದೆಂದು ನಿಜಾಮ ಸಾಹೇಬರ ಹುಕುಮು ಇರುತ್ತದೆ. ಹುಕುಮು ನಿಜಾಮರು ಮೈತ್ರಿಯ ಮಟ್ಟಿಗೆ ಇರುವದು. ಹೈದರಾಬಾದಿನ ಒಂದು ಭಾಗವಾಗಿರುವ ಬರಾರ ಪ್ರಾಂತ ಬ್ರಿಟಿಶ ಆಡಳಿತಕ್ಕೆ ಸೇರಿರುತ್ತದೆ. ಅಲ್ಲಿಯ ಹಿಂದೂ ಮುಸಲಮಾನ ವೇಷಗಳ ಹಾಕಿ ಕುಣಿಯುತ್ತಾರೆ. ಆದ್ದರಿಂದ ಕುಣಿದರು ಕಾಲೀಕತ್ತದ ಪ್ಯೂಲಿಯವರಂತೆ ಪಾಪ ಜೀತ ಪಟ್ಟಣಗಳ ಪ್ಯೂಲಿಯವರು ಈ ಅನಾಚಾರ ನಿಲ್ಲಿಸಲು ಶಕ್ತರಾಗಿ ತ್ವರಿತರಾಗಬೇಕೆಂದು ಸೂಚಿಸುತ್ತೇವೆ.

ಮುಸ್ಯಕ್ಕೆ ಮುಯ್ಯವೇ ಸೈ.

—o—

ಯಾವದೊಂದು ಮ್ಯುನಿಸಿಪಾಲಿಟಿಯು ಯಾರೊಬ್ಬರಿಗೆ ಕೊಡುವ ಮಾನಪತ್ರದ ವೆಚ್ಚವನ್ನು ಮ್ಯುನಿಸಿಪಾಲಿಟಿಯು ಕೀರ್ದಿಯಲ್ಲಿ ಬರೆಯಬೇಕಾದರೆ ಅದಕ್ಕೆ ಕಲೆಕ್ಟರರ ಅಪ್ಪಣೆ ಪಡೆಯಬೇಕೆಂದು ಸರಕಾರದವರು ಒಂದು ನಿಯಮ ಮಾಡಿದ್ದಾರೆ. ಅದೇ ನಿಯಮವು ಬೇರೊಂದು ರೀತಿಯಿಂದ ಸರಕಾರವನ್ನು ಬಾಧಿಸಿರುತ್ತದೆ. ಮ್ಯುನಿಸಿಪಾಲಿಟಿಯಲ್ಲಿ ೨/೩ ಬಹುಮತವಾದರೇ ವೆಚ್ಚವು ಮಂಜೂರಾಯಿತೆಂದು ತಿಳಿಯಬೇಕೆಂದು ಮ್ಯುನಿಸಿಪಾಲಿಟಿಗಳ ಕಾಯದೆಯಲ್ಲುಂಟು. ಈ ಪ್ರಕಾರ ಪುಣೆಯ ಮ್ಯುನಿಸಿಪಾಲಿಟಿಯಲ್ಲಿ ನಾಮದಾರ ಲಾರ್ಡ ಆಯರ್ವಿನಸಾಹೇಬರಿಗೆ ಕೊಡಬೇಕೆಂಬ ಮಾನಪತ್ರಕ್ಕೆ ಬಹುಮತ ದೊರೆಯಲಿಲ್ಲ. ಮ್ಯುನಿಸಿಪಾಲಿಟಿಯು ವೆಚ್ಚವಿಲ್ಲದೆ, ಹೊರಗಿನ ವರ್ಗಣಿಯಿಂದ ಕೊಡುವ ಮಾನಪತ್ರ ಸ್ವೀಕಾರ ಮಾಡುವದು ಅಭಿಮಾನಗ್ರಸ್ತರಾದ ಆಳರಸರಿಗೆ ಸಮ್ಮತವಾಗದ್ದರಿಂದ, ಅವರು ಈ ಮಾನಪತ್ರದ ಆಶೆಬಿಟ್ಟರು. ಮಹಾತ್ಮರಂಥವರಿಗೆ ಕೊಡುವ ಮಾನಪತ್ರಕ್ಕೆ ಸೊಟ್ಟ ಮೋರೆ ಮಾಡಿ, ದುಷ್ಟ ಅಭಿಪ್ರಾಯ ಬರೆಯುವ ಅಧಿಕಾರಸ್ಥರಿಗೆ ಮುಯ್ಯಕ್ಕೆ ಮುಯ್ಯಾಗಿರುತ್ತದೆನ್ನಬೇಕಾಗುತ್ತದೆ.

ವಿವಿಧ ವರ್ತಮಾನಗಳು

ಚಿತ್ತೂರಿನ ಕೋರ್ಟಿನಲ್ಲಿ ಮದ್ರಾಸದ ಮುಖ್ಯ ಮಂತ್ರಿಯಾದ ಸರ ಬಾಬಿಗಳ್ಲಿನ ರಾಜರ ವಿರುದ್ಧ ೧,೭೨,೦೦೦ ರೂಪಾಯದ ಡಿಕ್ರಿಯಾಗಿರುತ್ತದೆ.

ಕಲಕತ್ತೆಯಲ್ಲಿ ಬಂಬು ಒಡೆಯುವ ಪುಸಿ, ಬಾಂಬಿನ ಉಪಕರಣ, ಇತ್ತ್ರಿ ಎಂದೂಕುಗಳು ಸಿಕ್ಕಿರುತ್ತವೆ. ಪೋಲೀಸರು ಅನೇಕ ಮನೆಗಳಲ್ಲಿ ಝಡತಿ ನಡೆಸಿದ್ದಾರೆ.

ನಾಗಪೂರದ ಡಿಸ್ಟ್ರಿಕ್ಟ ಬೋರ್ಡಿನವರೂ ಅಡ್ವಾರ್ಡ ಆರ್ಯಾಪ್ರಿನಸಾಹೇಬರಿಗೆ ಮಾನಪತ್ರ ಕೊಡಬಾರದೆಂಬ ಠರಾವು ಮಾಡಿದ್ದಾರೆ.

ಅಹಮದಾಬಾದ್ದಲ್ಲಿ ಬಿ. ಎ. ಪರೀಕ್ಷೆಯಲ್ಲಿ ೧೧ ಜನ ಸ್ತ್ರೀಯರು ತೇರ್ಗಡೆ ಹೊಂದಿದ್ದಾರೆ.

ಪುಣೆಯಲ್ಲಿ ಮರಾಠಾ ಕುಲದ ಪ್ರಸಿದ್ಧ ಸಮಾಜ ಸೇವಕರಾದ ಮತ್ತು ರಾಷ್ಟ್ರ ಹಿತೈಷಿಯಾದ ಮತ್ತು ವಿಸೋತೀರಾದ ಶ್ರೀಮಂತ ಸಂಪನ್ನರಾದ ಶ್ರೀ ಬಾಬುರಾವ ಪ್ರಭುಗಳಿಗೆ ಶ್ರೀ ಜಗದ್ಗುರು (ಶಂಕರಾಚಾರ್ಯರು) ಸಮಾಜಭೂಷಣರೆಂಬ ಪದವಿ ಕೊಟ್ಟಿದ್ದಾರೆ.

ಕೊಲ್ಹಾಪೂರದಲ್ಲಿ ನಾಟಕ ಕಂಪನಿಗಳ ಹಾಗು ನಟರ ಒಂದು ಸಭೆಯು ಕೂಡಿ, ನಟರಿಗೆ ಶಿಕ್ಷಣ ಕೊಡತಕ್ಕದ್ದು, ಸರಕಾರದವರು ಶೀಘ್ರ ಸಹಾಯ ಮಾಡುವದು ಅವಶ್ಯ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುವ ಠರಾವು ಪಾಸಾಯಿತು. ಸಭೆಗೆ ವಿದ್ವಾನರು, ಶ್ರೀಮಂತ ಜಗದ್ಗುರುಗಳು, ಸ್ಥಾನಿಕ ಮಾನಕರಿ ಜನರೂ ಬಂದಿದ್ದರು.

ಕಲಕತ್ತೆಯ ಬಾವಡಾರ್ ಪಕ್ಕದಲ್ಲಿ ನಡ್ಡಾದ ದಂಗೆಯ ಸಂಬಂಧವಾಗಿ ವಿದೆಂದ ಒಂದು ಲೇಖ ಶಾ [illegible] ಪ್ರೀವಿಕೌನ್ಸಿಲ್ದವರು [illegible] ನವರು ಎಂಟು ಮತ್ತು ಪ್ರೀವಿಕೌನ್ಸಿಲಿನ ಮೇಲೆ ಫಿರ್ಯಾದಿ ಮಾಡಿದ್ದಾರೆ.

[illegible] ವೇಲಿ ಹಿಂದೂ [illegible] ಕಟ್ಟೆದ ಕುಂದಾದಿಂದ [illegible]

ಸೀನಾ ಪಟ್ಟಣದಲ್ಲಿ ಹಿಂದೂ ಮುಸಲ್ಮಾನರಲ್ಲಿ ಬಹಳ ವಾದವಿದ್ದು ಒಂದು ಕಮಿಟಿ ಕಟಿದಿತು. ಮುಸಲ್ಮಾನ ಪ್ರಮುಖರು ಮೊದಲು ಹಸ್ತಗಳಗೆ ಹೋಗಿ, ತಪ್ಪು ಒಪ್ಪು ಮಾಡಿದ ಪ್ರಂದ್ರಿ ಟಿಕೆ ನೋಡಿಕೊಂಡು ರಾಜಿಯ ಉಪ್ಪತ್ರವು ಮಾಡಬೇಕೆಂದು ಹಿಂದೂ ಜನರು ಸೂಚಿಸಿದ್ದಕ್ಕೆ ಮುಸಲ್ಮಾನರು ಒಪ್ಪಲಿಲ್ಲವಾದ್ದರಿಂದ ರಾಜಿಯ ವಿಚಾರ ಬಿದ್ದುಹೋಯಿತು. ಏಕ್ಯ ಹುಟ್ಟು ಯಾವಾಗ ಕೈಗೂಡಬೇಕು ಹೇಳಿಕೊಳ್ಳುವರು?

ರಾಜಮಹೇಂದ್ರಿಯ ಉತ್ಸವ ಕಾಲದಲ್ಲಿದ್ದ ಗಾಡಿಗಳಲ್ಲಿ ೧೪ ಜನರು ಸತ್ತರು. ಅನಂತ ಪುರ ಎಂಬ ಶಾಲೆ ದಂಗೆಯಾಯಿತು. ಮುಸಲ್ಮಾನರೇ ಅಗಸರಂದರೆಂದು ಇಂಗ್ರೇಜಿ ಪತ್ರಗಳು ಸ್ಪಷ್ಟವಾಗಿ ಅಭಿಪ್ರಾಯಪಟ್ಟಿರುತ್ತವೆ. ಹಿಂದೂ ಜನರು ಗವ್ಹರ್ನಮೆಂಟಿನ್ನು ಕಂಡು, ಇದನ್ನು ಅವರ ಲಕ್ಷ್ಯಕ್ಕೆ ತಂದು ಕೊಟ್ಟಿದ್ದಾರೆ.

ವೆಂಪಮೂರಿನಲ್ಲಿ ನಿನ್ನೆಯಲ್ಲಿ ದಂಗೆಯವಾಗಬಾರದೆಂದು ಪೋಲೀಸರ ವಿಶೇಷವಾದ ಭದ್ರೋಬಸ್ತು ಗಳನ್ನು ಕೈಕೊಂಡಿದ್ದರು. ಕಟಿಬ ಕಟಿಗೆ ಪೋಲೀಸರ ಕಾವಲು ಇಟ್ಟದ್ದಲ್ಲದೆ, ಯುದ್ಧದ ಕವಚದ ಬಂಡಿಗಳನ್ನೂ ಮತಿನಗನ್ನಗಳನ್ನೂ ಮುಖ್ಯ ಕೂಟಿಗಳಲ್ಲಿ ನಿಲ್ಲಿಸಿದ್ದರು. ಸೋಲ್ಜರರನ್ನು ತರಿಸಿದ್ದರು. ಆಯುಧಧಾರಿಗಳಿಂದ ಬಹಳ ಹೂಡ ಕುಂದ ತಿರುಗಾಡುತ್ತಿದ್ದರು. ಇಷ್ಟು ಬಂದೋಬಸ್ತು ಮಾಡಿದ ಬಳಿಕ ದಂಗೆಯಾಗುವದೆಂತು? ನಿರವಣಿಗೆಯು ಶಾಂತರೀತಿಯಿಂದ ಕೊನೆಗಂಡಿತು.

ಧಣಿಯ ಮ್ಯುನಿಸಿಪಾಲಿಟಿಯಲ್ಲಿ ಬೋಲಿಯಾ ಪುಲೆಯವರ ಗೊಂಬೆಯನ್ನು ಇಡುವ ವಿಷಯ ವಿಚಾರ ನಡೆದಾಗ, ಅಧ್ಯಕ್ಷರಾದ ರಾ.ಬ. ಅಪಟೆಯವರು ತಮಗೆ ಅಪಮಾನವಾಗುವಂಥ ಭಾಷಣ ಮಾಡಿದರೆಂದು, ಮಿ. ಮಾನಸೂರಕರರೆಂಬ ಬ್ರಾಹ್ಮಣೇತರರು ಇವರ ಮೇಲೆ ೫೦೦೦ ರೂಪಾಯಿಗಳ ಮಾನಹಾನಿಯ ದಾವೆಯನ್ನು ಮಾಡಿದ್ದಾರೆ. ದಾವೆಗೆ ಕಾರಣವಾದಂಥ ಕಮಿಟಿ ಅಗಿ ಎದ್ದೋತಿಂಗಳ ಬಳಿಕ ಈ ದಾವೆಯನ್ನು ಹೂಡಿದ್ದಾರೆ.

ಬೆಳಗಾಂವಿ ರೇಲ್ವೆ ಮಂಡಳ.

ಇವರು ಮಾಡಿದ ಕೆಲವು ಪ್ರಶ್ನೆ ಹಾಗೂ ಸೂಚನೆಗಳಿಗೆ ಮುಂಬಯಿ ಸರಕಾರದ ಉಂಡರ ಸೆಕ್ರೆಟರಿಯವರ ಉತ್ತರಗಳು.

(೧) ಮೂರನೇ ವರ್ಗದ ತಿಕೀಟಿನ ದರಗಳನ್ನು ಇಳಿಸಬೇಕು, ಕನಸೆಶನ್‌ಟಿಕೀಟುಗಳನ್ನು ಕೊಡಬೇಕು ಎಂಬುದಕ್ಕೆ—ವಿಚಾರ ನಡೆದಿದೆ.(೨) ಹೊಸ ಟೈಮ್‌ಟೇಬಲ್ (ಟಾಯಿಮ್ ಟೇಬಲ್, ಪು.—೯೧ ಪುಟದಲ್ಲಿ ಕೆಲವು ಸೂಚನೆಗಳು (ಅನಸೇಟೆಸ್) ಕೊಡಲ್ಪಟ್ಟಿವೆ. (೩) ಎಲ್ಲ ಸ್ಟೇಶನಗಳಲ್ಲಿ ಪರೀಕ್ಷಾ ರಡಗ—ಹುಟಿಗೆ ಮಾರ್ಗದಲ್ಲಿ ನೀರಿನ ವ್ಯವಸ್ಥೆ ಬೇಕು.—ವಿಚಾರ ನಡೆದಿದೆ. ಮುಟಿಗೆ ಮಾರ್ಗದ ೧೧ ಸ್ಟೇಶನಗಳಲ್ಲಿ ನಳ ಆಸ್ಸು ಹಚ್ಚುವದು ಮಂಜೂರಾಗಿದೆ. (೩) ಇಂಟರ ವರ್ಗದ ಗಳಿಗೆ ಸು ಕರಣೆ ಬೇಕು—ವಿಚಾರವಡೆದಿದೆ. (೪) ಪ್ಲಾಟ್‌ಫಾರ್ಮ ತಿಕೀಟುಗಳಿಗೆ ೭ ಪೈಗಿಂತ ಹೆಚ್ಚು ದರವಿರಬಾರದು—ಹಾಗೆ ಬಗುವಂತಿಲ್ಲ. [೬] ದೊಡ್ಡ ಸ್ಟೇಶನಗಳಲ್ಲಿ ಮೂರನೇ ವರ್ಗದ ಹೆಣ್ಣು ಮಕ್ಕಳಿಗಾಗಿ ವಿಶ್ರಾಂತಿಯ ಸ್ಥಳವು ಪ್ರತ್ಯೇಕವಿರಬೇಕು—ವಿಚಾರ ನಡೆದಿದೆ [೭] ಪ್ರತಿ ಸ್ಟೇಶನದಲ್ಲಿ ಹಾದಿ ಆರ್ಡರ ಡಾಕು ಪೆಟ್ಟಿಗೆಯನ್ನಿಡಬೇಕು— ಅವಶ್ಯ ತೋರುವಲ್ಲಿ [೮] ಪ್ಲಾಟ್‌ಫಾರ್ಮಿನ ಮೇಲಿರುವ ಪಾಯಖಾನೆಗಳಿಗೆ ಬಾಗಿಲಗಳಿರಬೇಕು—ಅವಶ್ಯ ತೋರುವಲ್ಲಿ. [೯] ರೇಲ್ವೆ ಗಾಡಿಯ ಆಹಾರ ವ್ಯವಸ್ಥೆಯ ಭಾರಗಳಲ್ಲಿರಬೇಕು—ವಿಚಾರ ಬೇಕಿದೆ ಇಲ್ಲ. [೧೦] ರೇಲ್ವೆದಲ್ಲಿ ಏ ಎಲ್ಲ ಹಾದಿ ಬಾಗಿಲಗಳು ಅತ್ಯಂತ ಹೊಲಸು ಇರುತ್ತವೆ. ನೀರಿನ ವ್ಯವಸ್ಥೆ ಇರುವದಿಲ್ಲ—ಅದನ್ನು ಸ್ವಚ್ಛ ಇಡುವ ವ್ಯವಸ್ಥೆ ಯಿದೆ. ಗಾಡಿ ಒಡೆದು ಹೋದರು ಸ್ಟೇಶನದಲ್ಲಿ ಹಾಗೂ ಎಲ್ಲಿ ನಿಂತರು ಕೂಡ ದಯಕ್ಕೇಳಬೇಕು ಅಗ ನೀರು ಬಳಕೆಯ ಸ್ಥಾನವನ್ನು ನಿಲುಗಡೆಗೊಂಡ ನೀರು ತುಂಬಬೇಕೆಂದು ಕಟ್ಟೆ ಇರುವದು. [೧೧] ಪಿಟ್ಟಸ್ಥ ಸ್ಥಳಗಳಲ್ಲಿ ಕಾಯುವ ಸ್ಥಳವು ಹೆಣ್ಣುಮಕ್ಕಳಿಗಾಗಿ ಹೆಚ್ಚು ಪ್ರತ್ಯೇಕಬೇಕು—ಆಗುವದಿಲ್ಲ. [೧೨] ಗಾಡಿಗಳ ದ ಸ್ಥಳಗಳಲ್ಲಿ ಮನುಷ್ಯನು ಕೂಡ ಒಮ್ಮೆಗೆ ಅವನನ್ನು ಸಿದ್ಧ ಮಾಡಲು ನಿಲ್ಲಿಸಬೇಕು. ಒತ್ತಡ ದರವನ್ನು ಅಧಿಕವಿದ್ದವರಾಗ ಕಡಿಮೆ ಇಡಬೇಕು—ಹೀಗೆ ಬರುವ ಆಗುವದಿಲ್ಲ. ಇಂಥ ಉಪಯೋಗಗಳನ್ನು ದೊರೆಸಬೇಕು.

ಈ ಪ್ರಕಾರದ ಉತ್ತರ ಪತ್ರ್ಯವು ಕೊಡಲಾಗಿರುವದು.

ವಿನೋದ

ಬ್ಯಾಕೈರಿ— ನಿನಗೇಕೆ ಶಿಕ್ಷೆ?

ಮಕ್ಕಳು— ಸ್ವಾಲ ಬ್ಯಾಂಕಿನಲ್ಲಿ ಕಳವುಮಾಡಿದ್ದು ಕ್ಕೆ ನನಗೆ ಶಿಕ್ಷೆ.

ಮೊದಲಿನ ಕೈದಿ— ಅದೇ ಬ್ಯಾಂಕು ಮುಳುಗಿದ್ದಕ್ಕಾಗಿ ನನಗೆ ಶಿಕ್ಷೆ ನನಗೆ.

ನಿನ್ನ ತಂಗಿಯು ಎಷ್ಟು ಕಿರಿ ಪೇಳತಕ್ಕವಳಲ್ಲ. ೩೬ ವರ್ಷದವಳಾದರೂ, ಇಪ್ಪತ್ತೇ ವರ್ಷವೆಂದು ಹೇಳತ್ತಾಳೆ.

ಸ್ತ್ರೀಯು— ಅವಳು ಆರನೇ ವರ್ಷದಿಂದ ಕಲಿಯಲಿಕ್ಕೆ ಹತ್ತಿದಳು"

ರಾಕ್ಷದರು ಬಂದು ಹೋದರಲ್ಲ! ನಿಮ್ಮ ಮನೆಯಲ್ಲಿ ಅಂಥದೇನು ಕಳವು ಆಯ್ತು?

ಉತ್ತರ— ಅಂಥ ಕಳವೇ! ಅವರು ದುಡ್ಡು ಕೊಡದೇ ಹಾನಿವೆ.

ನಿನ್ನೆ ನೀನು ನೋಡಿದಂತೆ ಅರ್ಥಶಾಸ್ತ್ರ ಮತ್ತು ಮಿತವ್ಯಯದ ಮೇಲೆ ನಿನ್ನ ಶೆಂದವಿಗೆ ಏನೆಮ್ಮು ಬೇಕಾದ್ದು.

ಉತ್ತರ— ಬೇಕಾದ್ದುಯಿತು. ಅಂಗಿಗೆ ಹಚ್ಚುವದಕ್ಕೆ ಸಿಂಪಿಗನಿಗೆ ಕೊಟ್ಟಿದ್ದೆ ಆಯಿತು. ಆಕೆಯು ಕೊಡ್ಡೆಯುಪತ್ತ್ರಾವಿನ ಪತ್ತಲ ಕೊಂಡದ್ದೂ ಆಯಿತು.

ಬ್ರಿಟಿಷರ್ರೀಯು ಸಭೆಯಲ್ಲಿ— ಆವಾರೀ ಒಂದೇ ಸವನೆ ನ್ನಿ ದೆ ಮಲಗಾವುವರು.

ಇನ್ನೊಬ್ಬರು— ನಮ್ಮುವರವ್ವಾ—

ಮೊದ— ಬರೇ ಒಬುಬಿನದಿಯ!!

ರೋಗಿ— ಡಾಕ್ಟರೇ ಸಂಕ್ಷಣವಾತಿ, ಮದ್ದು ಕೊಟ್ಟಿರುವಿರಾ?

ಡಾ— ವಿಷಯ ಜ್ವರದಿಂದ ಸಾಯುತ್ತಾರೆಂದು ಬನ್ನೆ. ನಾನು ಹೇಳಿರಾಯಿತು. ಸಕ್ಕೆ ಸಾಯುತ್ತಾನೆ.

ಮಹಾತಾಮುವ ಔಷಧವು.

ಅಹಾ! ಮಹಾಶ್ಯಾಮವಿಲೇ ೧೮೧ ಕ್ಕೆ ಮುಟ್ಟಿಕೊಂಡು ಏಕೆ ಕುಳಿತಿರುವಿ! ತಲೆನೋವೋ! ಹಲ್ಲುಬೇನೆಯೋ! ಮೊಣಕಾಲು ನೋಯುತ್ತದೆಯೋ? ಆಗಬಾರದಾದರೂ ಏನು!

ಅಜ್ಞನು— ಕಂದಾ— ಹೌದು ಮೊಣಕಾಲು ನೋಯುತ್ತದೆ.

ಕಂದ— ದಾಗಾದರೆ ಮಹಮಂಟಿ ಕರಾರ ತಕ್ಕೊಳ್ಳು. ಒಂದೇ ಕ್ಷಣದಲ್ಲಿ ನಿಮ್ಮ ಎಲ್ಲ ನೋವುಗಳ ಪರಿಹಾರವಾಗಿ ಮಹಾರಾಡುವಿ ಮತ್ತು ಕಂದ್ರುವಿ ತಿಮ್ಮತ್ತು ತೀರ ಕಾಸು. ಎಂದೇ ಆಣೆ.

ನಮ್ಮಲ್ಲಿ ಬೇಕಾದ ಡಾಕ್ಟರರ ಪ್ರಿಸ್ಕ್ರಿಪ್ಶನ ಪ್ರಕಾರ ಔಷಧವನ್ನು ತಯಾರ ಮಾಡಿ ಕೊಡುವೆವು.

ಸಿಟಿಜನ— ಕರ್ನಾಟಕ ಮೆಡಿಕಲ ಸ್ಟೋರ್ಸ್, ಡಿಸ್ಪೆನ್ಸಿಂಗ ಕೆಮಿಸ್ಟ ಮತ್ತು ಡ್ರಗಿಸ್ಟ, ಸ್ಟೇಶನ ರೋಡ ಹುಬ್ಬಳ್ಳಿ

ಡಾಕ್ಟರ ಮಲ್ಲಯ್ಯನವರಿಂದ ಪರಿಶೋಧಿಸಲ್ಪಟ್ಟ
ಮೆಸರ್ಸ ಪಿ. ವ್ಹಿ. ರಾಜನ ಕಂಪನಿಯ

ಸುಗಂಧ ನಶ್ಯದ ಪುಡಿಯು.

ಪ್ರಖ್ಯಾತಿ ಹೊಂದಿದ ಈ ನಶ್ಯದ ಪುಡಿಯು ಅಮೂಲ್ಯವಾದದ್ದಿದ್ದು ಲಕ್ಷಾವಧಿ ಜನರು ಇದರ ಉಪಯೋಗ ಮಾಡಿದ್ದಾರೆ. ಇದರ ಗುಣದ ಬಗ್ಗೆ ಸಾವಿರಾರು ಜನರು ಸರ್ಟಿಫಿಕೇಟುಗಳನ್ನು ಕೊಟ್ಟಿದ್ದಾರೆ. ಈ ಪುಡಿಯ ಉಪಯೋಗದಿಂದ ಗುಣವಾಗುವ ವ್ಯಾಧಿಗಳು— ನೆಗಡಿ, ಅರತಲೆ ನೋವು, ತಲೆಯೊಳಗಾಗುವ ಬೇರೆ ವಿಕಾರಗಳು, ಕಣ್ಣುಗಳಲ್ಲುಂಟಾಗುವ ಎಲ್ಲ ವ್ಯಾಧಿಗಳು ದೂರಾಗಿ ಸ್ಮರಣ ಶಕ್ತಿಯು ಹೆಚ್ಚುತ್ತದೆ. ಬೇರೆ ನಶ್ಯದಲ್ಲಿ ಈ ನಶ್ಯದ ಒಂದು ಚಿಟಿಕೆಯನ್ನು ಕಲಸಿದರೆ ಎಲ್ಲವೂ ಸುಗಂಧವಾಗುವದು. ಮಾರಾಟಕ್ಕೆ ಉಚಿತವಾಗಿ ದೊರೆಯುವದು.

ಡೀಸೆ ಒಂದಕ್ಕೆ ನಾಲ್ಕಾಣೆ ರಾಜಿಸ್ಟ್ರೆ ಒಳಗೆ ವ್ಹಿ. ಪಿ. ಪೋಸ್ಟ್‌ಚಾರ್ಜ ಬೇರೆ.

ದಯವಿಟ್ಟು ಈ ನಶ್ಯ ಸ್ವಂತವಾಗಿ ಒರೆಯಿರಿ

ತಂತಿ ವಿಳಾಸ- ನಶ್ಯಮು. } ಪಿ. ವ್ಹಿ. ರಾಜನ ಮತ್ತು ಕಂಪನಿ, ೪೪ ಗೋವಿಂದಪ್ಪ ನಾಯಕನ ಬೀದಿ, ಜಾರ್ಜಟವುನ, ಮದ್ರಾಸ

ಜಾಹೀರಾತು.

ದಿ ಧಾರವಾಡ ಅರ್ಬನ ಕೋ ಆಪರೇಟಿವ್ಹ ಬ್ಯಾಂಕ ಲಿ.

ಜವಳಿಪೇಟೆ ಧಾರವಾಡ

ಸ್ಥಾಪನಾ ೧೯೨೬

ಗಣೇಶನೇ ಬ್ಯಾಂಕು ಮುಂಬಯಿ [illegible] ಆಕ್ಟಿನ ಪ್ರಕಾರ ರಜಿಸ್ಟರ ಮಾಡಿರುತ್ತದೆ.

ಚಾಲತಿ ಠೇವು (Current Deposits) [illegible] ಒಂದು ತಿಂಗಳ ಪರಿಗ ರೋಜಿನ ೧೦೦ಕ್ಕೆ [illegible] ಕೊಡಲಾಗುವದು.

ಚಾಲತಿ ಠೇವು (Current Accounts) ದರ ಶಿಲ್ಲಕ ಮೇಲೆ ೧೦೦ಕ್ಕೆ ೧ ವರ್ಷಕ್ಕೆ ೩॥ ರೂಪಾಯಿ [illegible]

ನಿಶ್ಚಿತ ಠೇವು (Fixed Deposit) ಇಡುವದು ನೋಟಿಸು ಕೊಡುವವರಿಗೆ ಕೆಳಗೆ ಕಾಣಿಸಿದ ಅವಧಿಯ ನಿಶ್ಚಿತ ಠೇವಿಗೆ ಅವರ ಮುಂದೆ ತೋರಿಸಿದ ಬಡ್ಡಿಯು ಕೊಡಲ್ಪಡುವದು.

೩ ತಿಂಗಳಿಗೆ	೧೦೦ಕ್ಕೆ	೧ ವರ್ಷಕ್ಕೆ	೪ ರಂತೆ
೬ ,,	,,	,,	೪ ೧/೨ ,,
೯ ,,	,,	,,	,,
೧೨ ,,	,,	,,	೬ ೧/೪ ,,
೨೪ ,,	,,	,,	೬ ,,
೩೬ ,,	,,	,,	೬ ೧/೨ ,,
೪೮ ,,	,,	,,	೬ ೩/೪ ,,
೬೦ ,,	,,	,,	೭ ,,

ಬಡ್ಡಿಗಳನ್ನೂ ಹುಂಡಿಗಳನ್ನೂ ಜಾಮೀನ ಪಡೆದು ಹಣ ತಕ್ಕೊಳ್ಳಲಿಕ್ಕಾಗದೇ ಪೇಟೆಯ ದರದಿಂದ ಕೊಡುವೆ. ಹಾಗೂ ತಕ್ಕೊಳ್ಳುವೆವು.

ಮುಂಬಯಿ ಹುಂಡಿಗಳನ್ನು ಕೊಡುವೆವು. ಸರಕಾರೀ ಕಾಗದಗಳ ಮೇಲೆ ಅಥವಾ ಬಂಗಾರ ಆಭರಣಗಳ ಮೇಲೆ ಸಾಲಗಳನ್ನು ಕೊಡುವೆವು.

ಬೇರೆ ಹೆಚ್ಚಿನ ಮಾಹಿತಿಗಾಗಲೀ ವ್ಯವಹಾರಗಳ ನಿಯಮ ಪತ್ರಗಳಿಗಾಗಲೀ ಆಫೀಸದಲ್ಲಿ ಸೆಕ್ರೆಟರಿಯವರ ಕಡೆಗೆ ಚವಕಸಿ ಮಾಡಬೇಕು.

ತಾ|| ೧೭-೬-೧೯೩೬

M. B. JAKATI,
ಮ್ಯಾನೇಜಿಂಗ ಡಾಯರೇಕ್ಟರ

ಜಗತ್ ಪ್ರಸಿದ್ಧವಾದ

ಊದು ಬತ್ತಿಗಳು

ನಮ್ಮಲ್ಲಿ ಎಲ್ಲ ವಿಧವಾದ ಊದುಬತ್ತಿಗಳು ನೇರು ೧ಕ್ಕೆ ೧-೦-೦ ಆಗುವಂತ ತಿಳಿದು ಮಾಡಿಗಾರ ಅರಗಜ ಪತ್ತಿ, ಪತ್ತಿ, ಭೃಂಗಾಮಲಕ ತೈಲ, ದಶಾಂಗ, ಇವೇ ಮುಂತಾದ ಸುಗಂಧ ದ್ರವ್ಯಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ. ಬೇಕಾದವರು ನಮಗೆ ಆರ್ಡರ ಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.

ಟಿ. ಎಲ್. ಉಪಾಧ್ಯಾಯ ಅಂಡ್ ಸನ್ಸ
ಸುಗಂಧಿ ಧರಣ ವ್ಯಾಪಾರ

ದಿ. ಕರ್ನಾಟಕ ಇಂಡಸ್ಟ್ರಿಯಲ ಬ್ಯಾಂಕ ಲಿಮಿಟಿಡ ಧಾರವಾಡ

ಈ ಬ್ಯಾಂಕಿನಲ್ಲಿ ಮುದ್ದತಿ ಠೇವುಗಳನ್ನು ೬ ತಿಂಗಳು, ವರ್ಷ ಮತ್ತು ಅದಕ್ಕಿಂತ ಹೆಚ್ಚು ಕಾಲ ಅವಧಿಯಂತರ ಇಟ್ಟುಕೊಳ್ಳಲಾಗುವದು. ಆರು ತಿಂಗಳಿಗೆ ನೂರಕ್ಕೆ ಆರು ರೂಪಾಯಿ ಮತ್ತು ವರ್ಷಕ್ಕೆ ಆರುವರೆ ರೂಪಾಯಿ ಬಡ್ಡಿ ದೊರೆಯುವದು. ಹೆಚ್ಚು ಕಾಲದ ಠೇವಿನಿಂದ ಸಮುಕ್ಷಮ ಗೊತ್ತು ಮಾಡಿಕೊಳ್ಳಬಹುದು. ದಾಗಿನೆಗಳೂ ಪತ್ರೀ ಇಟ್ಟುಕೊಳ್ಳುವದು ಹಕ್ಕ ವ ಮುಂದಿಯ ವ್ಯವಹಾರ ಮಾಡಲ್ಪಡುವದು.

ಮೆಸರ್ಸ ಪೇಠಮಾಂವೆ ಮತ್ತು ಅಗ್ರಹಾರ್ಯ ಕಟ್ಟಿ
ಕಂಪನಿ ಮ್ಯಾನೇಜಿಂಗ ಏಜಂಟ್ಸ.

ಅತ್ಯದ್ಭುತ! **ಅಮೇರಿಕಾಖಂಡದ** **ಅತ್ಯದ್ಭುತ!!**

ಪ್ರಸಿದ್ಧ ಡಾಕ್ಟರನೊಬ್ಬನು ಕಂಡು ಹಿಡಿದ ಸಿದ್ಧೌಷಧ

ಸರ್ವರೋಗ ನಿವಾರಣೆಯಾಗುವ ಸಂಜೀವನೌಷಧವನ್ನು ಕಂಡು ಹಿಡಿಯುವದಕ್ಕಾಗಿ ಅಮೇರಿಕಾಖಂಡದ ಪ್ರಖ್ಯಾತ ಡಾಕ್ಟರನೊಬ್ಬನು ಅನೇಕ ವರ್ಷಗಳಿಂದ ಬಹು ಧನ ವ್ಯಯಮಾಡಿಕೊಂಡು ಸಂಶೋಧನೆಗಳನ್ನು ಮಾಡಿ ಕೊನೆಯಲ್ಲಿ

ಎಲಿಕ್ಸಿರ್ ಆಫ ಲೈಫ್

ಅಥವಾ

ಜೀವನಾಧಾರ

ಎಂಬ ಔಷಧವನ್ನು ಸಿದ್ಧಗೊಳಿಸಿರುವನು ಅನುಪಾನ ಭೇದದಿಂದ ಅನೇಕ ರೋಗಗಳಿಗೆ ಎಂದರೆ ಅಗ್ನಿಮಾಂದ್ಯ ಅಜೀರ್ಣ, ಕೆಮ್ಮು, ಅಥವಾ ತಲೆ ಬೇನೆ, ಬಾಯಾರಿಕೆ, ಅತಿಸಾರ, ವಾಂತಿ ಭೇಧಿ ಅಥವಾ ಕಾಲರಾ, ತಲೆನೋವು, ನೆಗಡಿ, ಮಲೇರಿಯಾ, ಜ್ವರ, ಇತರ ವಿವಿಧವಾದ ಜ್ವರಗಳು, ಮಾನಸಿಕ ದೌರ್ಬಲ್ಯ, ಕಣ್ಣು ಮಸಕು, ಕಿವಿ ನೋವು, ಮಲಬದ್ಧತೆ ನಾಡೀಶೈಥಿಲ್ಯ, ಸ್ತ್ರೀವ್ಯಾಧಿ ಮುಂತಾದ ಎಲ್ಲಾ ಬಗೆಯ ಸಾಂಕ್ರಾಮಿಕ ರೋಗಗಳಿಗೆ, ಇನ್‌ಫ್ಲುಯೆಂಜಾವಿಗೆ, ಪ್ಲೇಗಿಗೆ, ಹಾವು, ಚೇಳು ಮುಂತಾದ ವಿಷ ಜಂತುಗಳ ಕಡಿತಕ್ಕೆ ದಿವ್ಯೌಷಧ ಇದೇ ಮುಂತಾದವುಗಳಿಗೆ ಈ ಜೀವನಾಧಾರವನ್ನು ಕೊಟ್ಟು ಗುಣಪಡಿಸಬಹುದು. ಊರಲ್ಲಿ ಸಾಂಕ್ರಾಮಿಕ ರೋಗವಿರುವಾಗ ಇದನು ಅಲ್ಪ ಪ್ರಮಾಣದಲ್ಲಿ ಉಪಯೋಗಿಸುತ್ತಿದ್ದರೆ ಯಾವ ರೋಗವೂ ಅಂಟುವದಿಲ್ಲ. ಈ ಜೀವನಾಧಾರವೆಂಬ

ಸಂಜೀವನೌಷಧ

ಒಂದು ಸೀಸೆಯು ಪ್ರತಿ ಮನೆಯಲ್ಲಿ ಅಥವಾ ಪ್ರತಿ ಒಬ್ಬನ ಜೇಬಿನಲ್ಲಿದ್ದರೆ ಅನುಭವಸ್ಥನಾದ ಡಾಕ್ಟರನೊಬ್ಬನು ಹತ್ತಿರವಿದ್ದಂತೆಯೇ. ಡಾಕ್ಟರರಿಗೆ ಕೊಡಬೇಕಾದ ಫೀಜುಗಳನ್ನು ಈ ಜೀವನಾಧಾರ ವೆಂಬ ಡಾಕ್ಟರರಿಗೆ ಕೊಡಬೇಕಾಗಿದ್ದಿಲ್ಲ. ಸೀಸೆ ಒಂದಕ್ಕೆ ೧-೮-೦ ಟಪಾಲು ಹಾಜು ಮಗ್ಗೆ ಅಲಾಯಿದಾ ಬೀಳುವದು.

ಜೀವನಾಧಾರ ಡಿಪೊ,
ಮೈಸೂರ.

ಬ್ರ್ಯಾಂಚ್— ಜೀವನಾಧಾರ ಡಿಪೊ,
ಹುಬ್ಬಳ್ಳಿ.

ಇಂಪೀರಿಯಲ್ ಬ್ಯಾಂಕ ಆಫ ಇಂಡಿಯಾ ಶಾಖಾ ಹುಬ್ಬಳ್ಳಿ

ವ್ಯವಹಾರದ ವೇಳೆ— ಮುಂಜಾನೆ ೧೦ ರಿಂದ ಮಧ್ಯಾಹ್ನದ ೩-೩೦ ರವರೆಗೆ ಶನಿವಾರ ೧೦ ರಿಂದ ಮಧ್ಯಾಹ್ನದ ೧ ರವರೆಗೆ.

ಬ್ಯಾಂಕಿನಲ್ಲಿ ನಡೆಯತಕ್ಕ ವ್ಯವಹಾರಗಳು.

ಚಾಲೂ ಖಾತೆಗಳು— ಪ್ರಕೃತಿಯಿಂದ ತೆಗೆಯಲ್ಪಡುವವು

ಮುದ್ದತೀ ಠೇವುಗಳು— ಬಡ್ಡೀದರದಿಂದ ತೆಗೆದುಕೊಳ್ಳಲ್ಪಡುವವು.

ಸೇವ್ಹಿಂಗ ಬ್ಯಾಂಕ— ವೃಗಳ್ಳಿ ತೆಗೆದುಕೊಳ್ಳಲ್ಪಡುವವು ಬಡ್ಡೀದರ ೪ ರೂ.

ಸರಕಾರೀ ಹಾಗೂ ಇತರ ಕಾಗದಗಳು,

ಸುರಕ್ಷಿತೆಯ ಸಲುವಾಗಿ ತೆಗೆದುಕೊಳ್ಳಲ್ಪಡುವವು ಕೊಡಕೊಳ್ಳುವದನ್ನು ಒದಗಿಸಿಕೊಡುವದರಲ್ಲಿ ಬರುವದು. ಬಡ್ಡಿ ಹಾಗೂ ಸವೆ ವಸೂಲು ಮಾಡಿ ಆಯಾ ಖಾತೆಗಳಿಗೆ ಜಮ ಹಿಡಿಯುವದರಲ್ಲಿ ಬರುವದು, ಇಲ್ಲವೆ ತಿಳಿಸಿದಲ್ಲಿ ಕಳಿಸಿಕೊಡುವದರಲ್ಲಿಯೂ ಬರುವದು. ನಿಲ ಹಾಗೂ ರೋಖಡಾ ಉದಾರಿ ಕೊಡಲ್ಪಡುವವು ವ್ಯಾಪಾರೀ ಹುಂಡಿಗಳು ಯೋಗ್ಯ ಕಮೀಶನದಿಂದ ತೆಗೆದುಕೊಳ್ಳಲ್ಪಡುವವು. ಚಕ್ಕು ಹುಂಡಿಗಳನ್ನು ಕೊಡಕೊಳ್ಳುವದಕ್ಕಾಗಿ ಶಾಖೆಗಳಿಗೆ ಹೆಚ್ಚಿನ ಸವಲತ್ತುಗಳನ್ನು ಕೊಡ ಮಾಡುವದರಲ್ಲಿ ಬರುವದು. ದರ ಹಾಗೂ ನಿಯಮಗಳ ಪ್ರತಿಗಳೂ, ಪೊಚ್ಚಿಕ್ಕಾರ ಪತ್ರಗಳೂ ಸಹ ಬ್ಯಾಂಕಿನಲ್ಲಿ ಕೇಳಿಕೊಂಡರೆ ದೊರೆಯುವವು.

ಹುಬ್ಬಳ್ಳಿ ಆರ್, ಎ, ಒಟ್ಟಿಸ.
ತಾ॥ ೨೨-೮-೩೬ ಏಜಂಟ

ಆಯುರ್ವೇದ ಔಷಧಿ ಕಾರಖಾನಾ ಕಿತ್ತೂರ

ಮನ್ಮಥವಿಲಾಸ— ಈ ಗುಳಿಗಳು ಸೇವನೆಯಿಂದ ಅತ್ಯಂತ ಕಾಮೋದ್ದೀಪಕ ಮತ್ತು, ವೀರ್ಯವರ್ಧಕ ಮನೋಲ್ಲಾಸವಾಗಿ ಶಕ್ತಿ ಬರುತ್ತದೆ. ೩೦ ಗುಳಿಗೆಗಳಿಗೆ ೧ ರೂ. ೧೦೦ ಕ್ಕೆ ೪ ರೂ.

ಹುರುಕಿನ ಔಷಧ— ಚೀಟು ೧ ಕ್ಕೆ ೧ ಆಣೆ ೧೦೦ ಕ್ಕೆ ೩ ರೂ ೮ ಆಣೆ.

ಕಣಿನ ಔಷಧ— ಚೀಟು ೧ ಕ್ಕೆ ೩ ಪೈ ೧೦೦ ೧ ರೂ.

ಹೇನಿನ ಔಷಧ— ಚೀಟು ೧ ಕ್ಕೆ ೬ ಪೈ. ೧೦೦ ಕ್ಕೆ ೨ ರೂ.

ಜ್ವರದ ಗುಳಿಗೆ— ಈ ಗುಳಿಗೆಗಳು ಚಳಿಜ್ವರ, ಮಲೇರಿಯಾ, ಇನ್‌ಫ್ಲುಯೆಂಜಾ, ಸನ್ನಿಪಾತ, ಮುಂತಾದ ಜ್ವರಗಳಿಗೆ ಅತ್ಯಂತ ಗುಣ-ಕಾರಿಯಾಗಿರುವ ಮತ್ತು ಪ್ರವಾಸಿಕರಿಗೆ ಉಪಯುಕ್ತವಾದಂಥವಿರುತ್ತವೆ. ೪೦ ಕ್ಕೆ ೧ ರೂ ೧೦೦ಕ್ಕೆ ೨ ರೂ.

ಸೂಚನಾ— ಒಂದು ಆಣೆ ಟಿಕೀಟು ಕಳಿಸಿದಲ್ಲಿ ನಮ್ಮ ಸುಖಸಂಜೀವಿನಿಯೆಂಬ ಪುಸ್ತಕವನ್ನು ಪುಕ್ಕಟೆಯಾಗಿ ಕಳಿಸುವೆವು.

ಆಯುರೌಷಧಿ ಕಾರಖಾನಾ, ಪ್ರೊ. ಕಿತ್ತೂರ ಜಿಲ್ಲಾ ಬೆಳಗಾವ

ಅಪೂರ್ವ ಗ್ರಂಥವು!!! ಶ್ರೀ. ವಿದ್ಯಾರಣ್ಯ ಪುಸ್ತಕಮಾಲೆ ೪ ಚಂದಾದಾರರಾಗಿರಿ !!

ಕರ್ನಾಟಕ ಸಾಮ್ರಾಜ್ಯ ಸಂಪುಟ ೧

[ಪ್ರಾಚೀನ ಕಾಲದಿಂದ ೭೫೭ ರ ವರೆಗೆ]

ಆಕಾರ ಕ್ರೌನ ಷೋಡಶಪತ್ರಿ, ಪುಟ ಸಂಖ್ಯೆ ಸುಮಾರು ೨೬೫.

ಸುಂದರವಾದ ಮುದ್ರಣ ೧೭ ಅಪೂರ್ವವಾದ ಚಿತ್ರಗಳು.

ಬರೆದುಗಾರರು— ರಾಮಚಂದ್ರ ಹಣಮಂತ ದೇಶಪಾಂಡೆ ಎಮ್. ಎ.

ಈ ಅತ್ಯುಪಯುಕ್ತವಾದ ಮಹತ್ವದ ಗ್ರಂಥವನ್ನು ಪ್ರಾಕ್ತನ ವಿಮರ್ಶನ ವಿಚಕ್ಷಣ ರಾ. ನರಸಿಂಹಾಚಾರ್ಯರೂ ಮತ್ತು ಕೃಷ್ಣಶಾಸ್ತ್ರಿಗಳೂ ನೋಡಿ ಪಸಂದ ಮಾಡಿರುತ್ತಾರೆ. ಇದು ಈಗ ಅಚ್ಚಾಗುತ್ತಲಿದ್ದು ಮುಂದಿನ ಕಾರ್ತಿಕ (ನವ್ಹೆಂಬರ) ಮಾಸದಲ್ಲಿ ಪ್ರಕಟಿಸಲ್ಪಡುವದು. ಕ್ರಯ ವಿವರ—

	ರೂ. ಆ. ಪೈ.
೧ ಶ್ರೀ ವಿದ್ಯಾರಣ್ಯ ಪುಸ್ತಕ ಮಾಲೆಯ ಚಂದಾದಾರರಿಗೆ	೧—೪—೦
೨ ಮುಂಗಡವಾಗಿ ಹಣ ಕಳಿಸುವವರಿಗೆ	೧—೬—೦
೩ ಮೇಲ್ಕಂಡ ಅವಧಿಯಲ್ಲಿ ವ್ಹಿ. ಪಿ ಯಿಂದ ಬೇಡುವವರಿಗೆ	೧—೭—೦

ಅಂಚೆವೆಚ್ಚ ೭ ಆಣೆ ಪ್ರತ್ಯೇಕ. ಸ್ವಲ್ಪೇ ಪ್ರತಿಗಳನ್ನು ಮುದ್ರಿಸುವದರಿಂದ ಗ್ರಾಹಕರು ತ್ವರೆ ಮಾಡಬೇಕು. ಇಲ್ಲವಾದರೆ ನಿರಾಶೆಗೆ ಒಳಗಾಗುವ ಸಂಭವವಿದೆ. ಹೊಸದಾಗಿ ಚಂದಾದಾರರಾಗಲಿಚ್ಛಿಸುವವರು ೮ ಆಣೆ ಪ್ರವೇಶ ಫೀಯನ್ನು ಅಂಚೆ ಟಿಕೀಟು ರೂಪದಿಂದ ಕಳಿಸಿ ಬರೆಯತಕ್ಕದ್ದು

ಶ್ರೀ. ಶಂಕರ ಕರ್ನಾಟಕ ಪುಸ್ತಕ ಭಾಂಡಾರದಲ್ಲಿ ಎಲ್ಲ ತರದ ಕನ್ನಡ ಪುಸ್ತಕಗಳೂ (ಪಾಠಶಾಲೋಪಯೋಗಿ ಸಾಮಿಗ್ರಿ ಸಹ) ನಕಾಶೆ ಚಿತ್ರಗಳೂ ಬಗವಣಿಗೆಗಳೂ ದೊರೆಯುವವು.

ಶ್ರೀ. ವಿದ್ಯಾರಣ್ಯ ಪ್ರಕಾಶಕ ಸಂಸ್ಥೆ ಶ್ರೀಪಾದ ರಾಮಚಂದ್ರ ದೇಶಪಾಂಡೆ ಬಿ. ಎಸ್, ಸಿ
ಮಾಳಮಡ್ಡಿ ಧಾರವಾಡ. ಆಡಳಿತಗಾರ

ದಿ ಅಂಕಲಿಗಿ ಬ್ಯಾಂಕ ಲಿಮಿಟೆಡ್ ಧಾರವಾಡ

೧೯೧೩ ಇಸ್ವಿಯ ಕಂಪನಿ ಪ್ರಕಾರ ರಜಿಸ್ಟರ ಮಾಡಲ್ಪಟ್ಟಿದೆ.

ಹೊಸ ಪದ್ಧತಿ ಪ್ರಕಾರ ಈ ಬ್ಯಾಂಕಿನ ವ್ಯವಹಾರವು ಪ್ರಾರಂಭವಾಗಿರುತ್ತದೆ. ಚಾಲೂ ಖಾತೆ, ಠೇವು, ಸೇವ್ಹಿಂಗ್ಸದ ಡಿಪಾಜಿಟು, ಸಾಲ, ವತಿ, ಹುಂಡಿ, ಮುಂತಾದ ಯಾವತ್ತು ವ್ಯವಹಾರಗಳು ನಡೆಯುವವು. ವಿಶೇಷ ಸಂಗತಿಗಳನ್ನು ಕಳಗೆ ಸಹಿ ಮಾಡುವವರಿಂದ ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನ ಕೆಲಸವು ಮುಂಜಾನೆ ೮ರಿಂದ ೧೦-೩೦ ಸಾಯಂಕಾಲ ೩ರಿಂದ ೬ ರವರೆಗೆ ನಡೆಯುವದು

K. B. ANKALIGI.

೧೬ ಚಿತ್ರ ಪಟಗಳುಳ್ಳದ್ದು

ಸಚಿತ್ರ ಶುಕ ಸಪ್ತತಿ ಕಥೆ.

೭೦ ಕಥೆಗಳು ೯೬೩ ಪುಟಗಳು

ಈ ಕಥೆಯು ಧರ್ಮಶಾಸ್ತ್ರ, ವೇದಾಂತ, ಸ್ತ್ರೀ ಪಾತಿವ್ರತ್ಯ, ಬ್ರಾಹ್ಮಣ, ವೈಶ್ಯ, ಶೂದ್ರರೆಂಬ ನಾಲ್ಕು ವರ್ಣದವರು ನಡೆಯತಕ್ಕ ವರ್ಣಾಶ್ರಮ ಧರ್ಮವೇ ಮುಂತಾದ ಸದ್ವಿಚಾರಗಳನ್ನು ಬೋಧಿಸುವದು.

೧ ಕಥಾ ರೂಪದಲ್ಲಿ ಚಿತ್ರಕಥಾ ಚಮತ್ಕಾರ ಬೋಧಕವಾಗಿಯೂ, ನೀತಿಬೋಧಕವಾಗಿಯೂ ಇರುವದರಿಂದ ಸ್ತ್ರೀಯರೂ ಪುರುಷರೂ ಬಾಲಕರೂ ಎಂಬ ಭೇದವಿಲ್ಲದೆ ಎಲ್ಲರೂ ಓದಬಹುದು. ೨. ಲೋಕಾನುಭವಕ್ಕೆ ಬೇಕಾದ ವಿಷಯಗಳು ಇದರಿಂದ ತಿಳಿದು ಬರುವವು. ೩. ಈ ಕಥೆಯನ್ನು ಓದುವದರಿಂದ ಮನಸ್ಸನ್ನು ದುರಾಚಾರದಲ್ಲಿ ಬಿಡದಂತೆ ಸದಾಚಾರದಲ್ಲಿಯೇ ನಡೆಯುವಂತೆ ಮಾಡುವದು. ೪ ಲೋಕಾನುಭವವನ್ನು ಉಂಟು ಮಾಡುವದು. ಬೇಕಾದವರು ವ್ಹಿ. ಪಿ. ಪೋಸ್ಟ ಮೂಲಕ ತರಿಸಿಕೊಳ್ಳಬಹುದು.

ದಪ್ಪ ಕಾಗದ ಕ್ರಯ ಪ್ರತಿಯೊಂದಕ್ಕೆ ರೂಪಾಯಿ ಎರಡು, ಟಪಾಲ ಹಾಸಿಲು ಎಂಟಾಣೆ

೧ ಸಚಿತ್ರ ಭಟ್ಟೀ ವಿಕ್ರಮಾದಿತ್ಯರಾಯನ ಕಥೆ. ಮೂರು ಭಾಗ ಸೇರಿದ್ದು ೬೧೨ ಪುಟಗಳು ಕ್ರಯ ೨-೪-೦ ೨ ಸಚಿತ್ರ ರಾಜಕಂಠೀರವ ಕಥೆ ೪೮೦ ಪುಟಗಳು ಕ್ರಯ ೨-೦-೦

೩ ಸಚಿತ್ರ ಶ್ರೀರಾಮಾಶ್ವಮೇಧವೆಂಬ ಸೀತಾರಾಮಾಂಜನೇಯ ಸಂವಾದ ೨೪೬ ಪುಟಗಳು ೧-೬-೦ ಇವುಗಳಿಗೆ ಟಪಾಲ ಖರ್ಚು ಬೇರೆ.

ನಮ್ಮಲ್ಲಿ ದೊರೆಯುವ ಎಲ್ಲಾ ಪುಸ್ತಕಗಳ ಕ್ರಯಪಟ್ಟಿ (ಕ್ಯಾಟಲಾಗ) ಗೆ ಬರೆದರೆ ಕಳಿಸುವೆವು.

ನಮ್ಮ ವಿಳಾಸ— ಎಮ್. ಆರ್. ಕೃಷ್ಣಸ್ವಾಮಿ ಶೆಟ್ಟಿ, ಬುಕ್ಕಡಿಪೋ,
ಚಿಕ್ಕಪೇಟೆ ಬೆಂಗಳೂರ ಸಿಟಿ.

ಬಾಣಂತೀ ಗುಳಿಗೆಗಳು.

ವಯೋವೃದ್ಧರೂ ಅನುಭವಶಾಲಿಗಳೂ ಆದ ಸುಪ್ರಸಿದ್ಧ ವಿದ್ವಾನ್ ವೈದ್ಯ ವೈ. ವಾ. ವೇ. ಮಾ. ಕೃಷ್ಣಾಚಾರ್ಯ ದಾಸನೂರ ಇವರು ನಮಗೆ ಅಂತಃಕರಣದಿಂದ ಈ ಔಷಧ ಮಾಡುವ ಕ್ರಮವನ್ನು ಕಲಿಸಿದರು. ವೈದ್ಯ ವಿಷಯದಲ್ಲಿ ಮುಖ್ಯವಾಗಿ ಈ ಬಾಣಂತಿ ಗುಳಿಗೆಗಳ ಬಗ್ಗೆ ಆಚಾರ್ಯರ ಕೀರ್ತಿಯು ೫೦-೬೦ ವರ್ಷಗಳಿಂದ ಸಮೀಪದಲ್ಲಿ ಎಲ್ಲಾ ಕಡೆಗೂ ಹಬ್ಬಿರುವದು ಸುಪರಿಚಿತವಿರುವದರಿಂದ ಈ ಔಷಧದ ಉಪಯೋಗವಾಗುವಂತೆ ದೂರದಲ್ಲಿರುವ ನಮ್ಮ ಬಾಂಧವರಿಗೂ ಇದರ ಪ್ರಯೋಜನವಾಗಬೇಕೆಂದು ನಾವು ಇದನ್ನು ಪ್ರಸಿದ್ಧ ಪಡಿಸುತ್ತೇವೆ. ಈ ಗುಳಿಗೆಗಳ ಸೇವನೆಯಿಂದ ಜ್ವರ, ಅರುಚಿ, ಕಟ್ಟು ರಕ್ತಸ್ರಾವ, ವಾಯುವಿಕಾರ, ಅಗ್ನಿಮಾಂದ್ಯ, ಹೊಟ್ಟೆಯುಬ್ಬಸ, ಅತಿಸಾರ, ಕಫ, ಮಸ್ತಕ ಶೂಲೆ ಮುಂತಾದ ಬಾಣಂತಿಯರ ಎಲ್ಲ ರೋಗಗಳು ದ ತ್ವರಿತ ದಿಂದ ನಿರ್ಮೂಲವಾಗುವವು. ಕ್ಷಯದ ಲಕ್ಷಣವಿದ್ದರೂ ತಪ್ಪದೇ ಗುಣವಾಗುವದು. ಸ್ತ್ರೀಯರು ಹಡೆದ ಕೂಡಲೆ ಇವುಗಳನ್ನು ಸೇವಿಸಿದರೆ ಮುಂದೆ ಬಾಣಂತಿ ರೋಗದ ಭಯವೇ ಇಲ್ಲ ಆದ್ದರಿಂದ ಬಾಣಂತಿಯರು ಯಾರೇ ಆಗಲಿ ಈ ಔಷಧವನ್ನು ನಿರ್ಭಯದಿಂದ ಸೇವಿಸಬಹುದು. ಗರ್ಭಿಣಿಯರು ಅವಶ್ಯವಾದ ಈ ಔಷಧವನ್ನು ಸಂಗ್ರಹದಲ್ಲಿಡಲು ಅಡ್ಡಿಯಿಲ್ಲ. ಅನುಪಾನ ಪತ್ರಿಕೆಯು ಔಷಧದೊಂದಿಗೆ ದೊರೆಯುವದು. ೮೦ ಗುಳಿಗೆಗಳುಳ್ಳ ಡಬ್ಬಿ ೧ಕ್ಕೆ ಬೆಲೆ ೬-೦-೦ ಟಪಾಲು ಖರ್ಚು ಬೇರೆ ಒಬ್ಬರಿಗೆ ಒಂದು ಡಬ್ಬಿಯು ಸಾಕು.

ತಂತಿ ವಿಳಾಸ "ಶಾಂತನೀತ" ಧಾರವಾಡ

ಡಾ. ಎಸ್. ಆರ್. ಕಿತ್ತೂರ
"ಪರಸಂಜೀವಿನೀ" ಔಷಧ ಧಾರವಾಡ

ಸತ್ಯಮೇವ ಜಯತೇ!
(ಗುಣವಾಗದೆ ಇದ್ದರೆ ಹಣ ಮರತ.)

ಧಾತುಪೌಷ್ಟಿಕ, ಕಾಮೋತ್ತೇಜಕ, ಇಂದ್ರಿಯಸ್ತಂಭಕವಾದ

ಮದನೋದ್ಭವ ಗುಳಿಗೆ.

ಜನನೇಂದ್ರಿಯದ ಶಿಥಿಲತೆ, ನಿರ್ಬಲತೆ, ನಪುಂಸಕತ್ವ, ಕ್ಷೀಣತೆ, ಸ್ವಪ್ನಾವಸ್ಥೆ ಮೊದಲಾದವು ಈ ಗುಳಿಗೆಗಳ ಸೇವನೆಯಿಂದ ಗುಣಾಂಶವಾಗಿ ಧಾತುಪೌಷ್ಟಿಕ, ವೀರ್ಯವರ್ಧಕ, ರಕ್ತಶೋಧಕ, ಕಾಮೋತ್ತೇಜಕ. ಮನೋಲ್ಲಾಸಕ, ಇಂದ್ರಿಯಸ್ತಂಭಕ, ಗರ್ಮಿ, ಸೋಕು ಗುಪ್ತಪ್ರದೇಶದ ಮೇಲೆ ಹುಟ್ಟಿರುವ ಎಲ್ಲಾ ತರಹದ ಬಬ್ಬೆಗಳು, ಹುಣ್ಣುಗಳು, ಪಿತ್ತದ ಬಾಧೆಗಳು, ಕಟಿಶೂಲೆ ವಾತರೋಗ, ಮುಂತಾದವು ಆಶ್ಚರ್ಯ ಗುಣವಾಗಿ ಶರೀರಕ್ಕೆ ನಿರೋಗತ್ವವೂ ಕಾಂತಿಯೂ ರತಿಸುಖಕ್ಕೆ ಸಂಪೂರ್ಣ ಶಕ್ತಿಯೂ ಉಂಟಾಗುತ್ತದೆ ಒಬ್ಬರಿಗೆ ೬೦ ಗುಳಿಗೆಗಳು ಬೇಕಾಗುತ್ತವೆ. ಇದನ್ನು ಸೇವಿಸುವಾಗ ನಪುಂಸಕತ್ವಾರಿ ತೈಲವನು ಉಪಯೋಗಿಸಿದರೆ ಉತ್ತಮ. ಕಿಮ್ಮತ್ತು ೬೦ ಗುಳಿಗೆಗಳಿಗೆ ೪-೦-೦

ನಪುಂಸಕತ್ವಾರಿ ತೈಲವು

ಪುರುಷನ ಇಂದ್ರಿಯಕ್ಕೆ ದುಷ್ಕರ್ಮದಿಂದುಂಟಾದ ಶಿಥಿಲತೆ, ನಿಬಲತೆ ಮೊದಲಾದವು ಫಕ್ತ ಬಾಹ್ಯೋಪಚಾರದಿಂದಲೇ ಗುಣವಾಗಿ ನಪುಂಸಕತ್ವದ ಕೆಟ್ಟ ವಿಕಾರಗಳು ಗುಣಹೊಂದಿ ಇಂದ್ರಿಯ ಚೈತನ್ಯವನ್ನುಂಟುಮಾಡಿ, ರತಿಸುಖವನ್ನನುಭವಿಸಲು ಇಚ್ಛೆಯನ್ನು ಉಂಟುಮಾಡುತ್ತದೆ. ಇವನ್ನು ಉಪಯೋಗಿಸುವಾಗ ಮದನೋದ್ಭವ ಗುಳಿಗೆಗಳನ್ನು ಉಪಯೋಗಿಸಬೇಕು. ಕಿಮ್ಮತ್ತು ಬಾಟ್ಲಿ ೧ ಕ್ಕೆ ೨-೧೨-೦

ಇಂದ್ರಿಯಸ್ತಂಭನ ಗುಳಿಗೆ.

ಚಿಕ್ಕ ಪ್ರಾಯದಲ್ಲಿ ಅತ್ಯಾಚಾರದಿಂದ ಹಸ್ತಕ್ರಿಯೆ ಮಾಡಿ ಇಂದ್ರಿಯ ಸ್ಖಲನ ಮಾಡಿದ್ದರಿಂದ ಉಂಟಾದ ನಪುಂಸಕತ್ವ ಕ್ಷೀಣತೆ ಮತ್ತು ಧಾತು ತೆಳ್ಳಗಾಗಿಯೂ ಶೈತ್ಯವಾಗಿಯೂ ರತಿವಿಲಾಸಕ್ಕೆ ಅತಿ ಇಲ್ಲದವರಾಗಿಯೂ ಆಗುವರು ಅಂಥವರು ಈ ಗುಳಿಗೆಗಳನ್ನು ಸೇವಿಸುವುದರಿಂದ ಸಶಕ್ತರಾಗಿಯೂ, ಕಾಂತಿಯುಳ್ಳವರಾಗಿಯೂ ಮದನವಿಲಾಸಕ್ಕೆ ಸಂಪೂರ್ಣ ಶಕ್ತಿಯುಳ್ಳವರಾಗಿಯೂ ಆಗುವರು. ಒಬ್ಬನಿಗೆ ೬೪ ಗುಳಿಗೆಗಳು ಬೇಕಾಗುವವು. ಇದನ್ನು ಉಪಯೋಗಿಸುವಾಗ್ಗೆ ನಪುಂಸಕತ್ವಾರಿ ತೈಲವನ್ನು ಉಪಯೋಗಿಸಬೇಕು. ಕಿಮ್ಮತ್ತು ೩೨ ಗುಳಿಗೆಗಳಿಗೆ ೨-೮-೦ ಅನುಪಾನ ಪತ್ರಿಕೆ ಔಷಧ ಸಂಗಡ ಟಪಾಲ ಖರ್ಚು ಬೇರೆ.

ಔಷಧಗಳು ಸಿಗುವ ವಿಳಾಸ— **ವೈದ್ಯ ಜಿ. ಆರ್. ಜೋಶಿ ಮತ್ತು ಕಂಪನಿ,**
ಪೋಸ್ಟ ಬನವಾಸಿ. (ಉತ್ತರ ಕಾನಡಾ,)

ಶ್ರೀ. ಅಂಗಡಿಯವರು ಪುನಃ ಅಧ್ಯಕ್ಷ ಪದವ ಸ್ವೀಕರಿಸಿ ಕೊಂಡರು.

—೦—

ಬೆಳಗಾವಿಯ ಮುನಸಿಫಾಲಿ ಟಿ ಚೇರ ಮನರು ಶ್ರೀ. ಅಂಗಡಿಯವರಿಗೆ ಡಿ. ಲೋ. ಬೋರ್ಡಿನ ಅಧ್ಯಕ್ಷರೆಂದು ಕಾಗದ ಪತ್ರಗಳ ಮೇಲೆ ಸಹೀ ಮಾಡಬಾರದೆಂದೂ, ಶ್ರೀ. ಪಂಡಿತಪ್ಪಾ ಚಿಕ್ಕೋಡಿಯವರೇ ಅಧ್ಯಕ್ಷರಾಗಿ ಸಹೀ ಮಾಡಬೇಕೆಂದೂ ಕೊಟ್ಟಂಥ ತಡಕಟಿ ಹುಕುಮಿನ ಮೇಲೆ, ಶ್ರೀ. ಅಂಗಡಿಯವರು ಡಿಸ್ಟ್ರಿಕ್ಟ ಕೋರ್ಟಿಗೆ ಅಪೀಲು ಮಾಡಿದರು. ಮಿ. ಜಡ್ಜ ಸಾಹೇಬರು ತಡಕಟಿ ಹುಕುಮಿಗೆ ಸ್ಟೇ ಆರ್ಡರ ಕೊಟ್ಟಿದ್ದಾರೆ. ವಿಚಾರಣೆಯು ಬೇಗನೆ ನಡೆಯುವದು. ಮುಖ್ಯ ದಾವೆಯ ವಿಚಾರಣೆಯು ಆಗಸ್ಟ ತಿಂಗಳ ೧೨ ನೆಯ ತಾರೀಖಿನ ದಿವಸ ನಡೆಯುವದುಂಟು. ಒಟ್ಟಿಗೆ ಈ ಪ್ರಕರಣವು ಮನೋರಂಜಕವಾಗುತ್ತಾ ನಡೆದಿದೆ.

ರಣಾಪ್ರೋ? ಸರಕಾರಕ್ಕೆ ಸಿಟ್ಟಾದಿತ್ತೋ!

—೦—

ವಿಲಾಯತಿಯಲ್ಲಿ ಪಾರ್ಲಮೆಂಟ ಸಭೆಯ ಮೆಂಬರರು ಯಾವದೊಂದು ರಣಾವು ಕಡವಾಗಬಾರದೆಂದು ಸರಕಾರಕ್ಕೆ ಸಿಧಾರವು ಮಾಡುತ್ತೇವೆ ದು ರೇಡಿನ ಗವ್ಹರ್ನಮೆಂಟಿನ ಶ್ರೀ ... ಅಥವಾ ಅನೇಕ್ಷ್ಯೆಯಲ್ಲಿ ಈ ತರದ ಘಟನೆಯು ಉಂಟಾಗಿರುವ ಪದ್ಧತಿಯಿಲ್ಲ. ಹಿಂದಿನ ರಾಜ್ಯಗಳು ... ಗವ್ಹರ್ನರಾದವರ ಬರು ಮಸ್ಸಿನ ಬಂದರೆ- ಅವನ್ನು ಅಂಗೀಕರಿಸುವರು. ಇಲ್ಲವಾದರೆ ಇಲ್ಲವೇ ಇಲ್ಲ. ಅಂದರೆ ರಣಾವನ್ನು ತರುವರು ಅಥವಾ ಆ ರಣಾವು ಏಕ್ಸಿಂ ಮಾಡತಕ್ಕದ್ದಾಗಿದ್ದರೂ, ಗವ್ಹರ್ನರಾದವರು ಒಪ್ಪಿಗೆಯನ್ನು ಕೊಟ್ಟಿದ್ದರೆ ಅದು ಕಾಯದೆ ಬಟ್ಟಿಯನ್ನು ತಾಳುವದು. ಗವ್ಹರ್ನರಾದವರು ರಣಾ ಪ್ರಕರಣವು ನಾನಾಂಬಾರ ನಡೆದಿರುವಂಥ ಅನೇಕ ಉದಾಹರಣೆಗಳುಂಟು. ಅದರಿಂದ ಯಾವದೊಂದು ರಣಾವಿನ ಅಂಗೀಕಾರವು ಗವ್ಹರ್ನರರ ಇಷ್ಟಾನಿಷ್ಟದ ಮೇಲೆ ಅವಲಂಬಿಸಿದೆ, ಕೌನ್ಸಿಲದ ಹೊಟ್ಟಿನ ಅವಲಂಬಿಸಿಲ್ಲ. ನಾಟಕದ ಶ್ರೀ. ಪ್ರಧಾನರು ಈ ರಣಾವಿನ ಬಂದು ರಣಾವು ತರುವಾತಿ ಮುಂಬಯಿ ಸರಕಾರಕ್ಕೆ ತಿಳಿಸಿದರು. ಆದರೆ ಇದಕ್ಕೆ ಗವ್ಹರ್ನರಾದವರು ಒಪ್ಪಿರುವದಿಲ್ಲ. ಅವರು ನಿರ್ಬಂಧ ಮಾಡಿದ್ದಾಗಿ ಅದರಿಂದ ಶ್ರೀ ಪ್ರಧಾನರು ಅವನ್ನು ಕಡೆ ಪದ್ಧತಿಯಿಂದಲೇ ತರುವರು. ನ್ಯಾಯ, ಪೋಲಿಸ ಮುಂತಾದ ಖಾತೆಗಳನ್ನು ... ಮಂತ್ರಿಗಳಿಗೆ ಒಪ್ಪಿಸಬೇಕೆಂಬ ಈ ರಣಾವು ಅಂದರೆ ನಸ್ನ ... ರಣಾವೇನು ಇದನ್ನು ... ಸೇವಕರೇ ಇಲ್ಲವೇ? ಎಂಬದನ್ನು ರಾಜ್ಯಕಾರಣಿಗಳು ನಿರೀಕ್ಷಿಸುತ್ತಿದ್ದಾರೆ.

ಕಮಿಶನರ ಮತ್ತು ಇಂಜನೀಯರರನ್ನು ತೆಗೆಯುವ ರಣಾವು.

—೦—

ರೇಲ್ವೆ, ತಾರು, ಪೋಸ್ಟಾಪು ಮುಂತಾದವುಗಳ ನೌಕರಿ ಮಾಡುವರಿಂದ, ಫೋರೆನ್ ಅಫೀಸಿನ ಶಿವ್ಡ ಕಮೀಶನರ ಅಧಿಕಾರಿಗಳನ್ನು ತೆಗೆಯಬೇಕೆಂದು ವರ್ತಮಾನಪತ್ರಗಳಲ್ಲಿ ಮಾತ್ರವಲ್ಲ, ಕೌನ್ಸಿಲಗಳಲ್ಲಿಯೂ ಭಾಷಣಗಳಾಗಿರುತ್ತವೆ. ಸುರತದ ದೇಬರಾದ ಶ್ರೀ ಶಿವದಾಸನಿಯವರು ಪೂಣೆಯಲ್ಲಿ ಬರುವ ವಾರದಲ್ಲಿ ಕೂಡುವ ಕೌನ್ಸಿಲಿನ ಬೈಟಕಿನಲ್ಲಿ ಕಮಿಶನರ ಮಾತ್ರವಲ್ಲ; ಪ್ರಾಂತ ಕಾಮದಾರರನ್ನು ತೆಗೆದು ಹಾಕಬೇಕೆಂಬ ರಣಾವು ತರುವಂತೆ ಮುಂಬಯಿ ಸರಕಾರಕ್ಕೆ ತಿಳಿಸಿದ್ದಾರೆ. ಪ್ರಾಂತ ಅಧಿಕಾರಿಗಳ ಕೇಸಗಳನ್ನು ಕಲೆಕ್ಟರರ ವರ್ಗದಲ್ಲಿ ಅನ್ವಯಿಸುವಂತೆ ಕೊಡಬೇಕೆಂದು ಇವರ ರಣಾವಿನ ಆಶಯವಾಗಿರುತ್ತದೆ.

ಕೊಲ್ಹಾಪೂರದ ಹತ್ತರದ ಜಯಸಿಂಗಪೂರದ ಬೈಲು ಗ್ರಾಮದಲ್ಲಿ ಜುಲೈ ನೆಯ ದಿವಸ ರಾತ್ರಿ ೮ ಘಂಟೆ ೧೨ ಮಿನಿಟುಗಳ ನಂತರ ಭೂಕಂಪವು ಆಯಿತು. ಸುಮಾರು ೩ ಸೆಕೆಂಡಗಳ ವರೆಗೆ ನಡೆದಿತು. ಕಾಲ ತುದಿಯನ್ನು ನೋಡುವದಕ್ಕೆ ಕೊಲ್ಹಾಪೂರದ ಮಹಾರಾಜರೂ, ಸಾಂಗಲಿಯ ಯುವರಾಜರೂ ಹೋಗಿದ್ದರು.

ಜೈನರಲ್ಲಿ ಅಸಂತೋಷ!!
ಹರತಾಳ ಮತ್ತು ಸತ್ಯಾಗ್ರಹ

—೦—

ಕಾರ್ಕಳದಲ್ಲಿ ಗೊಮ್ಮಟೇಶ್ವರನೆಂಬ ಒಂದು ಸಂಸ್ಥಾನವುಂಟು. ಇಲ್ಲಿ ತತ್ವೋಪದೇಶದಿಂದ ಜೈನರ ಪ್ರಸಿದ್ಧ ಪುಣ್ಯಕ್ಷೇತ್ರವುಂಟು. ಈ ಕ್ಷೇತ್ರಕ್ಕೆ ಹೋಗುವಂಥ ಜೈನರು ಪ್ರತಿವರ್ಷದ ದರ್ಶನಕ್ಕೆ ೧೨ ಸಾವಿರ ರೂಪಾಯಿ ಕೊಡಬೇಕೆಂದು ೪೦ ವರ್ಷಗಳ ಹಿಂದೆ ಕರಾರವಾಗಿತ್ತು. ಈ ಕರಾರವು ಸಾಲ್ಯತ್ರೀ ವರ್ಷದ್ದಿತ್ತು, ಅದು ಈ ವರ್ಷಕ್ಕೆ ಮುಗಿದದ್ದರಿಂದ, ದರ್ಶನಾರ್ಥಿಗಳು ಜೈನ ಯಾತ್ರಿಕರು ತಲೆಗೆ ಎರಡು ರೂಪಾಯಿ ಕೊಡಬೇಕೆಂದು ನೋಟೀಸು ತೆಗೆದರು. ಇದು ವಿರುದ್ಧ ಜೈನರು ಚಳವಳಿ ಮಾಡಲು- ಗವ್ಹರ್ನರ ಜನರಲ್ಲರಿಗೆ ವಿವರಿಸಿದ್ದ ಮಿ. ಸಾಟೆನಸಾಹೇಬರು, ಸರಕಾರದವರು ಮಂಜೂರಾಗಿ ನೇಮಿಸಿದರು. ನಾವೇ ಬರು ಉಭಯ ಪಕ್ಷಗಳ ಹೇಳಿಕೆಯನ್ನು ಕೇಳಿದೆವು. ಜೈನರು ಹತ್ತು ವರ್ಷಗಳ ಸಮಯದ ದರ್ಶನಕ್ಕೆ ಪ್ರತಿವರ್ಷ ಬಂದು ಲಕ್ಷ ರೂಪಾಯಿ ಕೊಡಬೇಕೆಂದು ಅವಾರ್ಡ ಕೊಟ್ಟಿದ್ದಾರೆ. ಜೈನರು ಕತ್ತುಂಬರನ ದರ್ಶನಕ್ಕೆ ಹೋಗುವ ಪ್ರಮಾಣವು ಪ್ರತಿವರ್ಷ ಸರಾಸರಿ ೮೦ ಸಾವಿರಾಗಿದೆ. ದಿಂಡಾರದ ಕಟಿದ್ದು ... ನಾ ... ರೂಪಾಯಿಯು ಬಹಳ ಹೆಚ್ಚು ಎಂದು ಹೇಳುವರು ಅಭಿಪ್ರಾಯಪಟ್ಟಿದ್ದಾರೆ.

ಸಾಮಾನ್ಯ ಈ ರಣಾವು ಬಹಳ ಅನ್ಯಾಯವು. ಜೈನರ ಧರ್ಮದಲ್ಲಿ ಕೈ ಹಾಕಿ ... ಕ್ಕರ ಮೇಲೆ ಗದಾಪ್ರಹಾರ ಮಾಡಿದಂತಾಗಿರುತ್ತದೆಂದು ಜೈನರು ಕೊಡವಿಕೊಂಡಿದ್ದಾರೆ. ... ಮಿ., ಅಹಮದಾಬಾದ, ಪುಣೆ, ಮುಂತಾದ ... ಪಟ್ಟಣಗಳಿಗಿರುವಂಥ ನೆರತ್ತ ದೊಡ್ಡ ಪಟ್ಟಣಗಳಲ್ಲಿ ಜಾಹೀರ ಸಭೆಗಳನ್ನು, ಮೆರವಣಿಗೆಗಳನ್ನು ತೆಗೆದು, ಅಸಂತೋಷ- ಅಸಮಾಧಾನವನ್ನು ಜಾಹೀರ ಪಡಿಸುತ್ತಿದ್ದಾರೆ. ಮುಂಬಯಿಯಲ್ಲಿ ಇನ್ನು ಸ್ಥಿಯ ಸಾಹುಕಾರರೂ, ವ್ಯಾಪಾರದ ಹೆಚ್ಚುಗಳಲ್ಲಿ ಇವರ ಕಯ್ಯಲ್ಲಿರುವದರಿಂದ, ಇವರಿಗೆ ಸರಾಸರಿ ಹರತಾಳವಾಗಿ, ಮುಂಬಯಿ ಪೇಠಾ ಮತ್ತು ಮುಂಗಳದ ದರ ಅಂಗಡಿಯ ವಾರ್ಕಲಗಳು, ಸರಾಫ ಕಟ್ಟೆಯೂ, ಶೇರ ಬಾಜಾರದ ಪೇಢಿಯೂ ಹರತಾಳ ದಲ್ಲಿ ಒಂದಾಗಿದ್ದವು. ಮುಖ್ಯ ದು ಸಾವಿರ ಜೈನರೊಂದು ಮೆರವಣಿಗೆ ಹೊರಟಿತು. ಪ್ರತಿಯೊಬ್ಬರು ಅಲ್ಲೀ ಪಿರಿಸಿ ಹಿಡಿದಿದ್ದರು, ಎಲ್ಲರೂ ಸಾಹೇಬರು ಜೈನರ ಅವಮಾನ ಮಾಡಿದರೆ- ಬೇ ದುರಾತ್ಮಬ್ದರಿಂದ ಧ್ವನಿ ಹೊರಟಿತು. ಸಾದರಿಂದ ದರ್ಶನ ಮತ್ತು ಅದಕ್ಕೆ ಹೊಂದಿದ ... ಸಭೆಯ ಸರಕಾರದ ನಿಶ್ಚಯಿಸಿಂದ ಕಲೆ ಪಟ್ಟ ದರ್ಶನದ ಲಕ್ಷ ರೂಪಾಯಿ ದಂಡ ಕೆತ್ತಬೇಕಾಯಿ ತೆಂದು ಸಭೆಯಲ್ಲಿ ಮಹತ್ವದ ಭಾಷಣಗಳಾದವು. ಜೈನರಿಗೆ ಪಕ್ಷದಲ್ಲಿ ಎರಡೇ ಮಾರ್ಗಗಳುಂಟು. ಹಿಂದುಸ್ಥಾನ ಸರಕಾರಕ್ಕೆ ಅಪೀಲು ಮಾಡುವದೂ, ಆ ಸರಕಾರವು ಜೈನರ ಸಮಾಧಾನ ಪಡಿಸುವಂಥ ಅಪ್ಪ ಣೆ ಮಾಡುವದರ ಒಂದು ಮಾರ್ಗ ಹಿಂದುಸ್ಥಾನ ಸರಕಾರವು ಗದಾಜಾರದ ಪಕ್ಷ ಹಿಡಿದರೆ- ಸತ್ಯಾಗ್ರಹ ಮಾಡಿ, ಹತ್ತು ಸ್ವಿರ ಪಡಿಸಿಕೊಳ್ಳುವದು ಎರಡನೆಯ ಉಪಾಯವು ಶೀಘ್ರ ಅಕಾಲಿಗಳು ನ ಬಾರದಲ್ಲಿ ಅ ನುಭವಿಸಿದಂಥ ಗೋಳುಬಾರ ಮೊದಲಾದವುಗಳು ಧರ್ಮ ಕರವಾದಿಯದುಯೂ ಹಾನಿಗಳನ್ನು ಸಹಿಸಬೇಕಾಗುತದ ಇಷ್ಟು ಮನೋನಿಶ್ಚಯವಿದ್ದ ಹೊತ್ತ ಸತ್ಯಾಗ್ರಹವು ಯಶಸ್ವಿಯಾಗಲಾರದು. ಆದ್ದರಿಂದ ಇವರು ಸತ್ಯಾಗ್ರಹದ ದರ್ಶನಕ್ಕೇ ಹೋಗದೆ, ಕೆಲವು ವರ್ಷ ದರ್ಬಾರಕ್ಕೇ ಕಕ್ಕ ಕಾಯಿ ತಿನ್ನಬೇಕು. ಆಗದೇ- ದರ್ಬಾರವು ಕೌಳಿಗೆ ಬರುವದು.

ಸ್ವದೇಶಿ ವ್ಯಾಖ್ಯಾನ ಮತ್ತು ರಾಷ್ಟ್ರೀಯ ಶಿಕ್ಷಣ.

ಅನೇಕ ಜನರು ತಾವು ದೇಶಾಭಿಮಾನಿಗಳೆಂದು ಹೇಳಿಕೊಳ್ಳುತ್ತಾ, ಸಾರ್ವಜನಿಕ ಸಭೆಗಳಲ್ಲಿ ಸ್ವದೇಶಿ, ಸ್ವರಾಜ್ಯ ಮತ್ತು ರಾಷ್ಟ್ರೀಯ ಶಿಕ್ಷಣದ ಮೇಲೆ ವ್ಯಾಖ್ಯಾನ ಕೊಡುವರು. ಆದರೆ ಇಂಥವರೇ ತಮ್ಮ ಮಕ್ಕಳನ್ನು ರಾಷ್ಟ್ರೀಯ ಶಾಲೆಗೆ ಕಳಿಸದೆ, ಸರಕಾರೀ ಶಾಲೆಗಳಿಗೆ ಕಳಿಸುವರು. ಇದೆಂಥ ರಾಷ್ಟ್ರೀಯತೆಯೆಂದು ಒಬ್ಬ ವಿದ್ಯಾರ್ಥಿಯು ಮಹಾತ್ಮರಿಗೆ ಪ್ರಶ್ನೆ ಮಾಡಿದ್ದು ಅದಕ್ಕೆ ಅವರು ಕಾ

ಪ್ತರು ಕೊಟ್ಟದ್ದಾರೆ. ಒಂದೇ ದಿಕ್ಕಿನಲ್ಲಿ ಈ ಉತ್ತರದ ಅರ್ಥ ಮಾಡಬಹುದು. ಇಂಥವರಿಗೆ ನಿಜವಾದ ರಾಷ್ಟ್ರೀಯ ವಿಶ್ವಾಸಗಳಿಲ್ಲದೆ, ಜನಮಿತ್ರರ ... ಅನುಕರಣಿ ... ಬಳಸಿದರು. ಇವರಿಗೆ ದಯೆಯಿಂದಲೇ ತರಬೇಕು!!

ಇಂಗ್ಲಂಡದ ಮೇಲೆ ಪೋಲಿಸರ ಅದ್ಭುತ ಕೆಲಸ.

—೦—

ಮೊನ್ನೆ ವಾರದಲ್ಲಿ ಇಂಗ್ಲಂಡದ ಮೇಲೆ ಪೋಲಿಸರ ಅದ್ಭುತ ಕೆಲಸವಾಯಿತು. ಒಬ್ಬ ಆಗಂತುಕರಿಂದ ಅತ್ಯಂತ ರಹಸ್ಯದಿಂದ ಪ್ರವಾಸ ಮಾಡುತ್ತಿದ್ದ ಪೋಲಿಸರೊಬ್ಬರು ಫ್ರಾನ್ಸಿಗೆ ... ಯಾವ ... ವಿಶೇಷವಾದ ಕಾರ್ಯವು ... ಇಂಗ್ಲಂಡದಲ್ಲಿಯೂ ಹೊಕ್ಕಿದ್ದನು. ಪ್ರೆಂಚ ... ನಾಟಕಾದಿಯಿಂದ ವರಗಿಯಿದ್ದಂಥ ಜಬರದಸ್ತನೆಂದು ಪೋಲಿಸರು ... ರಾತ್ರಿಯಲ್ಲಿ ಬ್ರಿಟಿಷ ಸೈನ್ಯಗಳ ಗುಟ್ಟುಗಳ ಮತ್ತಿನ ಸುದ್ದಿಗಳನ್ನು ... ಅವರ ಬಂಗಲೆ ಕಾಗದಗಳಲ್ಲಿ ... ಹುಡುಕಿದರು. ಅಲ್ಲಿ ಹೊರಟು ಬೇಕಿಸು ಕಾಗದ, ಮೋಟಾರ ಕಾರು, ಬಂದೂಕುಗಳು ... ಅವರ ಗುಡುಗು ಸಿಡಿಲು ಮತ್ತು ... ಅಕಸ್ಮಾತ್ತಾಗಿ ಸಿಕ್ಕವು ... ದನು. ಆತನಿಂದ ವಿವಾದಕ್ಕೆ ಅನೇಕವುಗಳು ದೊರಕಿದವು. ಅನಂತರ ಅವರನ್ನು ಮರ್ದಿಸಿ ... ಅನೇಕ ಸ್ಥಳಗಳಲ್ಲಿ ... ದಸ್ತಗಳು ಕೇಳ ಬೆಕಿದವು.

ಹಿಂದುಸ್ಥಾನದಲ್ಲಿ ಮೂರನೆ ವರ್ಗದ ಹಕ್ಕುಗಳು ಇಲ್ಲವೆಂಬುದು.

—೦—

ಒಂದು ವರ್ಷದಾಯಿತು. ಹಿಂದುಸ್ಥಾನದ ಸಾಮ್ಯದ ಸ್ಥಿತಿಯು ತೀರ ನಿಕೃಷ್ಟವಾಗಿದೆ. ಅದರ ದಾರಿಯು ಬೆಳೆಯು ಆದಷ್ಟು ಬೇಗ ಕೈಗೆ ಒಂದಿನ ಇದನ್ನು ಸುಧಾರಿಸುವಂಥವರೇ ಗಿದಾರರು ... ಅದರಿಂದ ಅಂದು ದಿವಾನರಿಂದ ವರು ಪರ ... ಲಕ್ಷಾಂತರ ಸಾವಿರಾರು ... ನಾಗಿಗೆ ಆ ವೇತನವು ಕೊಡುವರು. ಹೊಗಳಾ ಯುಷ್ಯದಲ್ಲಿ ಸರಕಾರದ ಕಪ್ಪು (ಕಪ್ಪ) ಕೊಡುವಂತೆ ಆಗ ... ದಿವಾನರಾಗುವರು. ಆ ದರ ಹಂಚಿಕೆಯಿಂದ ಬಾಣಗಳು ತೊಡೆಯುವರು. ತಿನ್ನು ... ಅವರ ದಿವಾನಗಿರಿ ಯು ದೊರೆಯುವದು. ಅದೇ ಪ್ರಕಾರ ಇಂದು ಹಿಂದುಸ್ಥಾನ ... ದಿವಾನರು ... ವಿದ್ಯಾವಂತರು ಮೂರನೆ ವರ್ಗದ ಹಕ್ಕುಗಳನ್ನು ... ಕೈಬಿಡಬೇಕಾದ ... ಯೋಗ್ಯತೆ ಇದ್ದು ... ದೇವರಿದ್ದವರೇ ಇಲ್ಲದಂತಾಗಿರುತ್ತಾನೆ.

ಗೌರ ಮತ್ತು ಕೃಷ್ಣ ವರ್ಣದ ಪರಿಷತ್ತು.

ದಕ್ಷಿಣ ಆಫ್ರಿಕದಲ್ಲಿ ಹಿಂದೀ ಜನರು ಆ ಸುಮಾರ ಜಂಗ ಸಂತಾನದವರಾದ ಅನ್ಯಾಯಗಳನ್ನು ಧಿಕ್ಕರಿಸಿ ನೋಡಿಕೊಂಡು ಒಂದೆ ವ್ಯಕ್ತಿಗಳ್ನ ಕಮಿಟಿಯ ಸಹಾಯ ಪ್ರಕಾರ ಹಿಂದುಸ್ಥಾನ ಹರಕಾರದವರು ಆಫ್ರಿಕಾ ಸರಕಾರದ ಪ್ರತಿನಿಧಿಗಳಿಗೆ ಹಿಂದುಸ್ಥಾನಕ್ಕೆ ಬರಲು ಆಮಂತ್ರಣ ಕಳಿಸಿದ್ದಾರೆ. ಅವರು ಈ ಆಮಂತ್ರಣವನ್ನು ಸ್ವೀಕರಿಸಿ ಬರುವ ತಿಂಗಳಲ್ಲಿ ಇಲ್ಲಿಗೆ ಬರುವರು. ಇವರು ಬಂದ ಮೇಲೆ ಸರಕಾರ ಪ್ರತಿನಿಧಿಗಳು ಉಭಯ ದೇಶಗಳ ಪ್ರತಿನಿಧಿಗಳು ಸೇರಿ, ಹಿಂದೀ ಜನರಿಗಾಗುವ ಕಷ್ಟ ನಷ್ಟಗಳ ಬಗ್ಗೆ ಪುನಃ ವಿಚಾರ ಮಾಡಿ, ಯಾವದಾದರು ಒಂದು ತೀರ್ಮಾನಕ್ಕೆ ಬರುವರು. ಪಕ್ಷವು, ಶಿಷ್ಟಾಚಾರ ಆಗಮನದ ನಿಮಿತ್ತ ಕಾಂಗ್ರೆಸ್ ಮೊದಲಾದವುಗಳಿಂದ ಬಾಹ್ಯವಾಗಿಲ್ಲದವನ್ನು, ಅಷ್ಟರೊಳಗೆ ಸರಕಾರದ ಕಾರ್ಯಸಿದ್ಧಿಯ ನಿವೇದನೆ ಕೊಡುವ ಅನ್ಯರಿಗಳನ್ನು ಮಾತ್ರ ಬರಲು ಬಿಡುವದಿಲ್ಲದೆ, ಮೂಲಕವೇನು ಬರಬೇಕಾಗಿರದೆಂದು ಕೆಲ ಮುಸ್ಸಿಂಗಳು, ವರ್ತಮಾನಪತ್ರಗಳು ಅವರವರ ಅಭಿಪ್ರಾಯಪಡುತ್ತವೆ.

. ಧಾರವಾಡ ಜಿಲ್ಲಾ ನರಗುಂದ ಪೇಠ.
ರಡ್ಡೀ ಜನರ ಪರಿಷತ್ತಿನ ಅಧಿವೇಶನದಲ್ಲಿ ಆಯಿದ ೧ ನೇ ಠರಾವುಗಳು.

—೦—

ಮೊದಲಿಗೆ ಗೊತ್ತುಪಡಿಸಿದಂತೆ ನರಗುಂದ ಪೇಠೆಯ ರಡ್ಡೀ ಜನರ (ಸಮಾಜದ) ೧ ನೇ ಪರಿಷತ್ತು ಶ್ರೀಯುತ ಬಸನಗೌಡ ದೇವನಗೌಡ ಪಾಟೀಲ ಬಿ. ಎ. (ಆನರ್ಸ) ಎಲ್. ಎಲ್. ಬಿ. ವಕೀಲ ಬಾಗಲಕೋಟಿ ಇವರ ಅಧ್ಯಕ್ಷತೆಯ ಕೆಳಗೆ ಆಡನೂರುಗೋಡಿ ಗ್ರಾಮದಲ್ಲಿ ಇದೇ ಜುಲೈ ತಿಂಗಳ ೧೨ ನೇ ತಾರೀಖು ಸೋಮವಾರ ದಿವಸ ಕೂಡಿತ್ತು. ಸಭೆಗೆ ರಡ್ಡೀ ಸಮಾಜದ ಜನರು ಧಾರವಾಡ, ಹುಬ್ಬಳ್ಳಿ, ನವಲಗುಂದ, ಮುಂತಾದ ಸ್ಥಳಗಳಿಂದ ಬಂದಿದ್ದರು. ಸಭೆಯು ಕೆಲಸಕ್ಕಾಗಿ ಮುಖ್ಯ ಕಟ್ಟಡದ ಮುಂದಿನ ಬಯಲಿನಲ್ಲಿ ಜನರ ದಟ್ಟಣೆಯು ವಿಸ್ತಾರವಾಗಿತ್ತು. ಸಮಾರು ೬೦೦ ರ ಮೇಲೆ ಜನರು ಕೂಡಿದ್ದರು.

ಮೊದಲು ಸ್ವಾಗತ ಕಮೀಟಿಯ ಅಧ್ಯಕ್ಷರ ಭಾಷಣವಾಗಿ ಆ ಮೇಲೆ ಸಭಾಧ್ಯಕ್ಷರ ಚುನಾವಣೆ ಆಯಿತು. ಅವರು ತಮ್ಮ ಭಾಷಣದಲ್ಲಿ ವಿದ್ಯಾ ಒಕ್ಕಲುತನ ಸಾಂಪತ್ತಿಕ ಸ್ಥಿತಿ ಬೆಳೆಸುವ ಯೋಜನೆ. ಇವುಗಳ ಮೇಲೆ ವಿಶೇಷ ಬೋಧ ಕೊಟ್ಟು ರಡ್ಡೀ ಸಮಾಜದಲ್ಲಿ ದುಷ್ಪಾರುಣ್ಯ, ದುರ್ಗುಣಗಳ ಮುಂತಾದ ದುಷ್ಟ ಪದ್ಧತಿಗಳನ್ನು ಬಿಟ್ಟು ಬಿಡಲಿಕ್ಕೆ ಸಭೆಯ ಜನರಿಗೆ ಬೋಧಿಸಿದ್ದು ಬಹಳ ಆಕರ್ಷಕವಾದ ವಾಗಿದ್ದಿತು.

ಆಮೇಲೆ ಮಿ. ದೇವನಗೌಡ ಲಿಂಗನಗೌಡ ಪಾಟೀಲ ಮಿ. ದಾಸಾ. ಬಿ. ಮರಿಬಸಪ್ಪಗೌಡ ಹುಲಕೋಟಿ ಮಿತ್ರ ಆ, ಕೆ, ಪಾಟೀಲ ಹುಲಕೋಟಿ ಮಿ. ವಿ. ಹಾಲಕೇರಿ ನರಗುಂದ ಮಿ. ಎಲ್. ಎಚ್. ಉಗಲಾಟ ಮುಸ್ತರ ಸಾಲೆ ಮಾಸ್ತರು ಮಿ. ಬಿ. ಎಸ್. ಪಾಟೀಲ ಸಾ! ತಿಕೋಳ ಮೊದಲಾದವರು ಸ್ಫೂರ್ತಿದಾಯಕ ಮತ್ತು ಪರಿಣಾಮಕಾರಕ ವಾಣಿಯಿಂದ ಸಮಾಜದ ಏಳಿಗೆಗಾಗಿ ಸಮಾಜದೇಳಿಗಾಗಿ ಕಾರ್ಯ ಮಾಡತಕ್ಕ ಕರ್ತವ್ಯಗಳ ಬಗ್ಗೆ ಜಾಗೃತಿಯನ್ನುಂಟು ಮಾಡಿದರು. ಕೆಲವು ಉಪಯುಕ್ತವಾದ ಠರಾವುಗಳು ಪಾಸಾದ ನಂತರ ಕೆಳಗಿನ ಠರಾವುಗಳು ಪಾಸಾದವು.

೧ ಇಂದಿನ ೭ ರ ವರೆಗೆ ಠರಾವುಗಳು ನರಗುಂದ ಪೇಠ ರಡ್ಡೀ ಜನರು ತಮ್ಮ ಸಾಂಪತ್ತಿಕ ಸ್ಥಿತಿ ವ ವಿದ್ಯಾಭಿವೃದ್ಧಿಯ ಬಗ್ಗೆ ರಡ್ಡೀ ಜನಾಂಗತ ನ ರಡ್ಡಿ ವಿದ್ಯಾವರ್ಧಕ ಫಂಡಿನಿಂದ ವಿಶೇಷ ಸವಲತ್ತು ದೊರೆಯಬೇಕೆಂಬುದರ ಸಲುವಾಗಿ ಪಾಸು ಮಾಡಲ್ಪಟ್ಟಿತು.

೮ ನಮ್ಮ ಭಾಗದಲ್ಲಿ ಮಳೆ ಬಹಳ ಕಡಿಮೆ ಆಗುತ್ತಾ ನಡೆದಿದ್ದರಿಂದ ಕಾಲುವೆ ಪಸ್ಥಿರ ರೂಪದಿಂದ ಆದಷ್ಟು ಬೇಗನೆ ಪೂರದ ಮಾಡಿಕೊಡುವ ಕುರಿತು ಮುಂಬಯಿ ಸರಕಾರದವರಿಗೆ ಈ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ.

೯ ಅಗ್ರಿಕಲ್ಚರಲ ಲೋನ (ತಗಾಯಿ ಪಟ್ಟಿ ರೆ ಜನ) ಕೊಟ್ಟು ಇದ್ದಿಯ ಜನರಿಗೆ ಜವಡಿ ಸುಧಾರಿಸಲಿಕ್ಕೆ ಮತ್ತು ಅನುಕೂಲ ಮಾಡಿಕೊಡಬೇಕೆಂದು ಮುಂಬೈ ಸರಕಾರಕ್ಕೆ ಈ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ.

೧೦ ಕರ್ನಾಟಕದಲ್ಲಿ ಟೆಕ್ನಿಕಲ್ ಸ್ಕೂಲ ಸ್ಥಾಪನೆ ಮಾಡಲಿಕ್ಕೆ ಸರಕಾರಕ್ಕೆ ಈ ಪರಿಷತ್ತು ವಿನಂತಿ ಮಾಡಿಕೊಳ್ಳುತ್ತದೆ.

೧೧ ಫ್ರೀ ಕಂಪಲ್ಸರಿ ಎಜ್ಯುಕೇಶನ (ಪ್ರಾಥಮಿಕ ಉತ್ತಾರ್ಯದ ಶಿಕ್ಷಣ) ಅಮಲಿನಲ್ಲಿ ತರಲಿಕ್ಕೆ ನರಗುಂದ ಪೇಠಾ ಪತಿಯಿಂದ ಈ ಪರಿಷತ್ತು ಸ್ಕೂಲ ಬೋರ್ಡಿನವರಿಗೆ ವಿನಂತಿ ಮಾಡಿಕೊಳ್ಳುತ್ತದೆ.

೧೨ (ಅ) ನರಗುಂದ ಪೇಠಾ ರಡ್ಡೀ ಜನರು ಒಟ್ಟಾಗಿ ಯಾವದೇ ಸಾರ್ವಜನಿಕ ಸಂಸ್ಥೆಗಳಲ್ಲಿ ಹುನಾಯಿಸುವುದಾಗಿ ಯತ್ನ ಮಾಡತಕ್ಕದ್ದು.

(ಬ) ಇವರ ಸಲುವಾಗಿ ಒಂದು ಜನರಿಂದ ಕಮಿಟಿ ಆರಿಸಲ್ಪಟ್ಟಿದೆ.

೧೩ ರಡ್ಡೀ ಸಮಾಜವು ಲಿಂಗಾಯತರ ಪೈಕಿ ಒಂದು ಒಳಭಾಗವಿದೆ ಅಂತಾ ಮಿ. ಕಮಿಶನರ ಸಾಹೇಬ ದಕ್ಷಿಣ ಭಾಗ ಇವರು ಪಟ್ಟೀ ವಿದ್ಯಾವರ್ಧಕ ಸಂಘಕ್ಕೆ ತಿಳಿಸಿರುತ್ತಾರೆ. ಆದರೆ ರಡ್ಡೀ ಸಮಾಜವು ಲಿಂಗಾಯತರ ಪೈಕಿ ಒಳಭಾಗ ಅಂತಾ ಸರಕಾರವು ಗ್ರಹಿಕೆ ಮಾಡಿಕೊಳ್ಳದೆ ...

ಮ್ಮದು. ಬೇರೆ ಸ್ವತಂತ್ರ ಸಮಾಜವಿದೆ ಅಂತಾ ಕ ಲಮಿಸಿ ನ ೩ ರಡ್ಡಿ ವಿದ್ಯಾವರ್ಧಕ ಸಂಘವನ್ನು ಬೇರೆ ಸ್ವತಂತ್ರ ರಜಿಸ್ತರ ಮಾಡಿಕೊಳ್ಳಬೇಕಂತಾ ಈ ಪರಿಷತ್ತು ಸರಕಾರಕ್ಕೆ ವಿನಂತಿ ಮಾಡಿಕೊಳ್ಳುತ್ತದೆ.

೧೪ ರಡ್ಡಿ ಸಮಾಜದವರು ಧರ್ಮಾಂತರ ಮಾಡಕೂಡದು ಅಂತಾ ಈ ಪರಿಷತ್ತು ಠರಾಯಿಸುತ್ತದೆ.

೧೫ ರಡ್ಡಿ ಸಮಾಜದಲ್ಲಿ ಹಿಂದಕ್ಕೆ ಆಗಿಹೋದ ಸಮಾಜ ಸುಧಾರಕನೂ, ಕವಿಶ್ರೇಷ್ಠನೂ ತತ್ವಜ್ಞಾನಿಯೂ, ಆದ ಮಹಾ ಸಾಧು ವೇಮನ್ನನ ಜಯಂತಿ ಉತ್ಸವವನ್ನು ಪ್ರತಿಯೊಬ್ಬ ರಡ್ಡಿ ಕುಟುಂಬದವರು ಮಾಡತಕ್ಕದ್ದು ಅಂತಾ ಈ ಪರಿಷತ್ತು ಠರಾಯಿಸಿತು.

ಗ್ರೀಸದಲ್ಲಿ ಬಂಡುಖೋರರು.

ರಾಜಕೀಯ ಪಕ್ಷದ ಪ್ರಮುಖರ ದಸ್ತಗಿರಿಯು.

ಮೊನ್ನೆ ಕಪಟದಿಂದ ಗ್ರೀಸದ ರಾಜ್ಯಭಾರ ಹೊಡೆಯುತ್ತಿರುವ ಜನರಲ ಪಾಂಗಾಲಸನು ದಾರಿಯ ತೆಗೆದು, ತನಗೆ ಪ್ರತಿಕೂಲರಾಗಿರುವಂಥ ರಾಜಕೀಯ ಪಕ್ಷದ ಅನೇಕ ಪ್ರಮುಖರ ದಸ್ತಗಿರಿ ಮಾಡಿಸಿದ್ದಾನೆ. ಇವರನ್ನು ಅಗಲಿಸಿ, ಪರಸ್ಪರ ಸಂಬಂಧವಿರದಂತೆ ಅಥವಾ ಪದ್ಯಂತ್ರ ಮಾಡುವಂತೆ ಈತನ ವಿಚಾರವುಂಟು. ಇದೇ ಪ್ರಕಾರ ಬ್ಯಾಂಕುಗಳ ಪ್ರಮುಖ ಡಾಯರೆಕ್ಟರರನ್ನೂ ದಸ್ತಗಿರ ಮಾಡಿಸುವ ಮಸಲತ್ತಿನಲ್ಲಿದ್ದಾನೆ. ಈ ಅನ್ಯಾಯಕ್ಕೆ ಕಾರಣವೇನೆಂಬುದು ಜನರಿಗೆ ತಿಳಿಯದಾಗಿದೆ.

ಬ್ರಾಹ್ಮಣರಿಗೆ ಬಹಿಷ್ಕಾರ.

ಹರಪನಹಳ್ಳಿಯಲ್ಲಿ ಒಬ್ಬ ಮ್ಯಾಜಿಸ್ಟ್ರೇಟರು ಬ್ರಾಹ್ಮಣರ ಮನೆಯಲ್ಲಿ ಕೆಲಸ ಮಾಡುತ್ತಿದ್ದಂಥ ಮುಸಲಮಾನ ಆಳುಗಳನ್ನು ಕರಸಿ, ಅವರಲ್ಲಿ ಕೆಲಸ ಮಾಡಿ, ಕಾಫರರಾಗಬಾರದೆಂದು ಉಪದೇಶ ಮಾಡಿದರು. ಉಪದೇಶ ಪ್ರಕಾರ ಇವರು ಒಂದು ದಿವಸ ಕೆಲಸ ಬಿಟ್ಟರು. ಮರು ದಿವಸ ಉಪವಾಸದ ಹೊಟ್ಟೆ ಗಟ್ಟಿಯಾಗಲಿಲ್ಲೆಂದು ಅಕ್ಕ ಸಾಕ್ಷಿಯಾಗಿ, ಪುನಃ ಆಳುಗಳು ಕೆಲಸಕ್ಕೆ ಹೋಗಬಹುದೆಂದು ತಿಳಿಸಿದರು.

ಸರಕಾರಿ ಗ್ಯಾಝೆಟು

ಮಿ. ಪಂಚರಸಾಹೇಬರ ದಕ್ಷಿಣ ಭಾಗದ ಕಮಿಶನರರಾಗಬೇಕು. ಇದರಿಂದ ಮಿ. ಮಾಂಟೇಥ ಸಾಹೇಬರು ಬೆಳಗಾವಿಯ ಕಲೆಕ್ಟರರೂ, ಮಿ. ಮರ್ಡೇಕರರು ದಸ್ತೈವಜ ರಜಿಸ್ಟ್ರರ ಖಾತೆಯ ಸುಪರಿಂಟೆಂಡೆಂಟರಾದರು.

ಮಿ. ಟಿಸಿಲ್ಡಾ ಇವರನ್ನು ಪಂಚ ಮಹಾಲ್ಕ ವರ್ಗ ಮಾಡಿ, ಧಾರವಾಡಕ್ಕೆ ರಾವಸಾಹೇಬ ಜಗದಳೆಯವರನ್ನು ಡಿಪುಟಿ ಸುಪ್ರಿಂಟೆಂಡೆಂಟ ಪೋಲೀಸರನ್ನಾಗಿ ನೇಮಿಸಿದ್ದಾರೆ. ಮಿ. ರಂಗಸಾಹೇಬರು ಬೆಳಗಾವಿ ಡಿ॥ ಸು॥ ಪೋ॥ ಆಗಿ ನೇಮಿಸಲ್ಪಟ್ಟಿದ್ದಾರೆ.

ಧಾರವಾಡ—

ಮೊಹರಮ ಹಬ್ಬವು ಸುರಕ್ಷಿತವಾಗಿ ಸಾಂಗವಾಯಿತು. ನೆಗಡಿ, ಹುಲಿ ಮುಂತಾದ್ದರ ಗದ್ದಲವು ಬಹಳ ಕಡಿಮೆ ಇತ್ತು.

ನವಲಗುಂದದಲ್ಲಿ ದೊಡ್ಡ ಮಳೆಯಾಗಿ ಕೆರೆಗೆ ಕೋಡಿ ಬಿತ್ತು. ಧಾರವಾಡದ ಕೆರೆಗಳು? ಎಲ್ಲವೂ ವಿವರೀ!

ಇಲ್ಲಿಯ ಮ್ಯುನಿಸಿಪಾಲಿಟಿಯವರು ಇಂಜನಿಯರ ಅಥವಾ ಎಲ್. ಸಿ. ಇ. ಪರೀಕ್ಷೆ ಪಾಸಾದಂಥ ಅನುಭವಿಕ ಗೃಹಸ್ಥರನ್ನು ೨೫೦ ರಿಂದ ೩೦೦ ರೂಪಾಯಿ ತನಕ ಸಂಬಳ ಕೊಟ್ಟು ಚೀಫ ಆಫೀಸರ ಕೆಲಸದ ಮೇಲೆ ನೇಮಿಸಿಕೊಳ್ಳುವರು.

ನಾಲ್ಕು ದಿವಸಗಳಿಂದ ಯಾವಾಗಾದರು ಸಿಟಿಸಿಟಿ ಹನಿಯುದುರುತ್ತಲಿದೆ. ಮೊನ್ನೆ ರಾತ್ರಿ ಒಂದು ಜಲ್ಲೀ ಮಳೆ ಬಿತ್ತು.

ಮಾಳಗುಡ್ಡದಲ್ಲಿ ಮೂರು ಪ್ಲೇಗಿನ ಮರಣಗಳಾಗಿವೆ.

ಹುಬ್ಬಳ್ಳಿಯಲ್ಲಿ ಗುರುವಾರದ ದಿವಸ ರಾತ್ರಿ ಹಿಂದೂ ಮುಸಲಮಾನ ದಂಗೆಯಾಗುವದೆಂದು ಹುಯಿಲೆದ್ದಿತು. ಜಿಲ್ಲಾ ಜೆಲಗ ಪೋಲೀಸರು ಬಂದೂಕು ಹೊತ್ತುಕೊಂಡು ನಗರ ಪ್ರದಕ್ಷಿಣೆ ಹಾಕಿದರು.

ಜೀವನಾಧಾರ.

ಹುಬ್ಬಳ್ಳಿಯಲ್ಲಿ ದಾಜೀಬಾನ ಪೇಟೆಯಲ್ಲಿರುವ ಜೀವನಾಧಾರ ಡಿಪೋ ಕಂಪನಿಯಿಂದ ವಿಜಯದ ಅಭಿಪ್ರಾಯಕ್ಕಾಗಿ ಜೀವನಾಧಾರ ಔಷಧದ ಕುಪ್ಪಿಗಳು ಬಂದು ಕೆಲವು ದಿವಸಗಳಾದವು. ಇದರ ಉಪಯೋಗವನ್ನು ಹೋದ ವಾರದಲ್ಲಿ ಮಾಡುವ ಪ್ರಸಂಗ ಬಂತು. ಇದನ್ನು ಹುಡುಗರ ಮೈಟ್ಟಿ ಜಾಡಿಸೋಣ, ಅಗ್ನಿ ಮಾಂದ್ಯ ಮತ್ತು ಶೀತಜ್ವರದ ಮೇಲೆ ಉಪಯೋಗಿಸಿದೆವು. ಎರಡೇ ದಿವಸಗಳಲ್ಲಿ ಉತ್ತಮ ಗುಣ ಕೊಟ್ಟಿತು. ಪ್ರತ್ಯಕ್ಷ ಮನಗಂಡ ನಂತರ ಈ ಅಭಿಪ್ರಾಯವನ್ನು ಪ್ರಸಿದ್ಧ ಮಾಡಿದ್ದೇವೆ. ಜೀವನಾಧಾರದಿಂದಾಗುವ ಹಲವು ವ್ಯಾಧಿಗಳ ನಿವಾರಣೆಯು ಪ್ರಕಟನೆಯಲ್ಲಿ ಬರೆದಂತೆ ನಿಜ್ಜ ಬೇನೆಗಳ ಮೇಲೂ ರಾಮಬಾಣವಾಗುವದೆಂದು ನಮ್ಮ ನಂಬಿಗೆಯುಂಟು. ಜೀವನಾಧಾರವನ್ನು ಪ್ರತಿಯೊಬ್ಬರು ಮನೆಯಲ್ಲಿಟ್ಟುಕೊಂಡರೆ ಒಬ್ಬ ಗೃಹ ವೈದ್ಯರನ್ನು ಕಾಯ್ದುಕೊಂಡಂತಾಗುತ್ತದೆಂದು ಹೇಳಲು ನಮಗೆ ಅಡ್ಡಿ ತೋರುವದಿಲ್ಲ.

ಹಿಂದುಸ್ಥಾನೀ ಸೇವಾದಳ

ಪತ್ರಿಕೆ ೫

ಜುಲೈ ೨೧ ರ ವರೆಗೆ ನಡೆದಿರುವ ಕೆಲಸದ ವರದಿ

ಜಿಲ್ಲೆ	ರಾ. ಮ. ಸಭೆಯ ಸದಸ್ಯರು	ದಳದ ಸದಸ್ಯರು
೧ ವಿಜಾಪೂರ	೪೯೩	೧೪
೨ ಧಾರವಾಡ	೭೬೩	೬೩
೩ ಬೆಳಗಾವಿ	೯೭೮	೨೩
೪ ದ. ಕನ್ನಡ	೯೧೨	೨೯
೫ ಮೈಸೂರ	೭೭	೪೦
೬ ಬಳ್ಳಾರಿ	೭೫	೧೪

ಈ ೬ ಜಿಲ್ಲೆಗಳಲ್ಲಿ ಒಟ್ಟು ೩೨೪೭ ರಾ. ಮ. ಸಭೆಯ ಸದಸ್ಯರನ್ನು ೧೯೬ ಹಿಂ. ಸೇ. ದಳದ ಸದಸ್ಯರನ್ನೂ ಕೂಡಿಸಿದ್ದಾಯಿತು. ನಮ್ಮ ಪ್ರತಿಜ್ಞೆಯು ನೆರವೇರಲು ಇನ್ನೂ ೬೭೫೩ ಸಭೆಯ ಸದಸ್ಯರನ್ನೂ ೩೦೪ ದಳದ ಸದಸ್ಯರನ್ನೂ ಸೇರಿಸಬೇಕಾಗುವದು.

ಕಾರವಾರ ಮತ್ತು ಕೊಡಗು ಜಿಲ್ಲೆಗಳು ಮುಂದೆ ಬರಲಿಲ್ಲ. ಬಳ್ಳಾರಿಯಲ್ಲಿ ನಮ್ಮ ಸಂಘಟಕರಾದ ಶ್ರೀ. ಟಿ. ಜಿ. ಪಾಲಭಾ ಅಸ್ವಸ್ಥರಾದ್ದರಿಂದ ಅಲ್ಲಿನ ಕೆಲಸವು ಸಮರ್ಪಕವಾಗಿ ನಡೆಯಲಿಲ್ಲ. ಮೈಸೂರಿನಲ್ಲಿ ಕೆಲಸವೂ ತೃಪ್ತಿಕರವಾಗಿಲ್ಲ. ಇನ್ನೂ ಕೆಲಸಕ್ಕಾರಂಭಿಸದಿರುವವರು ಕೂಡಲೆ ಮೊದಲು ಮಾಡಬೇಕೆಂದೂ ಆಗಲೆ ಆರಂಭಿಸುವವರು ಇನ್ನೂ ಉತ್ಸಾಹದಿಂದ ಕೆಲಸ ಮಾಡಬೇಕೆಂದೂ ನಮ್ಮ ವಿಜ್ಞಾಪನೆಯಿದೆ.

ಸ್ಥಾನಿಕ ಮುಖಂಡರು ಮುಂದೆ ಬಾರದಿದ್ದರೆ ನಮ್ಮ ತರುಣ ಸ್ವಯಂಸೇವಕರಿಗೆ ಯಾವ ಕೆಲಸವೂ ಸಾಧ್ಯವಿಲ್ಲೆಂಬುದು ಸರ್ವಶ್ರುತದ ವಿಷಯವಾಗಿದೆ. ಅದ್ದರಿಂದ ಅಭಿಮಾನಿಗಳೆಲ್ಲರೂ ಹೆಚ್ಚು ಪ್ರೋತ್ಸಾಹವನ್ನು ಕೊಡುವರೆಂದು ಕೋರಿದೆ.

ಅಖಿಲ ಭಾರತೀಯ ಮಹಾ ಸಭೆಗೆ ಕರ್ನಾಟಕದ ಸಹಾನುಭೂತಿಯು ಸಂಪೂರ್ಣವಾಗಿರುವದೆಂದೂ ಮಹಾಸಭೆಯ ಆಜ್ಞೆಯನ್ನು ಪರಿಪಾಲಿಸಲು ಕರ್ನಾಟಕವು ಸಿದ್ಧವಾಗಿರುವದೆಂಬನ್ನು ಈ ಜನಾಂಗಕ್ಕೆ ವಿಶ್ವಾಸಪಡಿಸುವದು ನಮ್ಮ ಪವಿತ್ರ ಕಾರ್ಯವೆಂಬದನ್ನು ಮನಸಿನಲ್ಲಿಟ್ಟು ಎಲ್ಲರೂ ಮುಂದರಿಯಬೇಕು.

ಹುಬ್ಬಳ್ಳಿ } ಎನ್. ಎಸ್. ಹರ್ಡೀಕರ
ತಾ॥ ೨೪-೭-೨೬

ಕಲಬುರ್ಗಿಯಲ್ಲಿ ಮುಸಲಮಾನರಿಗೆ ಮೊಹರಮ ಹಬ್ಬದಲ್ಲಿ ಕರಿ-ತಿಂದಿ ಮಾರಬಾರದೆಂದು ನಿಜಾಮ ಶಾಹಿಯಿಂದ ಹುಕುಮು ಆಗಿತ್ತು. ಆ ಪ್ರಕಾರ ಪ್ರತಿಯೊಂದು ಅಂಗಡಿಯ ಮುಂದೆ ಪೋಲೀಸ ಮತ್ತು ಸ್ವಾಂಗ ಕಾವಲು ಇಟ್ಟಿದ್ದರು. ಕಾವಲು ತಪ್ಪಿಸಿ ತಿಂದಿ ಕುಡಿದಂಥ ನಾಲ್ವರು ಮುಸಲಮಾನರನ್ನು ದಸ್ತಗಿರ ಮಾಡಿದ್ದಾರೆ. ಇವರಿಗೆ ಕಠಿಣವಾದ ಶಿಕ್ಷೆಯಾಗಬಹುದ್ದುಂಟು.

ಜಾಹೀರಾತು.

ದಿ ತಿರಪೂರ ಕಾಂಬೋಡಿಯಾ ಕಾಟನ ಪ್ಲಾಂಟಿಂಗ ಆ್ಯಂಡ ಜಿನರ ಮ್ಯಾನ್ಯುಫ್ಯಾಕ್ಚರಿಂಗ ಕಂಪನಿ ಲಿಮಿಟೆಡ್.

ರಜಿಸ್ಟರ್ಡ ಕಚೇರಿ— ೧೬ ಕಚೇರಿ ರೋಡ— ತಿರಪೂರ, ದಕ್ಷಿಣ ಹಿಂದುಸ್ಥಾನ

ಫ್ಯಾಕ್ಟರಿ ಮತ್ತು ಸೆಂಟ್ರಲ ಫಾರ್ಮ— ಅಂಗೇರಿಪ ಳ್ಯಮ—

೧ ಅಧಿಕೃತ ಬಂಡವಲ— ರೂ. ೩,೫೦,೦೦೦ ಹತ್ತು ರೂಪಾಯಿಗೊಂದರಂತೆ ೩೫ ಸಾವಿರ ಶೇರುಗಳು.

೨ ಶೇರ ಮಾರಾಟದಿಂದ ಕೂಡಿದ ಬಂಡವಲ ರೂ. ೧,೫೯,೦೨೦ ಕುಶಾ ಶೇರಗಳು ಬರೋಬರಿ ಧಾರಣಿಗೆ ಮಾರಾಟ ಮಾಡಲು ಇಲ್ಲು ಅವೆ.

೩ ಪ್ರತಿಷ್ಠಿತ ಮತ್ತು ಗಟ್ಟಿಗರಾದ ಮ್ಯಾನೇಜಿಂಗ ಡಾಯರೆಕ್ಟರ ಮೇಲ್ವಿಚಾರಣೆ.

೪ ಈ ವರ್ಷದ ಲಾಭವನ್ನು ನೂರಕ್ಕೆ ೨೦ ರಂತೆ ಹಂಚುವ ಅಂದಾಜವುಂಟು.

೫ ಕಂಪನಿಯ ಕನಿಷ್ಠ ಇನ್ನೂರು ಎಕರೆ ತೋಟದ ಭೂಮಿಯು ನಿಪ್ಪಾತ ಅನರ ಮೇಲ್ವಿಚಾರಣೆಯಲ್ಲಿ ಸಾಗುವಳಿಯಲ್ಲಿರುವದು.

೬ ಬೀಜದ ಅಡ್ಡಿ ಮತ್ತು ಸಾಬೂಣವೂ ಕಂಪನಿಯ ಕಾರಖಾನೆಯಲ್ಲಿ ತಯಾರಾಗುತ್ತಿರುವವು.

೭ ಕಂಪನಿಯ ವ್ಯವಹಾರವನ್ನು ಬೆಳಿಸುವದಕ್ಕಾಗಿ ಹಿಂದುಸ್ಥಾನ ಮತ್ತು ಪರದೇಶಗಳಲ್ಲಿ ಒಂದೊಂದರ ಮತ್ತು ಪ್ರಾಮಾಣಿಕ ಏಜಂಟರು ಪ್ರತಿಯೊಂದು ಪಟ್ಟಣದಲ್ಲಿ ಬೇಕಾಗಿದ್ದಾರೆ. ಉದಾರ ರೀತಿಯಿಂದ ಕಮಿಶನ ಅಥವಾ ಸಂಬಳ ಕೊಡಲಾಗುವದು.

೮ ಪ್ರತಿಯೊಬ್ಬ ಏಜಂಟನು ಕಂಪನಿಯ ೧೦ ಶೇರುಗಳನ್ನು ತಕ್ಕೊಳ್ಳಲಿಕ್ಕೇ ಬೇಕು.

೯ ವಿಶೇಷ ಸಂಗತಿಗಾಗಿ ಒಂದಾಣೆಯ ಪೋಸ್ಟಿನ ಟಿಕೀಟು ಇಟ್ಟು, ಅನರೀ ಸೆಕ್ರೆಟರಿ ೧೬ ಕಚೇರಿ ರೀತಿ ತಿರಪೂರ ದಕ್ಷಿಣ ಹಿಂದುಸ್ಥಾನ ಈ ವಿಳಾಸದ ಮೇಲೆ ಪತ್ರವ್ಯವಹಾರ ಮಾಡಬೇಕು

ಜಾಹೀರಾತು.

ಜಾಗೆಯ ಮಾರಾಟ

ಮಿ. ಉಯಿಲೆಪ್ಪಸಾಹೇಬರ ಮಾಲಕಿ ಮತ್ತು ವಹಿವಾಟಿಯಲ್ಲಿರುವ ನಾಲ್ಕು ಎಕರೆ ಭೂಮಿಯು ಧಾರವಾಡ ಮ್ಯುನಿಸಿಪಾಲಿಟಿಯ ಹದ್ದಿಯಲ್ಲಿ ಲೈನಬಜಾರ ಸಾಕ್ಸರ ಗದ್ರೆಯವರ ಮನೆಗೆ ಹತ್ತಿರುವಂಥಾದ್ದನ್ನು ಮಾರತಕ್ಕದ್ದಿದೆ. ಇದನ್ನು ಒಟ್ಟನಿಂದ ಅಥವಾ ಒಂದು ಎಕರೆಯಂತೆ ಮಾರಲಿಕ್ಕೆ ಕೊಡುವೆವು. ಜಾಗೆಯು ಎತ್ತರದ ಸ್ಥಳದ ಹವಾಶೀರವಿದ್ದು, ಸರಕಾರೀ ಕಚೇರಿ, ಕೋರ್ಟ ಸ್ಕೂಲ, ಕಾಲೇಜ, ರೇಲ್ವೆ ಸ್ಟೇಶನ ಮತ್ತು ಮಾರ್ಕೆಟನ ಸನಿಯವಾಗಿರುವದು. ಮಾರಲಿಕ್ಕೆ ತಕ್ಕೊಳ್ಳಲಿಚ್ಛಿಸುವವರು ಸಮಕ್ಷಮ ಭೆಟ್ಟಿಯಾಗಿ ಖುಲಾಸೆವಾರ ತಿಳಕೊಳ್ಳತಕ್ಕದ್ದು.

ಉಯಿಲೆಪ್ಪ ಜೆ.
ವಕೀಲ, ಅ ಯಿಸ ೬೩೦, ಧಾರವಾಡ
ರಾ. ಗದ್ರೆಯವರ ಮನೆ ಹತ್ತರಾ.

ಜಾಹೀರಾತು.

—೦—

ಅಣ್ಣಿಗೇರಿಯಲ್ಲಿ ಹೊಸದಾಗಿ ಕಟ್ಟಿಸಿದ ಖುದಾವಂತ ಥಿಯೇಟರದಲ್ಲಿ

ಉತ್ತಮ ಡ್ರೆಸು, ಪಡದೆ ಮತ್ತು ಸೀನರಿಗಳು ಮಾರಲಿಕ್ಕೆ ಮತ್ತು ಸೋಯಿ ಬಾಡಿಗೆಯಿಂದ ಸಿಗುತ್ತವೆ. ಮತ್ತು ಉತ್ತಮ ಗಾಯನ ಬಲ್ಲ ಸ್ತ್ರೀಪುರುಷರೂ, ಪಾರ್ಟಮಾಡುವ ಹುಡುಗರೂ ಬೇಕಾಗಿದ್ದಾರೆ. ಸಂಬಳ ಯೋಗ್ಯತೆ ಪ್ರಕಾರ ಸಿಗುವದು. ಮಾಲಕರಿಗೆ ಸಮಕ್ಷಮ ಭೆಟ್ಟಿ ಆಗಿ ಖುಲಾಸೆ ತಿಳಕೊಳ್ಳಬೇಕು.

ಹುಸೇನಸಾಹೇಬ ಅಲ್ಲಾಬಕ್ಷ
ಅಣ್ಣಿಗೇರಿ.
ಪಾಲಕ ನಾಟಕ ಕಂಪನಿ

ಕುಲಕರ್ಣಿ ಸನ್ಸ ಕಂಪನಿ ಇವರ
೩, ೪, ೬, ೮, ಎತ್ತಿನ ೪ ಪ್ರಕಾರದ

ವತನದಾರ ರೆಂಟೆಗಳು



ಇನ ಮಾಹಿತಿ ಬಗ್ಗೆ ಕ್ಯಾಟಲಾಗ ತರಿಸಿಕೊಳ್ಳಿರಿ
ಕುಲಕರ್ಣಿ ಸನ್ಸ ಕಂಪನಿ
ಕಿಲ್ಲೆ ಧಾರವಾಡ

ಜಾಹೀರಾತು.

ಇಂಪೀರಿಯಲ ಬ್ಯಾಂಕ ಆಫ ಇಂಡಿಯಾ

ಸೇವಿಂಗ್ಸ ಬ್ಯಾಂಕು

೧೯೨೬ನೇ ಇಸವಿಯ ಅಗಸ್ಟ ತಿಂಗಳ ೧ನೇ ತಾರೀಖಿನಿಂದ ದ್ಯಾ ಕಿನ ಸೇವಿಂಗ್ಸ ಬ್ಯಾಂಕಿನ ಬಡ್ಡಿಯ ದರವನ್ನು ನೂರಕ್ಕೆ ವರ್ಷಕ್ಕೆ ಮೂರು ರೂಪಾಯಿ ಮಾಡಲ್ಪಡುವದು.

ಸೇವಿಂಗ್ಸ ಬ್ಯಾಂಕ ಡಿಪಾಜಿಟ ಅಕೌಂಟನಲ್ಲಿ ಯಾವ ಬದಲಾವಣೆಯನ್ನೂ ಮಾಡಿರುವದಿಲ್ಲ. ಅದು ೩॥ ದರದಂತೆಯೇ ಇರುವದು.

ಎನ್. ಎವರ್. ಮುರೆ.
ಡಿ. ಎಸ್. ವ್ಯಾಳಿಸ್ಲಿಯರ
(ಆಫಿ)
ಮ್ಯಾನೇಜಿಂಗ ಗವರ್ನರರು.

ದಿ ಧಾರವಾಡ ಅರ್ಬನ ಕೋ. ಆಪರೇಟಿವ್ಹ ಬ್ಯಾಂಕ ಲಿಮಿಟಿಡ

ಮಂಗಳವಾರ ಪೇಟೆ ಧಾರವಾಡ.

೧೯೦೪ ಕೋಆಪರೇಟಿವ್ಹ ಕ್ರೆಡಿಟ ಸೊಸಾಯಟಿಯ ಆಕ್ಟ ಪ್ರಕಾರ ರಜಿಸ್ಟರ ಮಾಡಲ್ಪಟ್ಟದೆ.

ಕರ್ನಾಟಕದಲ್ಲಿ ಬ್ಯಾಂಕಿನ ವ್ಯವಹಾರದಲ್ಲಿ ಶ್ರೇಷ್ಠವಾದ ಸ್ಥಾನ.

ಠೇವಣಿಗೆಯು ಅದು ಲಕ್ಷದ ಮೇಲುಂಟು. ಹೋಬಂಡಿ ಮೊದಲಾಗಿ ಬ್ಯಾಂಕಿನ ಎಲ್ಲ ಪ್ರಕಾರ ವ್ಯವಹಾರ ನಡೆಯುವದು. ಕಾಯಮ ಮತ್ತು ಬೇರೆ ತರದ ಡಿಪಾಜಿಟಗಳಿಗೆ ಚನ್ನಾಗಿ ಬಡ್ಡಿ ದೊರೆಯುವದು.

ನಿಯಮ ಪಂಗತಿಗಳನ್ನು ಕಳಗೆ ಸಹೀ ಮಾಡಿದವರಿಂದ ತಿಳಕೊಳ್ಳಬೇಕು.

ಮಧ್ವರಾವ ಬಿ. ಜಕಾತಿ,
ಮ್ಯಾನೇಜಿಂಗ ಡಾಯರೆಕ್ಟರ

ದಿ ಧಾರವಾಡ ಬ್ಯಾಂಕ ಲಿಮಿಟೆಡ್
ಧಾರವಾಡ

ಈ ಬ್ಯಾಂಕಿನಲ್ಲಿ ಮೂರು, ನಾಲ್ಕು ಆರು ತಿಂಗಳ ಮುದ್ದತಿ ಕರಾರಿನಿಂದ ಹಣವನ್ನು ಡಿಪಾಜಿಟ ಇಟ್ಟುಕೊಳ್ಳಲಾಗುವದು. ದರವನ್ನು ಸಮಕ್ಷಮ ತಿಳಕೊಳ್ಳಬೇಕು.

ಈ ಬ್ಯಾಂಕಿನಲ್ಲಿ ದಾಗೀನೆಗಳನ್ನು ಇಟ್ಟುಕೊಳ್ಳುವ ಬಡ್ಡಿಯ ದರವು ನೂರಕ್ಕೆ ತಿಂಗಳಿಗೆ ಕನ್ನ ರಡು ಆಣೆಯಂತಿರುತ್ತದೆ.

ಎ. ೪. ಅಟ್ಟಿ,
ಮ್ಯಾನೇಜಿಂಗ ಡಾಯರೆಕ್ಟರ

ಈ ಪತ್ರವನ್ನು ಅಣ್ಣಾಚಾರ್ಯ ಬಾಳಾಚಾರ್ಯ ಹೊಸಕೇರಿ ಇವರು ಧಾರವಾಡದಲ್ಲಿರುವ ತಮ್ಮ ವಾಗ್ಭೂಷಣ ಪ್ರೆಸ್ಸಿನಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದರು.